ಡಾ|| ಎಲ್. ಬಸವರಾಜು

ರಾಮಾಯಣ ನಾಟಕ ತ್ರಿವೇಣಿ

ಪುರಾಣಮಾರ್ಗಗಳು

P. Shan Tharam... II B.Sc.
St. Aloysius College
Mangalore.

ಸೂತ್ರಧಾರಕೃತಾರಂಭದ
ಬಹುಭೂಮಿಕೆ ಪತಾಕೆಯಿರುವ
ದೇಗುಲಕೆ ಸಾಟಿಯುಹ ನಾಟಕಗಳಿಂದಂ
ಯಶೋವಂತನಾದ ಭಾಸ

—ಬಾಣ

ಭಾಸನ ಮೂರು ನಾಟಕಗಳು

ಭಾಸನ ಮೂರು ನಾಟಕಗಳು

ಡಿ. ವಿ. ಕೆ. ಮೂರ್ತಿ :: ಮೈಸೂರು-೪

ರೂ. 2.50

ವಿ. ಪ್ರ. ೧೨.　ಅಪ್ಪೆಂಬ್ಲ

ಹುರಾವರ್ಸಿಗಾನಿ

ಭಾಸ
ರಾಮಾಯಣ ನಾಟಕ ತ್ರಿವೇಣಿ

ಎಲ್. ಬಸವರಾಜು, ಎಂ.ಎ., ಡಿ.ಲಿಟ್.
ಉಪಪ್ರಾಧ್ಯಾಪಕ
ಕನ್ನಡ ವಿಭಾಗ, ಮಾನಸಗಂಗೋತ್ರಿ
ಮೈಸೂರು

ಸುವಿಭಕ್ತಮುಖಾದ್ಯಂಗೈಃ ವ್ಯಕ್ತಲಕ್ಷಣವೃತ್ತಿಭಿಃ ।
ಪರೇತೋಽಪಿ ಸ್ಥಿತೋ ಭಾಸಃ ಶರೀರೇಣೈವ ನಾಟಕೈಃ ॥
(ದಂಡಿ)

ಪ್ರಕಾಶಕರು :
ಡಿ. ವಿ. ಕೆ. ಮೂರ್ತಿ
ಕೃಷ್ಣಮೂರ್ತಿಪುರಂ :: ಮೈಸೂರು-೪

ಮೊದಲನೆಯ ಮುದ್ರಣ ೧೯೫೮
ಎರಡನೆಯ ಮುದ್ರಣ ೧೯೬೬

ಮುದ್ರಕರು
ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್
ಮೈಸೂರು

ಅರ್ಪಣೆ

ಕರ್ಣಾಟಕದ ಸುಪ್ರಸಿದ್ಧ ಇತಿಹಾಸ ಸಂಶೋಧಕರೂ
ಮಹಾರಾಜ ಕಾಲೇಜಿನ ಇತಿಹಾಸ ಪ್ರಾಧ್ಯಾಪಕರೂ
ನನ್ನ ಸದ್ಗುರುಗಳೂ ಆದ

ಡಾ. ಎಸ್. ಶ್ರೀಕಂಠಶಾಸ್ತ್ರೀ, ಎಂ.ಎ., ಡಿ.ಲಿಟ್.

ಅವರ ದಿವ್ಯಸನ್ನಿಧಿಗೆ
'ರಾಮಾಯಣ ನಾಟಕ ತ್ರಿವೇಣಿ'ಯು
ಭಕ್ತಿಪೂರ್ವಕವಾಗಿ ಅರ್ಪಿತ

ಗುರುದೇವೋ ಮಹಾದೇವೋ ಗುರುದೇವಸ್ಸದಾಶಿವಃ
ಗುರುದೇವಃ ಪರಂ ತತ್ವಂ ತಸ್ಮೈ ಶ್ರೀ ಗುರುವೇ ನಮಃ
ಅಜ್ಞಾನತಿಮಿರಾಂಧಸ್ಯ ಜ್ಞಾನಾಂಜನ ಶಲಾಕಯಾ
ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀ ಗುರವೇ ನಮಃ

—ಎಲ್. ಬಸವರಾಜು

ಮುನ್ನುಡಿ

ಮಹಾಕವಿ ಭಾಸನ ಕೃತಿಗಳೆಂದು ಪ್ರಸಿದ್ಧವಾಗಿರುವ—ರಾಮಾಯಣ ಸಂಬಂಧವಾದ—ಯಜ್ಞಫಲ, ಪ್ರತಿಮಾ ಮತ್ತು ಅಭಿಷೇಕ ನಾಟಕಗಳು ಭಾರತೀಯ ಸಾಹಿತ್ಯದಲ್ಲಿ ಅಪೂರ್ವ ಸ್ಥಾನವನ್ನು ಪಡೆದಿವೆ. ಭಗವಂತನಾದ ಶ್ರೀರಾಮನ ಕಥೆಯು ವೇದದಲ್ಲಿಯೇ ಸೂಚಿಸಲ್ಪಟ್ಟದೆಯೆಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಡುವರು. ಗೌತಮಬುದ್ಧನಿಗಿಂತ ಹಿಂದೆಯೇ ಪ್ರಚಾರವಾಗಿದ್ದ ಜಾತಕಕಥೆಗಳಲ್ಲಿಯೂ, ಜೈನವಾಙ್ಮಯದಲ್ಲಿಯೂ ರಾಮ ಕಥೆಯು ಅನೇಕ ರೂಪಗಳಲ್ಲಿ ಕಂಡುಬರುವುದರಿಂದ ಅದು ಕ್ರಿ. ಪೂ. ೬ನೇ ಶತಮಾನಕ್ಕೆ ಹಿಂದೆಯೇ ಬಹುಜನಪ್ರಿಯ:ವಾಗಿ ಭಾರತದಲ್ಲೆಲ್ಲ ಪ್ರಚಾರವಾಗಿ ತ್ತೆಂದು ಹೇಳಬಹುದು.

ಕಾಳಿದಾಸನ ರಘುವಂಶದಲ್ಲಿ ಬರುವ ರಾಮಕಥೆಗೂ, ವಾಲ್ಮೀಕಿ ರಾಮಾ ಯಣದ ರಾಮಕಥೆಗೂ ಅನೇಕ ವ್ಯತ್ಯಾಸಗಳಿವೆ. ಅಂತೆಯೇ ಜೈನ-ಬೌದ್ಧ ಸಂಪ್ರದಾಯದ ರಾಮಕಥೆಗಳೂ ಬೇರೆ ಬೇರೆ ಪರಂಪರೆಯನ್ನು ಅನುಸರಿಸಿವೆ. ಜೊತೆಗೆ ದೇಶಭಾಷೆಗಳಲ್ಲಿ ಮತ್ತು ಜನಪದಸಾಹಿತ್ಯದಲ್ಲಿ ಪ್ರಚಲಿತವಾಗಿರುವ ರಾಮಾಯಣಗಳೆಷ್ಟೋ! ಭಾಸನಾದರೋ ಇಂತಹ ಕಥೆಗಳೊಳಗಿಂದ ಉತ್ತಮಾಂಶಗಳನ್ನು ಆಯ್ದುಕೊಂಡು ಅವುಗಳಿಗೆ, ತನ್ನ ಸ್ವಂತ ಪ್ರತಿಭೆಯ ಕುಲುಮೆಯಲ್ಲೇ ತಯಾರಾದ ಪ್ರತಿಮಾಗೃಹ ಮುಂತಾದ ಉಪಕರಣಗಳನ್ನು ಜೋಡಿಸಿ ರಾಮಕಥೆಯನ್ನು ಬಾಲಕಾಂಡದ ಬಾಲಚರಿತೆಯಿಂದ ಯುದ್ಧಕಾಂಡದ ಅಭಿಷೇಕದವರಿಗೆ ಮೂರು ನಾಟಕಗಳಲ್ಲಿ ಬರೆದನೆಂದು ನಂಬಬಹುದು.

ಹೀಗೆ ಬರೆದ ಯಜ್ಞಫಲ, ಪ್ರತಿಮಾ ಮತ್ತು ಅಭಿಷೇಕ ಎಂಬ ಮೂರು ನಾಟಕಗಳಲ್ಲಿ ಕೊನೆಯವೆರಡೂ ಭಾಸಕೃತವೆಂದು ಸಾಮಾನ್ಯವಾಗಿ ಅಂಗೀಕರಿ ಸಲ್ಪಟ್ಟು, 'ಭಾಸ ನಾಟಕ ಚಕ್ರ'ದಲ್ಲಿ ಸೇರ್ಪಡೆಯಾಗಿವೆ. ಆದರೆ 'ಯಜ್ಞಫಲ'ದ ಕರ್ತೃವಿನ ವಿಷಯವಾಗಿ ಚರ್ಚೆಗಳು ವಿಪುಲವಾಗಿ ನಡೆದಿವೆ. ಯಜ್ಞಫಲವು ಇತರ ಭಾಸ ನಾಟಕಗಳಂತೆ ಕೇರಳದಲ್ಲಿ ಸಿಕ್ಕದೆ ಸೌರಾಷ್ಟ್ರದ ಗೊಂಡಾಲ್ ಎಂಬಲ್ಲಿ ಕಂಡುಬಂದು ಕ್ರಿ. ಶ. ೧೯೪೧ರಲ್ಲಿ ಪ್ರಕಟವಾಯಿತು.

ಪೂರ್ವದಲ್ಲಿ ಈ 'ಯಜ್ಞ ಫಲ'ಕ್ಕೆ 'ಬಾಲಚರಿತೆ' ಎಂಬ ಹೆಸರೂ ರೂಢಿಯಲ್ಲಿದ್ದಿತೆಂದು ಊಹಿಸಲವಕಾಶವಿದೆ. ಕೃಷ್ಣನ ಬಾಲ್ಯದ ಕಥೆಯನ್ನು ಕುರಿತ ಭಾಸನ 'ಬಾಲಚರಿತೆ'ಯು ಈಗಲೂ ಪ್ರಸಿದ್ಧವೇ ಆಗಿದೆ. ಇದಲ್ಲದೆ ರಾಮಕಥೆಯೇ ವಸ್ತುವಾಗಿರುವ 'ಬಾಲಚರಿತೆ'ಯೆಂಬಿನ್ನೊಂದು ನಾಟಕವೂ ಪ್ರಚಾರದಲ್ಲಿತ್ತೆಂದು ಕೆಲವು ಅಲಂಕಾರಶಾಸ್ತ್ರಗ್ರಂಥಗಳಿಂದ ಕಂಡುಬರುವುದು. ಸಾಗರನಂದಿಯ 'ನಾಟಕಲಕ್ಷಣರತ್ನಕೋಶ'ದಲ್ಲಿ 'ಬಾಲಚರಿತೇ ರಾಮಾಯಣೇ' (ಪುಟ ೨೩) ಎಂದೂ, ವಿಶ್ವನಾಥನ ಸಾಹಿತ್ಯದರ್ಪಣ (೬-೮೫) ದಲ್ಲಿ ವಿಧಾನಕ್ಕೆ ಉದಾಹರಣೆಯಾಗಿ 'ಬಾಲಚರಿತೆ'ಯ ಒಂದು ಶ್ಲೋಕ*ವೂ ಉದಾಹೃತವಾಗಿವೆ. ಈ ಶ್ಲೋಕಕ್ಕೆ ವ್ಯಾಖ್ಯಾನಕಾರರು 'ರಾಮಂ ಪ್ರತಿ ಭಾರ್ಗವಸ್ಯೋಕ್ತಿರಿಯಂ' ಅಥವಾ 'ರಾಮಂ ಪ್ರತಿ ದಶರಥಸ್ಯೋಕ್ತಿರಿಯಂ' ಎಂದು ಹೇಳಿರುವುದರಿಂದ ಆ 'ಬಾಲಚರಿತೆ'ಯು ರಾಮನ ಬಾಲ್ಯದ ಕಥೆಯನ್ನೇ ವಸ್ತುವಾಗಿ ಉಳ್ಳ ಒಂದು ನಾಟಕವೆಂಬುದು ಸ್ಪಷ್ಟ.

ಹೀಗೆ ರಾಮನ ಸಂಬಂಧವಾದ ಬಾಲಚರಿತೆಯು ಕೃಷ್ಣನ ಸಂಬಂಧವಾದ ಬಾಲಚರಿತೆಗಿಂತಲೂ ಭಿನ್ನವಾಗಿದ್ದು, ಅದೇ ಬಹುಶಃ 'ಯಜ್ಞಫಲ'ವೆಂಬ ಹೆಸರಿನಿಂದಲೂ ಪ್ರಚಾರದಲ್ಲಿತ್ತೆಂದೂ ಊಹಿಸಬಹುದು. ಗೊಂಡಾಲದಲ್ಲಿ ಪ್ರಕಟವಾಗಿರುವ 'ಯಜ್ಞಫಲ'ದಲ್ಲಿನ ನಿರ್ವಹಣಾಂಕ್ಯದಲ್ಲಿ ಪರಶುರಾಮನ ವೃತ್ತಾಂತವು ಬರುವುದರಿಂದಲೂ ಮತ್ತು ಆ ನಾಟಕದಲ್ಲೂ ನಾಂದ್ಯಂತದಲ್ಲಿ ಬರುವ ಸೂತ್ರಧಾರನು ಮಾಡುವ ಪ್ರಾರ್ಥನೆಯ ತಂತ್ರ (ಮುದ್ರಾಲಂಕಾರ)ದಿಂದಲೂ ಮತ್ತು ನಾಟಕಾಂತ್ಯದಲ್ಲಿ ಬರುವ ಭರತವಾಕ್ಯದ ಸ್ವರೂಪ ಸಾಮ್ಯ ಮುಂತಾದುವುಗಳಿಂದಲೂ, ಅಲಂಕಾರ ಗ್ರಂಥಗಳಲ್ಲಿ 'ಬಾಲಚರಿತೆ'ಯೆಂದು ಪ್ರಚಾರವಾಗಿದ್ದ ನಾಟಕವು—ಭಾಸನದೆಂದು ಈಗ ಪ್ರಕಟವಾಗಿರುವ-'ಯಜ್ಞಫಲ'ವೇ ಆಗಿರಬಹುದು ಮತ್ತು ರಾಮಾಯಣದ ಅಯೋಧ್ಯಾ, ಅರಣ್ಯ, ಕಿಷ್ಕಿಂಧಾ, ಸುಂದರ ಮತ್ತು ಯುದ್ಧಕಾಂಡಗಳ ಕಥೆಯನ್ನು ಒಳಗೊಂಡ 'ಪ್ರತಿಮಾ' ಮತ್ತು

---

*ಉತ್ಸಾಹಾತಿಶಯಂ ವತ್ಸ, ತವ ಬಾಲ್ಯಂ ಚ ಪಶ್ಯತಃ ।
ಮಮ ಹರ್ಷವಿಷಾದಾಭ್ಯಾಮಾಕ್ರಾಂತಂ ಯುಗಪನ್ಮನಃ ॥

§ ರಾಮಾಯಣ ನಾಟಕ ತ್ರಿವೇಣಿಯ ಅನೇ ದೃಶ್ಯ

'ಅಭಿಷೇಕ' ಎಂಬ ನಾಟಕಗಳೆರಡನ್ನು ಬರೆದಿರುವ ಭಾಸನು ಬಾಲಕಾಂಡದ ಕಥೆಯನ್ನು ಒಳಗೊಂಡ ಇನ್ನೊಂದುನಾಟಕ (ಬಾಲಚರಿತೆ ಅಥವಾ ಯಜ್ಞಫಲ) ವನ್ನೂ ಬರೆದಿರಬಹುದೆಂದು ಊಹಿಸುವುದು ಅಸಂಭಾವಸೀಯವೆನಿಸಲಾರದು.

ಆದ್ದರಿಂದ ರಾಮಕಥೆಗೆ ಸಂಬಂಧಪಟ್ಟ ಯಜ್ಞಫಲ, ಪ್ರತಿಮಾ, ಅಭಿಷೇಕ ನಾಟಕಗಳ ಮೂಲಕರ್ತೃತ್ವವು ಭಾಸನದೆಂದೂ; ಅನಂತರ ಚಾಕಿಯಾರ್ ಕೂಟ್ಟು ಮುಂತಾದ ನಟವರ್ಗದವರಿಂದ ಕೆಲವು ಅಂಶಗಳು ಈ ನಾಟಗಳಲ್ಲಿ ಸೇರಿಸಲ್ಪಟ್ಟಿರಬೇಕೆಂದೂ ಸ್ಥೂಲವಾಗಿ ನಿರ್ಣಯಿಸಬಹುದು. ಯಜ್ಞಫಲ* (ಗೊಂಡಾಲ್ ಪ್ರಕಟಣೆ ಪುಟ ೧೧೬)ದಲ್ಲಿ 'ಗ್ರಹಚಾರಂ, ಪತಂಜಲೇಃ ಯೋಗಶಾಸ್ತ್ರಂ, ಮಾನವಮಾಚಾರಶಾಸ್ತ್ರಂ, ಚತುರ್ವಿಂಶತಿವ್ಯವಹಾರ ನಿರ್ಣಯಂ, ವಾಶಿಷ್ಠಂ ರಾಜಧರ್ಮಶಾಸ್ತ್ರಂ, ಮೇಧಾತಿಥೇಃ ನ್ಯಾಯಶಾಸ್ತ್ರಂ, ಕಾಶಕೃತ್ಸ್ನಂ ಮೀಮಾಂಸಾಶಾಸ್ತ್ರಂ....ಗಜಾಶ್ವರತ್ನಪರೀಕ್ಷಾ, ಶಕುನಜ್ಞಾನಂ, ಕಾವ್ಯಕಲಾ' ಎಂಬ ಉಲ್ಲೇಖವಿರುವುದರಿಂದ ಈ ನಾಟಕವು ಕ್ರಿ.ಶ. ೭ನೇ ಶತಮಾನದ ನಂತರ ಈಗಿನ ರೂಪವನ್ನೂ ಪಡೆದಿರಬಹುದೆಂದು ಹೇಳಲವಕಾಶವಿದೆ. ಚಾಕ್ಕಿಯಾರ್ ಎಂಬ ಕೇರಳದ ನಟವರ್ಗದವರು ಈ ನಾಟಕಗಳಲ್ಲಿ ಕಾಲದಿಂದ ಕಾಲಕ್ಕೆ ಏನೇನನ್ನು ಸೇರಿಸಿಕೊಂಡು ಅಥವಾ ಬಿಟ್ಟುಕೊಂಡು ಬಂದಿರುವರೆಂಬು ದನ್ನು ಖಚಿತವಾಗಿ ನಿರ್ಣಯಿಸಲು ಸಾಧ್ಯವಿಲ್ಲವಾದರೂ ಈ ಮೂರು ನಾಟಕ ಗಳಲ್ಲಿಯೂ ಭಾಸನ ಪ್ರತಿಭೆ, ನಾಟಕಕಲಾತಂತ್ರಕೌಶಲ್ಯ ಮತ್ತು ಆಧ್ಯಾತ್ಮಿಕ ದೃಷ್ಟಿ ಒಂದೇ ರೀತಿಯಾಗಿವೆಯೆಂದು ಹೇಳಬಹುದು. ಮತ್ತು ಈ ಮೂರು ನಾಟಕಗಳ ಪಾತ್ರಪೋಷಣೆ, ಕಥಾಸಂವಿಧಾನಗಳಲ್ಲಿ ಒಬ್ಬನೇ ಕವಿಯ ಕೈವಾಡವು ಕಂಡುಬರುವುದು. ಕಥಾವಸ್ತು, ನಾಯಕ ಮತ್ತು ರಸಸಂವಿಧಾನ ಗಳಲ್ಲಿ ಸಾಮಂಜಸ್ಯವೂ ಇದೆ.

ಯಜ್ಞಗಳನ್ನು ನಾಶ ಮಾಡುತ್ತಿದ್ದ ದುಷ್ಟಶಕ್ತಿಗಳನ್ನು ನಾಶಮಾಡಲು ಯಜ್ಞರೂಪನಾದ (ಯಜ್ಞೋ ವೈ ವಿಷ್ಣುಃ) ವಿಷ್ಣುವೇ ಶ್ರೀರಾಮನ ಜನನಕ್ಕೆ ಕಾರಣ. ಆತ್ಮತ್ಯಾಗರೂಪವಾದ ಯಜ್ಞವು ಧರ್ಮವಿರುದ್ಧವಾದ ಕಾಮ ಮತ್ತು ಅರ್ಥರೂಪವಾದ ರಾವಣಾದಿ ರಾಕ್ಷಸರ ನಾಶಕ್ಕೆ ಅವಶ್ಯಕ. ಎಂಬ ನಮ್ಮ

---

* ರಾಮಾಯಣ ನಾಟಕ ತ್ರಿವೇಣಿ, ಪುಟ ೩೨, ೩೩, ೧೮೧.

ಸಂಸ್ಕೃತಿಯನ್ನು ಪ್ರಸರಿಸುವುದೇ ಭಾಸನ ಉಸುರಿನ ಉದ್ದೇಶವಾಗಿತ್ತು. ಸಂಸ್ಕೃತಿ (culture)ಗೆ ಸಂಸ್ಕಾರವು ಅವಶ್ಯಕ. ಸಂಸ್ಕೃತಿಯು ಕ್ಷೀಣದೆಶೆಯ ಆರಂಭವೇ ನಾಗರಿಕತೆ (civilisation). ಅರ್ಥ ಮತ್ತು ಕಾಮಗಳು ಪ್ರಬಲವಾಗಿ ಅವು ಧರ್ಮ ಮತ್ತು ಮೋಕ್ಷಗಳಿಗೆ ವಿರುದ್ಧವಾದರೆ ಭೌತವಿಜ್ಞಾನವು ಪ್ರಬಲಿಸಿ ಮಾನವ ನಾಶಕ್ಕೆ ಕಾರಣವಾಗುವುದೆಂಬ ತತ್ತ್ವವು ಭಾರತೀಯ ಸಂಸ್ಕೃತಿಯ ಜೀವನಾಡಿ. ವಿಶ್ವಾಮಿತ್ರನು ಕ್ಷತ್ರಿಯನಾಗಿದ್ದು ಬ್ರಹ್ಮರ್ಷಿಪದವಿಯನ್ನು ಪಡೆದನು. ಪರಶುರಾಮನು ಬ್ರಾಹ್ಮಣನಾಗಿದ್ದು ಕ್ಷತ್ರಗುಣಗಳನ್ನೇ ಅವಲಂಬಿಸಿದ್ದನು. ಇವರೀರ್ವರ ನಡುವೆ ವಸಿಷ್ಠ ಮತ್ತು ರಾಮರು ಆಧ್ಯಾತ್ಮತತ್ವಗಳಿಗೆ ಆದರ್ಶಪ್ರಾಯರಾಗಿರುವರು. ತ್ಯಾಗರೂಪವಾದ ಸಾತ್ತ್ವಿಕ ಸೇವೆಯಿಂದ ಲೋಕ ಕಲ್ಯಾಣವನ್ನು ಹೇಗೆ ಸಾಧಿಸಬಹುದೆಂಬುದನ್ನು ಅವರ ಜೀವನಗಳು ಸೂಚಿಸುವವು. ತ್ಯಾಗ-ಸೇವೆ-ಧರ್ಮ ಅಥವಾ ಕರ್ಮ-ಭಕ್ತಿ-ಜ್ಞಾನ ಎಂಬ ತ್ರಿವೇಣೀ ಸಂಗಮದಲ್ಲಿ ಐಹಿಕಾಮುಷ್ಮಿಕ ಫಲಗಳನ್ನು ಪಡೆಯಬಹುದೆಂದೂ, 'ಅನೃತಾತ್ ಸತ್ಯಮುಪೈಮಿ, ಮಾನುಷಾದ್ದೈವಮುಪೈಮಿ, ಉಭೌ ಲೋಕೌ ಸನೇಮಹಂ' (ತೈತ್ತರೀಯ ಬ್ರಾಹ್ಮಣ) ಎಂಬ ಯಜ್ಞ ರಹಸ್ಯವನ್ನು ಸಾಧಿಸಬಹುದೆಂದೂ ಭಾಸನು ತನ್ನೀ ಮೂರು ನಾಟಕಗಳ ಮೂಲಕ ಸೂಚಿಸಿದ್ದಾನೆ.

ಭಾಸನ ಪಾತ್ರಗಳು ಆದರ್ಶಜೀವನಸೂತ್ರಗಳು. ಆದರೂ ಅವುಗಳಲ್ಲಿ ಮಾನವೀಯತೆಯ ಮೆರಗು ಹೊಚ್ಚಹೊಸದಾಗಿದೆ.

ಭಾಸನ ಕೌಶಲ್ಯವನ್ನು ಹೊಗಳುವ ಅವಸರದಲ್ಲಿ ವಾಲ್ಮೀಕಿ, ಕಾಳಿದಾಸ, ಭವಭೂತಿ ಇತ್ಯಾದಿ ಮಹಾಕವಿಗಳನ್ನು ತೆಗಳಬೇಕಾಗಿಲ್ಲ. ಪ್ರತಿಭೆಯು ವಿಶ್ವತೋಮುಖವಾದುದು. ಈ ಪ್ರತಿಭೆಯು ಯಾವ ಸಂಸ್ಕಾರವಿಶೇಷದಿಂದ ದೃಶ್ಯಕಾವ್ಯ, ಶ್ರವ್ಯಕಾವ್ಯ ಇತ್ಯಾದಿ ರೂಪಗಳಿಗನುಸಾರವಾಗಿ ಹೇಗೆ ವ್ಯಕ್ತಪಡುವುದೆಂದು ಹೇಳುವುದು ಕಷ್ಟ. ನವನವೋನ್ಮೇಷಣೆಯಿಂದ ಬೇರೆ ಬೇರೆ ಅರ್ಥಗಳನ್ನು ಸಾಧಿಸಬಹುದೆಂಬುದೇ ಸಂಸ್ಕೃತಿಯ ಪ್ರತೀಕ. ಹಾಗಿಲ್ಲದಿದ್ದಲ್ಲಿ ಪ್ರತೀಕಗಳಿಗೆ ಬೆಲೆಯಿಲ್ಲದೆ ನೀರಸವಾಗಿ ಅವು ಅನರ್ಥಕಾರಿಗಳಾಗಬಹುದೆಂದು ಸಂಸ್ಕೃತಿಗಳ ಚರಿತ್ರೆಗಳು ಹೇಳುವುವು. ಒಂದು ಪರಂಪರಾಗತವಾದ ಐತಿಹ್ಯ (Myth)ವು ದೇಶ ಕಾಲಾತೀತವಾದ ಸಂದೇಶವನ್ನು ಕೊಡದಿದ್ದರೆ, ವಿವಿಧ ಮಾನವ ಸ್ವಭಾವಗಳಿಗನುಸಾರವಾಗಿ ಆತ್ಮತುಷ್ಟಿಯನ್ನು ಸಾಧಿಸಲು ಅನುಕೂಲವಾಗದಿದ್ದರೆ,

ಅಂತಹ ಸಂಸ್ಕೃತಿಯು ನಿರ್ಜೀವವಾದ ಕೇವಲ ನಾಗರಿಕತೆಯಾಗಿ ಪರಿಣಮಿಸಿ ಕಾಲಕ್ರಮದಲ್ಲಿ ನಶಿಸಿ ಅದೃಶ್ಯವಾಗುವುದೆಂಬುದು ಸಂಸ್ಕೃತಿಚರಿತ್ರಕಾರರ ಅಭಿಪ್ರಾಯ. ಆದರೆ ಭಾರತೀಯ ಸಂಸ್ಕೃತಿಯ ಪ್ರತೀಕಗಳು ಸಾವಿರಾರು ವರ್ಷಗಳಿಂದ ಜನತೆಗೆ ಸನಾತನಸಂದೇಶಗಳನ್ನು ಕೊಡುತ್ತ—ಎಷ್ಟೋ ರಾಜಕೀಯ, ಆರ್ಥಿಕ, ಸಾಮಾಜಿಕ, ವೈಜ್ಞಾನಿಕ ಬದಲಾವಣೆಗಳಾದರೂ—ತಮ್ಮ ವೈಶಿಷ್ಟ್ಯವನ್ನು ಕಾಪಾಡಿಕೊಂಡು ಬಂದಿವೆ.

ಇಂತಹ ಭಾರತೀಯ ಸಂಸ್ಕೃತಿಯ ಪ್ರತೀಕಗಳಲ್ಲಿ ಒಂದಾದ ರಾಮಕಥಾ ಸಾಗರವು ಅಪಾರವಾದುದು. ಕಾಳಿದಾಸನಂತಹ ಮಹಾಕವಿಯೂ ದುಸ್ತರವಾದ ಈ ಸಾಗರವನ್ನು ಹರಿಗೋಲಿನಿಂದ ದಾಟುವುದಕ್ಕೆ ಅಜ್ಞಾನದಿಂದ ಪ್ರಯತ್ನ ಮಾಡುವೆನೆಂದು ಹೇಳುವನು. ಭಾಸಕವಿಯು ಸ್ವೀಕರಿಸಿರುವ ಕೆಲವಂಶಗಳು ವಾಲ್ಮೀಕಿ ರಾಮಾಯಣದಲ್ಲಿಲ್ಲ. ಆದರೆ ರಘುವಂಶ, ಜಾನಕೀಹರಣ, ಉತ್ತರರಾಮಚರಿತೆ ಇತ್ಯಾದಿ ಕಾವ್ಯಗಳಲ್ಲೂ, ಕಂಬರಾಮಾಯಣ, ತೊರವೆ ರಾಮಾಯಣ, ರಂಗನಾಥರಾಮಾಯಣ, ನಿರ್ವಚನೋತ್ತರರಾಮಾಯಣ ಮುಂತಾದ ತಮಿಳು, ಕನ್ನಡ, ತೆಲುಗು, ಗ್ರಂಥಗಳಲ್ಲೂ, ಬೃಹದ್ಭಾರತದ ಜಾವ ಬಲಿ, ಕಂಬುಜ ದೇಶಗಳ ರಾಮಾಯಣಗಳಲ್ಲೂ, ಭಾರತದಲ್ಲಿಯೇ ಪ್ರಚಾರವಾಗಿರುವ ವಿಶ್ವಾಮಿತ್ರ ವಸಿಷ್ಠ ರಾಮಾಯಣಗಳಲ್ಲೂ, ಆನಂದರಾಮಾಯಣ, ಶತಕಾಂಡರಾಮಾಯಣಾದಿಗಳಲ್ಲೂ ವಾಲ್ಮೀಕಿ ರಾಮಾಯಣದಲ್ಲಿಲ್ಲದ ಅನೇಕ ಅಂಶಗಳು ಕಂಡುಬರುತ್ತವೆ. ನಾಟಕೀಯತೆಗಾಗಿ ಕವಿಗಳು ಕೆಲವಂಶಗಳನ್ನು ಸೃಷ್ಟಿಸಿರಬಹುದು. ಹಾಗೆಯೇ ಭಾಸನು ಪ್ರತಿಮಾಗೃಹ, ಸಮುದ್ರಕ್ಕೆ ಸೇತುವೆ ಕಟ್ಟದೆ ಅದೇ ದಾರಿ ಬಿಡುವದು, ಕಾಂಚನಪಾರ್ಶ್ವ ಎಂಬ ಮೃಗ, ವಾಲಿ ವಧೆ, ಸೀತೆಯು ರಾಮನ ಮುದ್ರಿಕೆಯ ಸಹಾಯವಿಲ್ಲದೆಯೇ ಹನುಮಂತನಲ್ಲಿ ನಂಬಿಕೆಯಿಡುವುದು ಇಂತಹ ಅಂಶಗಳಲ್ಲಿ ವ್ಯತ್ಯಾಸಗಳನ್ನು ಮಾಡಿರಬಹುದು. ಆದರೆ ಭಾಸನು ಪಾತ್ರಪೋಷಣೆಯಲ್ಲಿ ನಿಯಮವನ್ನು ಸಾಧಿಸಿ, ವಿರುದ್ಧವಾದುದನ್ನು ತ್ಯಜಿಸಿ, ಧೀರೋದಾತ್ತನಾಯಕನನ್ನು ಸೃಷ್ಟಿಸಿರುವನು. ಭಾಸನ ರಾಮನ್ನು ತ್ರಿಮೂರ್ತಿಗಳಿಗೂ ಅತೀತನಾದ ಪರಬ್ರಹ್ಮ ವ್ಯಕ್ತಿಯಾದರೂ ವ್ಯಾವಹಾರಿಕ ಪ್ರಪಂಚಕ್ಕೆ ಅನುಸಾರವಾಗಿ ಬಾಲ್ಯ ಯೌವನವಯೋವಸ್ಥೆಗಳನ್ನು ತೋರಿಸುವದರಿಂದ ಕೇವಲ ಅಮಾನುಷ ವ್ಯಕ್ತಿಯಲ್ಲ. ಮಾನುಷವ್ಯಾಪಾರದಲ್ಲಿ ದೇವತ್ವವನ್ನು ತೋರಿಸಿರುವ ಆದರ್ಶ ವ್ಯಕ್ತಿ.

ಶ್ರೀಮಾನ್ ಬಸವರಾಜು ಅವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹಲವಾರು ವರ್ಷಗಳಿಂದ ಅಧ್ಯಾಪಕರಾಗಿ, ಕನ್ನಡ ಗ್ರಂಥಗಳನ್ನು ಪ್ರಕಟಿಸಿ ತಮ್ಮ ಅಧ್ಯಯನ, ಅಧ್ಯಾಪನ ರೂಪವಾದ ಯಜ್ಞಫಲವನ್ನು ದಾನ ಮಾಡಿರುವರು. ಭಾಸನ ಯಜ್ಞಫಲ, ಪ್ರತಿಮಾ ಮತ್ತು ಅಭಿಷೇಕ ನಾಟಕಗಳನ್ನು ಸಾರಸಂಗ್ರಹ ರೂಪವಾಗಿ ಭಾಷಾಂತರಿಸಿ ತ್ರಿವೇಣೀಸಂಗಮವನ್ನು ಸಾಧಿಸಿರುವರು. ಈ ಮೂರು ನಾಟಕಗಳನ್ನೂ ಮಿಳನ ಮಾಡಿ ಕಥಾ ಸಂವಿಧಾನ, ಪಾತ್ರಪೋಷಣೆ, ಆಧ್ಯಾತ್ಮಿಕ ಧ್ಯೇಯಗಳಿಗೆ ಚ್ಯುತಿಯಿಲ್ಲದಂತೆ, ಭಾಸನ ಪ್ರತಿಭೆ ವ್ಯಕ್ತವಾಗುವಂತೆ ಸುಲಭ ಕನ್ನಡದಲ್ಲಿ ಈ ಗ್ರಂಥವನ್ನು ತಂದುದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ.

ಮೈಸೂರು
16-9-1958

ಎಸ್. ಶ್ರೀಕಂಠಶಾಸ್ತ್ರೀ

ವಿಜ್ಞಾಪನೆ

ಭಾಸನು ಕಾಳಿದಾಸನಿಗೂ ಪುರಾತನ. ಇದುವರಿಗೂ ನಮಗೆ ಈತನ ಹದಿನಾಲ್ಕು ನಾಟಕಗಳು ಸಿಕ್ಕಿವೆ. ಭಾಸನು ತನ್ನ ನಾಟಕಗಳಿಗೆ ಕಥಾವಸ್ತು ವನ್ನು ರಾಮಾಯಣ, ಮಹಾಭಾರತ, ಭಾಗವತ, ಬೃಹತ್ಕಥೆ—ಇವುಗಳಿಂದ ತೆಗೆದುಕೊಂಡಿದ್ದಾನೆ. ಆತನ ಹದಿನಾಲ್ಕು ನಾಟಕಗಳಲ್ಲಿ ಯಜ್ಞಫಲ, ಪ್ರತಿಮಾ ನಾಟಕ ಮತ್ತು ಅಭಿಷೇಕ ನಾಟಕ ಇವು ರಾಮಾಯಣದ ಆಧಾರದ ಮೇಲೆ ಬರೆದುವು. 'ಯಜ್ಞಫಲ'ದಲ್ಲಿ ದಶರಥನಿಗೆ ರಾಮಲಕ್ಷ್ಮಣ ಭರತಶತ್ರುಘ್ನರು ಹುಟ್ಟಿ, ಅವರು ವಿದ್ಯಾಭ್ಯಾಸ ಮುಗಿಸಿ, ಮದುವೆಯಾಗುವವರೆಗಿನ ಬಾಲ ಕಾಂಡದ ಕಥೆಯು ಬರುತ್ತದೆ. ಪ್ರತಿಮಾನಾಟಕದಲ್ಲಿ ರಾಮನು ವನವಾಸಕ್ಕೆ ಹೊರಟ ಪ್ರಸಂಗದಿಂದ ಹಿಡಿದು ಅವನು ರಾವಣನನ್ನು ಕೊಂದು, ಸೀತೆಯೊಡನೆ ಪಟ್ಟಾಭಿಷಿಕ್ತನಾಗುವವರಿಗಿನ ವೃತ್ತಾಂತವಿದ್ದರೂ ಈ ನಾಟಕದ ಮುಖ್ಯ ವಸ್ತು ಅಯೋಧ್ಯಾಕಾಂಡ ಮತ್ತು ಅರಣ್ಯಕಾಂಡದ ಕಥಾಭಾಗವೇ ಆಗಿದೆ. ಆಮೇಲೆ ಕಿಷ್ಕಿಂಧಾ, ಸುಂದರ ಮತ್ತು ಯುದ್ಧಕಾಂಡಗಳ ಕಥೆಯನ್ನೇ ಆಧಾರವಾಗಿಟ್ಟು ಕೊಂಡು ಬರೆದಿರುವುದೇ ಅಭಿಷೇಕ ನಾಟಕ; ಇದು ವಾಲಿವಧೆಯಿಂದ ಮೊದಲ್ಗೊಂಡು ಸೀತೆಯ ಅಗ್ನಿಪರೀಕ್ಷೆಯ ಅನಂತರ ರಾಮಪಟ್ಟಾಭಿಷೇಕದಲ್ಲಿ ಸಂಪೂರ್ಣವಾಗುವುದು. ಹೀಗೆ ಭಾಸನು ಶ್ರವ್ಯವಾದ ಶ್ರೀರಾಮಾಯಣವನ್ನು ತನ್ನ ಈ ಮೂರು ನಾಟಕರತ್ನಗಳ ಮೂಲಕ ದೃಶ್ಯವನ್ನಾಗಿ ಪರಿವರ್ತಿಸಿ ಅದನ್ನು ಭಾರತೀಯಜನಮನೋರಂಗದಿಂದ ನಾಟಕರಂಗಕ್ಕೆ ತಂದು, ರಾಮ ಚಂದ್ರನ ಪವಿತ್ರ ಕಥೆಯು ಜನತೆಯ ಕಣ್ಣಿಗೆ ಕಟ್ಟುವಂತೆ ಮಾಡಿದನು.

ಪ್ರತಿಮಾನಾಟಕವು ಕಡೆದ ವಜ್ರದಂತಿದೆ. ಆದರೆ ಯಜ್ಞಫಲದಲ್ಲಿ ಅದಕ್ಕಿಂತ ಹೆಚ್ಚಾಗಿ ಅಭಿಷೇಕ ನಾಟಕದಲ್ಲಿ ಬಿಡಲೇಬೇಕಾದುದು ಬಹಳವಿದೆ. ಅವನ್ನೆಲ್ಲಾ ಬಿಟ್ಟು ಆ ಮೂರು ನಾಟಕಗಳನ್ನೂ ಒಟ್ಟಾಗಿ ಸೇರಿಸಿ "ರಾಮಾಯಣ ನಾಟಕ ತ್ರಿವೇಣಿ"ಯನ್ನು ಸಿದ್ಧಿಸಿಕೊಳ್ಳಲಾಗಿದೆ. ಹಾಗೆ ಮಾಡುವಾಗ ಕಥಾಸಂವಿಧಾನ ಕ್ಕಾಗಲಿ, ಪಾತ್ರಪೋಷಣೆಗಾಗಲಿ ಸಂಬಂಧಿಸದ ಶುಷ್ಕನೀತಿಪ್ರಧಾನವಾದ ಮಾತುಕಥೆಗಳನ್ನೂ ನಾಟಕದ ಜಾಯಮಾನಕ್ಕೆ ಹೊಂದಿಕೊಳ್ಳದ ದೀರ್ಘ

ವರ್ಣನೆಗಳನ್ನೂ ನಿರ್ದಾಕ್ಷಿಣ್ಯವಾಗಿ ಬಿಟ್ಟುಬಿಟ್ಟಿದ್ದೇನೆ. ಶಸ್ತ್ರವೈದ್ಯನು ದುರ್ಮಾಂಸವನ್ನು ಕತ್ತರಿಸಿ ಹಾಕುವುದು ದೇಹಾರೋಗ್ಯಕ್ಕಾಗಿಯೇ. ಈ ಸಂದರ್ಭದಲ್ಲಿ ಸಾಮರ್ಸೆಟ್ ಮಾಮ್‌ನ ಒಂದು ಮಾತು ನೆನಪಾಗುವುದು. "ಬೇಡವಾದುದನ್ನು ಕತ್ತರಿಸಿ ಸಾರವನ್ನು ಸಂಗ್ರಹಿಸುವುದರಲ್ಲಿ ಆಕ್ಷೇಪಣಾರ್ಹ ವಾದುದೇನೂ ಇಲ್ಲ. ನಾಟಕಗಳನ್ನು ರಂಗದ ಮೇಲೆ ಅಭಿನಯಿಸುವುದಕ್ಕೆ ಮುಂಚೆ—ಪರೀಕ್ಷಾ ಪ್ರಯೋಗಗಳಲ್ಲಿ—ಅವುಗಳಿಂದ ಹಲಕೆಲವು ಭಾಗಗಳನ್ನು ಬಿಟ್ಟುಬಿಡುವುದರಿಂದ ಆ ನಾಟಕಗಳು ಉತ್ತಮವಾಗುವವೆಂಬುದು ಅನುಭವ ಸಿದ್ಧವಾದ ಮಾತು. ಎಷ್ಟೋ ವರ್ಷಗಳ ಹಿಂದೆ ಒಂದು ದಿನ ಶ್ರೀಯುತ ಬರ್ನಾರ್ಡ್ ಷಾ ಮತ್ತು ನಾನು ಉಪಾಹಾರ ಮಾಡುತ್ತಿದ್ದೆವು. ಆಗ ತನ್ನ ನಾಟಕಗಳು ಇಂಗ್ಲೆಂಡಿಗಿಂತ ಜರ್ಮನಿಯಲ್ಲಿ ಹೆಚ್ಚು ಯಶಸ್ವಿಯಾಗಿವೆಯೆಂದು ಬರ್ನಾರ್ಡ್ ಷಾ ಹೇಳಿಕೊಂಡರು. ಇದಕ್ಕೆ ಅವರು ಕಾರಣವನ್ನು ಕೊಡುತ್ತ, ಇಂಗ್ಲಿಷ್ ಜನರೂ ಪೆದ್ದರೆಂದೂ, ಜರ್ಮನರು ಬುದ್ಧಿವಂತರೆಂದೂ ಅಭಿಪ್ರಾಯ ಪಟ್ಟರು. ಅವರ ಈ ಅಭಿಪ್ರಾಯ ಸರಿಯಲ್ಲ. ಇಂಗ್ಲೆಂಡಿನಲ್ಲಿ ತಮ್ಮ ನಾಟಕ ಗಳನ್ನು ಅಭಿನಯಿಸುವಾಗ ಅವುಗಳೊಳಗಿಂದ ತಾವು ಬರೆದಿರುವ ಒಂದು ಮಾತನ್ನಾದರೂ ಬಿಡಲು ಅವಕಾಶ ಕೊಡುತ್ತಿರಲಿಲ್ಲ ಬರ್ನಾರ್ಡ್ ಷಾ. ಜರ್ಮನಿ ಯಲ್ಲಿ ಅವರ ನಾಟಕಗಳನ್ನಾಡುವುದನ್ನು ನಾನು ನೋಡಿದ್ದೇನೆ. ಅಲ್ಲಿನ ನಿರ್ದೇಶಕರು ಬರ್ನಾಡ್ ಷಾ ಅವರ ನಾಟಕಗಳೊಳಗಿನ ಹಲವು ಮಾತು ಗಳನ್ನು ಕತ್ತರಿಸಿ ಕಸಿಮಾಡುತ್ತಿದ್ದರು. ಆದ್ದರಿಂದ ಅವರ ನಾಟಕಗಳು ಜರ್ಮನಿ ಯಲ್ಲಿ ಸರ್ವಜನಪ್ರಿಯವಾಗಿದ್ದವು."

ಇದರಿಂದ ಗಮನಾರ್ಹವಾದ ಮಾತೆಂದರೆ: ಜನಪ್ರಿಯವಾಗಬೇಕಾದ ನಾಟಕಗಳಲ್ಲಿ ನಾಟಕಕ್ರಿಯೆಗೆ ಅನಿವಾರ್ಯವಲ್ಲದ ಮಾತುಕತೆಗೆ ಅವಕಾಶ ವಿಲ್ಲ. ಪ್ರತಿಮಾನಾಟಕದ ಸಮಕ್ಕೆ ಬಾರವೆಂದು ವಿಮರ್ಶಕರು ಅಭಿಪ್ರಾಯ ಪಡುವ ಯಜ್ಞಫಲ ಮತ್ತು ಅಭಿಷೇಕನಾಟಕಗಳು ಉತ್ತಮವಾದ ನಾಟಕ ಗಳಾಗಬೇಕಾದರೆ ಅವುಗಳೊಳಗಿಂದ ಅನವಶ್ಯಕವಾದ ಭಾಗಗಳನ್ನು ಬಿಟ್ಟು ಬಿಟ್ಟರೆ ಸಾಕು. ಯಜ್ಞಫಲ, ಪ್ರತಿಮಾ, ಅಭಿಷೇಕ ಎಂಬ ಮೂರು ನಾಟಕ ಗಳನ್ನೂ ಸಂಗಮಿಸಿ "ರಾಮಾಯಣ ನಾಟಕ ತ್ರಿವೇಣಿ"ಯನ್ನಾಗಿ ಮಾರ್ಪಡಿ ಸಲು ನಾನು ಮಾಡಿಕೊಂಡಿರುವ ವ್ಯತ್ಯಾಸವಾದರೂ ಇಷ್ಟೇ. ಭಾಸನ ಆ ನಾಟಕ

ಗಳಲ್ಲಿ ಇಲ್ಲದ ಭಾವಗಳನ್ನಾಗಲಿ ಮಾತುಗಳನ್ನಾಗಲಿ ರಾಮಾಯಣ ನಾಟಕ ತ್ರಿವೇಣಿಯಲ್ಲಿ ತಂದು ಸೇರಿಸಿಲ್ಲ. ಉದ್ಧಕ್ಕೂ ನನಗಿದ್ದ ಸಮಸ್ಯೆ ಯಾವ ಮಾತು ಗಳನ್ನು ಬಿಡಬೇಕೆಂಬುದಾಗಿತ್ತೇ ಹೊರತು ಯಾವುದನ್ನು ಹೊಸದಾಗಿ ಸೇರಿಸ ಬೇಕೆಂಬುದಲ್ಲ. ಪ್ರತಿಮಾ ನಾಟಕದಲ್ಲಿ ನಾನೇನನ್ನೂ ಬಿಟ್ಟಿಲ್ಲ; ಬಿಟ್ಟಿರುವುದೆಲ್ಲಾ ಯಜ್ಞಫಲದಲ್ಲಿ; ಅದಕ್ಕಿಂತ ಹೆಚ್ಚಾಗಿ ಅಭಿಷೇಕ ನಾಟಕದಲ್ಲಿ.

ಏಳೇಳು ಅಂಕಗಳಿರುವ ಯಜ್ಞಫಲ, ಪ್ರತಿಮಾ ಮತ್ತು ಅಭಿಷೇಕ ನಾಟಕ ಗಳನ್ನು ರಾಮಾಯಣ ನಾಟಕ ತ್ರಿವೇಣಿಯಲ್ಲಿ ಅಳವಡಿಸಿಕೊಳ್ಳುವಾಗ ಅಂಕ ಗಳನ್ನೆಲ್ಲ ದೃಶ್ಯಗಳೆಂದು ಕರೆದಿದ್ದೇನೆ. ಮತ್ತು ಯಜ್ಞಫಲದ ಮೊದಲನೇ ಅಂಕ ವನ್ನು ಎರಡು ದೃಶ್ಯವಾಗಿ ವಿಭಾಗಿಸಿಕೊಂಡಿದ್ದೇನೆ. ಪ್ರತಿಮಾನಾಟಕದ ಕೊನೆ ಯಲ್ಲೂ ಅಭಿಷೇಕನಾಟಕದ ಕೊನೆಯಲ್ಲೂ ರಾಮಪಟ್ಟಾಭಿಷೇಕವಾಗುವುದರಿಂದ ಅಭಿಷೇಕನಾಟಕದ ಏಳನೇ ಅಂಕವನ್ನು ಬಿಟ್ಟು, ಪ್ರತಿಮಾನಾಟಕದ ಏಳನೇ ಅಂಕವನ್ನು ಕೊನೆಗೆ ಜೋಡಿಸಿಕೊಳ್ಳಲಾಗಿದೆ. ಹೀಗಾಗಿ ರಾಮಾಯಣ ನಾಟಕ ತ್ರಿವೇಣಿಯಲ್ಲಿ ಒಟ್ಟು ಇಪ್ಪತ್ತು ಮೇಲೊಂದು ದೃಶ್ಯಗಳೇ ಆದುವು. ಆ ಕೊನೆಯ ದೃಶ್ಯವನ್ನು ಸಂಖ್ಯೆಯಿಂದ ನಿರ್ದೇಶಿಸದೆ 'ಸಂಪೂರಣ ದೃಶ್ಯ'ವೆಂದು ಕರೆದಿದ್ದೇನೆ.

ಶ್ರೀರಾಮಾಯಣದ ದಿವ್ಯ ಸಂದೇಶವು ಅಲ್ಲಿನ ಆದರ್ಶ ಪಾತ್ರಗಳ ಬಾಯಲ್ಲಿ ಬರುವ ದಿನಬಳಕೆಯ ಸರಳವಾದ ಆದರೂ ಸುಂದರವಾದ ಮಾತುಗಳ ಮೂಲಕವೇ ಜನಸಾಮಾನ್ಯತೆಯ ಹೃದಯಸ್ಪರ್ಶಿಯಾಗುವುದೆಂದು ನಾನು ನಂಬಿ, ಭಾಸನ ಮೂಲಕೃತಿಗಳಲ್ಲಿನ ಪದ್ಯಗಳನ್ನೂ ಸರಳ ಗದ್ಯದಲ್ಲಿಯೇ ಭಾಷಾಂತರಿಸಿದ್ದೇನೆ.

ನನ್ನ ಪೂಜ್ಯ ಗುರುಗಳಾದ ಡಾ. ಎಸ್. ಶ್ರೀಕಂಠಶಾಸ್ತ್ರಿಗಳು ಈ ರಾಮಾಯಣ ನಾಟಕ ತ್ರಿವೇಣಿಗೆ ವಿದ್ವತ್ಪೂರ್ಣವಾದ ಮುನ್ನುಡಿಯನ್ನು ಬರೆದುಕೊಟ್ಟುದರಿಂದಲೂ ಮತ್ತು ಈ ಗ್ರಂಥವನ್ನು ನಾನು ಅವರಿಗೆ ಅರ್ಪಿಸಲು ಅವಕಾಶ ಕೊಟ್ಟುದರಿಂದಲೂ ಆ ಪೂಜ್ಯಪಾದರಿಗೆ ನಾನು ಕೃತಜ್ಞ.

ಈ ಗ್ರಂಥವನ್ನು 1966-67 ರ ಬಿ.ಎ. ಮತ್ತು ಬಿ. ಎಸ್. ಸಿ. ಮೊದಲನೆಯ ಪರೀಕ್ಷೆಯವರಿಗೆ ಪಠ್ಯಪುಸ್ತಕವನ್ನಾಗಿ ನೇಮಿಸಿದ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಪಠ್ಯನಿಯಾಮಕ ಸಮಿತಿಯ ಮಾನ್ಯ ಸದಸ್ಯ

ರಿಗೂ ಇದರ ಪ್ರಕಟನ ಕಾರ್ಯವನ್ನು ನಿರ್ವಹಿಸಿಕೊಂಡ. ಶ್ರೀ ಡಿ. ವಿ. ಕೆ. ಮೂರ್ತಿಯವರಿಗೂ ಮತ್ತು ಇದನ್ನು ಅಂದವಾಗಿ ಅಚ್ಚು ಹಾಕಿದ ಶ್ರೀ ಜಿ.ಎಚ್. ಕೃಷ್ಣಮೂರ್ತಿಯವರಿಗೂ ನನ್ನ ಕೃತಜ್ಞತೆಯ ನಮಸ್ಕಾರಗಳು.

ಎಲ್. ಬಸವರಾಜು

ಸುಮಂತ್ರ - ದಶರಥನ ಮಂತ್ರಿ - ಅಮಾತ್ಯ

ಕೈಕೇಯಿ

ಮಂಥರೆ

ಕೌಸಲ್ಯೆ

ಸುಮಿತ್ರೆ

ರಾಮ

ಲಕ್ಷ್ಮಣ

ಭರತ

ಶತ್ರುಘ್ನ

ವಸಿಷ್ಠ

ವಿಷಯಾನುಕ್ರಮಣಿಕೆ

ಯಜ್ಞಫಲ

ಪ್ರತಿಮಾ

ತಾಯನ್ನು ನೋಡಲೊಲ್ಲದೆ, ಅಯೋಧ್ಯೆಯನ್ನು ಪ್ರವೇಶಿಸಲೊಲ್ಲದೆ, ರಾಮುನ ಬಳಿಗೆ ಹೋಗಲುದ್ಯೋಗಿಸುವನು.

೧೨ ಭರತನು ರಾಮುನ ದರ್ಶನ ಮಾಡಿ ಅವನ ಪಾದುಕೆಗಳಿಗೆ ಪಟ್ಟಾಭಿಷೇಕ ಮಾಡುವೆನೆಂದು ಅವನ್ನು ತರುವನು.

೧೩ ತಂದೆಯ ಶ್ರಾದ್ಧ ಮಾಡುವ ಸಂಬಂಧವಾಗಿ ಚಿಂತಿಸುತ್ತಿದ್ದ ರಾಮುನಿಗೆ ರಾವಣನು ಸಂನ್ಯಾಸಿಯ ವೇಷದಲ್ಲಿ ಕಾಣಿಸಿಕೊಳ್ಳುವನು. ಕಾಂಚನ ಪಾರ್ಶ್ವ ಮೃಗ ದರ್ಶನ. ರಾಮುನು ಅದರ ಬೆನ್ನಟ್ಟಿ ಹೋಗಲು ರಾವಣನು ಸೀತೆಯನ್ನು ಕದ್ದುಕೊಂಡು ಹೋಗುವುದು.

೧೪ ಸೀತಾಪಹರಣ ವೃತ್ತಾಂತವೂ ರಾಮುಲಕ್ಷ್ಮಣರು ಕಿಷ್ಕಿಂಧೆಯ ಸುಗ್ರೀವ ಹನುಮಂತರೊಡನೆ ಬೆಳೆಸಿದ ಸ್ನೇಹದ ವೃತ್ತಾಂತವೂ ಭರತನಿಗೆ ಸುಮಂತ್ರನಿಂದ ತಿಳಿದು, ಭರತನು ತಾಯಾದ ಕೈಕೆಯನ್ನು ಖಂಡಿಸಲು ಹೋಗುವನು. ಆಗ ಕೈಕೆಯು ಮಗನಿಗೆ ದಶರಥನ ಶಾಪವೃತ್ತಾಂತವನ್ನು ತಿಳಿಸಿ ತನ್ನ ನಿರಪರಾಧವನ್ನು ತಿಳಿಸುವಳು. ಭರತ-ಕೈಕೆಯರು ಅಚ್ಚುಮೆಚ್ಚಿನ ತಾಯಿ ಮಕ್ಕಳಾಗುವರು.

ಅಭಿಷೇಕ

೧೫ ವಾಲಿವಧೆ; ಸುಗ್ರೀವ ಪಟ್ಟಾಭಿಷೇಕ.

೧೬ ಅಶೋಕವನದಲ್ಲಿ ಸೀತೆಯನ್ನು ಹನುಮಂತನು ಕಾಣುವುದು.

೧೭ ಹನುಮಂತನು ರಾವಣನನ್ನು ಕಂಡು ರಾಮುನ ಎಚ್ಚರಿಕೆಯ ಮಾತನ್ನು ತಿಳಿಸುವುದು, ವಿಭೀಷಣನನ್ನು ರಾವಣನು ಹೊರಗೆ ಹಾಕುವುದು.

೧೮ ವಿಭೀಷಣನು ರಾಮುನಿಗೆ ಶರಣಾಗತನಾಗಿ ಬರುವನು. ಅವನಿಗೇ ಪಟ್ಟಾಭಿಷೇಕವೆನ್ನುವನು ರಾಮು. ರಾಮಾದಿಗಳು ಸೈನ್ಯಸಮೇತರಾಗಿ ವರುಣನು ಕೊಟ್ಟ ದಾರಿಯಲ್ಲಿ ಕಡಲನ್ನು ದಾಟುವರು.

೧೯ ಯುದ್ಧದಲ್ಲಿ ಕುಂಭಕರ್ಣ ಇಂದ್ರಜಿತು ಮುಂತಾದವರ ಮರಣ. ರಾವಣನು ತನ್ನ ರಾಜ್ಯದಿಂದ ರಾಜ್ಯಲಕ್ಷ್ಮಿ ಹೋದುದನ್ನು ಕಾಣುವನು. ಮಾಯಾ ಶಿರಸ್ಸುಗಳಿಂದ ಸೀತೆಯನ್ನು ಒಲಿಸಿಕೊಳ್ಳಲೆಳಸಿ ಆಗದೆ ರಾಮುನ ಮೇಲೆ ಯುದ್ಧಕ್ಕೆ ನಿಲ್ಲುವನು.

೨೦ ರಾಮುರಾವಣರ ಯುದ್ಧ; ರಾವಣ ವಧೆ.

೨೧ ಸಂಪೂರಣಾಂಕ: ರಾಮು ಪಟ್ಟಾಭಿಷೇಕ.

ಭಾಸ

ರಾಮಾಯಣ ನಾಟಕ ತ್ರಿವೇಣಿ

ಮೊದಲನೇ ದೃಶ್ಯ

(ಪ್ರವೇಶ)

ಸುಮಂತ್ರ—ಪೌರರನ್ನು ತಣಿಸಿ, ಬ್ರಾಹ್ಮಣರಿಗೆ ಭೋಜನ ಮಾಡಿಸಿ, ಶ್ರೋತ್ರಿಯರಿಗೆ ನೂರು ನೂರು ಗೋವುಗಳನ್ನು ದಾನ ಮಾಡಿದ್ದಾಯಿತು. ಬೇಡಿದವರ ಬಯಕೆಯನ್ನೆಲ್ಲ ಈಡೇರಿಸಿದೆ. ಇಷ್ಟಾರ್ಥ ನೆರವೇರಿದ ಮೇಲೆ ಯಾರಿಗೆ ತಾನೆ ಸಂತೋಷವಾಗುವುದಿಲ್ಲ!

(ಪ್ರವೇಶ)

ಕಂಚುಕಿ—ಅಮಾತ್ಯ, ಮಹಾರಾಜರು ಹೇಳಿಕಳಿಸಿದ್ದಾರೆ: ಹಳ್ಳಿಯಲ್ಲಾಗಲಿ, ಪಟ್ಟಣದಲ್ಲಾಗಲಿ ಇರುವ ಜನರಿಗೆಲ್ಲ ಯಥೇಷ್ಟವಾಗಿ ದಾನ ಮಾಡಬೇಕಂತೆ, ಯಾವೊಬ್ಬ ಅರ್ಥಿಯ ಆಶೆಯೂ ಅಪೂರ್ಣವಾಗಿ ನಿಲ್ಲಬಾರದಂತೆ.

ಸುಮಂತ್ರ—ಮಹಾರಾಜರ ಮನೋಗತವನ್ನು ತಿಳಿದು ಅವರು ಆಜ್ಞೆ ಮಾಡುವುದಕ್ಕೆ ಮೊದಲೇ ಹಾಗೆ ಮಾಡಿದ್ದೇನೆ.

ಕಂಚುಕಿ—ಒಳ್ಳೆಯದೇ ಆಯಿತು. ರಾಜರ ಮನಸ್ಸಿನಲ್ಲಿರುವುದನ್ನು ತಿಳಿದು, ಅದರಂತೆ ಮಾಡುವ ಅಮಾತ್ಯರಿಂದ ಭವಿಷ್ಯವು ಶುಭದಲ್ಲಿ ಪರಿಣಮಿಸುವುದು. ಮಹಾರಾಜರ ಮತ್ತೊಂದು ಆದೇಶವಿದೆ: ಬಂಧನದಲ್ಲಿರುವವರನ್ನು ಬಿಡುಗಡೆ ಮಾಡಬೇಕಂತೆ.

ಸುಮಂತ್ರ—ಈ ಸುಖೀರಾಜ್ಯದಲ್ಲಿನ ಜನರು ಬಂಧನಾದಿ ಶಿಕ್ಷೆಗಳಿಗೆ ಹೇಗೆ ಒಳಗಾದಾರು? ಒಳಗಾಗದ ಮೇಲೆ ಅವರನ್ನು ಬಿಡುಗಡೆ ಮಾಡುವುದು ತಾನೇ ಹೇಗೆ? ನಮ್ಮ ಮಹಾರಾಜರಿಗೆ ಪುತ್ರೋತ್ಸವವಾಗಿರುವುದರಿಂದ ಅವರೇ ತಮ್ಮ ಪಿತೃಗಳ ಋಣದಿಂದ ಈಗ ಬಿಡುಗಡೆ ಹೊಂದಿದ್ದಾರೆ.

(ವಿದೂಷಕನ ಪ್ರವೇಶ)

ವಿದೂಷಕ—ಪುತ್ರರನ್ನು ಪಡೆಯುವುದಕ್ಕಾಗಿ ನಮ್ಮ ಮಹಾರಾಜನು ಮಾಡುತ್ತಿದ್ದ ಯಜ್ಞವು ಇಂದು ತಾನೇ ಸಫಲವಾಯಿತು! ನನ್ನಂತಹ ಬ್ರಾಹ್ಮಣನಿಗೆ ಯಥೇಷ್ಟವಾಗಿ ಊಟಕ್ಕಿಟ್ಟ ಮೇಲೆ ಯಾವ ಯಜ್ಞ ತಾನೇ ಸಫಲವಾಗುವುದಿಲ್ಲ! ಇನ್ನಿಂತಹ ನಾಲ್ಕು ಯಜ್ಞಗಳಾದರೆ ಸಾಕು, ನಾನು ಅಸಂಖ್ಯಾತ ಲಾಡು ಉಂಡೆಗಳ ಹುಟ್ಟಡಗಿಸಿ, ಆ ವಿಷಯದಲ್ಲಿ ನಾನು 'ಅಪ್ರತಿರಥ'ನೆನಿಸಿಕೊಳ್ಳುವುದರಲ್ಲಿ ಯಾವ ಸಂಶಯವೂ ಇಲ್ಲ.

ಸುಮಂತ್ರ—ಅಯ್ಯ, ಸುಂದರಕ, ಇವತ್ತು ನಿನಗೆ ದಾನವಾಗಿ ಚಿನ್ನ ಸಿಕ್ಕಿತೆ?

ವಿದೂಷಕ—ನನಗೇಕೆ ಚಿನ್ನ? ಅದನ್ನು ತಿನ್ನೋ ಹಾಗಿಲ್ಲ, ಉಣ್ಣೋ ಹಾಗಿಲ್ಲ! ಅಥವಾ ಅದನ್ನು ಕೂಡಿಡುವುದರಿಂದ ಸಂತೋಷ ಪಡೋಣವೆಂದರೆ ನಾನು ರಾಜನೂ ಅಲ್ಲ, ವ್ಯಾಪಾರಿಯೂ ಅಲ್ಲ. ನನಗೆ ಚಿನ್ನದಿಂದೇನಾಗ ಬೇಕಾಗಿದೆ?!

ಕಂಚುಕಿ—ಮಹಾಬ್ರಾಹ್ಮಣ, ನಿನಗಾಗಬೇಕಾದುದೇನು?

ವಿದೂಷಕ—ಲಾಡು ಊಟ.

ಕಂಚುಕಿ—ಅಯ್ಯ, ಅದೆಷ್ಟು ಲಾಡು ಉಂಡೆಗಳನ್ನು ಹೊಡೆಯುತ್ತೀಯೆ ನೀನು?

ವಿದೂಷಕ—ನಮ್ಮ ಮಹಾರಾಜನು ಎಷ್ಟು ಶತ್ರುಗಳನ್ನು ಹೊಡೆದು 'ಮಹಾರಥ'ನೆನಿಸಿಕೊಂಡನು?

ಕಂಚುಕಿ—ಹತ್ತು ಸಾವಿರ ಶತ್ರುಗಳನ್ನು ಯಾರು ಜಯಿಸುವರೋ ಅವರು 'ಮಹಾರಥ'ರೆನ್ನಿಸಿಕೊಳ್ಳುವರು.

ವಿದೂಷಕ—ಹಾಗಾದರೆ ನಾನು ಹತ್ತು ಸಾವಿರ ಲಾಡುಗಳನ್ನು ಹೊಡೆಯುವ 'ಮಹಾರಥ'.

ಕಂಚುಕಿ—ಹೇಗೆ ತಾನೇ ಒಂದೇ ದಿನದಲ್ಲಿ ಒಬ್ಬನು ಹತ್ತು ಸಾವಿರ ಲಾಡು ಗಳನ್ನು ತಿಂದಾನು?!

ವಿದೂಷಕ—ಹೇಗೆ ತಾನೇ ಒಂದೇ ದಿನದಲ್ಲಿ ಮಹಾರಥನು ಹತ್ತು ಸಾವಿರ ಶತ್ರುಗಳನ್ನು ಕೊಂದಾನು?

ಕಂಚುಕಿ—ಅದು ಹಾಗಲ್ಲ! ಮಹಾರಥನು ಕೆಲವರನ್ನು ಕೊಲ್ಲುತ್ತಾನೆ,

ಕೆಲವರನ್ನು ಕಾಯುತ್ತಾನೆ, ಕೆಲವು ಶರಣಾಗತರನ್ನು ರಕ್ಷಿಸುತ್ತಾನೆ, ಎಲ್ಲಾ ಸೇರಿ ಹತ್ತು ಸಾವಿರ!

ವಿದೂಷಕ—ನಾನೂ ಅಷ್ಟೆ! ಕೆಲವು ಲಾಡುಗಳನ್ನು ಭಕ್ಷಿಸುತ್ತೇನೆ, ಮತ್ತೆ ಕೆಲವನ್ನು ಚಚ್ಚಿ ಚೂರು ಮಾಡುತ್ತೇನೆ; ಇನ್ನು ಕೆಲವನ್ನು ಕೃಪೆಯಿಂದ ರಕ್ಷಿಸಿಡುತ್ತೇನೆ.

ಸುಮಂತ್ರ—ಬಾಭ್ರವ್ಯ, ವಿತಂಡವಾದಿಗೆ ಸಕಾರಣವಾದ ಮಾತಿನಿಂದ ಸಮಾಧಾನವಾಗುವುದಿಲ್ಲ. (ಮುಂದೆ ನೋಡಿ) ಓಹೋ ಮಹಾರಾಜರು ಪರಿಜನ ರೊಡಗೂಡಿ ಇತ್ತಲೇ ಬರುತ್ತಿದ್ದಾರೆ.

ಕಂಚುಕಿ—ನಾನು ನನ್ನ ಕೆಲಸಕ್ಕೆ ಹೋಗುತ್ತೇನೆ. (ಹೋಗುವನು)

ವಿದೂಷಕ—ನಾನು ತಿಂದುಳಿದ ಲಾಡುಗಳನ್ನು ರಕ್ಷಿಸಿಡಲು ಹೋಗುತ್ತೇನೆ. (ಹೋಗುವನು)

ಸುಮಂತ್ರ—ಮಹಾರಾಜರ ರೂಪು ಮುಪ್ಪಿನಲ್ಲಿಯೂ ಅದೆಷ್ಟು ರಮಣೀಯ ವಾಗಿದೆ! ಬೆನ್ನು ಸ್ವಲ್ಪವಾದರೂ ಬಾಗಿಲ್ಲ. ಮುಖದ ಮೇಲೆ ಯುವಕನ ಓಜಸ್ಸಿದೆ. ಎಡೆಬಿಡದೆ ರಾಜಕಾರ್ಯದಲ್ಲಿ ನಿರತರಾಗಿದ್ದರೂ ಅವರಿಗೆ ಬಳಲಿಕೆಯೇ ತೋರುವುದಿಲ್ಲ!

(ಪರಿಜನರೊಡನೆ ರಾಜನು ಪ್ರವೇಶಿಸುವನು)

ದಶರಥ—ನನ್ನ ಕುಲವ್ರತಕ್ಕನುಸಾರವಾಗಿ ನಾನು ನಿತ್ಯವೂ ದೇವತೆ ಗಳನ್ನೂ, ಪಿತೃಗಳನ್ನೂ, ಆರ್ತರನ್ನೂ, ಶರಣಾಗತರನ್ನೂ ವಿಧಿವತ್ತಾಗಿ ಪೂಜಿಸಿ ಸಂಪ್ರೀತಿಗೊಳಿಸುತ್ತಿದ್ದೇನೆ. ಈಗ ನನಗೆ ಮಕ್ಕಳಾದುದರಿಂದ ನನ್ನ ಮನೋರಥಗಳೆಲ್ಲಾ ಈಡೇರಿವೆ. ಆದರೂ ನನ್ನ ಮನಸ್ಸಿಗೇಕೋ ಅಷ್ಟು ಸಂತೋಷವಿಲ್ಲ!

ಸುಮಂತ್ರ—(ಬಳಿಸಾರಿ) ಮಹಾರಾಜರೇ, ಜಯವಾಗಲಿ. ನಿಮ್ಮ ಪುತ್ರರು ಬೆಳೆದು ಪ್ರಜೆಗಳನ್ನು ಪಾಲಿಸಲು ಸಮರ್ಥರಾದಾಗ, ಅವರಿಗೆ ನೀವು ಪಟ್ಟಕಟ್ಟಿದ ಮೇಲೆ ತಾನೇ, ನಿಮಗೆ ಅಪಾರವಾದ ಸಂತೋಷವಾಗುವುದು ?!

ದಶರಥ—ಅಯ್ಯ, ಸುಮಂತ್ರ, ಬಾ ಕುಳಿತುಕೋ. ಅರ್ಥಿಗಳೆಲ್ಲರ ಆಸೆಯೂ ಸಫಲವಾಗಲಿ!

ಸುಮಂತ್ರ—ಆಯಿತು.

ದಶರಥ—ಶ್ರೋತ್ರಿಯರು ಗೋಹಿರಣ್ಯಾದಿಗಳಿಂದ ಸತ್ಕೃತರಾಗಲಿ!

ಸುಮಂತ್ರ—ಆದರು.

ದಶರಥ—ಬಂಧನದಲ್ಲಿರುವವರು ಬಿಡುಗಡೆಯಾಗಲಿ!

ಸುಮಂತ್ರ—ಮಹಾರಾಜ, ನೀನು ಪೃಥಿವಿಯನ್ನು ಧರ್ಮದಿಂದ ರಕ್ಷಿಸುತ್ತಿರುವಲ್ಲಿ ಸ್ವರ್ಗವೇ ಭೂಮಿಗಿಳಿದಂತಿದೆ. ಇನ್ನು ಯಾರಾದರೂ ಬಂಧನಕ್ಕೆ ಸಿಕ್ಕುವ ಬಗೆ ಹೇಗೆ? ಇದುವರೆಗೂ ಪಿತೃಋಣ ತೀರದೆ ಬದ್ಧರಾಗಿದ್ದವರು ನೀವೇ. ಅದರಿಂದ ಇಂದು ನೀವು ಬಿಡುಗಡೆ ಹೊಂದಿದ್ದೀರಿ.

ದಶರಥ—ನಿಜ, ಇಂದು ನಾನು ಪಿತೃಋಣದಿಂದ ಬಿಡುಗಡೆ ಹೊಂದಿದೆ. ಆದರೆ ಈಗ ಇನ್ನೊಂದು ಬಲವಾದ ಬಂಧನಕ್ಕೆ ಸಿಕ್ಕಿದ್ದೇನೆ. ಆ ಬಂಧನದಿಂದ ನಾನೆಂದೂ ಬಿಡುಗಡೆಯಾಗುವಂತಿಲ್ಲ.

ಸುಮಂತ್ರ—ಹೇಗೆ?

ದಶರಥ—ಹುಟ್ಟಿದ ಮಕ್ಕಳಿಗೆ ವಿನಯವನ್ನು ಕಲಿಸಬೇಕು; ವೇದಾಧ್ಯಯನ ಮಾಡಿಸಬೇಕು; ರಾಗದ್ವೇಷವಿಲ್ಲದೆ ನಿಷ್ಪಕ್ಷಪಾತದಿಂದ ಪ್ರಜಾಪಾಲನೆ ಮಾಡುವುದನ್ನು ತಿಳಿಸಬೇಕು. ಹೀಗೆ ವಿಧಿವತ್ತಾಗಿ ನಾಲ್ಕು ಮಕ್ಕಳನ್ನೂ ಪೋಷಿಸಬೇಕು. ಈ ಕರ್ತವ್ಯವನ್ನೆಲ್ಲಾ ಮಾಡದೇ ಹೋದರೆ ಧರ್ಮವನ್ನು ಕೈಬಿಟ್ಟಂತಾಗುವುದು. ಮಕ್ಕಳು ಹುಟ್ಟಿದುದರಿಂದ ನಾನು ಹೀಗೆ ಧರ್ಮದಿಂದಲೂ ಮತ್ತು ಪುತ್ರಪ್ರೇಮದಿಂದಲೂ ಬದ್ಧನಾಗಿದ್ದೇನೆ. ನನ್ನ ಜೀವಾವಧಿ ಈ ಎರಡು ಬಗೆಯ ಬಂಧನಗಳಿಂದ ಬಿಡುಗಡೆಯನ್ನು ಬಯಸುವುದಿಲ್ಲ. ಬಾ, ಹೋಗೋಣ.

(ನಿಷ್ಕ್ರಮಿಸುವರು)

ಎರಡನೇ ದೃಶ್ಯ

(ರಾಜನ ಹಿಂದೆಯೇ ಪ್ರತೀಹಾರಿಯು ಪ್ರವೇಶಿಸುವಳು)

ಪ್ರತೀಹಾರಿ—ಒಡೆಯರಿಗೆ ಜಯವಾಗಲಿ! ಕೌಸಲ್ಯಾದೇವಿ ನಿವೇದಿಸಿಕೊಳ್ಳುತ್ತಾರೆ: 'ಮಕ್ಕಳಿಗೆ ಉಪನಯನೋತ್ಸವ ಮುಗಿದ ಮೇಲೆ ನಾವೆಲ್ಲ

ಮಹಾರಾಜನನ್ನು ನೋಡಲು ಬರುತ್ತೇವೆ; ನಾನು ದೊಡ್ಡ ಹೆಂಡತಿಯಾದುದರಿಂದ ನನ್ನನ್ನು ಮೊದಲು ಸಂಭಾವಿಸಬೇಕು' ಎಂದು.

ದಶರಥ—ವಿಜಯೆ, ಮದುವೆಯಾದಂದಿನಿಂದ ನನ್ನ ಲಾಲನೆಗೆ ಪಾತ್ರಳಾದ ಆಕೆ ನನಗೆ ಊರೆಗೋಲಿನಂತಿದ್ದಾಳೆ. ಆಕೆಯನ್ನು ನಾನು ಈಗ ಉಪೇಕ್ಷಿಸಿಯೇನೆ ?

(ಚೇಟಿಯ ಪ್ರವೇಶ)

ಚೇಟಿ—ಸ್ವಾಮಿಗೆ ಜಯವಾಗಲಿ! ಸುಮಿತ್ರಾದೇವಿಯು ನಿವೇದಿಸಿಕೊಳ್ಳುತ್ತಾಳೆ: 'ಮಹಾರಾಜರ ಕೃಪೆಯಿಂದ ನಾವು ಕುಶಲ. ನಾನು ಎರಡು ಮಕ್ಕಳನ್ನು ಹೆತ್ತ ತಾಯಿಯಾದುದರಿಂದ ನನ್ನನ್ನು ಮೊದಲು ಸಂಭಾವಿಸಬೇಕು' ಎಂದು.

ದಶರಥ—ವಿನಯವತಿ, ನನ್ನ ಸೇವೆಯಲ್ಲೇ ನಿರತಳಾಗಿ. ನನ್ನ ಮನಸ್ಸನ್ನರಿತು ಮಾತನಾಡುವ ಸರ್ವಂಸಹೆಯಾದ ಸುಮಿತ್ರೆಯನ್ನು ನಾನು ಉಪೇಕ್ಷಿಸಿಯೇನೆ ?

(ಮಂಥರೆಯೂ ವಿದೂಷಕನೂ ಪ್ರವೇಶಿಸುವರು)

ಮಂಥರೆ—ಮಹಾರಾಜ, ಕಿರಿಯಳಾದರೂ ಗುಣದಿಂದ ಹಿರಿಯಳಾದ, ತನ್ವಿಯಾದರೂ ಗೌರವಾಸ್ಪದಳಾದ, ಅಪ್ರತಿರಥನಾದ ಕೈಕಯ ರಾಜನ ಪುತ್ರಿಯು ನಿವೇದಿಸುತ್ತಾಳೆ: 'ಮಹಾರಾಜರು ಖಂಡಿತವಾಗಿಯೂ ನನ್ನನ್ನೇ ಮೊದಲು ಸಂಭಾವಿಸಬೇಕು' ಎಂದು.

ವಿದೂಷಕ—(ದೊರೆಯ ಕಿವಿಯಲ್ಲಿ) ಗೆಳೆಯ, ಕಿರಿಯ ಹೆಂಡತಿಯನ್ನು ನೀನು ಉಪೇಕ್ಷಿಸಿದ್ದೇ ಆದರೆ ಅವಳೇನು ಮಾಡುವಳೆಂಬುವನ್ನು ಗಮನಿಸಿ ಆಮೇಲೆ ಉತ್ತರ ಕೊಡು.

ದಶರಥ—(ಸ್ವಗತ) ಅವಳು ತನ್ನ ಶೌರ್ಯದಿಂದ ನನ್ನ ಜೀವವನ್ನು ರಕ್ಷಿಸಿರುವಳು. ಅವಳಲ್ಲಿ ಹುಟ್ಟಿದ ಮಗನೇ ಪಟ್ಟಾಭಿಷಿಕ್ತನಾಗಬೇಕೆಂದು ಆಕೆ ನನ್ನಿಂದ ವಚನ ತೆಗೆದುಕೊಂಡಿದ್ದಾಳೆ. ಅವಳಿಗೀಗ ಒಬ್ಬ ಮಗ ಹುಟ್ಟಿರುವುದರಿಂದ ನಾನಾಕೆಯನ್ನು ಉಪೇಕ್ಷಿಸುವಂತಿಲ್ಲ. ಅವಳು ಶೌರ್ಯ-ಪ್ರಣಯಶಾಲಿನಿಯಾದುದರಿಂದ ಆಕೆಯ ಕೋಪವನ್ನಾಗಲೀ ಅಭಿಮಾನವನ್ನಾಗಲೀ ಸಹಿಸಬೇಕು. ಆಕೆಗೆ ಹೆಣ್ಣು ಸಿಂಹಕ್ಕಿರುವಂತೆ ಸಹಿಸಲಸಾಧ್ಯವಾದ ಕೋಪ. ಅವಳ ಬಗೆಯರಿತು ಸನ್ಮಾನಿಸಿದರೆ ಅವಳೆಲ್ಲರಿಗಿಂತ ಶೀಘ್ರವಾಗಿ ಸಮಾಧಾನಗೊಳ್ಳು

ತ್ತಾಳೆ. (ಪ್ರಕಾಶ) ಮಂಥರೇ, ಮೂವರು ರಾಣಿಯರೂ ನನಗೆ ಹೇಳಿಕಳಿಸಿದ್ದಾರೆ. ಧರ್ಮ ಅರ್ಥ ಕಾಮಗಳಲ್ಲಿ ಯಾವುದೊಂದನ್ನೂ ಕೀಳುಮೇಲೆಂದು ಕಾಣಬಾರದು. ಹಾಗೆಯೇ ಮಕ್ಕಳನ್ನು ಹೆತ್ತಿರುವ ಮೂವರು ರಾಣಿಯರನ್ನೂ ಸಮಾನವಾಗಿಯೇ ಸಂಭಾವಿಸಬೇಕು. ಆದುದರಿಂದ ಮೂವರೂ ನನ್ನನ್ನು 'ಮಧ್ಯಮಂದಿರ'ದಲ್ಲಿ ಕಾಣಲಿ.

ಮಂಥರೆ—(ಸ್ವಗತ) ಹುಂ. ನನ್ನ ಒಡತಿಗೆ ವಿಶೇಷವಾದ ಮಾನ್ಯತೆಯೇನೂ ಇಲ್ಲವೋ! (ಪ್ರಕಾಶ) ಮಹಾರಾಜರ ಅಪ್ಪಣೆ.

(ಪ್ರತೀಹಾರಿ-ಚೇಟಿ-ಮಂಥರೆಯರು ನಿಷ್ಕ್ರಮಿಸುವರು)

ವಿದೂಷಕ—ಗೆಳೆಯ, ನಿನಗೆ ಮೂವರು ಹೆಂಡತಿಯರಲ್ಲೂ ಸಮಾನಗೌರವ! ಸುಮಿತ್ರೆಗೆ ಇಬ್ಬರು ಮಕ್ಕಳಾದುದರಿಂದ ಅವರಿಗೆ ನೀನು ಕೈಕೆಯ ಮಗನಿಗೆ ತೋರಿಸುವುದರ ಅರ್ಧದಷ್ಟೇ ಪ್ರೀತಿಯನ್ನು ತೋರಿಸಬೇಕಾಯಿತು.

ದಶರಥ—ಗೆಳೆಯ, ಪುರುಷಾರ್ಥಗಳಂತೆ ನನಗೆ ನಾಲ್ವರು ಮಕ್ಕಳೂ ಸಮ. ಚತುರ್ವೇದಗಳಲ್ಲಿ ಯಾವುದೊಂದನ್ನು ಅಲ್ಪವೆಂದು ತಿಳಿದರೂ ಆ ವಿಪ್ರನು ವೈದಿಕನೆನಿಸಿಕೊಳ್ಳುವುದಿಲ್ಲ! ಹಾಗೆಯೇ ಮಕ್ಕಳಲ್ಲಿ ಭೇದವೆಣಿಸಿದರೆ ಅವನು ಹೇಗೆ ತಂದೆಯೆನಿಸಿಕೊಂಡಾನು!?

ವಿದೂಷಕ—(ಸ್ವಗತ) ಐದನೆಯವನೊಬ್ಬನಿದ್ದಿದ್ದರೆ ಏನು ಹೇಳುತ್ತಿದ್ದನೋ! (ಪ್ರಕಾಶ) ಹಾಗಾದರೆ ನೀನು ನನ್ನನ್ನು ಪುತ್ರವಾತ್ಸಲ್ಯದಿಂದ ಪ್ರೀತಿಸುವುದಿಲ್ಲ! ಏಕೆಂದರೆ ಪುರುಷಾರ್ಥಗಳು ನಾಲ್ಕೇ, ವೇದಗಳೂ ಐದಿಲ್ಲ!

ದಶರಥ—(ನಕ್ಕು) ಬ್ರಾಹ್ಮಣನಿಗೆ ಮಹಾಯಜ್ಞಗಳಲ್ಲಿ ಐದೂ ಹೇಗೆ ಸಮಾನವೋ ಹಾಗೆಯೇ ನನಗೆ ನೀವೈವರೂ ಮಾನ್ಯರು—ದುಃಖಿಸಬೇಡ.

ವಿದೂಷಕ—(ಸ್ವಗತ) ಆರನೆಯವನೊಬ್ಬನಿಲ್ಲವಲ್ಲಾ! ಇದ್ದಿದ್ದರೆ ರಾಜನ ವಾಕ್‌ಚಾತುರ್ಯವು ತಿಳಿಯಬರುತ್ತಿತ್ತು! (ಪ್ರಕಾಶ) ಮಕ್ಕಳಾದರು; ಅವರಿಗೆಲ್ಲ ಉಪನಯನವೂ ಆಯಿತು—ಎಂಬ ಸಂತೋಷದಲ್ಲಿ ನೀನು ಊಟ ಮಾಡುವುದನ್ನೂ ಮರೆತೆಯೇನು? ಅದೋ! ಸೂರ್ಯನು ಮುಳುಗುವ ಹೊತ್ತಾಯಿತು.

ದಶರಥ—ನಡೆ, ಹೋಗೋಣ! (ಹೊರಡುವರು)

ಮೂರನೇ ದೃಶ್ಯ

(ಕಂಚುಕಿಯ ಪ್ರವೇಶ)

ಕಂಚುಕಿ—ಇದು ಧಾರಾಗೃಹವಿರುವ ಗ್ರೀಷ್ಮೋದ್ಯಾನ. ಇಲ್ಲಿ ಈ ಮಧ್ಯಾಹ್ನ ಯಾವ ಪರಿಜನರೂ ಇರದಂತೆ ನೋಡಿಕೊಳ್ಳೆಂದು ನನಗೆ ಮಹಾರಾಜರು ಆಜ್ಞಾಪಿಸಿದ್ದಾರೆ. ಮಹಾರಾಜರ ವಿಹಾರವನ್ನು ನಾನು ನೂರಾರು ಸಲ ನೋಡಿದ್ದೇನೆ. ರಾಣಿಯರನ್ನೊಡಗೊಂಡು ವಿಹರಿಸಿದ್ದನ್ನೂ ಕಂಡಿದ್ದೇನೆ. ಆದರೆ ಯಾವಾಗ್ಯೂ ಪರಿಜನರಿರಬಾರದೆಂಬ ಮಾತಿರಲಿಲ್ಲ. ಬಹುಶಃ, ಇಂದು ಅತ್ಯಂತ ರಹಸ್ಯವಾದ ಮಾತುಕತೆಯಿರಬೇಕು. ರಾಣಿಯರೊಡನೆ ಮಹಾರಾಜರು ರಹಸ್ಯ ವಿಹಾರವನ್ನೆಂದೂ ಮಾಡಿದವರಲ್ಲ. ಇರಲಿ, ನನಗೇಕೆ ಆ ವಿಚಾರವೆಲ್ಲ! ಅಪ್ಪಣೆಯಂತೆ ಮಾಡುತ್ತೇನೆ.

(ಚೇಟಿಯರು ಪ್ರವೇಶಿಸುವರು)

ಒಬ್ಬ ಚೇಟಿ—ಆರ್ಯ, ಇವತ್ತು ನಾವು, ನಾಲ್ವರು ಕುಮಾರರಿಗೂ ನಾಲ್ಕು ಹೂವಿನ ತೆರೆಗಳನ್ನು ದಾರವಿಲ್ಲದೆ ಕಟ್ಟಬೇಕೆಂದು ಆಶೆಪಟ್ಟಿದ್ದೇವೆ.

ಕಂಚುಕಿ—ಅಮ್ಮ, ನೀವು ಇನ್ನೊಂದು ಉದ್ಯಾನದಲ್ಲಿ ನಿಮ್ಮ ಆಶೆಯನ್ನು ಈಡೇರಿಸಿಕೊಳ್ಳಿ.

ಇನ್ನೊಬ್ಬ ಚೇಟಿ—ಆರ್ಯ, ಇನ್ನಾವ ಉದ್ಯಾನದಲ್ಲೂ ಈ ವಿಧವಾದ ನಾನಾ ವರ್ಣದ ಪರಿಮಳದ ಪುಷ್ಪಗಳಿಲ್ಲ.

ಕಂಚುಕಿ—ಅದೇನೇ ಇರಲಿ, ಇಂದು ಇಲ್ಲಿಗೆ ಯಾರೂ ಬರಬಾರದೆಂದು ರಾಜಾಜ್ಞೆಯಾಗಿದೆ.

ಮತ್ತೊಬ್ಬ ಚೇಟಿ—ಬನ್ನಿ! ರಾಜಾಜ್ಞೆಯಂತೆ ನಡೆಯೋಣ! (ನಿಷ್ಕ್ರಮಿಸುವರು)

ಕಂಚುಕಿ—ಉದ್ಯಾನದಲ್ಲಿ ಒಂದು ನೊಣವೂ ಇಲ್ಲದಂತೆ ಮಾಡಿದ್ದೇನೆ. ಈಗ ಹೋಗಿ ಮಹಾರಾಜರಿಗಿದನ್ನು ಅರಿಕೆಮಾಡಿಕೊಳ್ಳುತ್ತೇನೆ. (ಎಲ್ಲರೂ (ನಿಷ್ಕ್ರಮಿಸುವರು)

(ರಾಜನು ಪ್ರವೇಶಿಸುವನು)

ದಶರಥ—ರಾಣಿಯರನ್ನೆಲ್ಲ ಒಪ್ಪಿಸಿ, ಗೆಲುವಿನ ಮಧ್ಯೆ, ರಾಮನಿಗೆ ರಾಜ್ಯಾಭಿಷೇಕ ಮಾಡುತ್ತೇನೆ! ಯಾರಲ್ಲಿ?

ಪ್ರತೀಹಾರಿ—ಮಹಾರಾಜರಿಗೆ ಜಯವಾಗಲಿ. ಅಪ್ಪಣೆಯಾಗಬೇಕು.

ದಶರಥ—ವಿಜಯೆ, ಅಮಾತ್ಯ ಸುಮಂತ್ರನನ್ನು ಆಹ್ವಾನಿಸು!

ಪ್ರತೀಹಾರಿ—ಅಪ್ಪಣೆ. (ನಿಷ್ಕ್ರಮಿಸುವಳು. ಸುಮಂತ್ರನು ನಮಿಸಿ ಪ್ರವೇಶಿಸುವನು)

ದಶರಥ—ಅಮಾತ್ಯ ಬಾ, ಕುಳಿತುಕೊ! ನನ್ನ ಮನಸ್ಸು ಚಿಂತಾಕ್ರಾಂತವಾಗಿದೆ!

ಸುಮಂತ್ರ—ಮಹಾರಾಜರೇ, ಆ ಚಿಂತೆಯನ್ನು ಪರಿಹರಿಸಿಕೊಳ್ಳುವ ಉಪಾಯವನ್ನೇನಾದರೂ ಚಿಂತನಮಾಡಿದ್ದೀರಾ?

ದಶರಥ—ಅದಕ್ಕಾಗಿಯೇ ನಿನ್ನನ್ನು ಕರೆಸಿರುವುದು! ನನ್ನ ಸಕಲ ರಾಜ್ಯವನ್ನೂ ಅನುಭವಿಸುವವನು ಕೈಕೆಯ ಮಗನೇ! ಯಾವುದೋ ದುಡುಕಿನಿಂದ ನಾನು ಈ ಪ್ರತಿಜ್ಞೆಯನ್ನು ಮಾಡಿಬಿಟ್ಟದ್ದೇನೆ!

ಸುಮಂತ್ರ—ಹಂ! ಆಮೇಲಾಮೇಲೆ!

ದಶರಥ—ಆದರೆ, ರಾಜ್ಯಪಾಲನೆಗೆ ಯೋಗ್ಯನಾದವನು ರಾಮ! ಆತನಿಗೇ ಅಭಿಷೇಕ ಮಾಡಬೇಕೆಂದು ನನಗೆ ಇಷ್ಟ; ಅದು ಈಗ ಸಾಧ್ಯವಿಲ್ಲದಾಗಿದೆ. ಮುಂದೆ ಬರುವ ಕಷ್ಟವನ್ನು ನಿವಾರಿಸಿಕೊಳ್ಳಲು ಉಪಾಯವೇನೆಂದು ಮೊದಲೇ ಯೋಚಿಸಿದ್ದರೆ, ಆ ಕಷ್ಟ-ನಿವಾರಣೆ ಸುಲಭ. ಹಾಗಲ್ಲದೇ ಕಷ್ಟಬಂದಾಗ ಚಿಂತಿಸುವುದರಿಂದ ಇರುವ ದುಃಖ ದ್ವಿಗುಣವಾಗುತ್ತದೆ!

ಸುಮಂತ್ರ—ಈಗ ನಾನೇನು ಮಾಡಬೇಕಾಗಿದೆ?

ದಶರಥ—ರಾಣಿಯರು, ಪ್ರಜೆಗಳು, ಪರಿಜನರು, ಸಚಿವರು, ಭೃತ್ಯರು—ಇವರೆಲ್ಲರ ಮನಸ್ಸೂ ರಾಮನಲ್ಲಿ ಅನುರಕ್ತವಾಗುವಂತೆ ಮಾಡಬೇಕು. ಅಣ್ಣನಾದ ರಾಮನಲ್ಲಿ ಭರತನಿಗೆ ಭಕ್ತಿಯುಂಟಾಗುವಂತೆ ಮಾಡಿ, ನನ್ನ ಹೃದಯಕ್ಕೆ ನಟ್ಟಿರುವ ಮುಳ್ಳನ್ನು ಕೀಳು.

ಸುಮಂತ್ರ—(ಸ್ವಗತ) ಆಹ! ಮಹಾರಾಜನಿಗೆಷ್ಟು ದೂರದೃಷ್ಟಿ! (ಪ್ರಕಾಶ) ನೀನಿಂದು ಆಜ್ಞಾಪಿಸಿದುದನ್ನೆಲ್ಲ ಕಾರ್ಯರೂಪಕ್ಕೆ ತರಲು ನನ್ನ ಕೈಲಾದಷ್ಟೂ

ಪ್ರಯತ್ನಿಸುತ್ತೇನೆ. (ಮುಂದೆ ನೋಡಿ) ಮಹಾರಾಜರೇ, ಮೂರು ಜನ ರಾಣಿಯರೂ ಇತ್ತಲೇ ಬರುತ್ತಿದ್ದಾರೆ.

ದಶರಥ—ಆದ್ದರಿಂದ ನೀನೀಗ ಹೊರಡು. ಆದರೆ ನಾನು ಹೇಳಿದುದನ್ನು ಮರೆಯಬೇಡ.

ಸುಮಂತ್ರ—ಸ್ವಾಮಿಯ ಅಪ್ಪಣೆಯಂತಾಗಲಿ. (ಹೊರಡುವನು)

(ರಾಣಿಯರು ಮೂವರೂ ಪ್ರವೇಶಿಸುವರು)

ರಾಣಿಯರು—ಮಹಾರಾಜರಿಗೆ ಜಯವಾಗಲಿ.

ದಶರಥ—ದೇವಿಯರಿಗೆ ಸ್ವಾಗತ. ಮಣಿಖಚಿತವಾದ ಈ ಶಿಲಾತಲದ ಮೇಲೆ ಕುಳಿತುಕೊಳ್ಳಿ. ಬನ್ನಿ. (ಎಲ್ಲರೂ ಕುಳಿತುಕೊಳ್ಳುವರು.)

ದಶರಥ—ಆಹ! ಉರಿಬೇಸಗೆಯ ಮಧ್ಯಾಹ್ನದಲ್ಲಿಯೂ ಈ ಉದ್ಯಾನವು ಅದೆಷ್ಟು ತಂಪಾಗಿದೆ!

ಕೌಸಲ್ಯೆ—ಈ ಉದ್ಯಾನವು ನೋಟಕ್ಕೆ ಅಂದವಾಗಿಯೂ, ಮನಸ್ಸಿಗೆ ಹಾಯಾಗಿಯೂ ಇದೆ. ಇದರಲ್ಲಿ ವಿಹರಿಸುತ್ತಿರುವುದರಿಂದ ನನಗೆ ಇತ್ತೀಚೆಗಾಗುತ್ತಿರುವ ಸುಖ ಹಿಂದೆ ಆಗುತ್ತಿರಲಿಲ್ಲ

ದಶರಥ—ಎಲ್ಲವೂ ಅಷ್ಟೆ; ಕಾಲಕ್ಕನುಗುಣವಾಗಿ ನಮಗೆ ಸುಖವನ್ನೋ ದುಃಖವನ್ನೋ ಉಂಟುಮಾಡುತ್ತವೆ. ತಣ್ಣೀರಿನ ಸ್ನಾನ ಬೇಸಿಗೆಯಲ್ಲಿ ಸುಖವನ್ನು ಕೊಟ್ಟಂತೆ, ಮಾಗಿಯಲ್ಲಿ ಹೇಗೆ ಕೊಟ್ಟೀತು! ಆದ್ದರಿಂದ ಆಯಾ ಕಾಲದಲ್ಲಿ ಅದು ಸುಖಕರ.

ಕೈಕೆ—ಆರ್ಯಪುತ್ರ, ಈಗ ನಮ್ಮನ್ನಿಲ್ಲಿಗೆ ಕರೆದ ಕಾರಣವೇನು?

ಕೌಸಲ್ಯೆ—(ಸ್ವಗತ) ಅಬ್ಬ ಇವಳ ಮಾತು ಆಜ್ಞೆಯಂತಿದೆ!

ದಶರಥ—ಈ ಉದ್ಯಾನದ ರಮಣೀಯತೆಯನ್ನು ನೋಡಲೆಂದು ನಿಮ್ಮನ್ನಿಲ್ಲಿಗೆ ಕರೆದೆ. ಬನ್ನಿ, ಈ ಮರದ ತಣ್ಣೆಳಲಲ್ಲಿ ಕುಳಿತು ಅನ್ಯೋನ್ಯವಾಗಿ ಮಾತನಾಡೋಣ.

ರಾಣಿಯರು—ಅದೇನು ಮಾತು?

ದಶರಥ—ಕುಮಾರರಿಗೆಲ್ಲ ಉಪನಯನವಾಯಿತು. ಅವರಿಗೀಗ ಹದಿನೈದು ವರ್ಷ ವಯಸ್ಸು.

ಕೈಕೆ—ಅದರಿಂದೇನು ಮಾಡಬೇಕೀಗ?

ದಶರಥ—ಮಕ್ಕಳೆಲ್ಲ ಗುಣವಂತರು, ವೀರರು!

ಕೌಸಲ್ಯೆ—(ಸ್ವಗತ) ರಾಮನೇ ಸರ್ವಗುಣಸಂಪನ್ನ! ರಾಜನಾಗಲು ಅವನೇ ಅರ್ಹ.

ಕೈಕೆ—ಹುಟ್ಟಿದ ಕುಲಕ್ಕೆ, ಹೆತ್ತ ತಾಯಿತಂದೆಗಳಿಗೆ ಅವರೆಂದಿಗೂ ಕಳಂಕ ತರರು.

ದಶರಥ—ನಿಜ. ನಿಮಗೆ ಆ ಎಲ್ಲ ಮಕ್ಕಳ ಮೇಲೆ ಸಮಾನವಾದ ಪ್ರೀತಿಯಿದೆ.

ಕೌಸಲ್ಯೆ—(ಸ್ವಗತ) ನನಗಾದರೋ ರಾಮನ ಮೇಲೇ ಹೆಚ್ಚು ಪ್ರೀತಿ.

ಸುಮಿತ್ರೆ—ಜನ್ಮಕ್ರಮಾನುಸಾರವಾಗಿಯೇ ನನಗವರಲ್ಲಿ ಪ್ರೀತಿಯ ತಾರತಮ್ಯ.

ಕೈಕೆ—ನನಗಾದರೋ ಹೆಚ್ಚು ಗುಣವಂತನಲ್ಲಿ ಹೆಚ್ಚು ಪ್ರೀತಿ.

ದಶರಥ—ಅವರಲ್ಲಿ ಹೆಚ್ಚು ಗುಣವಂತ ಯಾರು?

ಕೌಸಲ್ಯೆ—(ಸ್ವಗತ) ರಾಮನೇ!

ಕೈಕೆ—ಸಮಯ ಬಂದಾಗ ಹೇಳುತ್ತೇನೆ.

ದಶರಥ—ಎಲ್ಲರೂ ನನ್ನ ಆಸ್ತಿಗೆ ಅರ್ಹರು.

ಸುಮಿತ್ರೆ—ಆಸ್ತಿಗಳಲ್ಲಿ ಯಾವುದು ಶ್ರೇಷ್ಠವೋ ಅದು ಜ್ಯೇಷ್ಠನಿಗೆ ಸಲ್ಲಬೇಕೆಂದು ಮನು ಹೇಳುತ್ತಾನೆ.

ಕೌಸಲ್ಯೆ—(ಸಂತೋಷದಿಂದ ಆತ್ಮಗತ) ಮಹಾರಾಜನ ಆಸ್ತಿಪಾಸ್ತಿಗಳಲ್ಲಿ ರಾಜ್ಯವೇ ಶ್ರೇಷ್ಠ!

ದಶರಥ—ಎಲ್ಲ ವ್ಯವಹಾರಗಳಲ್ಲಿಯೂ ಮನುವೇ ಪ್ರಮಾಣ! ಆದರೆ ರಾಜಧರ್ಮದ ಸಂಬಂಧವಾಗಿ ವಾಸಿಷ್ಠವೇ ಉತ್ತಮ ಪ್ರಮಾಣ.

ಕೈಕೆ—ಈ ಸಂಬಂಧವಾಗಿ ವಸಿಷ್ಠನ ಅಭಿಪ್ರಾಯವೇನು?

ಕೌಸಲ್ಯೆ—(ಸ್ವಗತ) ರಾಮನಿಗೇ ರಾಜ್ಯ.

ದಶರಥ—ಹಣಕಾಸಿನ ವಿಷಯದಲ್ಲಿ ಮಕ್ಕಳೆಲ್ಲ ಸಮಪಾಲಿಗೆ ಅರ್ಹರು; ಆದರೆ ರಾಜನ ಪಟ್ಟಕ್ಕಾದರೋ ಹೆಚ್ಚು ಗುಣವಂತನೇ ಅರ್ಹ. ಆದ್ದರಿಂದ ರಾಜ್ಯವನ್ನು ಯೋಗ್ಯನಾದ ಪುತ್ರನಿಗೆ ಕೊಡು ಎಂದಿದ್ದಾನೆ.

ಕೈಕೆ—ಯೋಗ್ಯತೆಯೆನ್ನುವುದು ಪ್ರತಿ ಪುರುಷನಿಗೂ ಭಿನ್ನ; ಒಬ್ಬನ ಅಭಿಪ್ರಾಯದಲ್ಲಿ ಯೋಗ್ಯನಾದವನು ಇನ್ನೊಬ್ಬನ ಅಭಿಪ್ರಾಯದಲ್ಲಿ ಯೋಗ್ಯನಲ್ಲದೇ ಹೋಗಬಹುದು.

ದಶರಥ—(ಸ್ವಗತ) ಹೇಗಾದರೂ ನನ್ನ ಇಚ್ಛೆಗೆ ವಿರೋಧವಾದುದನ್ನು ಹೇಳಿ, ರಾಮಪಟ್ಟಾಭಿಷೇಕದ ಕಾರ್ಯ ಕೈಗೂಡುವಂತೆ ಮಾಡುತ್ತೇನೆ. (ಪ್ರಕಾಶ) ನಮ್ಮ ಮಕ್ಕಳು ನಾಲ್ವರೂ ಯೋಗ್ಯರೇ! ರಾಜ್ಯವನ್ನು ನಾಲ್ಕು ಭಾಗಮಾಡಿ ಒಂದೊಂದು ಭಾಗವನ್ನು ಒಬ್ಬೊಬ್ಬನಿಗೆ ಹಂಚಿ ಬಿಡುತ್ತೇನೆ.

ಕೌಸಲ್ಯೆ—(ಸ್ವಗತ) ರಾಜ್ಯವನ್ನೆಲ್ಲ ರಾಮನಿಗೇ ಕೊಡಬೇಕು.

ಕೈಕೆ—ಏನು? ನೀನು ಈಗ ಹೇಳುತ್ತಿರುವುದೂ ವಸಿಷ್ಠನ ಅಭಿಪ್ರಾಯವೋ? ಅದು ಆಪ್ತವಚನವಲ್ಲದ್ದರಿಂದ ನನಗೆ ಪ್ರಮಾಣವಲ್ಲ! ಬೇರೆ ಯಾವನೇ ರಾಜನಾದರೂ ಸರಿಯೇ; ರಾಜ್ಯವನ್ನು ಮಾತ್ರ ವಿಭಾಗ ಮಾಡಬಾರದು!

ದಶರಥ—ಹಾಗಾದರೆ ಯಾರಿಗೆ ರಾಜ್ಯ ಕೊಡಬೇಕು?

ಕೌಸಲ್ಯೆ—(ಸ್ವಗತ) ರಾಮನಿಗೆ!

ಕೈಕೆ—ಅತ್ಯಂತ ಯೋಗ್ಯನಾದವನಿಗೆ!

ದಶರಥ—(ಸ್ವಗತ) ಇನ್ನೆಲ್ಲವನ್ನೂ ಬಿಚ್ಚಿ ಹೇಳಿಬಿಡುತ್ತೇನೆ. (ಪ್ರಕಾಶ, ಕೈಕೆಯನ್ನು ಕುರಿತು) ನಾನು ನಿನ್ನನ್ನು ಮದುವೆಯಾದಾಗ ನಿಯಮಕ್ಕೆ ವಿರುದ್ಧವಾಗಿ ನಿನಗೊಂದು ಮಾತನ್ನು ಕೊಟ್ಟದ್ದಿ ನೆನಪಿದೆಯೆ?

ಕೈಕೆ—ಎಲ್ಲಾ ನೆನಪಿದೆ!

ದಶರಥ—ಅದರ ಪ್ರಕಾರ ಭರತನಿಗೇ ರಾಜ್ಯ!

ಕೈಕೆ—ಮಗನಿಗೆ ರಾಜ್ಯವೆಂದಾಗ ಯಾವ ತಾಯಿಗೆ ಸಂತೋಷವಾಗದು!?

ಕೌಸಲ್ಯೆ—(ಸ್ವಗತ) ಈ ಮಾತು ಸಿಡಿಲೆರಗಿದಂತಿದೆ! (ಮೂರ್ಛೆ ಬೀಳುವಳು)

(ರಾಜನು ವಲ್ಲಿಯಿಂದ ಗಾಳಿ ಬೀಸುವನು. ಕೈಕೆಯು ತಾವರೆಯ ಕೊಳದಿಂದ ನೀರನ್ನು ತಂದು ಮುಖದ ಮೇಲೆ ಚಿಮುಕಿಸುತ್ತಿರಲು ಸುಮಿತ್ರೆಯು ಅಂಗೈ ಅಂಗಾಲುಗಳನ್ನು ಹಿಸುಕುತ್ತ)

ಸುಮಿತ್ರೆ—ಮಹಾದೇವಿ, ಸಮಾಧಾನಮಾಡಿಕೋ.

ಕೌಸಲ್ಯೆ—(ಚೇತರಿಸಿಕೊಳ್ಳುವಳು)

ದಶರಥ—ದೇವಿ, ಮೂರ್ಛೆಹೋದೆಯೇಕೆ ?

ಕೌಸಲ್ಯೆ—ಇಲ್ಲಿ ಮಧ್ಯಾಹ್ನದ ಉರಿಬಿಸಿಲ ಬೇಗೆ-ತಾಳಲಾರದೆ ಹೋದೆ.

ಕೈಕೆ—ದೇವಿಯು ನೆಪತೋರಿ ಮನಸ್ಸಿನಲ್ಲಿರುವುದನ್ನು ಮುಚ್ಚಿಡಬಲ್ಲಳಲ್ಲ !?

ದಶರಥ—(ಸ್ವಗತ) ಬಲ್ಲೆ, ಕೌಸಲ್ಯೆಯ ದುಃಖವನ್ನೂ, ಅದನ್ನು ಮುಚ್ಚಿಡ ಬಲ್ಲ ಆಕೆಯ ಕೌಶಲ್ಯವನ್ನೂ ಬಲ್ಲೆ.

ಸುಮಿತ್ರೆ—ಆರ್ಯಪುತ್ರ, ನೀನು ಮದುವೆಯಾಗುವಾಗ ಕೊಟ್ಟಮಾತಿನ ಪ್ರಕಾರ ಭರತನು ರಾಜನಾಗಲಿ, ಜ್ಯೇಷ್ಠಪುತ್ರನಾದುದರಿಂದ ರಾಮನಿಗೂ ರಾಜ್ಯ ಬರಬೇಕು. ಆದ್ದರಿಂದ ರಾಜ್ಯವನ್ನು ಇಬ್ಬರಿಗೂ ಅರ್ಧರ್ಧ ಕೊಟ್ಟುಬಿಡು.

ದಶರಥ—ನಿನ್ನ ಮಕ್ಕಳಿಗೇನು ಕೊಡಲಿ ?

ಸುಮಿತ್ರೆ—ಏನೂ ಬೇಡ. ಪಟ್ಟಾಭಿಷಿಕ್ತನಾದ ರಾಮನನ್ನು ಲಕ್ಷ್ಮಣನೂ, ಭರತನನ್ನು ಶತ್ರುಘ್ನನೂ ಸೇವಿಸುತ್ತಾರೆ: ಅಷ್ಟರಿಂದಲೇ ನನ್ನ ಮಕ್ಕಳಿಬ್ಬರೂ ಸಂಪೂರ್ಣ ಸುಖವನ್ನು ಪಡೆಯುವರು. ರಾಜ್ಯಭಾರದಿಂದೇನು ಸುಖ ? ಯಾವಾಗಲೂ ಶತ್ರುಭಯ; ಪ್ರಜೆಗಳನ್ನು ಹತೋಟಿಯಲ್ಲಿಟ್ಟಿರಬೇಕು ; ಆದುದರಿಂದ ಅದು ಬಹುಭಾರ, ಸದಾ ಕ್ಲೇಶಕಾರಿ. ಸೇವಾತತ್ಪರರಾಗಿದ್ದರೊಂದೂ ಕಷ್ಟವಿಲ್ಲ ; ಮನಶ್ಶಾಂತಿಯಿರುತ್ತದೆ.

ದಶರಥ—ಸುಮಿತ್ರೆಯ ತ್ಯಾಗ ಅತ್ಯದ್ಭುತವಾದುದು !

ಕೈಕೆ—ಆಕೆಗೆಳ್ಳಷ್ಟಾದರೂ ಅಸಂತೋಷವಿಲ್ಲ, ಲೋಭವಿಲ್ಲ!

ಕೌಸಲ್ಯೆ—(ಸ್ವಗತ) ಪಾಪ, ಆಕೆಯ ಅಸಂತೋಷವೇನು ಮಾಡೀತು ?! (ಪ್ರಕಾಶ) ಆಹ ! ನನ್ನ ತಂಗಿಯೆಷ್ಟು ಮಹಾನುಭಾವಳು !

ದಶರಥ—ತಾಯ ಗುಣಗಳು ಮಕ್ಕಳಲ್ಲಿಳಿದುಬರುವವು. ಆದುದರಿಂದಲೇ ಈಕೆಯ ಮಕ್ಕಳು ಭ್ರಾತೃಸ್ನೇಹಕ್ಕೆ ಆದರ್ಶಪ್ರಾಯರಾಗಿದ್ದಾರೆ. ಅವರನ್ನು ಹೆತ್ತ ನೀನು ಧನ್ಯೆ.

ಸುಮಿತ್ರೆ—ನನಗೆ ಸಲ್ಲಬೇಕಾದುದು ಸಂದಂತಾಯಿತು.

ದಶರಥ—ಈಗ ರಾಜ್ಯಕ್ಕೆ ಯೋಗ್ಯನಾರು ? ರಾಮನೋ ಅಥವಾ ಭರತನೋ ?

ಕೈಕೆ—ನನ್ನ ಮಾತನ್ನು ಗೌರವಿಸುವುದಾದರೆ, ರಾಮನೇ ರಾಜ್ಯಕ್ಕೆ ಅರ್ಹ.

ಕೌಸಲ್ಯೆ—(ಸಂತೋಷದಿಂದ) ಸಂತೋಷವಾಯಿತು, ನನಗೆ ಸಂತೋಷ ವಾಯಿತು.

ಸುಮಿತ್ರೆ—ನನ್ನ ಮನಸ್ಸಿನಲ್ಲಿದ್ದುದನ್ನೇ ಕೈಕೆ ಹೇಳಿದಳು.

ದಶರಥ—ವಿವಾಹಕಾಲದಲ್ಲಿ ನಾನು ಕೊಟ್ಟ ಮಾತಿನ ಗತಿಯೇನು?

ಕೈಕೆ—ಶುಭವೇ ಗತಿ!

ದಶರಥ—ಪ್ರತಿಜ್ಞಾಹಾನಿಯು ಪಾತಕವೆಂಬ ಸತ್ಸಂಪ್ರದಾಯವೊಂದಿದೆ ಯಲ್ಲ!

ಕೈಕೆ—ನಿನ್ನಂತಹ ರಾಜರ್ಷಿಯು ಪ್ರತಿಜ್ಞೆಗೆ ತಪ್ಪಿದರೆ ಮಹತ್ತಾದ ಅನರ್ಥ ತಪ್ಪದು. ಸ್ವಂತಸುಖಕ್ಕೆ ಧಕ್ಕೆ ಬರುವುದೆಂದು ಪ್ರತಿಜ್ಞೆಯನ್ನೆಂದಿಗೂ ಉಪೇಕ್ಷಿಸ ಬಾರದು. ಸತ್ಪುರುಷರ ಮಾರ್ಗವೇ ಹಾಗೆ. ನಿನ್ನಭಿಪ್ರಾಯವೂ ಅದೇ ಆಗಿರ ಬೇಕು.

ಕೌಸಲ್ಯೆ—(ಸ್ವಗತ) ಆಹ! ಈ ನುಡಿ ಸಿಡಿಲು ಬಡಿದಂತಿದೆ!

ದಶರಥ—ಯುಕ್ತವೇ.

ಕೈಕೆ—ಜನತೆಯ ಸೌಖ್ಯಕ್ಕಾಗಿ, ಮಾಡಿದ ಪ್ರತಿಜ್ಞೆಯನ್ನು ಮುರಿಯ ಬಹುದು. ಹಾಗೆ ಮುರಿಯುವುದರಿಂದ ದೋಷ ಲವಲೇಶವೂ ಇಲ್ಲ. ರಾಮನು ಸರ್ವಗುಣಸಂಪನ್ನ. ಭೂಮಿಯನ್ನು ರಕ್ಷಿಸಲೆಂದೇ ಆತನನ್ನು ಬ್ರಹ್ಮನು ಸೃಷ್ಟಿಸಿ ದಂತಿದೆ. ಅವನು ರಾಜತೇಜದಲ್ಲಿ ಇಂದ್ರನಿಗೆ ಸಮ; ಪ್ರತಾಪದಲ್ಲಿ ವಿಷ್ಣುವಿಗೆ ಎಣೆ! ಅಷ್ಟೇ ಅಲ್ಲದೆ, ಕಾರ್ಯವನ್ನು ಕುರಿತು ಯೋಚಿಸುವಾಗ ನಾವು ಕಾರಣ-ಪ್ರಾಧಾನ್ಯತೆಯನ್ನು ಉಪೇಕ್ಷಿಸಬಾರದು. ನನ್ನನ್ನು ಸಂತೋಷಗೊಳಿಸಲೆಂದೇ ನನ್ನ ಮಗನಿಗೆ ರಾಜ್ಯ ಕೊಡುವೆನೆಂದು ನೀನು ನನಗೆ ಮಾತು ಕೊಟ್ಟೆ. ಆದರೆ ನನಗಿಂದು ಸಂತೋಷವಾಗುವುದು ರಾಮನಿಗೆ ರಾಜ್ಯವನ್ನು ಕೊಡುವುದರಿಂದಲೇ. ಭರತನಿಗೆ ರಾಜ್ಯವನ್ನು ಕೊಡುವುದರಿಂದಾಗುವ ಆನಂದವು ರಾಮನಿಗೆ ರಾಜ್ಯ ವನ್ನು ಕೊಡುವುದರಿಂದಲೂ ಆಗುತ್ತದೆ.

ದಶರಥ—ಭರತನೂ ಗುಣವಂತನೇ, ರಾಜ್ಯಾರ್ಹನೇ.

ಕೈಕೆ—ಖಂಡಿತ. ನಿರ್ಗುಣಿಗಳಿದ್ದಲ್ಲಿ ತಾನೇ, ಗುಣಿಯು ಗುಣಶಾಲಿಯೆಂದು ವ್ಯಕ್ತವಾಗುವುದು! ಹಾಗೆಯೇ ಹೆಚ್ಚು ಗುಣಶಾಲಿಯ ಎದುರಿನಲ್ಲಿ ಆ ಗುಣ

ಶಾಲಿಯೂ ಗುಣರಹಿತನಂತಾಗುವನು. ಕಗ್ಗತ್ತಲ ರಾತ್ರಿಯಲ್ಲಿ ಸಣ್ಣ ಹಣತೆಯ ಸಣ್ಣ ಬೆಳಕೂ ಬಹಳ ಪ್ರಕಾಶಮಾನವಾಗಿರುತ್ತದೆ; ಆದರೆ ಸೂರ್ಯನ ಮುಂದೆ ಆ ಹಣತೆಗೆ ಕಾಂತಿಯೆಲ್ಲಿ ಬಂತು? ಸರ್ವಗುಣಸಂಪನ್ನನಾದ ರಾಮನ ಮುಂದೆ ಭರತನ ಗುಣಗಳು ಗಣನೆಗೆ ಬಾರವು. ಆದುದರಿಂದ ರಾಜ್ಯಕ್ಕೆ ರಾಮನೇ ಅರ್ಹ.

ಕೌಸಲ್ಯೆ—ಸಂತೋಷವಾಯಿತು, ನನಗೆ ಸಂತೋಷವಾಯಿತು.

ಸುಮಿತ್ರೆ—ನನ್ನ ತಂಗಿ ಕೈಕೆ ಮಹಾನುಭಾವಳು, ಮೇಲಾಗಿ ರಾಜನೀತಿಜ್ಞಳು!

ದಶರಥ—ಗುಡುಗಿ ಗರ್ಜಿಸುವ ಮೇಘದಿಂದ ಇಂದು ಅಮೃತವೃಷ್ಟಿಯಾದಂತಾಯಿತು!

ಕೈಕೆ—ಆರ್ಯಪುತ್ರ, ಪ್ರೀತಿಯಿಂದ ನಾನು ನಿಷ್ಠುರಸತ್ಯವನ್ನು ಹೇಳಿಬಿಡುತ್ತೇನೆ! ಅದೇ ನನ್ನ ಘನಗರ್ಜನೆ! ಎಂದೆಂದಿಗೂ ಯುಕ್ತವಾದುದನ್ನೇ ಹೇಳಿಯೇನು—ಅದೇ ನನ್ನ ಅಮೃತವೃಷ್ಟಿ! ಮಳೆಗರೆಯುವುದು ಮೇಘದ ಸ್ವಭಾವ; ಆದರೆ ತನ್ನ ದಾರಿಗೆ ಅಡ್ಡಿಬಂದಾಗ ಅದು ಸಿಡಿಲನ್ನೆಸೆಯುವುದು!

ದಶರಥ—(ಸ್ವಗತ) ಕೇಳಿದವರಿಗೆ ಈಕೆಯ ಮಾತು ಅದೆಷ್ಟು ಭೀತಿಯನ್ನುಂಟುಮಾಡುವುದು! ಈ ನನ್ನ ದೇವಿಯು ಸಂತುಷ್ಟಳಾಗುವುದೂ ತಡವಿಲ್ಲ; ಕೃದ್ಧಳಾಗುವುದೂ ತಡವಿಲ್ಲ! ಪಾಪ ಈಕೆಯ ಸದುದ್ದೇಶದ ವಿಷಯವಾಗಿ ನನಗಾವ ಸಂಶಯವೂ ಇಲ್ಲ. (ಪ್ರಕಾಶ) ಕಾಲ ಒದಗಿ ಬಂದಾಗ ನನ್ನ ಮಕ್ಕಳಲ್ಲಿ ಯಾವಾತನಾದರೂ ರಾಜನಾಗಲಿ; ಆಗುವುದೂ ಬಿಡುವುದೂ ಎಲ್ಲ ವಿಧಿಯ ಅಧೀನ!

ಕೈಕೆ—ಆರ್ಯಪುತ್ರ! ನಾವಿಂದು ಏನಾಗಲೆಂದು ನಿಶ್ಚಯಿಸಿದ್ದೇವೆಯೋ ಅದೇ ಆಗತಕ್ಕುದು! ಅದನ್ನೇ ನಾವೆಲ್ಲರೂ ಸೇರಿ ಖಂಡಿತ ಮಾಡೋಣ!

ಕೌಸಲ್ಯೆ—ಆರ್ಯಪುತ್ರ, ಸಂಜೆ ಆಡಲು ಹೊರಟ ಕುಮಾರರೆಲ್ಲರೂ ರಾಮನನ್ನು ಮುಂದುಮಾಡಿಕೊಂಡು ನನ್ನನ್ನು ವಂದಿಸಲು ಬರುತ್ತಾರೆ. ಆದ್ದರಿಂದ ಅವರನ್ನು ಮುದ್ದಿಸಲು ಹೋಗುತ್ತೇನೆ.

ಸುಮಿತ್ರೆ—ಕುಮಾರರು ತಮ್ಮೆಲ್ಲ ತಾಯಂದಿರನ್ನೂ ವಂದಿಸಲು ಬರುತ್ತಾರೆ! ಅವರಿಗೆ ಚಿಕ್ಕಮ್ಮ ದೊಡ್ಡಮ್ಮನೆಂಬ ಭೇದಬುದ್ಧಿಯಿಲ್ಲ!

ಕೈಕೆ—ನಾನೂ ಹೋಗುತ್ತೇನೆ.

ದಶರಥ—ಹಾಗಾದರೆ ನೀವೆಲ್ಲ ಹೋಗಿಬನ್ನಿ. (ಎಲ್ಲರೂ ರಾಜನನ್ನು ವಂದಿಸಿ ಹೊರಡುವರು)

(ಸುಮಂತ್ರನ ಪ್ರವೇಶ)

ಸುಮಂತ್ರ—ಮಹಾರಾಜರಿಗೆ ಜಯವಾಗಲಿ. ಪೂಜ್ಯ ವಸಿಷ್ಠ ಮಹರ್ಷಿಗಳು ಹೇಳಿಕಳಿಸಿದ್ದಾರೆ....

ದಶರಥ—ಪೂಜ್ಯರು ಏನೆಂದು ಹೇಳಿಕಳಿಸಿದ್ದಾರೆ?

ಸುಮಂತ್ರ—ಮಕ್ಕಳೆಲ್ಲಾ ಶಾಸ್ತ್ರಗಳನ್ನು, ಮೊದಲೇ ಅಧ್ಯಯನ ಮಾಡಿದ್ದರೋ ಎಂಬಂತೆ, ಕೇಳಿದೊಡನೆಯೇ ಕಲಿತುಬಿಟ್ಟರು—ಅವರ ಬುದ್ಧಿ ಬಹು ಚುರುಕು; ಇನ್ನೀಗ ಅವರಿಗೆ ಶಸ್ತ್ರಾಸ್ತ್ರಗಳನ್ನು ಕಲಿಸಲು ಯಾರಾದರೊಬ್ಬರನ್ನು ನೇಮಿಸಬೇಕಾಗಿದೆಯಂತೆ.

(ಹಠಾತ್ತಾಗಿ ವಿದೂಷಕನ ಪ್ರವೇಶ)

ವಿದೂಷಕ—ಅಯ್ಯ ಗೆಳೆಯ, ಬಾಗಿಲು ಕಾಯುವವಳು ತಡೆದರೂ ನಿಲ್ಲದೆ ಆಕೆಯೊಡನೆ ಜಗಳವಾಡಿ, ಒಳಗೆ ನುಗ್ಗಿದೆ. ನಿನಗೊಂದು ಸಂತೋಷವಾರ್ತೆಯನ್ನು ಹೇಳಲೆಂದು ಬಂದೆ.

ದಶರಥ – ಆ ಸಂತೋಷವಾರ್ತೆಯೇನು?

ವಿದೂಷಕ—ರಾಮನಿಗೆ ರಾಜ್ಯವಾಗುವುದೆಂದು ಕೌಸಲ್ಯಾ ದೇವಿಯು ನನಗೆ ಲಾಡು ಊಟ ಹಾಕುವುದಾಗಿ ಮಾತುಕೊಟ್ಟಿದ್ದಳು. ಆ ಮಾತನ್ನು ಕೇಳಿದಾಗಿನಿಂದ ನನ್ನ ಹೊಟ್ಟೆ ಉಬ್ಬರಿಸಿದಂತಿತ್ತು—ಈಗ ಸ್ವಲ್ಪ ಹಗುರವಾಗಿದೆ.

ದಶರಥ—ಅಯ್ಯ, ನೀನು ಲಾಡು ಉಣ್ಣದ ದಿನವಾವುದು? ರಾಜ್ಯ ರಾಮನಿಗಾದರೂ ಸಿಗಲಿ, ಭರತನಿಗಾದರೂ ಸಿಗಲಿ; ನಿನಗಂತೂ ಲಾಡು ತಪ್ಪುವುದಿಲ್ಲ: ಚಿಂತೆ ಮಾಡಬೇಡ!

ವಿದೂಷಕ—ಹೇಗೆ ಚಿಂತೆ ಮಾಡದಿರಲಿ? ರಾಮನಿಗೆ ರಾಜ್ಯ ಸಿಕ್ಕಿದರೆ ಕೌಸಲ್ಯಾದೇವಿಯು ಹೆಚ್ಚು ಲಾಡುಗಳನ್ನು ಕೊಡುತ್ತಾಳೆ; ಭರತನಿಗೆ ರಾಜ್ಯವು ಸಿಕ್ಕಿದರೋ ಕೈಕೆಯು ಇನ್ನೂ ಹೆಚ್ಚು ಲಾಡುಗಳನ್ನು ಕೊಡುತ್ತಾಳೆ!

ಸುಮಂತ್ರ—ಹಾಗಾದರೆ ಪೂಜ್ಯ ವಸಿಷ್ಠರಿಗೇನೆಂದು ನಿವೇದಿಸಲಿ?

ವಿದೂಷಕ—(ಮಂತ್ರಿಯನ್ನು ಕುರಿತು) ಅಮಾತ್ಯ, ನಾನು ನನ್ನ ಗೆಳೆಯ

ನನ್ನ ರೇಗಿಸಲು ಬಾಯಿಗೆ ಬಂದುದನ್ನು ಹೇಳುತ್ತೇನೆ. ನೀನು ಅದನ್ನೇ ಪರಮಾರ್ಥವೆಂದು ತಿಳಿಯಬೇಡ. (ರಾಜನನ್ನು ಕುರಿತು) ವಸಿಷ್ಠರಿಗೆ ಹೇಳು— ಎಂದಿನವರಿಗೆ ಲಾಡು ಊಟದಿಂದ ನನಗೆ ತೃಪ್ತಿಯಾಗುವುದಿಲ್ಲವೋ ಅಂದಿನ ವರಿಗೆ ಅಭಿಷೇಕ ಸಮಾರಂಭವನ್ನು ಪ್ರಾರಂಭಿಸಲೇಬಾರದು ಎಂದು.

ದಶರಥ—(ಗುಂಭವಾಗಿ) ಹೇಳು, ಆ ಪೂಜ್ಯ ಮಹರ್ಷಿಗಳಿಗೆ: 'ತಾವು ಹೇಳಿದುದನ್ನು ಶೀಘ್ರವಾಗಿ ಮಾಡುತ್ತೇನೆ' ಎಂದು.

ವಿದೂಷಕ—(ಪ್ರೇಕ್ಷಕರ ಕಡೆ ತಿರುಗಿ ರಾಜನಿಗೆ ಕೇಳಿಸದಂತೆ) ಈಗ ನನ್ನ ಗೆಳೆಯನನ್ನು ತಬ್ಬಿಬ್ಬುಗೊಳಿಸುತ್ತೇನೆ, ಅನ್ಯಥಾ ಭಾವಿಸಬೇಡಿ. (ಪ್ರಕಾಶ) ನೀವಿಬ್ಬರೂ ನನಗೆ ಗೊತ್ತಾಗದಂತೆ ಮಾತನಾಡುತ್ತಿರುವಿರೇನು!? ಇರಲಿ; ನಿಮಗೆ ನನ್ನ ಸಲಹೆಯೇ ಬೇಕಿಲ್ಲವೋ! ಭರತನಿಗೆ ಕೊಡಬೇಕಾದ ರಾಜ್ಯವನ್ನು ನೀನು ರಾಮನಿಗೆ ಕೊಡುವೆಯಂತೆ! ಆಗಲಿ, ನಾನು ಅಂತಃಪುರದೊಳಗೆ ರಾಣಿ ಯರಿಗೂ, ಹೊರಗೆ ಅಣ್ಣತಮ್ಮಂದಿರಿಗೂ ಪರಸ್ಪರ ಜಗಳ ಹಚ್ಚುತ್ತೇನೆ! ಅಥವಾ ಎಲ್ಲರಿಗೂ ಆಮರಣಾಂತ ಉಪವಾಸದ ಭಯವಿಡುತ್ತೇನೆ!

ದಶರಥ—ಅಮಾತ್ಯ, ನಾನು ಹೇಳಿದ್ದನ್ನು ಪೂಜ್ಯ ಗುರುಗಳಿಗೆ ಅರಿಕೆ ಮಾಡು, ಹೋಗು.

ಸುಮಂತ್ರ—ಅಪ್ಪಣೆ (ನಿಷ್ಕ್ರಮಿಸುವನು)

ವಿದೂಷಕ—ಕಪಟಶಿಖಾಮಣಿ ಹೋದನಲ್ಲಾ!

ದಶರಥ—(ಸ್ವಗತ) ಚಪಲಬುದ್ಧಿಯ ಈ ಬ್ರಾಹ್ಮಣವಟು ಕಲಹಪ್ರಿಯ; ತಾನಾಡುವ ಮಾತಿನ ಪರಿಣಾಮವೇನೆಂದರಿಯ! ಮೂರ್ಖನೆಬ್ಬಿಸಿದ ಗದ್ದಲ ವಾದರೂ ಜನರಲ್ಲಿ ಶಂಕೆಯನ್ನುಂಟುಮಾಡುವುದು; ಆಗಲಿ ಹೀಗೆನ್ನುತ್ತೇನೆ: (ಪ್ರಕಾಶ) ಅಯ್ಯ, ಸುಂದರಕ, ಇಂದು ಮಾತಿಗೆ ಮಾತು ಬಂದು ರಾಜ್ಯದಾಯದ ವಿಚಾರವೂ ಬಂದಿತ್ತು; ಅಷ್ಟೆ! ಯಾರ ಯಾವ ಮಾತನ್ನೂ ಯಥಾರ್ಥವೆಂದು ಭಾವಿಸಬೇಡ! ಅಪಾರವಾದ ತಲ್ಲಣಕ್ಕೆ ಕಾರಣವಾದ ಈ ರಾಜಕಾರಣವೆಲ್ಲಿ, ಪಾಪ, ಸುಕುಮಾರರಾದ ಮಕ್ಕಳೆಲ್ಲಿ? ಲೋಕಾಭಿರಾಮವಾಗಿ ಪಟ್ಟಾಭಿಷೇಕ ವನ್ನು ಕುರಿತು ಮಾತುಕತೆಯಾಡಿದೆವು—ಅದನ್ನೇ ನೀನು ಪರಮಾರ್ಥವೆಂದು ಭಾವಿಸಬೇಡ.

ವಿದೂಷಕ—ನಿತ್ಯವೂ ಹಾಗೇ ಮಾತುಕತೆ ನಡೆಯುತ್ತಿರಲಿ!

(ತೆರೆಯಮರೆಯಲ್ಲಿ)

ಲೋಕವನ್ನು ಜಯಿಸಿ, ದೇವತೆಗಳನ್ನು ಓಡಿಸಿ ಗರ್ವಿಷ್ಟನಾಗಿದ್ದ ರಾವಣನ ಮನದ ಶಾಂತಿಸಮಾಧಾನವಿಂದು ಭಂಗವಾಗಿದೆ. ರಾಮನ ಅಮರ್ತ್ಯ ಪೌರುಷವನ್ನೂ, ಬಾಲ್ಯದಲ್ಲಿಯೂ ಅವನ ಅಬಾಲ್ಯಾಜಸ್ಸನ್ನೂ ಕೇಳಿ ರಾಕ್ಷಸಪತಿ ರಾವಣನಿಲ್ಲೇ ಗೂಢವಾಗಿ ಸಂಚರಿಸುತ್ತಿದ್ದಾನೆ! ಏನಾಗುವುದೋ ಎಚ್ಚರಿಕೆಯಿಂದಿರಿ!

ದಶರಥ—(ಕೇಳಿಸಿಕೊಂಡು) ಆಹ! ಪ್ರಧಾನಸೇವಕನಾದ ಸುಬುದ್ಧಿಯ ಸ್ವರದಂತಿದೆ! ಸುಂದರಕ, ನಡೆ—ಅವನಿಗೆ ನಾನು ಹೇಳಿದೆನೆಂದು ಹೇಳು—ನಿನ್ನ ಮಾತನ್ನು ಕೇಳಿ ತಿಳಿದೆವು—ಎಂದು.

ವಿದೂಷಕ—ನಾನಂತೂ ಹೋಗುವುದಿಲ್ಲ! ರಾವಣನೆಲ್ಲಿಯಾದರೂ ದಾರಿಯಲ್ಲಿ ನನ್ನನ್ನು ರಾಮನೆಂದು ತಿಳಿದು ನುಂಗಿಬಿಟ್ಟರೇನು ಮಾಡಲಿ!?

ದಶರಥ—ಬಾ, ನಾನೂ ಬರುತ್ತೇನೆ ಹೋಗೋಣ. (ಸ್ವಗತ) ಒಂದು ಶಂಕೆ ಹೋಯಿತೆಂದಿದ್ದರೆ ಮತ್ತೊಂದು ಬಂದು ಆತುಕೊಂಡಿತಲ್ಲಾ! ಮಕ್ಕಳಿಲ್ಲದಿದ್ದರೊಂದು ಚಿಂತೆ; ಮಕ್ಕಳಿದ್ದರಂತೂ ನಾನಾ ಚಿಂತೆ! ನನಗೆ ಮಕ್ಕಳು ಹುಟ್ಟಿದೊಡನೆಯೇ ಅವರಿಗೆ ಶತ್ರುಗಳೂ ಹುಟ್ಟಿಕೊಂಡರು! ನನ್ನ ಪುತ್ರರಿನ್ನೂ ಚಿಕ್ಕವರು, ಆ ಶತ್ರುಗಳೋ ಬಹುದೊಡ್ಡವರು; ನಾನಾದರೋ ಮುಪ್ಪಿನವನು—ದೇವರೇ ಕಾಪಾಡಬೇಕು.

(ನಿಷ್ಕ್ರಮಿಸುವರು)

ನಾಲ್ಕನೇ ದೃಶ್ಯ

(ಸರಯೂ ನದೀತೀರದಲ್ಲಿ ವಿಹರಿಸುವ ಗಂಧರ್ವರ ಪ್ರವೇಶ)

ಚಿತ್ರಕೇತು—ಚಿತ್ರಪದ, ನದೀ ನೀರಿನಲ್ಲಿ ವಿಹಾಯುತ್ತ ನೀನು ಬಹಳ ಕಾಲ ಕಳೆದುಬಿಟ್ಟೆ; ನಾವು ಬಂದ ಕೆಲಸವೇನೆಂದು ನೆನಪಿದೆಯೋ?

ಚಿತ್ರಪದ—ಚಿತ್ರಕೇತು, ನನಗೆಲ್ಲ ನೆನಪಿದೆಯಪ್ಪ; ರಾವಣನು ರಾಮನಿಗೇನಾದರೂ ತೊಂದರೆಮಾಡಬೇಕೆಂದು ಅರಮನೆಯ ಹತ್ತಿರದಲ್ಲೇ ಎಲ್ಲೋ

ಸುತ್ತುತ್ತಿದ್ದಾನೆ. ಆ ಅನಿಷ್ಟದಿಂದ ರಾಮನನ್ನು ರಕ್ಷಿಸಲೆಂದು ದೇವೆಂದ್ರನು ನಮ್ಮನ್ನಿಲ್ಲಿಗೆ ಕಳಿಸಿರುವನಲ್ಲವೆ!? ಎಲ್ಲ ನೆನಪಿದೆಯಪ್ಪ! ಬಾ, ಅರಮನೆಯ ಉದ್ಯಾನದಲ್ಲೇ ಅದೃಶ್ಯರಾಗಿದ್ದು ಕಾಯುತ್ತಿರೋಣ; ಹೆದರಬೇಡ!

ಚಿತ್ರಕೇತು—ಹೆದರಿಕೆಯೇಕೆ? ರಾವಣನೊಂದು ಪಕ್ಷ ದಶರಥ ರಾಜನಿಗಿಂತ ಬಲಿಷ್ಠನಾಗಿದ್ದಿದ್ದರೆ ಹೀಗೇಕೆ ಮರೆಮಾಜಿ ಬರುತ್ತಿದ್ದ?

(ನಿಷ್ಕ್ರಮಿಸುವರು)

(ರಾವಣಾಸುರನ ಪ್ರವೇಶ)

ರಾವಣ—ದಶರಥನ ಮಗ ರಾಮನೆಂಬವನು ಬಿಲ್‌ವಿದ್ಯೆಯಲ್ಲಿ ಬಲು ಜಾಣನಂತೆ! ಅವನು ಬಾಲಕನಾದರೂ ಬಲಿಷ್ಠನಂತೆ! ಸುರಾಸುರರನ್ನೂ ಸೋಲಿಸುವಷ್ಟು ಸಮರ್ಥನಂತೆ! ನನ್ನ ಮುಂದೆ ಇನ್ನಾವನು ಶೂರನಿದ್ದಾನು!? ಇದ್ದರೂ, ಅವನನ್ನು ಇಲ್ಲವೆನಿಸಲು ನಾನೀಗ ಇಲ್ಲಿಗೆ ರಭಸದಿಂದ ಬಂದಿದ್ದೇನೆ! ನನ್ನ ಕೈಗೆ ಸಿಕ್ಕಿದರೆ ಅವನನ್ನು ನನ್ನೂರಿಗೆ ಕೈಸೆರೆಯಾಗಿ ಒಯ್ಯುತ್ತೇನೆ! ಇರಲಿ; ಮೊದಲೀಗ ಅವನ ಬಲಾಬಲಗಳನ್ನು ತಿಳಿದು, ಸೆರೆಹಿಡಿಯಬೇಕೋ, ಸಾಯಿಸಬೇಕೋ ಅಥವಾ ಜೀವಸಹಿತ ಬಿಟ್ಟುಬಿಡಬೇಕೋ ಎಂಬುದನ್ನು ಆಮೇಲೆ ನಿರ್ಣಯಿಸುತ್ತೇನೆ. ನಾನು ಹತ್ತಿ ಬಂದಿರುವ ರಥ ಯಾರ ಕಣ್ಣಿಗೂ ಕಾಣದು. ಅದನ್ನಿಲ್ಲೇ ನೆಲಕ್ಕಿಳಿಸಿ, ಅದೃಶ್ಯನಾಗಿ, ದಶರಥನ ಅರಮನೆಯ ಬಳಿಸಾರಿ ನೋಡುತ್ತೇನೆ. (ನಿಷ್ಕ್ರಮಿಸುವನು)

(ವಿಶ್ವಾಮಿತ್ರನು ಪ್ರವೇಶಿಸಿ)

ವಿಶ್ವಾಮಿತ್ರ—ಲೋಕದಲ್ಲಿ ವಿಶ್ವಾಮಿತ್ರನೆನಿಸಿದ ನನ್ನನ್ನು ಬಿಟ್ಟು ಇನ್ನಾರೂ ಅತಿಬಲ, ಬಲ, ವಿಜಯ, ಜಯ ಎಂಬ ವಿದ್ಯೆಗಳನ್ನೂ, ಜೃಂಭಕವೆಂಬ ದಿವ್ಯಾಸ್ತ್ರವನ್ನೂ ಬಲ್ಲವರಿಲ್ಲ. ಈ ಅನರ್ಘ್ಯ ವಿದ್ಯೆಗಳನ್ನೂ, ದಿವ್ಯಾಸ್ತ್ರವನ್ನೂ ನನ್ನಿಂದ ಪಡೆಯಬಲ್ಲ ಯೋಗ್ಯರಾರೆಂಬುದೇ ಬಹಳದಿನದಿಂದ ನನಗಿರುವ ಒಂದೇ ಒಂದು ಚಿಂತೆ! ದಶರಥನ ಮಗ ರಾಮನು ವೀರನೆಂದೂ ಸಂಯಮಿಯೆಂದೂ ಕೇಳಿ ಇಲ್ಲಿಗೆ ಬಂದಿದ್ದೇನೆ. ಕಿವಿಯಿಂದ ಕೇಳಿದ ರೀತಿಯಲ್ಲಿ ಅವನು ವೀರನೆಂದು ಕಾಣಿಸಿದರೆ, ಅವನನ್ನೇ ನನ್ನ ವಿದ್ಯೆಗೆಲ್ಲ ಉತ್ತರಾಧಿಕಾರಿಯನ್ನಾಗಿ ಸ್ವೀಕರಿಸುತ್ತೇನೆ. ಮುಪ್ಪಡಸಿದ ದಶರಥ ಮಹಾರಾಜನು ಕಳಿಸಿದರೆ, ಜೊತೆಯಲ್ಲೇ

ನನ್ನ ಆಶ್ರಮಕ್ಕೆ ಅವನನ್ನು ಕರೆದುಕೊಂಡು ಹೋಗುತ್ತೇನೆ. (ಮುಂದೆ ನೋಡಿ) ಆಹಾ! ಏಕೆ ರಾವಣನೂ ಇಲ್ಲಿಗೆ ಬಂದಿರುವನಲ್ಲಾ! ಮಿಕ್ಕವರ ಕಣ್ಣಿಗೆ ಕಾಣದಿದ್ದರೆ—ನನ್ನ ಕಣ್ಣಿಗಿವನು ಕಾಣದಿರುವನೆ!? ಇರಲಿ; ನಾನಿವನಿಗೆ ಅದೃಶ್ಯನಾಗಿದ್ದು—ಏನು ಮಾಡುವನೋ ನೋಡುತ್ತೇನೆ. ಇವನು ಬಂದ ಕಡೆ ಅನಿಷ್ಟ ತಪ್ಪಿದ್ದಲ್ಲ!

(ರಾವಣನ ಪ್ರವೇಶ)

ರಾವಣ—ಆಹಾ! ಏಕೆ ವಿಶ್ವಾಮಿತ್ರನೂ ಇಲ್ಲಿಗೆ ಬಂದಿರುವನಲ್ಲಾ! ಇವನು ಬ್ರಹ್ಮಕ್ಷಾತ್ರತೇಜಸ್ಸುಗಳ ರಾಶಿ! ನನ್ನ ಹಂಚಿಕೆಯನ್ನಿವನು ಖಂಡಿತ ಹಾಳು ಮಾಡಿಬಿಡುವನು. ಇರಲಿ; ನನ್ನ ಮುಂದಿವನೆಷ್ಟರವನು! ಇನ್ನೊಬ್ಬರಿಗಿವನು ಅದೃಶ್ಯನಾಗಿದ್ದರೂ ನನ್ನ ಕಣ್ಣಿಗೆ ಕಾಣುತ್ತಲೇ ಇರುವನು. ನಾನಿವನಿಗೆ ಅದೃಶ್ಯನಾಗಿದ್ದೇನೆ.

ವಿಶ್ವಾಮಿತ್ರರಾವಣರು—ಸದ್ಯಕ್ಕೆ ನಾನೀ ದುರಾತ್ಮನ ಕಣ್ಣಿಗೆ ಕಾಣುತ್ತಿಲ್ಲವಲ್ಲಾ! (ಮುಂದೆ ನೋಡಿ) ರಾಮನೂ ಅವನ ತಮ್ಮಂದಿರೂ ವಸಿಷ್ಠನೊಡನೆ ಇತ್ತಲೇ ಬರುತ್ತಿರುವರು!

(ವಸಿಷ್ಠನು ರಾಮ ಮುಂತಾದ ನಾಲ್ವರು ಕುಮಾರರೊಡನೆ ಪ್ರವೇಶಿಸುವನು)

ವಸಿಷ್ಠ—ಅಪ್ಪ ಕುಮಾರರೇ, ವಿಧಿವತ್ತಾಗಿ ಎಲ್ಲ ವಿದ್ಯೆಗಳನ್ನೂ ನಾನು ನಿಮಗೆ ಕಲಿಸಿದ್ದಾಯಿತು. ನೀವೂ ಅದನ್ನೆಲ್ಲ ಕೇಳಿದ ಮಾತ್ರದಿಂದಲೇ ಕಲಿತು ಬಿಟ್ಟದ್ದೀರಿ! ನಾನು ಕೃತಾರ್ಥ, ನನ್ನ ವಿದ್ಯೆ ಸಫಲ. ತನ್ನ ಜ್ಞಾನವನ್ನು ಸತ್ಪಾತ್ರಕ್ಕಿತ್ತರೆ ಅದರಿಂದ ಅಮಿತವಾದ ಆನಂದವಾಗುತ್ತದೆ. ದೀಪದಿಂದ ದೀಪ ಹೊತ್ತಿಕೊಂಡ ಮೇಲೆ ಅವೆರಡಕ್ಕೂ ಭೇದವೆಲ್ಲಿ? ಹಾಗೆಯೇ ನನ್ನಿಂದ ವಿದ್ಯೆಯನ್ನು ಪಡೆದಿರಿ. ಈಗ ನಾವೆಲ್ಲ ಜ್ಞಾನದಲ್ಲಿ ಸಮಾನರು. ಇನ್ನು ನಮಗೆ ಪರಸ್ಪರ ಭೇದವಿಲ್ಲ!

ಕುಮಾರರು—ಪೂಜ್ಯರೇ, ತಮ್ಮ ಶಿಷ್ಯರಾದುದರಿಂದ ನಾವು ಧನ್ಯರು. ಇಂದು ಊರಿನಿಂದ ಹೊರಗೆ ಹೋಗಿ, ಅಧ್ಯಯನಮಾಡಿದ ಧನುರ್ವೇದವನ್ನು ಪ್ರಯೋಗಿಸಿ, ಅಭ್ಯಾಸ ಮಾಡುತ್ತೇವೆ. ಅಪ್ಪಣೆಯಾಗಬೇಕು.

ವಸಿಷ್ಠ—ಇವತ್ತು ಪ್ರತಿಪದ್ದಿನವಾದುದರಿಂದ ನಿಮಗೆ ನಾನೇನನ್ನೂ

ಹೇಳಿಕೊಡುವಂತಿಲ್ಲ. ನಿಮ್ಮಿಷ್ಟದಂತೆ ನೀವು ಹೋಗಿ. ನನಗೂ ಕೆಲಸವಿದೆ. (ನಿಷ್ಕ್ರಮಿಸುವನು)

ರಾಮ—(ಸಹೋದರರನ್ನು ಕುರಿತು) ಈ ಊರಿನ ದಕ್ಷಿಣಕ್ಕೆ ಹೋಗಿ ಅಲ್ಲಿ ಧನುರ್ಹಸ್ತಲಾಘವವನ್ನು ಓದಿದಂತೆ ಅಭ್ಯಾಸಮಾಡೋಣ.

ಭರತ—ಅಂಗರಕ್ಷಕ ಅನುಚರರನ್ನೇನಾದರೂ ಬರಹೇಳಲೆ?

ರಾಮ—ಬೇಡ! ನಾವು ನಾಲ್ಕು ಜನರಿದ್ದೇವೆ; ನಾವೇನೂ ಚಿಕ್ಕವರಲ್ಲ; ದೂರದ ಅರಣ್ಯಕ್ಕೆ ಹೋಗುತ್ತಿಲ್ಲ—ಕೈಯಲ್ಲಿ ಬಿಲ್ಲುಬಾಣಗಳಿವೆ! ನಾವೀಗ ಮಾಡಬೇಕಾಗಿರುವ ಕೆಲಸಕ್ಕೆ ಅನುಚರರ ಆಶ್ರಯ ಬೇಕಿಲ್ಲ. ಕ್ಷತ್ರಿಯರು ತಮ್ಮನ್ನು ತಮ್ಮ ಬಾಹುಬಲದಿಂದಲೇ ರಕ್ಷಿಸಿಕೊಳ್ಳಬೇಕಲ್ಲವೆ? (ಎಂದು ತಮ್ಮಂದಿರೊಡನೆ ಮುಂದೆ ನಡೆದು) ಇನ್ನೂ ಮುಂದಕ್ಕೆ ನಾವು ಹೋಗುವುದೇಕೆ? ಧನುರಭ್ಯಾಸವಿಲ್ಲೇ ನಡೆಯಲಿ (ಎಂದು ಎಲ್ಲರೂ ಕುಳಿತುಕೊಳ್ಳುವರು)

ಶತ್ರುಘ್ನ—(ಎದ್ದು) ಹೋ! ಹೋ! ನೋಡಿ, ನನ್ನೆದುರಿಗಿರುವ ಅರಳಿಯ ಮರದ ಎಲೆಗಳನ್ನೆಲ್ಲ ಒಂದೇ ಸರಳಿನಿಂದ ತರಿದು, ಆ ಸರಳು ಮತ್ತೆ ಬಂದು ನನ್ನ ಬತ್ತಳಿಕೆಗೇ ಬೀಳುವಂತೆ ಮಾಡುತ್ತೇನೆ. (ಬಾಣವನ್ನು ಬಿಡುವನು)

ರಾಮಭರತಲಕ್ಷ್ಮಣರು—ಭಲೇ ತಮ್ಮಾ ಭಲೇ!

ಭರತ—(ಎದ್ದು) ಶತ್ರುಘ್ನನಂತೆಯೇ ನಾನೂ ಮಾಡುತ್ತೇನೆ, ನೋಡಿ. (ಬಾಣ ಬಿಡುವನು)

ರಾಮ—ಭಲೇ ತಮ್ಮಾ ಭಲೇ! ನೀನು ಧನುರ್ವೇದಕೌಶಲ್ಯವನ್ನು ಚೆನ್ನಾಗಿ ತೋರಿದೆ.

ಲಕ್ಷ್ಮಣ—(ಎದ್ದು ಧನುಸ್ಸನ್ನೇರಿಸಿ) ನೋಡಿ, ನೋಡಿ, ನಾನೀಗ ನನ್ನೆದುರಿನಲ್ಲಿರುವ ಈ ಮರವನ್ನು ಬಾಣವೊಂದರಿಂದಲೇ ಬೇರುಮೇಲಾಗುವಂತುರುಳಿಸಿ, ಅದನ್ನು ಕೊಚ್ಚಿ ನುಚ್ಚುನೂರುಮಾಡಿ, ಆ ಬಾಣ ಮತ್ತೆ ನನ್ನ ಬತ್ತಳಿಕೆಗೇ ಬರುವಂತೆ ಮಾಡುತ್ತೇನೆ. ಅಲುಗುವ ಪಲಾಶವೃಕ್ಷವನ್ನು ಸ್ತಬ್ಧಗೊಳಿಸುತ್ತೇನೆ; ಸ್ತಬ್ಧವಾಗಿರುವ ಮಹಾಶಿಲೆಯನ್ನು ಅರಳಿಯ ಚಿಗುರಿನಂತೆ ಕಂಪನಗೊಳಿಸುತ್ತೇನೆ. (ಬಾಣಪ್ರಯೋಗ ಮಾಡುತ್ತಾನೆ)

ಭರತಶತ್ರುಘ್ನರು—ಆಹ! ಈ ಮಹಸೀಯನ ಶರಸಂಧಾನ ಕೌಶಲವೆಷ್ಟು ಅದ್ಭುತವಾಗಿದೆ.

ರಾಮ—ಭಲೇ ತಮ್ಮ ಭಲೇ. ನೀನು ಜೊತೆಯಲ್ಲಿದ್ದೆಯೆಂದರೆ ಸುರಾಸುರ ಮಾನವರಿಗಾರಿಗೂ ಹೆದರಬೇಕಾಗಿಲ್ಲ—ನನಗೆ ಜಯ ಖಂಡಿತ! ನಿನ್ನಂತಹ ಮಹಾವೀರನ ಬೆಂಬಲವೊಂದಿದ್ದರೆ ಸಾವೂ ದೂರ ಸರಿಯುತ್ತದೆ. ನನಗಿನ್ನೇನು ಭಯ!

ಭರತಲಕ್ಷ್ಮಣಶತ್ರುಘ್ನರು—ಅಣ್ಣ, ನೀನು ನಮ್ಮೆಲ್ಲರ ಧನುರ್ ವಿದ್ಯೆಯನ್ನು ನೋಡಿ ಅದರ ಗುಣಗಾನ ಮಾಡಿದೆ. ಈಗ ನಿನ್ನ ಧನುರ್ವಿದ್ಯಾ ಕೌಶಲ್ಯವನ್ನು ನೋಡುವ ಇಚ್ಛೆ ನಮಗೆ.

ರಾಮ—ಜನ್ಮ-ಸಂಸ್ಕಾರ-ವಿದ್ಯೆಗಳು ನಮಗೆಲ್ಲ ಸಮಾನ. ಅಂದಮೇಲೆ ನಮ್ಮ ನಮ್ಮ ಸಾಮರ್ಥ್ಯಗಳಲ್ಲಿ ಹೇಗೆ ತಾರತಮ್ಯ ಬಂದೀತು? ವಿಚಾರಿಸಿ.

ಭರತ—ಹುಟ್ಟಿನ ಮೂಲ ನಮಗೆಲ್ಲರಿಗೂ ಒಂದೇ ಆದರೂ, ಹುಟ್ಟುಗುಣಗಳು ಬೇರೆಬೇರೆ. ಮುತ್ತು ಮತ್ತು ಕವಡೆ ಎರಡೂ ಸಮುದ್ರದಲ್ಲೇ ಹುಟ್ಟುತ್ತವೆ.

ರಾಮ—ಆಗಲಿ, ನಿಮ್ಮಿಷ್ಟದಂತೆ ಮಾಡುತ್ತೇನೆ. (ಸ್ವಗತ) ನನ್ನ ತಮ್ಮಂದಿರು ಯಾವ ಯಾವ ಕೈಚಳಕವನ್ನು ತೋರಿದರೊ ಅದನ್ನೇ ನಾನೂ ತೋರುತ್ತೇನೆ. ನಾನು ಅತಿಶಯಿಸಿ ತೋರುವುದರಿಂದ ಅವರಿಗೆ ತಾವು ಬುದ್ಧಿವಂತರಲ್ಲವೆಂಬ ಭಾವನೆ ಬಂದೀತೆಂದು ನನಗೆ ಭಯ. (ಪ್ರಕಾಶ) ತಮ್ಮಾ ಶತ್ರುಘ್ನ, ನೀನೇನು ಮಾಡಿ ತೋರಿದೆಯೋ, ನಾನೂ ಅದನ್ನೇ ಮಾಡಲು ಯತ್ನಿಸುತ್ತೇನೆ. (ಬಿಲ್ಲನ್ನೇರಿಸಿ ನಿಲ್ಲುತ್ತಾನೆ)

(ದೂರದಲ್ಲಿ ರಾವಣನು ಪ್ರವೇಶಿಸಿ)

ರಾವಣ—ರಾಮಧನುಸ್ಸಿನಿಂದ ಹೊರಟ ಶರಗಳು ಗುರಿಯನ್ನು ತಾಗುವುದಕ್ಕೆ ಮೊದಲೇ ಅವನ್ನು ನನ್ನ ಸರಳುಗಳಿಂದ ಮುರಿದು, ನೆಲಕ್ಕುರುಳುವಂತೆ ಮಾಡಿ, ರಾಮನ ಕೋಪವನ್ನು ಕೆರಳಿಸಿ, ಅದೃಶ್ಯನಾಗಿ ನಿಂತು ನೋಡುತ್ತೇನೆ. ಬಿಟ್ಟ ಬಾಣ ತಪ್ಪಿದರೆ ಸಿಟ್ಟು ನೆತ್ತಿಗೇರಿ ವೀರನು ಮತ್ತಷ್ಟು ಪ್ರಚಂಡನಾಗುತ್ತಾನೆ; ಅವನನ್ನು ಆಗ ನೋಡಬೇಕು! ಆಡುವಾಗಲೋ, ಹಾಯಾಗಿ ಮಲಗಿರುವಾಗಲೋ ಸಿಂಹವೇನು ಚಂದ? ಅದನ್ನು ರೇಗಿಸಿದಾಗ ನೋಡಬೇಕಲ್ಲವೆ? ಕೆರಳಿಸಿ ನೋಡುತ್ತೇನೆ, ಜನರಾಡಿಕೊಳ್ಳುವಂತೆ ಇವನೇನು ಮಹಾಸತ್ವನೋ ಅಥವಾ ಮೆತ್ತನೆಯವನೋ ಗೊತ್ತಾಗುತ್ತದೆ. (ನಿಷ್ಕ್ರಮಿಸುವನು)

ರಾಮ—ತಮ್ಮದಿರೇ, ನೋಡಿ, ನನ್ನ ಬಾಣದಿಂದ ಆ ಮರದ ಎಲೆಗಳೆಲ್ಲ

ಛಿದ್ರಛಿದ್ರವಾಗುತ್ತವೆ. (ಎಂದು ಬಾಣವನ್ನು ಪ್ರಯೋಗಿಸಿ, ಆಶ್ಚರ್ಯದಿಂದ) ಏನಿದು? ನಾನು ಬಿಟ್ಟ ಬಾಣ ಗುರಿ ಮುಟ್ಟುವುದಕ್ಕೆ ಮೊದಲೇ ಕಟ್ಟೆಂದು ಎರಡು ತುಂಡಾಯಿತು!

ಶತ್ರುಘ್ನ—ಆ ಬಾಣ ಬಹಳ ಹಳೆಯದಿರಬೇಕು.

ಲಕ್ಷ್ಮಣ—ಆ ಬಾಣ ಮೊದಲೇ ಮುರಿದಿತ್ತಾಗಬಹುದು.

ಭರತ—ಮಧ್ಯಮಾರ್ಗದಲ್ಲಿಲ್ಲೋ ಚಕ್ರಾ ನಿಲವಿರಬೇಕು.

ರಾಮ—ಆಗಲಿ, ಮತ್ತೆ ಬಾಣ ಬಿಡುತ್ತೇನೆ. (ಶರಸಂಧಾನ ಮಾಡುವನು)

ಲಕ್ಷ್ಮಣ—ಮತ್ತೆ ಬಾಣಕ್ಕದೇ ಗತಿಯಾಯಿತೇ?!

ರಾಮ—ಆಗಲಿ, ನಮ್ಮ ತಂದೆಯಿಂದ ನಾನು ವಾಯವ್ಯಾಸ್ತ್ರವನ್ನು ಮಂತ್ರ ಸಹಿತವಾಗಿ ಪಡೆದಿದ್ದೇನೆ; ಅದರಿಂದ ಇದೇ ಮರವನ್ನು ಬುಡಸಹಿತ ದೂರ ಬೀಳುವಂತೆ ಮಾಡುತ್ತೇನೆ. (ಎಂದು ಕ್ಷಣಕಾಲ ಧ್ಯಾನ ಮಾಡಿ ಬಾಣವನ್ನು ಬಿಡುತ್ತಾನೆ)

ಶತ್ರುಘ್ನ—ಅರಳಿಯ ಮರ ಕಿಂಚಿತ್ತೂ ಕದಲಿಲ್ಲವಲ್ಲ!

ರಾಮ—ಏನು? ಈ ವಾಯವ್ಯಾಸ್ತ್ರವನ್ನೆಷ್ಟೋ ಸಲ ಪ್ರಯೋಗಿಸಿ ನೋಡಿದ್ದೇನೆ, ಅದು ನನಗೆ ಸಿದ್ಧಿಸಿದೆ. ಈಗ ಅದು ಹೇಗೆ ವ್ಯರ್ಥವಾಯಿತು? ಅಥವಾ ನನ್ನ ಪರಾಕ್ರಮವೇ ಪಲ್ಲಟಿಸಿಹೋಯಿತೇ? ಆಗಲಿ (ಎಂದು ಕ್ರೋಧಾವಿಷ್ಟನಾಗಿ ಮತ್ತೊಂದು ಬಾಣವನ್ನು ಬತ್ತಳಿಕೆಯಿಂದ ತೆಗೆದು) ಈ ನನ್ನ ಆಗ್ನೇಯಾಸ್ತ್ರವು ಆ ಮರವನ್ನೆಲ್ಲ ತನ್ನ ಉರಿನಾಲಿಗೆಗಳಿಂದ ನುಣ್ಣನೆ ನೊಣೆದು ನುಂಗುತ್ತದೆ. ಒಂದುಪಕ್ಷ ಹಾಗಾಗದೇ ಹೋದರೆ, ಈ ಅಸ್ತ್ರಾಸರಾಘೋದ್ಭವ ದಹನಶಿಖೆಯಲ್ಲಿ ನನ್ನ ದೇಹ ಭಸ್ಮವಾಗಿ ಹೋಗಲಿ, ನಾನಂತೂ ಬಿಟ್ಟ ಬಾಣ ಗುರಿತಪ್ಪಿದ ಅವಮಾನವನ್ನು ಸಹಿಸಲಾರೆ. (ಎಂದು ಬಿಲ್ಲಿಗೆ ಬಾಣವೇರಿಸಿ ಧ್ಯಾನಮಗ್ನನಾಗುವನು)

(ರಾವಣನು ದೂರದಲ್ಲಿ ಪ್ರವೇಶಿಸಿ)

ರಾವಣ—(ಸ್ವಗತ) ಕೆರಳಿದ ಸಿಂಹವನ್ನೂ, ಉಜ್ವಲ ಸೂರ್ಯಾಗ್ನಿ ಗೋಲವನ್ನೂ, ಪಿನಾಕಪಾಣಿಯಾದ ಮಹಾರುದ್ರನನ್ನೂ, ನಾನು ಏಕಾಂಗಿಯಾಗಿ ಕಂಡಿರುವೆನಾದರೂ, ಎಂದೂ ಹೆದರಿದವನಲ್ಲ. ಆದರೆ, ಶಸ್ತ್ರಧಾರಿಯಾಗಿ ನಿಂತಿರುವ ರಾಮನ ಮುಂದೆ ನಾನು ಧೈರ್ಯಧಾರಣೆ ಮಾಡಲಾರೆ. ಇವನ

ಆಗ್ನೇಯಾಸ್ತ್ರಕ್ಕೆ ಪ್ರತ್ಯಸ್ತ್ರವನ್ನು ಬಲ್ಲೆನಾದರೂ, ನನ್ನ ಮನಸ್ಸೇಕೋ ಮುರಿದು ಬೀಳುತ್ತಿದೆ. ಆಗಲಿ ಹೊರಟುಹೋಗುತ್ತೇನೆ. ಅಯ್ಯೋ! ರಾವಣನೆದೆಯೊಳಕ್ಕೆ ಭಯವು ತನ್ನ ಮೊದಲ ಹೆಜ್ಜೆಯನ್ನಿಟ್ಟಿತಲ್ಲಾ ! (ನಿಷ್ಕ್ರಮಿಸುವನು)

(ವಿಶ್ವಾಮಿತ್ರನು ದೂರದಲ್ಲಿ ಪ್ರವೇಶಿಸಿ)

ವಿಶ್ವಾಮಿತ್ರ—(ಸ್ವಗತ) ಕ್ರೋಧಾವಿಷ್ಟನಾದ ರಾಮನನ್ನು ಕಂಡು ಹೆದರಿದ ರಾವಣನು–ಹುಲಿಯನ್ನು ಕಂಡ ಕಾಡುಕೋಣದಂತೆ–ಮೃತ್ಯು ಭಯದಿಂದ ಪಲಾಯನ ಮಾಡುತ್ತಿದ್ದಾನೆ. ಆ ದುರಾತ್ಮನು ತನ್ನ ರಥವನ್ನು ಹತ್ತಿ ಹೊರಡುವುದರೊಳಗೇ ಯಾರಿಗಾದರೂ ಅಪಾಯ ಮಾಡಿಬಿಟ್ಟಾನು. ಸ್ವಲ್ಪ ದೂರ ಅವನ ಹಿಂದೆಯೇ ಹೋಗಿ ಬರುತ್ತೇನೆ. (ನಿಷ್ಕ್ರಮಿಸುವನು)

(ರಾಮನು ಧ್ಯಾನದಿಂದ ಎಚ್ಚತ್ತು ಬಾಣ ಬಿಡಲುದ್ಯೋಗಿಸುವನು)

ಭರತ— ಅಣ್ಣ, ತಾಳು, ತಾಳು. ಆ ಮರ ಹತ್ತಿ ಉರಿದರೆ, ಅದರೊಳಗಣ ನಿರಪರಾಧಿಗಳಾದ ಪಕ್ಷಿಗಳು ಪಾಪ ಬೆಂದುಹೋಗುವವು. ಮಕ್ಕಳುಮರಿಗಳೊಡ ಗೂಡಿ ಅಲ್ಲಿ ವಾಸಿಸುತ್ತಿವೆ. ನುಣ್ಣನೆಯ ತುಪ್ಪಳಿನ ಆ ಹಕ್ಕಿಗಳೆಲ್ಲಿ, ಬರಸಿಡಿಲಿನಂತಹ ನಿನ್ನ ಬಾಣವೆಲ್ಲಿ? ಕ್ಷತ್ರಿಯರು ತಮ್ಮ ಬಾಣಗಳಿಂದ ಆರ್ತರನ್ನು ರಕ್ಷಿಸಿ, ಅಯೋಗ್ಯರನ್ನು ಶಿಕ್ಷಿಸುವರು. ನಿರಪರಾಧಿಗಳನ್ನೇಕೆ ಪೀಡಿಸುತ್ತೀ? ಬಾಣವನ್ನು ಪ್ರಯೋಗಿಸ ಬೇಡ.

ರಾಮ—(ನಾಚಿ) ಬೇಡ, ಪಾಪ! (ಎಂದು ಆ ಬಾಣವನ್ನು ತೆಗೆದು ಬತ್ತಳಿಕೆಗೆ ಸೇರಿಸಿ) ಹಾಗಾದರೆ ಈ ವಾಯವ್ಯಾಸ್ತ್ರದಿಂದ ಆ ಮಹಾಶಿಲೆಯನ್ನು ದೂರ ಚಿಮ್ಮುತ್ತೇನೆ (ಎಂದು ಇನ್ನೊಂದು ಬಾಣವನ್ನು ಕೈಗೆತ್ತಿಕೊಳ್ಳುವನು)

ಲಕ್ಷ್ಮಣ—ಆಗಲೇ ಅದು ಗುರಿ ಮುಟ್ಟದೇ ಹೋಯಿತಲ್ಲಾ.

ರಾಮ—ನಿಜ. ಈ ಬಾಣದಲ್ಲೇನೋ ತಪ್ಪಿದೆ. (ಎಂದು ಅದನ್ನೇ ನೋಡುತ್ತ ನಿಲ್ಲುವನು)

ಭರತ—(ಮುಂದೆ ದೃಷ್ಟಿಸಿ ನೋಡಿ) ಅಣ್ಣ, ತಪ್ಪಿರುವ ಆ ಬಾಣವು ನಿನ್ನನ್ನು ಸ್ತ್ರೀಹತ್ಯಾಪಾತಕದಿಂದ ತಪ್ಪಿಸಿತು. ನೋಡು, ಆ ಬಾಣವನ್ನು ಎಲ್ಲಿಗೆ ಗುರಿಯಿಟ್ಟಿದ್ದೆಯೋ ಅಲ್ಲಿ ನೋಡು; ಐದಾರು ಜನ ಹೆಂಗಸರಿದ್ದಾರೆ.

ರಾಮ—ಆಹಾ, ನಿಜ, ಇದ್ದಾರೆ! ಅವರು ನಮ್ಮ ಅರಮನೆಯ ಚೇಟಿಯರೇ. ಮಂಥರೆಯೂ ಇರುವಳಲ್ಲಾ !

(ಅನಂತರ ಚೇಟಿಯರೂ ಮಂಥರೆಯೂ ಪ್ರವೇಶಿಸುವರು)

ಮಂಥರೆ—ಏನಿರೇ, ನಿಮ್ಮನ್ನು ಕೇಳುವರಾರೂ ಇಲ್ಲವೇನು? ಮಾಡುವ ಕೆಲಸ ಬಿಟ್ಟು ಆಡುತ್ತಿರುವಿರಾ? ಹ್ಞಂ, ಹೊರಡಿ, ಅರಮನೆಗೆ.

ಮಧುರಿಕೆ—ನಮ್ಮ ಪಾಲಿನ ಕೆಲಸವನ್ನೆಲ್ಲ ಮಾಡಿ ಮುಗಿಸಿದ್ದೇವೆ. ಅಲ್ಲಿ ನಮಗೆ ಬದಲಾಗಿ ಬೇರೆಯವರಿದ್ದಾರೆ. ನಮಗಿದು ವಿರಾಮಕಾಲ. ಕೆಲಸವಿರುವ ಕಾಲಕ್ಕೆ ಸರಿಯಾಗಿ ಅಲ್ಲಿರುತ್ತೇವೆ.

ಮಂಥರೆ—ಅರಮನೆಯಲ್ಲಿ ಯಾವ ಕಾಲಕ್ಕೆ ಏನು ಕೆಲಸ ಬರುವುದೊ, ನಿಮಗೇನು ಗೊತ್ತು? ರಾಣಿಯರಿಗಾಗಬೇಕಾದ ಕೆಲಸ ಬೇಕಾದಷ್ಟಿದೆ ಹೋಗಿ, ಹ್ಞಂ!

ಚತುರಿಕೆ—ಲೇ, ನೀನೂ ನಮ್ಮಂತೆಯೇ ಒಬ್ಬ ದಾಸಿ! ನಾವು ಹೇಗೆ ಬೇರೆ ರಾಣಿಯರ ಸೇವೆ ಮಾಡಿಕೊಂಡಿರುವೆವೊ ಹಾಗೆಯೇ, ನೀನೂ ಕೈಕೆಯ ಸೇವೆ ಮಾಡಿಕೊಂಡಿದ್ದೀಯೆ!

ಮಂಥರೆ—ನನಗೆ ಕೈಕೆಯು ಮಗಳ ಸಮಾನ. ನಾನಾಕೆಗೆ ಸೇವೆ ಮಾಡುತ್ತಿಲ್ಲ; ಸಹಾಯಮಾಡುತ್ತಿದ್ದೇನೆ. ನೀವಾದರೋ ಹುಟ್ಟುದಾಸಿಯರು—ಗೊತ್ತಿಲ್ಲವೇನು ನಿಮಗೆ ನಿಮ್ಮ ಯೋಗ್ಯತೆ?

ಚತುರಿಕೆ—ದಾಸಿಯಲ್ಲದ ನೀನು ದಾಸಿಯಂತೆ ಬೋಗಳುತ್ತಿದ್ದೀಯಲ್ಲಾ!?

ಮಂಥರೆ—ನೋಡಿರೇ, ನಾನು ಕೈಕೆಗೆ ತಾಯಿ ಸಮಾನ; ದಾಸಿಯಾದವಳು ಕೇವಲ ಸೇವೆ ಮಾಡಿಕೊಂಡಿರುತ್ತಾಳೆ; ಅವಳಲ್ಲಿ ಪ್ರೇಮವಿರುವುದಿಲ್ಲ. ಆದರೆ ತಾಯಾದವಳು ಮಗಳ ಸೇವೆಯನ್ನೂ ಮಾಡುತ್ತಾಳೆ; ಅವಳಲ್ಲಿ ಪ್ರೇಮವನ್ನೂ ಇಟ್ಟಿರುತ್ತಾಳೆ. ತಾಯಿಗಿಂತ ಪವಿತ್ರವಾದ ದೇವರಿಲ್ಲ.

ಮಧುರಿಕೆ—ನೀನು ಸೇವೆಮಾಡಿಕೊಂಡಿದ್ದೂ ಒಬ್ಬ ತಾಯೆನಿಸಿಕೊಳ್ಳುವುದಾದರೆ, ನಾವೆಲ್ಲರೂ ರಾಣಿಯರ ತಾಯಂದಿರೇ!

ಮಂಥರೆ—ನಾನು ಸು-ಸಂಸ್ಕೃತ ಭಾಷೆಯನ್ನಾಡಬಲ್ಲೆ, ತಿಳಿಯಿತೇನು?

ಚತುರಿಕೆ—ನಿನ್ನ ನುಡಿ ಸು-ಸಂಸ್ಕೃತವಾದರೂ, ನಿನ್ನ ನಡೆ ಕುಸಂಸ್ಕೃತ! ನಿನ್ನ ಅವಿನಯವೂ, ದುರಭಿಮಾನವೂ ನೀನು ದಾಸಿಯೆಂಬುದನ್ನು ಬಿರಳಟ್ಟು

ತೋರಿಸುತ್ತಿವೆ. ಸದ್ವಂಶದಲ್ಲಿ ಹುಟ್ಟಿದವರು ನಿನ್ನಂತೆ ಜಂಭ ಕೊಚ್ಚುವರೇನು ?

ಮಂಥರೆ—ಇದೋ ! ಇನ್ನು ತೊಲಗಿ ಹೋಗಿ ! ನಿಮಗೀಗ ಆಜ್ಞೆ ಮಾಡುತ್ತಿದ್ದೇನೆ.

ಎಲ್ಲರು—(ಗೊಳ್ಳೆಂದು ನಕ್ಕು) ಏನು ?! ದಾಸಿಯೂ ಆಜ್ಞೆ ಮಾಡಬಲ್ಲಳೆ!?

ಮಂಥರೆ—(ಸ್ವಗತ) ಈ ಹುಟ್ಟುತೊತ್ತುಗಳು ನನಗೆ ಅವಮಾನ ಮಾಡುತ್ತಿರುವರು. ನನಗವಮಾನವಾದರೆ ಅದು ಕೈಕೆಗೇ ಆದ ಅವಮಾನ! ಇಲ್ಲೇ ಸಮೀಪದಲ್ಲಿ ಭರತನಿರುವನು ; ಯಾವಾಗಲೂ ಇವರು ರಾಮನಲ್ಲಿಯೇ ಅನುರಕ್ತರಾಗಿ ಭರತನಿಗೆ ಅನ್ಯಾಯ ಮಾಡುವರು. ಮರೆಯಲ್ಲಿದ್ದು ನೋಡುತ್ತೇನೆ. (ಪ್ರಕಾಶ) ತಾಳಿ, ಹೋಗಿ ರಾಣಿಯರಿಗೆ ನಿಮ್ಮ ಅವಿನಯವನ್ನು ತಿಳಿಸುತ್ತೇನೆ. (ಎಂದು ನಿಷ್ಕ್ರಮಿಸುವಳು)

ಚತುರಿಕೆ—ಹೋದಳಲ್ಲಾ, ರೂಪಕ್ಕನುರೂಪವಾದ ಕುಟಿಲ ಸ್ವಭಾವದ ಮಂಥರೆ ! ನೋಡಲು ಕುರೂಪಿಯಾದರೂ ಯಾರನ್ನೂ ಗಣನೆಗೆ ತಾರಳು. ಸುರೂಪಿಯಾಗಿದ್ದರಿನ್ನೇನು ಮಾಡುತ್ತಿದ್ದಳೋ ! ಮಧುರಿಕೆ, ಗೌರೀಮಂಟಪವನ್ನಲಂಕರಿಸಲು ಆಲ ಮತ್ತು ಅರಳಿಯ ತಳಿರನ್ನು ಕೊಯ್ಯಲೆಂದು ನಾವಿಲ್ಲಿಗೆ ಬಂದೆವು. ನಾವಿನ್ನೂ ಅರಮನೆಗೆ ಹಿಂತಿರುಗಿ ಹೋಗಲು ಬಹಳ ದೂರವಿದೆ ; ಜಾಗ್ರತೆ ತಳಿರನ್ನು ಕೊಯ್ಯಿರಿ.

ಪುಷ್ಪಲತೆ—(ಮೇಲೆ ನೋಡಿ) ಇದೇನು ? ಈ ಅರಳಿಯ ಮರದ ಎಲೆಗಳೆಲ್ಲ ಛಿದ್ರಛಿದ್ರವಾಗಿವೆ ! ಯಾಕಿರಬಹುದು ? (ಎಲ್ಲರೂ ಆಶ್ಚರ್ಯದಿಂದ ನೋಡುವರು)

ಚತುರಿಕೆ—(ನೆಲದಕಡೆ ನೋಡಿ) ಇಲ್ಲಿ ನೋಡಿ ! ಯಾರವೋ ಹೆಜ್ಜೆಯ ಗುರುತುಗಳೂ ಇವೆ. (ನಿಟ್ಟಿಸಿ) ಮನುಷ್ಯರ ಹೆಜ್ಜೆಯ ಗುರುತುಗಳಷ್ಟೇ ಅಲ್ಲ, ಇದೋ ಕುದುರೆಯ ಗೊರಸಿನ, ರಥಚಕ್ರದ ಜಾಡಿನ ಗುರುತಿದೆ.

ಮಧುರಿಕೆ—ರಥದಲ್ಲಿ ಕುಮಾರರಿಲ್ಲಿಗೆ ಬಂದಿದ್ದರೆಂದು ಊಹಿಸುತ್ತೇನೆ.

ಚತುರಿಕೆ—ಇಲ್ಲಿಗೆ ರಥ ಬಂದ ಗುರುತಿಲ್ಲ, ಆದರೆ ಹೋದ ಗುರುತು ಮಾತ್ರ ಕಾಣುತ್ತದೆ.

ಮಧುರಿಕೆ—(ಭಯದಿಂದ) ಅಬ್ಬ ! ಇಲ್ಲಿಗೆ ದೆವ್ವವೇನಾದರೂ ಬಂದಿತ್ತೊ ? ಬನ್ನಿ, ಓಡಿ ಹೋಗೋಣ ! ನಿಷ್ಕ್ರಮಿಸುವರು)

ಭರತ—ಚೀಟೆಯುರೇಕೋ ಭಯದಿಂದ ಓಡುತ್ತಿದಾರೆ. ಅಲ್ಲೇನೋ ಭಯಂಕರವಾದುದಿರಬೇಕು.

ಶತ್ರುಘ್ನ—ಅಲ್ಲೇ ಅಲ್ಲವೆ, ಅಣ್ಣನ ಬಾಣ ಮುರಿದು ಬಿದ್ದುದು!

ರಾಮ—ಹಾಗಾದರೆ, ಅಲ್ಲಿ ಯಾರಾದರೂ ಅದೃಶ್ಯವಾಗಿದ್ದು ನಮಗೆ ಪ್ರತೀಕಾರ ಮಾಡುತ್ತಿರುವರೋ? ಯೋಗಪ್ರಭಾವದಿಂದಲೂ ಮಾಯಾ ಪ್ರಭಾವದಿಂದಲೂ ಅದೃಶ್ಯರಾಗಬಹುದೆಂದು ಕೇಳಿದ್ದೇನೆ. ಆಗಲಿ; ಭಾವಗಾಮಿಯಾದ ನನ್ನ ಅಸ್ತ್ರವು ಅದೃಶ್ಯವಾಗಿರುವುದನ್ನೂ ಭೇದಿಸ ಬಲ್ಲುದು. ಆದರಿಂದಲೇ ನನ್ನ ಅಸ್ತ್ರಕೌಶಲ್ಯವನ್ನು ತೋರುತ್ತೇನೆ—ಆದರೆ ಆ ಅದೃಶ್ಯವಾಗಿರುವುದನ್ನು ಕೊಲ್ಲುವುದಿಲ್ಲ—ನೋಡಿ! (ಎಂದು ಬಾಣವನ್ನು ಬಿಲ್ಲಿಗೇರಿಸಿ ಗುರಿಯಿಡುತ್ತಾನೆ)

(ಅನಂತರ ವಸಿಷ್ಠರು ದೂರದಲ್ಲಿ ಪ್ರವೇಶಿಸುವರು)

ಭರತ—(ಗುರಿಯಕಡೆ ನೋಡಿ) ಅಣ್ಣ, ನಿಲ್ಲು ಬಾಣ ಬಿಡಬೇಡ. ಪೂಜ್ಯ ವಸಿಷ್ಠರು ನಿನ್ನ ಬಾಣಕ್ಕೆ ಲಕ್ಷ್ಯವಾದರು!

ರಾಮ—(ಬಾಣವನ್ನು ಬತ್ತಳಿಕೆಗೆ ಸೇರಿಸಿ, ಬಿಲ್ಲನ್ನು ಹೆಗಲಿಗೇರಿಸಿ) ಶ್ರೀಗುರುವಿಗೆ ನಮಸ್ಕಾರ (ಎಂದು ಬಳಿ ಬಂದ ವಸಿಷ್ಠರ ಪಾದಕ್ಕೆ ಬೀಳುವನು; ಹಾಗೆಯೇ ಎಲ್ಲರೂ ನಮಸ್ಕರಿಸಿ ನಿಲ್ಲುವರು)

ವಸಿಷ್ಠ—ನನಗೆ ಗುರಿಯಿಟ್ಟುಬಿಟ್ಟ ಬಾಣವು ಬಿಟ್ಟವನನ್ನೇ ಮರಳಿ ಮರು ಮೊನೆಗೊಂಡೀತು. ಸದ್ಯಕ್ಕೆ ನಿಮಗೆ ಅಪಾಯವೇನೂ ಆಗಲಿಲ್ಲವಲ್ಲ!?

ರಾಮ—ಮಂತ್ರದ್ರಷ್ಟಾರರೂ, ಮಹರ್ಷಿಗಳೂ ಆದ ನೀವು ನಮಗೆ ಗುರುಗಳಾಗಿ, ನಮ್ಮ ಮೇಲೆ ಕೃಪೆಯಿಟ್ಟಿರಲು, ನಮಗೆ ಅಪಾಯವೆನ್ನುವುದು ಹೇಗಾದೀತು ?!

ಭರತ—ಗುರುವರ್ಯ, ನಮಗಾವ ಶುಭವನ್ನು ಕೋರಿ ನೀವೀಗ ಇಲ್ಲಿಗೆ ಬಂದಿರಿ?

ವಸಿಷ್ಠ—ನಾನೂ ವನವಿಹಾರಕ್ಕೆಂದು ಹೊರಟು, ಹೀಗೇ ಬಂದೆ. ದಾರಿಯಲ್ಲಿ ಯಾರದೋ ಕಮಂಡಲಿದ್ದುದನ್ನು ಕಂಡು, ಅಲ್ಲೇ ನಿಂತೆ. ಆಮೇಲೆ ಗೊತ್ತಾಯಿತು, ಅದು ವಿಶ್ವಾಮಿತ್ರರದೆಂದು.

ರಾಮ—ಏನು! ವಿಶ್ವಾಮಿತ್ರರಲ್ಲಿರುವರೇನು?

ವಸಿಷ್ಠ—ಇಲ್ಲ. ಅವರು ರಾವಣನ ಬೆನ್ನುಹತ್ತಿ ಹೋದರು. ನಾಳೆ ದಶರಥನ

ಬಳಿಗೆ ಬಂದು ಏನನ್ನೋ ಯಾಚಿಸಬೇಕೆಂದಿರುವರಂತೆ; ನನಗೆ ಅವರೇ ಹೇಳಿದರು.

ರಾಮು—ಹಾಗಾದರೆ ನಾಳೆ ವಿಶ್ವಾಮಿತ್ರರನ್ನು ದರ್ಶನ ಮಾಡಿ ನಾವು ಮತ್ತಷ್ಟು ಧನ್ಯರಾಗುವೆವು. ಆದರೆ ಆ ಮಹನೀಯರಿಷ್ಟು ಹತ್ತಿರ ಬಂದು, ಇಂದೇ ನಮನ್ನಾಶೀರ್ವದಿಸದೇ ಹೋದರಲ್ಲಾ! ರಾವಣನೇಕೆ ಬಂದಿದ್ದನೋ? ಅವನು ಮಹಾಬಲಶಾಲಿಯೆಂದು ಕೇಳಿದ್ದೇನೆ. ಸುರಾಸುರರನ್ನೂ ಸೋಲಿಸಿದ ಸಮರ್ಥನವನು! ಸರ್ವವಿದ್ಯಾ ಪಾರಂಗತ; ಆದರೆ ಕೇವಲ ಅಧರ್ಮಕ್ಕೆ ಬೆಂಬಲಿಗ!

ವಸಿಷ್ಠ—ನಿಮ್ಮ ಸಂಬಂಧವಾಗಿ ತಿಳಿಯಬೇಕಾದುದನ್ನು ತಿಳಿದು, ರಾವಣನು ಬಂದ ದಾರಿ ಹಿಡಿದಿರಬಹುದು. ಆಗ ವಿಶ್ವಾಮಿತ್ರರು ಆ ಅಯೋಗ್ಯನೆಲ್ಲಿಯಾದರೂ ಮಾರ್ಗಮಧ್ಯದಲ್ಲಿ ದ್ರೋಹಮಾಡಿಯಾನೆಂದು ತಮ್ಮ ತಪೋವನದವರೆಗೆ ಅವನ ಮೇಲೆ ಕಣ್ಣಿಟ್ಟು ಹಿಂದೆಯೇ ಹೋಗಿದ್ದಾರೆ.

ರಾಮು—ಹಾಗಾದರೆ ನಾಳೆ ನಮಗೆ ಪೂಜ್ಯ ವಿಶ್ವಾಮಿತ್ರ ಮಹರ್ಷಿಗಳ ದರ್ಶನ ಸಿಗುವುದು!

ವಸಿಷ್ಠ—ಆ ಮಹನೀಯನು ತನ್ನ ಅಪಾರ ತಪಃಪ್ರಭಾವದಿಂದ ತಾನು ಬ್ರಹ್ಮರ್ಷಿಯೆನಿಸಿಕೊಂಡುದರ ಜೊತೆಗೆ, ತನ್ನ ತಂದೆಗೂ, ತಾತನಿಗೂ ಋಷಿತ್ವವನ್ನೂ, ಬ್ರಹ್ಮತ್ವವನ್ನೂ ಸಂಪಾದಿಸಿಕೊಟ್ಟನು. ವತ್ಸ ರಾಮು, ನೀನೂ ನಿನ್ನ ತಮ್ಮಂದಿರೂ ಆ ಪೂಜ್ಯನಿಗೆ ನಾಳೆ ಪಾದಸ್ಪರ್ಶ ಪುರಸ್ಸರವಾಗಿ ನಮಸ್ಕರಿಸಿ ನನಗೆ ಸಂತೋಷವನ್ನುಂಟುಮಾಡಬೇಕು.

ರಾಮು—ಗುರುಗಳ ಅಪ್ಪಣೆಯಂತಾಗಲಿ.

(ಎಲ್ಲರೂ ನಿಷ್ಕ್ರಮಿಸುವರು)

(ಮಂಥರೆಯು ಪ್ರವೇಶಿಸುವಳು)

ಮಂಥರೆ—ಎಲ್ಲವನ್ನೂ ನೋಡಿದ್ದೂ, ಕೇಳಿದ್ದೂ ಆಯಿತು. ಆ ಕಪಟ ಪಂಡಿತನಾದ ವಸಿಷ್ಠನು ಸದಾ ರಾಮುನೊಡನೆಯೇ ವಿಶ್ವಾಸದಿಂದ ಮಾತನಾಡುತ್ತಾನೆ. ಭರತನನ್ನು ಸ್ವಲ್ಪವಾದರೂ ಗಣನೆಗೆ ತರುವುದಿಲ್ಲ. ಆ ಹಾಳು ಪರಿಜನರೂ ರಾಮುನಲ್ಲೇ ಅನುರಕ್ತರಾಗಿದ್ದಾರೆ. ರಾವಣನು ಇಲ್ಲಿಗೆ ಬಂದಿದ್ದನಂತೆ. ಅವನ ಕಾರ್ಯಗಳಿಂದ ಆತನು ಅನಾರ್ಯನೆಂಬುದು ಸ್ಪಷ್ಟ. ಅವನು

ಅಪ್ರತಿರಥನೆಂದೂ ಜನರೆನ್ನುವರು. ಆ ಮುದಿ ಮಹಾರಾಜನು ರಾಮನಿಗೆ ರಾಜ್ಯವನ್ನು ಕೊಡುವನೆಂಬ ಸುದ್ದಿ ಹಬ್ಬಿದೆ. ಒಂದು ಪಕ್ಷ ರಾಮನಿಗೂ ರಾವಣನಿಗೂ ವಿರೋಧವು ಬೆಳೆದರೆ, ಭರತನಿಗೇ ರಾಜ್ಯಾಭಿಷೇಕವು ನಿಶ್ಚಯ. ನನ್ನ ಒಡತಿಯಾದ ಕೈಕೆಯೂ ತನ್ನ ಋಜುಬುದ್ಧಿಯಿಂದ ರಾಮನನ್ನೇ ತನ್ನ ಮಗನಿಗಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದಾಳೆ. ಇರಲಿ, ಭರತನಿಗೆ ರಾಜ್ಯ ಸಿಗುವಂತೆ ಮಾಡದೇ ಹೋದರೆ, ನಾನು ಮಂಥರೆಯೇ ಅಲ್ಲ! ಅನಾರ್ಯರನ್ನೂ, ಅಯೋಗ್ಯರನ್ನೂ, ಅಸುರರನ್ನೂ ರಾಮನ ಮೇಲೆ ಮತ್ತು ದಶರಥಮಹಾರಾಜನ ಮೇಲೆ ಎತ್ತಿಕಟ್ಟಿ, ಭರತನು ಮಹಾರಾಜನಾಗುವಂತೆ ಮಾಡುತ್ತೇನೆ! ಆ ವಸಿಷ್ಠ, ಸುಮಂತ್ರ ಮುಂತಾದ ಮುದಿಗೂಬೆಗಳೇನು ಮಾಡುತ್ತವೋ ನೋಡಿಯೇ ಬಿಡುತ್ತೇನೆ! (ನಿಷ್ಕ್ರಮಿಸುವಳು)

(ಆಮೇಲೆ ಆ ಇಬ್ಬರು ಗಂಧರ್ವರು ಪ್ರವೇಶಿಸುವರು)

ಚಿತ್ರಕೇತು—ಅಸಹಾಯಶೂರನಾದ ರಾಮನನ್ನು ರಕ್ಷಿಸಲು ನಾವೆಷ್ಟರವರು?

ಚಿತ್ರಪದ—'ಶ್ರೀರಾಮ'ನೆನ್ನುವ ಹೆಸರೂ ಇಡೀ ಜೀವಲೋಕಕ್ಕೆ ಕಟ್ಟಿದ ರಕ್ಷೆ. ಆ ಮಹನೀಯನಿಂದಲೇ ಲೋಕಕಂಟಕರಾವಣನ ಹನನವಾಗಿ ಜಗತ್ಕಲ್ಯಾಣವಾಗುವುದು. (ಎಂದು ನಿಷ್ಕ್ರಮಿಸುವರು)

ಐದನೇ ದೃಶ್ಯ

(ಆಸನಸ್ಥನಾದ ವಿಶ್ವಾಮಿತ್ರನ ಪ್ರವೇಶ)

ವಿಶ್ವಾಮಿತ್ರ—ಯಜ್ಞರಕ್ಷೆಯ ನೆಪ ಒಡ್ಡಿ ರಾಮನನ್ನು ಕಳಿಸಿಕೊಡೆಂದು ದಶರಥನನ್ನು ಬೇಡುತ್ತೇನೆ; ರಾಮನಿಗೆ ಬೋಧಿಸಿದ ನನ್ನ ಅಸ್ತ್ರವಿದ್ಯೆಯು ಸತ್ಪಾತ್ರಕ್ಕೆ ಸೇರಿದಂತಾಗುವುದು.

(ಸುಮಂತ್ರನ ಪ್ರವೇಶ)

ಸುಮಂತ್ರ—ಪೂಜ್ಯರೇ ನಮಸ್ಕಾರ.

ವಿಶ್ವಾಮಿತ್ರ—ಯಶಸ್ವಿಯಾಗು.

ಸುಮಂತ್ರ – ಪೂಜ್ಯರೇ, ಆಶೀರ್ವಾದದಿಂದ ಕೃತಕೃತ್ಯರಾಗಲಿಚ್ಛಿಸಿ ಮಹಾರಾಜರಿತ್ತಲೇ ಬರುತ್ತಿರುವರು.

ವಿಶ್ವಾಮಿತ್ರ – ಒಳ್ಳೆಯದು.

(ಮಹಾರಾಜನೂ, ವಸಿಷ್ಠನೂ, ಕುಮಾರರೂ, ವಿದೂಷಕನೂ ಪ್ರವೇಶಿಸುವರು)

ದಶರಥ—ಸೂರ್ಯವಂಶದ ದಶರಥನು ತಪೋಧನರಾದ ವಿಶ್ವಾಮಿತ್ರರಿಗೆ ನಮಸ್ಕರಿಸುತ್ತಾನೆ.

ವಿಶ್ವಾಮಿತ್ರ—(ಎದ್ದು) ಅನಾಮಯವೇ ? ಯಶಸ್ವಿಯಾಗು.

ದಶರಥ— ಸ್ವಾಮಿ, ತಾವು ಕುಳಿತೇ ನನಗೆ ಆಶೀರ್ವಾದ ಮಾಡಬೇಕು.

ವಿಶ್ವಾಮಿತ್ರ—ನಿನ್ನ ರಾಜತ್ವದಲ್ಲಿ ದೇವತ್ವ-ಪಾಲಕತ್ವ ಎಂಬೆರಡೂ ಸದಾ ಸೇರಿವೆ. ಹಾಗಿರುವಲ್ಲಿ ಮೇಲೇಳದೆ ನಿನ್ನನ್ನು ಹೇಗೆ ಗೌರವಿಸಲಿ ?

ದಶರಥ—ನನ್ನಲ್ಲೇನಾದರೂ ಸ್ವಲ್ಪ ಸದ್ಗುಣವಿದ್ದರೆ ಅದಕ್ಕೆ ಕಾರಣ ನೀವೇ. ಮಂದಮತಿಯಾದ ನಾನೆಲ್ಲಿ, ಆಗಮುತಪಶ್ಶೌರ್ಯವುಳ್ಳ ತಮ್ಮಂತಹವರೆಲ್ಲಿ? ಬಂಧನಗಳನ್ನು ಕಳಚಿ ಅಂತರಂಗವನ್ನು ನಿರ್ಮಲಗೊಳಿಸಿಕೊಂಡಿರುವ ಮುನಿಗಳೆಲ್ಲರೂ ನನಗೆ ಪೂಜ್ಯರೇ. ಇಂದ್ರನಿಂದಲೂ ಪೂಜಿಸಿಕೊಳ್ಳಲು ಯೋಗ್ಯರಾದ ನಿಮ್ಮನ್ನು ನಾನು ಹೇಗೆ ಪೂಜಿಸದಿರಲಿ? ನಾನು ಬಂದೆನೆಂದು ನೀವೇ ಎದ್ದರೆ, ನಾನು ನಿಮ್ಮನ್ನು ಗೌರವಿಸುವ ಬಗೆ ಹೇಗೆ? ನೀವು ಕುಳಿತಿದ್ದರೆ ನಾವು ಏಳಿಗೆಯಾಗುತ್ತೇವೆ, ಕುಳಿತುಕೊಳ್ಳಿ.

ವಿಶ್ವಾಮಿತ್ರ—(ವಸಿಷ್ಠನ ಕಡೆ ತಿರುಗಿ) ಮಹರ್ಷಿ, ನಮಸ್ಕಾರ.

ವಸಿಷ್ಠ—ತಪಸ್ಸಿನಿಂದ ಬ್ರಹ್ಮತ್ವವನ್ನು ಸಂಪಾದಿಸಿರುವ ಮಹಾತ್ಮ, ಇದೋ ನನ್ನ ಹೃದಯಪೂರ್ವಕವಾದ ನಮಸ್ಕಾರವನ್ನು ಸ್ವೀಕರಿಸು, ಕುಳಿತುಕೋ.

ವಿಶ್ವಾಮಿತ್ರ—(ಕುಳಿತುಕೊಳ್ಳುವನು)

ಕುಮಾರರು— ಸೂರ್ಯವಂಶಜರಾದ ನಾವು ಪೂಜ್ಯರಿಗೆ ನಮಸ್ಕರಿಸುವೆವು (ಎಂದು ಕಾಲನ್ನು ಮುಟ್ಟಿ ವಿಶ್ವಾಮಿತ್ರನಿಗೆ ನಮಸ್ಕರಿಸುವರು.)

ವಿಶ್ವಾಮಿತ್ರ—ಮಕ್ಕಳೇ ನೀವು ಅಪ್ರತಿರಥರೂ, ದೀರ್ಘಾಯುಷ್ಮಂತರೂ, ಲೋಕಪ್ರೀತಿಪಾತ್ರರೂ ಆಗಿ ಬಾಳಿ. ಮಿಕ್ಕವರಿಗೂ ಮಂಗಳವಾಗಲಿ, ಎಲ್ಲರೂ ಕುಳಿತುಕೊಳ್ಳಿ (ಎಲ್ಲರೂ ಕುಳಿತುಕೊಳ್ಳುವರು)

ದಶರಥ—ನಿಮ್ಮ ತಪಃಕ್ರಿಯೆಗಳೆಲ್ಲ ನಿರ್ವಿಘ್ನವೇ ?

ವಿಶ್ವಾಮಿತ್ರ—ಅಯ್ಯ, ನೀನು ರಾಜನಾಗಿರುವಲ್ಲಿ; ಹೇಗೆ ಪೌರರೆಲ್ಲರೂ ಧರ್ಮಪರರಾಗಿರುವರೋ, ಹಾಗೆಯೇ ನಮ್ಮ ತಪೋವನದಲ್ಲಿ ಎಲ್ಲ ತಪಃ ಕ್ರಿಯೆಗಳೂ....

ವಸಿಷ್ಠ—ರಾಜನು ತನ್ನ ಕರ್ತವ್ಯವನ್ನು ತಾನು ಮಾಡುತ್ತಿರಲು, ಜನರಿಗೆ ಕಷ್ಟವೆಲ್ಲಿಯದು ? ಎಣ್ಣೆಯಿದ್ದು ಗಾಳಿ ಬೀಸದ ಮೇಲೆ, ಹಚ್ಚಿದ ಹಣತೆ ಹೇಗೆ ಆರೀತು ?

ವಿಶ್ವಾಮಿತ್ರ—ಇಂದ್ರನಿಗೆ ತನ್ನ ರಾಜ್ಯವನ್ನು ನಿಷ್ಕಂಟವಾಗಿಡಲು ಭೂಲೋಕದ ರಾಜರ ಬೆಂಬಲ ಬೇಕಾದೀತು. ಆದರೆ ಮಹರ್ಷಿಗಳು ಯಾರ ಸಹಾಯವೂ ಇಲ್ಲದೆ ತಮ್ಮ ತಪೋಮಹಿಮೆಯೊಂದರಿಂದಲೇ ತಪಃ ಕ್ರಿಯೆಗಳನ್ನು ತೂಗಿಸಿಕೊಳ್ಳಬಲ್ಲರು (ಆಲೋಚಿಸಿ, ಸ್ವಗತ) ನನ್ನ ಇಷ್ಟಕ್ಕೆ ವಿರೋಧವಾಗಿ ಮಾತನಾಡಿಬಿಟ್ಟೆನಲ್ಲ! (ಪ್ರಕಾಶ) ತಪಸ್ಸಿಗೊದಗಿರುವ ವಿಘ್ನಗಳ ವಿಘಾತಿಗಾಗಿ ನಿನ್ನನ್ನೇನಾದರೂ ಕೇಳಬೇಕೆಂದು ಬಂದಿದ್ದೇನೆ.

ದಶರಥ—ಅಪ್ಪಣೆ ಮಾಡಬೇಕು.

ವಿಶ್ವಾಮಿತ್ರ—(ವಸಿಷ್ಠರನ್ನು ಕುರಿತು) ಪೂಜ್ಯ, ಈ ಮಹಾರಾಜ ದಶರಥನ ನಾಲ್ಕು ಜನ ಮಕ್ಕಳಿಗೂ ವೇದಾದಿ ವಿದ್ಯೆಗಳು ಅಭ್ಯಾಸವಾಗಿದೆಯಲ್ಲವೆ ?

ವಸಿಷ್ಠ—ಖಂಡಿತ.

ವಿಶ್ವಾಮಿತ್ರ— ಇವರಿಗೆ ಶಾಸ್ತ್ರವನ್ನು ಕಲಿಸಿದವರು ಯಾರು? ಶಸ್ತ್ರವನ್ನು ಅಭ್ಯಾಸ ಮಾಡಿಸಿದವರು ಯಾರು ?

ವಸಿಷ್ಠ—ಶಾಸ್ತ್ರಗಳನ್ನು ನಾನು ಕಲಿಸಿದೆ.

ವಿಶ್ವಾಮಿತ್ರ—ಯಾವ ಯಾವ ಶಾಸ್ತ್ರಗಳನ್ನಿವರಿಗೆ ಕಲಿಸಿದ್ದೀರಿ ?

ವಸಿಷ್ಠ—ಮಂತ್ರದರ್ಶನವೊಂದನ್ನು ಬಿಟ್ಟು, ಮತ್ತೆಲ್ಲ ಶಾಸ್ತ್ರಗಳಲ್ಲೂ ಪಾರಂಗತರಿವರು.

ವಿಶ್ವಾಮಿತ್ರ—ಈ ಚಿಕ್ಕ ವಯಸ್ಸಿಗೇ ಇಷ್ಟು ಅಪಾರ ವಿದ್ಯಾರ್ಜನೆ !

ವಸಿಷ್ಠ—ಗುಣಾಢ್ಯವೂ ಸ್ನಿಗ್ಧವೂ ಆದ ಬತ್ತಿಯು ದೀಪದ ಶಿಖೆಯನ್ನು ಸ್ವೀಕರಿಸುವಂತೆ, ಮಣ್ಣಿನ ಮುದ್ದೆಯು ಸ್ವೀಕರಿಸದು; ಬುದ್ಧಿಗುಣ ಮತ್ತು ಸ್ನೇಹ ನಿರ್ಭರತೆಯಿಂದ ಕೂಡಿದ ಶಿಷ್ಯನು ಮಾತ್ರ ಗುರುವಿನ ವಿದ್ಯೆಯನ್ನು ಸ್ವೀಕರಿಸಲು ಸಮರ್ಥನಾದಾನು.

ವಿಶ್ವಾಮಿತ್ರ— ಅನುಭವದಿಂದಲೇ ತಿಳಿಯಬೇಕಾದ ಹಲವು ಶಾಸ್ತ್ರಗಳನ್ನು ಈ ಕುಮಾರರು ಅರಮನೆಯೊಳಗೇ ಇದ್ದು ಹೇಗೆ ಸಾಧಿಸಿಕೊಂಡರು? ಎಂದಾದರೂ ಯಾರೇ ಆಗಲಿ ಇವರನ್ನು ಪರೀಕ್ಷಿಸಿದ್ದಾರೆಯೇ?

ವಸಿಷ್ಠ— ಇವರನ್ನು ಪರೀಕ್ಷಿಸಲು ನೀವಲ್ಲದೆ ಮತ್ತೆ ಯಾರು ತಾನೇ ಸಮರ್ಥರು? (ಕುಮಾರರನ್ನು ಕುರಿತು) ಆಯುಷ್ಮಂತರೇ, ಪೂಜ್ಯ ವಿಶ್ವಾಮಿತ್ರರು ಏನು ಕೇಳುವರೋ ಅದಕ್ಕೆ ಉತ್ತರ ಕೊಡಿ.

ಕುಮಾರರು— ಗುರುಗಳ ಅಪ್ಪಣೆ.

ವಿಶ್ವಾಮಿತ್ರ— ಕುಮಾರರೇ ನಿಮಗೆ ನಿಮ್ಮ ಪೂಜ್ಯ ಗುರುಗಳೇನನ್ನು ಕಲಿಸಿದ್ದಾರೆ?

ರಾಮ— (ಎದ್ದು, ನಮಸ್ಕರಿಸಿ) ಎಲ್ಲಕ್ಕಿಂತಲೂ ಮೊದಲು, ಗುರುಗಳಲ್ಲಿ ವಿನಯವನ್ನೂ, ದೀನರಲ್ಲಿ ದಯೆಯನ್ನೂ, ಶತ್ರುವಿನಲ್ಲಿ ನಿರ್ಭಯವನ್ನೂ ಕಲಿಸಿದ್ದಾರೆ. ಆಮೇಲೆ ಚತುರ್ವೇದಗಳು, ವ್ಯಾಕರಣ, ಆರ್ಷವಾದ ಪದನಿರ್ವಚನ, ಗ್ರಹಚಾರ, ಪಾತಂಜಲಯೋಗಸೂತ್ರ, ಮನುವಿನ ವ್ಯವಹಾರಶಾಸ್ತ್ರ, ವಸಿಷ್ಠನ ರಾಜಧರ್ಮಶಾಸ್ತ್ರ, ಮೇಧಾತಿಥಿಯ ನ್ಯಾಯಶಾಸ್ತ್ರ, ಕಾಸಕೃತ್ಸ್ನ ಮೀಮಾಂಸಾಶಾಸ್ತ್ರ, ಇವೇ ಮುಂತಾದ ಶಾಸ್ತ್ರಗಳನ್ನೂ ಗಜ-ಅಶ್ವ-ರತ್ನಪರೀಕ್ಷೆ, ಶಕುನ-ಜ್ಞಾನ, ಕಾವ್ಯಕಲೆಗಳನ್ನೂ ಬೋಧಿಸಿದ್ದಾರೆ. ನನ್ನ ತಮ್ಮಂದಿರು ಈ ವಿದ್ಯಗಳನ್ನೆಲ್ಲ ಚೆನ್ನಾಗಿ ಬಲ್ಲರು; ನಾನಾದರೋ ಆ ವಿದ್ಯೆಗಳಲ್ಲಿ ಕೆಲವನ್ನು ಕೇಳಿ ಬಲ್ಲೆ.

ಭರತ— (ಸ್ವಗತ) ನಿಗರ್ವಿಯಾದ ಅಣ್ಣನದೆಷ್ಟು ಮಹಾನುಭಾವ!

ಲಕ್ಷ್ಮಣ— (ಸ್ವಗತ) ಅನಾರ್ಯರು ಇನ್ನೊಬ್ಬರ ಗುಣಗಳನ್ನು ಕಿರಿದು ಮಾಡಿ ತಮ್ಮವನ್ನು ಕೊಚ್ಚಿಕೊಳ್ಳುವರು. ಮಹಂತರು ತಮ್ಮ ಗುಣಗಳನ್ನು ಕಿರಿದು ಮಾಡಿಕೊಂಡು ಹೆರರವನ್ನು ಹೆಚ್ಚಾಗಿ ಮೆಚ್ಚುವರು.

ವಿಶ್ವಾಮಿತ್ರ— ಬಹಳ ಸಂತೋಷವಾಯಿತು. ಆಮೇಲೆ ಶಸ್ತ್ರವಿದ್ಯೆಯನ್ನು ಯಾರು ಕಲಿಸುತ್ತಿದ್ದಾರೆ?

ಶತ್ರುಘ್ನ— ಪೂಜ್ಯರೇ, ಕೃಪಾಳುವಾದ ನಮ್ಮ ತಂದೆಯವರಿಂದಲೇ ನಾವು ಶಸ್ತ್ರಾಸ್ತ್ರವಿದ್ಯೆಗಳನ್ನೆಲ್ಲ ಸಾಧಿಸಿದ್ದೇವೆ. ಆದರೆ ಈ ನಮ್ಮ ಪೂಜ್ಯ ಅಣ್ಣನು ದಿನದಿನವೂ ಅವನ್ನು ಅಭಿವೃದ್ಧಿಪಡಿಸಿಕೊಂಡು ಸಿದ್ಧಿ ಹೊಂದಿದ್ದಾನೆ.

ವಿಶ್ವಾಮಿತ್ರ— ಹಾಗಾದರೆ ಶಾಸ್ತ್ರ ಮತ್ತು ಶಸ್ತ್ರವಿದ್ಯೆಗಳಲ್ಲಿ ನಿಮಗೆ ವ್ಯವ

ಹಾರಾನುಭವ ಹೇಗಿದೆಯೆಂಬುದನ್ನು ಪ್ರಯೋಗ ಮಾಡಿ ನೋಡಿಕೊಂಡಿದ್ದೀರಾ? ಏಕೆಂದರೆ ಪ್ರಯೋಗಜ್ಞಾನವಿಲ್ಲದ ವಿದ್ಯೆ ನಿಷ್ಪ್ರಯೋಜಕ. ಮೊಸರಿನಲ್ಲಿ ತುಪ್ಪ ವಿರಬಹುದು ; ಆದರೆ ಅದನ್ನು ಕಡೆದ ಹೊರತೂ ತುಪ್ಪ ಕೈಗೆ ಬರುವುದಿಲ್ಲ.

ವಿದೂಷಕ—(ಸ್ವಗತ) ನನಗೇನೋ ಮೊಸರೇ ಚಂದ. ಮೊಸರು ತಿಂದರೆ ಅದರಲ್ಲಿರುವ ತುಪ್ಪವನ್ನೂ ತಿಂದಂತೆಯೇ ಆಯಿತಲ್ಲಾ!

ರಾಮ—ಬಾಣಗಳಿಂದ, ಚಲಿಸುವ ಎಲೆಗಳನ್ನು ಭೇದಿಸುತ್ತೇವೆ; ದೊಡ್ಡ ಅರೆಬಂಡೆಗಳನ್ನು ನುಗ್ಗುನುರಿ ಮಾಡುತ್ತೇವೆ; ಮರಗಳನ್ನು ಸುಟ್ಟು ಭಸ್ಮ ಮಾಡುತ್ತೇವೆ!

ವಿಶ್ವಾಮಿತ್ರ—ನೀವು ಮೇಧಾವಿಗಳು. ನನಗೆ ಸಂತೋಷ. ಆದರೆ ಶಸ್ತ್ರಾಭ್ಯಾಸವನ್ನು ರೂಢಿಸಿಕೊಳ್ಳುವ ಕ್ರಮವಿದಲ್ಲ. ನಿಶ್ಶಸ್ತ್ರವಾದ ಮರದೆಲೆಯನ್ನು ತರಿದನೆಂದು ಧನುರ್ಧಾರಿಯನ್ನು ಯಾರು ತಾನೇ ಮೆಚ್ಚಿಯಾರು ?

ವಿದೂಷಕ—(ಸ್ವಗತ) ನಿಜ ; ಮರದೆಲೆಯನ್ನು ತರಿದರೇನು ಬಂತು ? ಒಣ ಮರದ ಕೊಂಬೆಗಳನ್ನಾದರೂ ಮುರಿದರೆ ಅಡಿಗೆಯ ಒಲೆ ಉರಿಸುವುದಕ್ಕಾದರೂ ಬರುತ್ತದೆ.

ದಶರಥ—ಪೂಜ್ಯ ಮಹರ್ಷಿಗಳು ಅಪ್ಪಣೆ ಕೊಡಿಸಿದ್ದು ಸತ್ಯವಾದ ಮಾತು. ಆದ್ದರಿಂದಲೇ ನಾನು ಯಾವಾಗಲಾದರೂ ಕಾಡಿಗೆ ಬೇಟೆಯಾಡಲು ಹೋಗುವಾಗ ಅವರನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗುತ್ತೇನೆ.

ವಿಶ್ವಾಮಿತ್ರ—ಕಾಡಿನಲ್ಲಿರುವ ಸಿಂಹ, ಆನೆ, ಕಾಡೆಮ್ಮೆ ಮುಂತಾದ ವನ್ಯ ಮೃಗಗಳು ಮನುಷ್ಯರಿಗೇನು ಮಾಡಿಯಾವು ? ಮನುಷ್ಯರಿಗೆ ಅವಲ್ಲ ಶತ್ರುಗಳು.

ದಶರಥ—ಅವು ಗೋವುಗಳನ್ನೂ ಬೆಳೆಯನ್ನೂ ತಿಂದು ಹಾವಳಿ ಮಾಡುತ್ತವೆ.

ವಿಶ್ವಾಮಿತ್ರ—ಅವನ್ನು ದಂಡಿಸಬೇಕಾದ್ದು ಅವಶ್ಯಕವೆ. ಆದರೆ ಬಿಲ್‌ವಿದ್ಯೆಯಲ್ಲಿ ಬಲ್ಲಿದರಾದ ಶತ್ರುಗಳು ಧರ್ಮಿಷ್ಠರಾದ ಪ್ರಜೆಗಳನ್ನು ಪೀಡಿಸುವರಲ್ಲಾ, ಅವರನ್ನು ಕೊಲ್ಲುವವರು ಯಾರು ? ವನ್ಯಮೃಗಗಳು ಪೈರುಪಚ್ಚೆ ದನಕರುಗಳನ್ನು ಮಾತ್ರ ಹಾಳುಮಾಡುತ್ತವೆ. ಆದರೆ ಸತ್ಪುರುಷರ ಧರ್ಮವನ್ನೇ ಹಾಳು ಮಾಡುವ ರಾಕ್ಷಸರಿರುವರೆಂದು ನಿನಗೆ ಗೊತ್ತೇನು ? ಮಹಾರಾಜ, ನೀನು ನಿನ್ನ ಮಕ್ಕಳನ್ನು, ಬೇಟೆಯಾಡುವಾಗ, ಅರಣ್ಯಕ್ಕೆ ಕರೆದೊಯ್ಯಬಹುದು ; ಅಷ್ಟರಿಂದಲೇ ಅವರಿಗೆ ಯುದ್ಧವೆಂದರೇನೆಂದು ತಿಳಿಯುವ ಬಗೆ ಹೇಗೆ ?

ದಶರಥ—ನಾನಿರುವೆನಲ್ಲ! ಜನರಿಗೆ ತೊಂದರೆ ಕೊಡುವವರನ್ನು ಕಂಡಿದ್ದೇ ಆದರೆ ಅವರನ್ನು ಯುದ್ಧದಲ್ಲಿ ಶೀಘ್ರವಾಗಿ ಕೊಂದುಬಿಡುತ್ತೇನೆ.

ವಿಶ್ವಾಮಿತ್ರ—ಕಣ್ಣು ಮುಚ್ಚಿ ಕುಳಿತು, ಪಾಪಿಗಳು ಕಣ್ಣಿಗೆ ಕಾಣಲಿಲ್ಲವೆಂದರೆ ಹೇಗೆ ಕಂಡಾರು? ತಮ್ಮ ಪಾಪಕರ್ಮಕರ್ಮಕ್ಕಡ್ಡಿಯಾಗದಿದ್ದ ಮೇಲೆ, ದುಷ್ಟರು ಹೇಗೆ ಯುದ್ಧಕ್ಕೆ ಬಂದಾರು?

ದಶರಥ— ಹಳ್ಳಿಯ ರೈತರಾಗಲಿ, ಗೊಲ್ಲರಾಗಲಿ, ಯಾರೂ ಸನ್ನಲ್ಲಿಗೆ ಬಂದು ರಾಕ್ಷಸರ ಉಪಟಳದ ಸಂಬಂಧವಾಗಿ ದೂರು ಕೊಟ್ಟಿಲ್ಲ.

ವಿಶ್ವಾಮಿತ್ರ—ರಾಕ್ಷಸರೆನ್ನುವವರು ಹೊಟ್ಟೆಬಟ್ಟೆಗಿಲ್ಲದ ದರಿದ್ರರಲ್ಲ. ಅವರೇಕೆ ರೈತರನ್ನಾಗಲೀ ವರ್ತಕರನ್ನಾಗಲೀ ಹಿಂಸೆ ಮಾಡುವರು? ಅವರು ತಪೋವನಗಳಲ್ಲಿ ತಪಸ್ವಿಗಳು ಮಾಡುವ ಯಜ್ಞಕ್ಕೆ ವಿಘ್ನಗಳನ್ನೊಡ್ಡುತ್ತಾರೆ.

ದಶರಥ—ಇಲ್ಲ! ತಪಸ್ವಿಗಳೇ ಆಗಲಿ, ನನಗೆಂದೂ ಹಾಗೆಂದು ಹೇಳಿ, ಸಹಾಯವನ್ನು ಕೇಳಿಲ್ಲ.

ವಿಶ್ವಾಮಿತ್ರ—ತಪಸ್ವಿಗಳೆಂದೂ ತಮ್ಮ ತಪೋರಕ್ಷಣೆಗಾಗಿ ಸಹಾಯವನ್ನು ಮಾಡೆಂದು ತಾವಾಗಿಯೇ ಬಂದು ಕೇಳರು.

ದಶರಥ—ಬಂದು ಕೇಳದಿದ್ದರೆ, ನನಗೆ ತಿಳಿಯದುದರಿಂದ, ಅವರ ತಪೋವೈರಿಗಳು ಹತರಾಗುವ ಬಗೆಯಾದರೂ ಹೇಗೆ?

ವಿಶ್ವಾಮಿತ್ರ—ಯಾರೂ ಬೇಡಿಕೊಳ್ಳದಿದ್ದರೂ, ಸೂರ್ಯನು ಕತ್ತಲೊಡನೆ ಹೋರಾಡಿ ಅದನ್ನು ನಿತ್ಯವೂ ಹೋಗಲಾಡಿಸನೇ? ಜನರು ಬೀಸೆಂದು ಪ್ರಾರ್ಥಿಸದಿದ್ದರೂ, ಜಗತ್ಪ್ರಾಣಸ್ವರೂಪಿಯಾದ ವಾಯುದೇವನು ಬೀಸನೇ? ಅಪ್ರಾರ್ಥಿತನಾದರೂ ಆದಿಶೇಷನು ಈ ಭೂಮಿಯನ್ನು ಸಂತತವೂ ತಲೆಯ ಮೇಲಿಟ್ಟು ನಿತ್ತರಿಸುತ್ತಿಲ್ಲವೆ? ನಿನ್ನಂತಹ ರಾಜರು, ಪಾಪಕ್ಕೆ ಪ್ರತೀಕಾರವನ್ನು, ಯಾರೂ ಕೇಳದಿದ್ದರೂ, ನೀನಾಗಿ ನೀನೇ ಮಾಡುವುದು ಧರ್ಮ. ಇನ್ನೊಂದು ಮಾತಿದೆ, ಹೇಳುತ್ತೇನೆ; ಮರೆಯಬೇಡ: ನಾನು ಕ್ಷತ್ರಿಯನಾಗಿದ್ದಾಗ ಈ ಪೂಜ್ಯ ವಸಿಷ್ಠ-ಮಹರ್ಷಿಗೆ ವಿಪರೀತ ತೊಂದರೆ ಕೊಟ್ಟೆನೆಂಬುದು ಪ್ರಸಿದ್ಧವೇ ಆಗಿದೆ. ಆದರೂ ಈ ಮಹನೀಯನು ನಿನ್ನಂತಹ ಅಪ್ರತಿರಥರನ್ನಾಗಲೀ, ಕ್ಷತ್ರಿಯರನ್ನಾಗಲೀ ತನಗೆ ಸಹಾಯ ಮಾಡಿರೆಂದು ಕೇಳಲಿಲ್ಲ.

ದಶರಥ—ಋಷಿಗಳು ಶಾಪ ಕೊಟ್ಟು ದುಷ್ಟರನ್ನೇಕೆ ನಿರ್ನಾಮ ಮಾಡರೋ!

ವಿಶ್ವಾಮಿತ್ರ—ಶಾಪಕೊಟ್ಟರೆ ತಪಶ್ಶಕ್ತಿ ಕ್ಷೀಣಿಸುತ್ತದೆ. ಆದುದರಿಂದಲೇ ಋಷಿಗಳು ಸಾಮಾನ್ಯವಾಗಿ ಶಪಿಸರು. ಶಾಪ ಕೊಟ್ಟು ದುಷ್ಟರನ್ನೆಲ್ಲ ಋಷಿಗಳೇ ನಿರ್ನಾಮ ಮಾಡಿದರೆ, ನಿನ್ನ ಕೀರ್ತಿಯಿಂದ ಪ್ರಯೋಜನವೇನು? ನೀನು 'ಕ್ಷತ್ರಿಯಶ್ರೇಷ್ಠ' ಮತ್ತು 'ಶೂರ' ಎಂಬ ಪದಗಳಿಗರ್ಥವಾದರೂ ಏನು?

ದಶರಥ—ಪೂಜ್ಯರೇ, ನಿಜ. ನಾನು ನಾಚಿಕೆಗೀಡಾದ ಮಾತನ್ನಾಡಿದೆ; ಅಪ್ಪಣೆ ಕೊಡಿಸಿ, ಈಗ ನನ್ನಿಂದ ತಮಗೇನಾಗಬೇಕಾಗಿದೆ?

ವಿಶ್ವಾಮಿತ್ರ—ನಮ್ಮಿಬ್ಬರಿಗೂ ಪ್ರಯೋಜನವಾಗುವ ಒಂದು ಮಾತನ್ನು ಹೇಳುತ್ತೇನೆ.

ದಶರಥ—ಅದೇನು? ಶೀಘ್ರವಾಗಿ ಅಪ್ಪಣೆ ಕೊಡಿಸಿ.

ವಿಶ್ವಾಮಿತ್ರ—ಗುಣದಲ್ಲಿ, ಪೌರುಷದಲ್ಲಿ, ವಯಸ್ಸಿನಲ್ಲಿ ಜ್ಯೇಷ್ಠನಾದ ರಾಮ ಕುಮಾರನಿಗೆ ದಿವ್ಯಾಸ್ತ್ರಗಳನ್ನು ಯಾರಾದರೂ ಕಲಿಸಲೇ ಬೇಕು.

ದಶರಥ—ಎಷ್ಟು ದಿವ್ಯಾಸ್ತ್ರಗಳನ್ನು ನಾನು ಸಿದ್ಧಿಸಿಕೊಂಡಿದ್ದೇನೋ ಅವಷ್ಟನ್ನೂ ಕುಮಾರರಿಗೆ ಕೊಟ್ಟಿದ್ದೇನೆ. ರಾಮನು ಅವನ್ನೆಲ್ಲ ಚೆನ್ನಾಗಿ ಪ್ರಯೋಗಿಸುತ್ತಾನೆ. ನಾನು ಎರಡು ಮಹಾಸ್ತ್ರಗಳ ಹೆಸರು ಕೇಳಿದ್ದೇನೆ, ಅವು ನನಗೆ ಗೊತ್ತಿಲ್ಲ.

ವಿಶ್ವಾಮಿತ್ರ—ಅವೇನು ಮಹಾ ಅಮೋಘಾಸ್ತ್ರಗಳೋ?

ದಶರಥ—ಹೌದು! ಅವು ಜೃಂಭಕಾಸ್ತ್ರ ಮತ್ತು ಬ್ರಹ್ಮಾಸ್ತ್ರ!

ವಿಶ್ವಾಮಿತ್ರ—ಬ್ರಹ್ಮಾಸ್ತ್ರವನ್ನು ಬಲ್ಲ ಪೂಜ್ಯ ವಸಿಷ್ಠರಿಲ್ಲೇ ಇದ್ದಾರೆ.

ವಸಿಷ್ಠ—ಆ ಬ್ರಹ್ಮಾಸ್ತ್ರದಿಂದ ಎಲ್ಲರ ಅಸ್ತ್ರಗಳನ್ನೂ ಭೇಧಿಸಬಲ್ಲೆ, ಆದರೆ ಅದನ್ನು ಯಾರ ಮೇಲೂ ಪ್ರಯೋಗಿಸಲರಿಯೆ.

ವಿಶ್ವಾಮಿತ್ರ—ಬ್ರಹ್ಮತ್ವವನ್ನು ಪಡೆದು ನಾನವೆರಡನ್ನೂ ಬಲ್ಲೆ.

ದಶರಥ—ಪೂಜ್ಯರಾದ ತಾವು ಜೃಂಭಕಾಸ್ತ್ರವನ್ನೂ ಬಲ್ಲಿರೇನು?

ವಿಶ್ವಾಮಿತ್ರ—ಬಲ್ಲೆ.

ದಶರಥ—ಹಾಗಾದರೆ, ಕೃಪೆಯಿಟ್ಟು ಇಲ್ಲೇ ಸ್ವಲ್ಪ ಕಾಲವಿದ್ದು ನನ್ನ ಕುಮಾರರಿಗೆ ಆ ದಿವ್ಯಾಸ್ತ್ರಗಳನ್ನು ಅಭ್ಯಾಸ ಮಾಡಿಸಿ.

ವಿಶ್ವಾಮಿತ್ರ — ಇದು ಕ್ರಮವಿರುದ್ಧ!

ದಶರಥ—ಹೇಗೆ?

ವಿಶ್ವಾಮಿತ್ರ—ಬೇಡುವವನು ಕೊಡುವವನ ಮನೆಗೆ ಹೋಗಬೇಕೇ ಹೊರತು—ಕೊಡುವವನು ಬೇಡುವವನ ಮನೆಗಲ್ಲ! ಬಾಯಾರಿದವನು ಬಾವಿಗೆ ಹೋಗಬೇಕು; ಬಾವಿಯು ಬಾಯಾರಿದವನ ಬಳಿಗೆಂದಿಗೂ ಬಾರದು.

ದಶರಥ—ನನ್ನ ಮನೆ ನಿಮ್ಮದೇ ಅಲ್ಲವೆ? ನಿಮ್ಮನ್ನು ನಮ್ಮ ಸಂಪದ್ಭರಿತವಾದ ಅರಮನೆಯಲ್ಲೇ ಸ್ವಲ್ಪಕಾಲ ತಡೆದು ನಿಲ್ಲಿಸಿಕೊಳ್ಳೋಣವೆಂಬ ಆಶೆ.

ವಿಶ್ವಾಮಿತ್ರ—ರಾಜಸಂಪತ್ತು ತಪಸ್ವಿಗಳ ಮನಸ್ಸನ್ನು ತಡೆದು ನಿಲ್ಲಿಸಲಾರದು. ಅಯ್ಯ, ನಾನು ಕೇಳಿದ್ದು ವ್ಯರ್ಥವಾಗುವುದಿಲ್ಲವೆಂದು ಮಾತು ಕೊಟ್ಟರೆ—ನಿನ್ನಲ್ಲೊಂದು ದಾನವನ್ನು ಬೇಡಬೇಕೆಂದಿದ್ದೇನೆ.

ದಶರಥ—ನನ್ನದೆನ್ನುವ ಚರಾಚರವಸ್ತುಗಳಲ್ಲಿ ಯಾವುದನ್ನಾದರೂ ಕೇಳಿ—ಕೊಡುತ್ತೇನೆ.

ವಿಶ್ವಾಮಿತ್ರ—ರಾಮುನನ್ನು ಕೊಡು!

ದಶರಥ—ಯಾಕೆ?

ವಿಶ್ವಾಮಿತ್ರ—ಕೊಡುವವನು ದಾನವೇಕೆಂದು ಕೇಳಬಾರದು.

ದಶರಥ—ಈ ಮುದ್ದು ರಾಮನು ಬೇರಲ್ಲ; ಅವನು ನನ್ನ ಆತ್ಮವೇ ಆಗಿದ್ದಾನೆ.

ವಿಶ್ವಾಮಿತ್ರ—ಮಹಂತರು, ಕೇಳಿದವರಿಗೆ ಆತ್ಮವನ್ನಾದರೂ ಕೊಡದಿರುವರೆ?

ದಶರಥ—ರಾಮನೊಡನೆ ನನ್ನನ್ನೂ ಅರಣ್ಯಕ್ಕೆ ಕರೆದೊಯ್ಯಿರಿ.

ವಿಶ್ವಾಮಿತ್ರ – ಇದು ಕೊಡುವುದಿಲ್ಲವೆಂಬ ಮಾತಿನ ಒಂದು ವರಸೆ!

ದಶರಥ—ನಿಷ್ಕಾರಣವಾಗಿ ನೀವು ರಾಮನನ್ನು ಕಾಡಿಗೆ ಕರೆದುಕೊಂಡು ಹೋದರೆ ನಾನೀ ಮುಪ್ಪಿನಲ್ಲಿ ಹೇಗೆ ಜೀವಿಸಿದ್ದೇನು?

ವಿಶ್ವಾಮಿತ್ರ—'ನಿಷ್ಕಾರಣವಾಗಿ' ಅನ್ನಬೇಡ.

ದಶರಥ—ಹಾಗಾದರೆ ಪೂಜ್ಯರು ಏಕೆಂದು ಅಪ್ಪಣೆ ಕೊಡಬೇಕು.

ವಿಶ್ವಾಮಿತ್ರ—ನಾನು ಹತ್ತು ದಿನಗಳಲ್ಲಿ ಮುಗಿಯುವ ಯಜ್ಞವೊಂದನ್ನು ಮಾಡಬೇಕೆಂದಿದ್ದೇನೆ.

ದಶರಥ—ಯಾವಾಗ?

ವಿಶ್ವಾಮಿತ್ರ—ಯಜ್ಞವನ್ನೋ, ದಾನವನ್ನೋ, ತಪಸ್ಸನ್ನೋ ಸರ್ವರೂ ಸರ್ವಕಾಲದಲ್ಲಿಯೂ ಮಾಡುತ್ತಿರಬೇಕು. ಮಾಡಲಾರದವರು ನಾಳೆ-ನಾಡಿದೆನ್ನುವರು.

ಶಸ್ತ್ರಜ್ಞನ ಸಹಾಯವಿಲ್ಲದೆ ಆ ಯಜ್ಞವನ್ನು ಮಾಡಿ ಮುಗಿಸಲಾರೆ. ನನ್ನ ಯಜ್ಞವನ್ನು ನಿರ್ವಿಘ್ನವಮಾಡುವವನು ಅಸಹಾಯಶೂರನಾದ ರಾಮನೊಬ್ಬನೇ!

ದಶರಥ—ಯಜ್ಞವಿಘ್ನಕಾರಿಗಳು ಯಾರು?

ವಿಶ್ವಾಮಿತ್ರ—ಸುಬಾಹು-ಮಾರೀಚಾದಿ ರಾಕ್ಷಸರು.

ದಶರಥ—ಹಾಗಾದರೆ ನಾನು ಮಹಾಸೈನ್ಯ ಸಮೇತನಾಗಿ ನಿಮ್ಮ ಹಿಂದೆ ಬಂದು, ಅವರನ್ನು ಕೊಂದು ಹಾಕುತ್ತೇನೆ.

ವಿಶ್ವಾಮಿತ್ರ—ರಾಮನೊಬ್ಬನಿಂದಲೇ ಅದು ಸಾಧ್ಯ.

ದಶರಥ—ರಾಕ್ಷಸರು ನಿರ್ದಯಮನಸ್ಕರು; ರಾಮನಾದರೋ ಮೃದು ಸ್ವಭಾವದವನು. ಹೀಗಿರುವಲ್ಲಿ ಚಿಕ್ಕವಯಸ್ಸಿನ ಎಳೆಯ ಬಾಲಕನು ನಿಮ್ಮ ಅಧ್ವರರಕ್ಷೆಯನ್ನು ಹೇಗೆ ಮಾಡಿಯಾನು? ಕಮಲದ ಹೂವಿಂದ ಕಾಡುಗಿಚ್ಚನ್ನು ನಂದಿಸಲೆಂದಾದರೂ ಆದೀತೆ?

ವಿಶ್ವಾಮಿತ್ರ—ಎಳೆಯ ಸೂರ್ಯನಾದರೂ ಮೂರು ಲೋಕದ ಗಾಢಾಂಧಕಾರವನ್ನೂ ಕಳೆಯ ಬಲ್ಲ. ಹಾಗೆಯೇ ರಾಮನು ರಾಕ್ಷಸರೆನ್ನುವ ಕಾಡಿಗೆ ಕಿಚ್ಚಿನಂತಿದಾನೆ. ಸಮರ್ಥರಿಗೆ ವಯಸ್ಸಿನ ಲೆಕ್ಕವಿಲ್ಲ. ನಾನು ಹೇಳಿದ ಎರಡು ದಿವ್ಯಾಸ್ತ್ರಗಳನ್ನೂ ರಾಮನಿಗೆ ನನ್ನ ತಪೋವನದಲ್ಲಿ ಕೊಡುತ್ತೇನೆ. ಯಜ್ಞ-ಸಮಯದಲ್ಲಿ ಪ್ರೀತಿಯಿಂದ ಕೊಟ್ಟುದಕ್ಕೆ ಬಹಳ ಬೆಲೆಯಿದೆ.

ದಶರಥ—(ವಸಿಷ್ಠರನ್ನು ಕುರಿತು) ಪೂಜ್ಯರೇ, ನಾನು ವಿಶ್ವಾಮಿತ್ರರಿಗೆ ಕೊಟ್ಟಮಾತನ್ನು ಈಗ ಹೇಗೆ ನೆರವೇರಿಸಿಕೊಡಲಿ? ಒಂದು ಕಡೆ ಮಗನನ್ನೂ ಕಳೆದುಕೊಳ್ಳಲಾರೆ, ಮತ್ತೊಂದು ಕಡೆ ಕೊಟ್ಟಮಾತನ್ನೂ ಕಳೆದುಕೊಳ್ಳಲಾರೆ!

ವಿಶ್ವಾಮಿತ್ರ— ಅಯ್ಯ, ಮಹಾರಾಜ, ಕೊಟ್ಟಮಾತಿಗೆ ತಪ್ಪುವುದು ಮಹಾ ಪಾಪ; ನನ್ನ ಹಿಂದೆ ಕಳುಹಿಸುವುದರಿಂದ ನೀನು ನಿನ್ನ ಮಗನನ್ನು ಹೇಗೆ ಕಳೆದು ಕೊಂಡಂತಾಗುವುದು? ರಾಮನು ನಿನಗೆಷ್ಟು ಮುದ್ದೋ ನನಗದಕ್ಕಿಂತಲೂ ಮುದ್ದು. ಎಲ್ಲಾ ದಿವ್ಯಾಸ್ತ್ರವಿದ್ಯೆಗಳನ್ನೂ ಕಲಿಸಿ, ನಿನ್ನ ಬಳಿಗವನನ್ನು ಸ್ವಲ್ಪ ದಿನಗಳಲ್ಲೇ ಕಳಿಸಿಕೊಡುತ್ತೇನೆ.

ವಸಿಷ್ಠ—ವಿಶ್ವಾಮಿತ್ರರೊಡನೆ ರಾಮನು ಹೋಗುವುದರಿಂದ ತೊಂದರೆ ಯೆಳ್ಳಷ್ಟೂ ಆಗದು; ನೀನೂ ಕೊಟ್ಟ ಮಾತಿಗೆ ತಪ್ಪಬೇಡ, ರಾಮನನ್ನು ಕಳಿಸಿಕೊಡು.

ದಶರಥ—(ಗದ್ಗದ ಧ್ವನಿಯಿಂದ ರಾಮನನ್ನು ಕುರಿತು) ರಾಮ, ಪೂಜ್ಯರನ್ನು ಹಿಂಬಾಲಿಸು.

ರಾಮ— ಅಪ್ಪಣೆ.

ಲಕ್ಷ್ಮಣ—(ಎದ್ದು) ಅಪ್ಪಾಜಿ, ಅಣ್ಣನ ಹಿಂದೆ ನಾನೂ ಹೋಗುತ್ತೇನೆ. ಮೊಲೆಯುಂಡಿದ್ದು ಅಣ್ಣನ ಕೂಡೆ; ಆಟವಾಡಿದ್ದು, ಪಾಠ ಕಲಿತಿದ್ದು ಅಣ್ಣನ ಕೂಡೆ; ಈಗಲೂ ಅವನ ಕೂಡೆ ಹೋಗುತ್ತೇನೆ.

ವಿಶ್ವಾಮಿತ್ರ—ನೀನು ರಾಮನನ್ನಗಲಿ ಕ್ಷಣವೂ ನಿಲ್ಲಲಾರೆಯೆಂಬುದನ್ನು ನಾನೂ ಬಲ್ಲೆ—ಆದ್ದರಿಂದ ನೀನೂ ಬಾ.

ಭರತಶತ್ರುಜ್ಞರು—ನಾವೂ ಬರುತ್ತೇವೆ.

ದಶರಥ—(ಕಂಬನಿದುಂಬಿ) ಎಲ್ಲರೂ ಹೊರಟಿರೋ!?

ವಸಿಷ್ಠ—ಅಪ್ಪ, ಮಕ್ಕಳೇ ನಿಲ್ಲಿ; ವಿಶ್ವಾಮಿತ್ರರೊಡನೆ ರಾಮ ಲಕ್ಷ್ಮಣರು ಮಾತ್ರ ಹೋಗಲಿ. ನೀವು ವಯಸ್ಸಾದ ತಂದೆಯ ಬಳಿಯಿದ್ದು ಸೇವೆಮಾಡಿ.

ದಶರಥ—(ಕಣ್ಣನ್ನು ಮುಚ್ಚಿ) ಅಯ್ಯೋ, ಲಕ್ಷ್ಮಣನೂ ಹೊರಡುವನೇ? ಆಗಲಿ!

ರಾಮಲಕ್ಷ್ಮಣರು—ಏನಿಂದೇ ಪೂಜ್ಯರ ಹಿಂದೆ ಹೋಗಬೇಕೇನು?

ವಿದೂಷಕ—(ಸ್ವಗತ) ಹಾಳಾದ ಈ ಗಡ್ಡದ ಋಷಿ ಇಂದೇ ಈಗಲೇ ಹೋಗಲಿ. ಇನ್ನಿವನಿದ್ದರೆ ರಾಣಿಯರನ್ನೋ ನನ್ನನ್ನೋ ಕಳಿಸಿಕೊಡೆಂದು ಕೇಳಿಯಾನು! ರಾಣಿಯರನ್ನು ಕರೆದುಕೊಂಡು ಹೋದರೆ ನನ್ನೊಡಲಿಗೆ ಲಾಡು ಕೊಡುವರಾರು? ಒಂದು ಪಕ್ಷ ನನ್ನನ್ನೇ ಕರೆದುಕೊಂಡು ಹೋದರೆ, ರಾಕ್ಷಸರಿಗೆ ನಾನೇ ಲಾಡು ಆಗಿಬಿಡುತ್ತೇನೆ. ಅಬ್ಬ! ಬೇಡ!!

ವಿಶ್ವಾಮಿತ್ರ—ಮಕ್ಕಳೇ ಬೇಡ, ಈಗಲೇ ಬೇಡ. ತಾಯಂದಿರಿಗೆ ಹೇಳಿ ಆಶೀರ್ವಾದಪಡೆದು ಬನ್ನಿ—ನಾಳೆ ಬೆಳಿಗ್ಗೆ ನನ್ನ ತಪೋವನಕ್ಕೆ ಹೊರಡೋಣ.

ರಾಮಲಕ್ಷ್ಮಣರು—ಪೂಜ್ಯರ ಆಜ್ಞೆಯಂತಾಗಲಿ.

ದಶರಥ—ಸುಮಂತ್ರ, ನನ್ನ ಮನಸ್ಸು ವ್ಯಾಕುಲಗೊಂಡಿದೆ. ಅಂತಃಪುರಕ್ಕೆ ಹೋಗುತ್ತೇನೆ. ಹೋಗಿ, ಎಲ್ಲರೂ ವಿಶ್ರಮಿಸಿಕೊಳ್ಳಿ. ಪೂಜ್ಯ ವಿಶ್ವಾಮಿತ್ರರಿಗೆ ಬಿಡಾರದ ವ್ಯವಸ್ಥೆಮಾಡಿ.

(ವಿಶ್ವಾಮಿತ್ರನ ಹೊರತಾಗಿ ಎಲ್ಲರೂ ನಿಷ್ಕ್ರಮಿಸುವರು)

ವಿಶ್ವಾಮಿತ್ರ—ನನ್ನ ಪ್ರಾರ್ಥನೆ ಈಡೇರಿತು. ನನ್ನ ಮನಸ್ಸೀಗ ಪ್ರಸನ್ನ ವಾಯಿತು. ರಾಮುನನ್ನು ದಿವ್ಯಾಸ್ತ್ರಪ್ರಯೋಗದಲ್ಲಿ ಅದ್ವಿತೀಯನನ್ನಾಗಿ ಮಾಡಿ ರಾವಣನ ಬೆಂಬಲಿಗರಾದ ರಾಕ್ಷಸರನ್ನು ಕೊಲ್ಲಿಸುತ್ತೇನೆ. ಆಮೇಲೆ ರಾವಣವಧೆ ಸುಲಭ. (ನಿಷ್ಕ್ರಮಿಸುವನು)

ಆರನೇ ದೃಶ್ಯ

(ವಿಶ್ವಾಮಿತ್ರನು ತನ್ನ ಆಶ್ರಮದಲ್ಲಿ ರಾಮಲಕ್ಷ್ಮಣರೊಡನೆ ಪ್ರವೇಶಿಸುವನು)

ವಿಶ್ವಾಮಿತ್ರ—ಎಷ್ಟು ಒಳ್ಳೆಯ ಹೊಲವಾದರೂ, ಫಲ ಕೊಡುವುದು, ಬೀಜ ಬಿತ್ತಿದ ಬಹುದಿನಕ್ಕೆ; ಆದರೆ ನಿಮಗಿತ್ತ ನನ್ನ ಅಸ್ತ್ರವಿದ್ಯೆಯು ತತ್‌ಕ್ಷಣವೇ ಶುಭ ಫಲವನ್ನು ಕೊಟ್ಟಿತು! ನೀವು ತಾಟಕೆ ಮತ್ತು ಸುಬಾಹುಗಳನ್ನು ಕೊಂದು ಮಾರೀಚನನ್ನು ತರಗೆಲೆಯಂತೆ ಸಮುದ್ರಕ್ಕೆ ತೂರಿ, ನನ್ನ ಯಜ್ಞವನ್ನು ಸಫಲ ಗೊಳಿಸಿದಿರಿ. ನಿಮ್ಮಿಂದ ತಪೋವನದಲ್ಲಿ ಶಾಂತಿ, ನನ್ನ ಮನಸ್ಸಿಗೆ ನೆಮ್ಮದಿ.

ರಾಮ—ಪೂಜ್ಯರೇ, ನಾವು ಮಾಡಿದ್ದು ಅಲ್ಪವಾದರೂ, ನಮ್ಮ ಮೇಲಣ ಅಭಿಮಾನದಿಂದಲೂ, ಬಾಲಕರಾದ ನಮ್ಮನ್ನು ಪ್ರೋತ್ಸಾಹಿಸಲೆಂದೂ, ನೀವು ಅದನ್ನು ಅನಲ್ಪವೆಂದು ಹೊಗಳುತ್ತಿದ್ದೀರಿ.

ವಿಶ್ವಾಮಿತ್ರ—ಅಯ್ಯ, ಹಾಗಲ್ಲ! ನೀನೀಗ ಪ್ರಬಲರಾದ ರಾಕ್ಷಸರನ್ನು ಘಾತಿಸಿರುವುದರಿಂದ ರಾವಣನ ರಾಜ್ಯಲಕ್ಷ್ಮಿಯು ವಿರೂಪಗೊಂಡಂತಾಗಿದ್ದಾಳೆ. ರಾಕ್ಷಸರನ್ನು ನಿರ್ಮೂಲ ಮಾಡಬಲ್ಲ ನಿನ್ನ ಅಪಾರ ಅವಾರ್ಯ ಬಲವನ್ನು ಕಂಡು ನಾನೂ ಆಶ್ಚರ್ಯಚಕಿತನಾಗಿದ್ದೇನೆ.

ರಾಮ—ಅದೆಲ್ಲ ನಿಮ್ಮ ತಪೋಮಹಿಮೆಯೇ ಹೊರತು, ಅಲ್ಲಿ ನನ್ನಿಂದಾದು ದೆಂಬುದೇನೂ ಇಲ್ಲ. ಮಹಾ ಬಲಶಾಲಿಗಳಾದ ರಾಕ್ಷಸರ ಮುಂದೆ ಮಕ್ಕಳಾದ ನಾವು ಬಿಲ್ಲು ಹಿಡಿದು ಗೆಲ್ಲುವುದೆಂದರೇನು ? ಅರುಣನಿಂದ ಲೋಕದ ಕತ್ತಲೆಯು ಕಳೆಯಿತೆಂದು ಜನರಾಡಿಕೊಳ್ಳುತ್ತಾರೆ; ಆದರೆ ವಾಸ್ತವವಾಗಿ ಆ ಅರುಣ ನನ್ನು ತನ್ನ ಮುಂದಿಟ್ಟುಕೊಂಡ ಸೂರ್ಯಭಗವಂತನಲ್ಲವೆ ಅದಕ್ಕೆ ಮೂಲ ಕಾರಣಕರ್ತ ?

ವಿಶ್ವಾಮಿತ್ರ—ವತ್ಸ, ಕೇಳು: ಭೂಮಿಯಲ್ಲಿ ಸಿಹಿ, ಉಪ್ಪು ಮುಂತಾದ ರಸಗಳೆಲ್ಲ ಇವೆ. ಆದರೆ ಎಲ್ಲ ಸಸ್ಯಗಳೂ ಅವನ್ನು ಪಡೆಯಲಾರವು! ಕಬ್ಬು ನೆಲದಲ್ಲಿರುವ ಸಿಹಿಯನ್ನು ಹೀರುವುದು ನೆಲದ ಮಹಿಮೆಯಾದರೆ; ಅದೇ ನೆಲದ ಮಹಿಮೆಯಿಂದ ಬೇವೇಕೆ ಸಿಹಿಯಾಗಲಿಲ್ಲ? ಆದ್ದರಿಂದ ನಾನು ಕೊಟ್ಟ ದಿವ್ಯಾಸ್ತ್ರಗಳು ನಿನ್ನನ್ನು ಆಶ್ರಯಿಸಿ, ರಾಕ್ಷಸರನ್ನು ಕೊಲ್ಲುವ ಸಾಮರ್ಥ್ಯವನ್ನು ಪಡೆದವು.

ರಾಮ—ಅದು ತಮ್ಮ ಆಶೀರ್ವಾದ. ಸ್ವಾಮಿ, ರಾವಣನ ರಾಜ್ಯಲಕ್ಷ್ಮಿಯು ವಿರೂಪಿತಳಾದಳೆಂದು ಹೇಳಿದಿರಿ. ಸುಬಾಹುವನ್ನು ಕೊಂದು ಮಾರೀಚನನ್ನು ದೂರಕ್ಕೆಸೆದಾ ಕ್ಷಣಕ್ಕೇ ಅದು ಹೇಗಾಯಿತು?

ವಿಶ್ವಾಮಿತ್ರ—ವಿವಿಧಾಸ್ತ್ರಶಸ್ತ್ರಸಜ್ಜಿತರೂ, ಮಾಯಾವಿಗಳೂ, ಮಹಾ ಬಲರೂ ಆದ ಆ ಸುಬಾಹು ಮಾರೀಚರು ಸೂರ್ಯವಂಶದವರ ಆಡಳಿತಕ್ಕೊಳ ಪಟ್ಟ ಈ ಭೂಭಾಗದಲ್ಲಿ ಸೇನಾಶಿಬಿರಗಳನ್ನು ಸ್ಥಾಪಿಸಿಕೊಂಡಿದ್ದರು. ಅವರನ್ನು ಯಾವನು ಕೊಲ್ಲುವನೋ ಅವನಿಂದ ತನಗೂ ತೊಂದರೆ ತಪ್ಪಿದ್ದಲ್ಲವೆಂದು ರಾವಣನು ಚೆನ್ನಾಗಿ ಬಲ್ಲ. ಸುಬಾಹುವಿನ ಸಾವಿನಿಂದ ರಾವಣನ ರಾಜ್ಯಶ್ರೀಗೆ ವಿರೂಪವಾಗಿರುವುದಕ್ಕಿಂತ ಹೆಚ್ಚಾಗಿ, ಬದುಕಿರುವ ಮಾರೀಚನನ್ನೇ ತರಗೆಲೆ ಯಂತೆ ತೂರಿ ದೂರಕ್ಕೆಸೆದಿರುವುದರಿಂದ ಆ ರಾವಣನ ರಾಜ್ಯಲಕ್ಷ್ಮಿಯ ಹಸ್ತ ದಲ್ಲಿ ತನ್ನ ಗಂಡನನ್ನು ತಾನೇ ತಿನ್ನುವ ಒಂದು ಕೆಟ್ಟ ರೇಖೆಯು ಹುಟ್ಟಿ ಕೊಂಡಂತಾಗಿದೆ.

ರಾಮ—ರಾವಣನು ಮಹಾಬಲನೆಂದು ಕೇಳಿದ್ದೇನೆ.

ವಿಶ್ವಾಮಿತ್ರ—ಅವನು ಮಹಾಬಲನೆನ್ನುವುದರಲ್ಲಿ ಸಂಶಯವೇ ಇಲ್ಲ. ಅವನೊಡನೆ ನೀನು ಯುದ್ಧ ಮಾಡಬೇಕಾದ ಸಂಭವವೂ ಉಂಟು.

ರಾಮ—ಅವನು ನನ್ನನ್ನಾಗಲೀ, ನಾನು ಅವನನ್ನಾಗಲೀ ಕಂಡಿಲ್ಲ, ಅವ-ಮಾನಗೊಳಿಸಿಲ್ಲ. ಅಂದ ಮೇಲೆ ನಮ್ಮಿಬ್ಬರಿಗೂ ಯುದ್ಧವು ಹೇಗೆ ಸಂಭವಿಸೀತು?

ವಿಶ್ವಾಮಿತ್ರ—ರಾವಣನು ರಾಕ್ಷಸಾಧಿಪ, ನೀನು ವರ್ಣಾಶ್ರಮಧರ್ಮ ರಕ್ಷಕನಾದ ಇಕ್ಷ್ವಾಕುವಂಶದವನು; ಅವನಿಗೆ ಋಷಿಗಳನ್ನು ಕಂಡರಾಗದು, ನಿನಗೋ ಅವರಲ್ಲಿ ಪೂಜ್ಯಬುದ್ಧಿ; ಅವನು ಬಲಮದೋನ್ಮತ್ತ, ನೀನು ವಿನೀತ; ನಿನಗೆ ಧರ್ಮವೇ ಪ್ರಧಾನ, ಅವನಿಗಾದರೋ ಬಲಪ್ರಧಾನ; ನಿಮ್ಮಿಲ್ಲಿನ ಈ

ಪರಸ್ಪರ ವೈಷಮ್ಯದಿಂದ ನಿಮ್ಮಿಬ್ಬರಿಗೂ ಹೋರಾಟವು ನಿಶ್ಚಯ. ಆ ಹೋರಾಟದಲ್ಲಿ ಅವನ ದುರ್ಗುಣದಿಂದಲೇ, ಅವನಿಗೆ ಅಪಜಯವೂ, ನಿನ್ನ ಸದ್ಗುಣದಿಂದ ನಿನಗೆ ಜಯವೂ ಸಿದ್ಧ.

ರಾಮ—ನಿಜ, ಆ ಹೋರಾಟದಲ್ಲಿ ನನಗೆ ಜಯ ಸಿದ್ಧ. ಏಕೆಂದರೆ ನಿಮ್ಮ ಆಶೀರ್ವಾದ, ಪ್ರಜೆಗಳ ಪ್ರೀತಿ; ನಿಮ್ಮಿಂದ ಪಡೆದ ಮಂತ್ರಾಸ್ತ್ರಗಳ ಸಹಾಯ, ಲಕ್ಷ್ಮಣನ ಬೆಂಬಲ ನನ್ನ ಪಾಲಿಗಿವೆ. ಇಷ್ಟೆಲ್ಲ ಇದ್ದು ನನಗೆ ಜಯ ಹೇಗೆ ದೊರಕದು ?

ವಿಶ್ವಾಮಿತ್ರ—(ದೂರಕ್ಕೆ ಕೈಮಾಡಿ) ಅದೋ, ಅರಣ್ಯದ ಮಡಿಲಲ್ಲಿರುವ ಆ ಹಳ್ಳಿ ಕಾಣುತ್ತದೆಯೇ ? ಅಲ್ಲಿಯ ಜನ ಜಿಂಕೆಗಳಂತೆ ಅತ್ಯಂತ ಸಾಧುಗಳು. ಅವರು ಧರ್ಮಶಾಸ್ತ್ರಗಳನ್ನು ಓದಿದವರಲ್ಲದಿದ್ದರೂ, ಧರ್ಮವನ್ನೆಂದಿಗೂ ಮೀರಿ ನಡೆಯರು. ಅವರಲ್ಲಿ ಪರಸ್ಪರ ಕಲಹವಿಲ್ಲ. ಪರದ್ರವ್ಯಲೋಭವಿಲ್ಲ. ಆ ಹಳ್ಳಿಯ ಹೆಣ್ಣುಗಳೂ ಅಷ್ಟೆ—ಅತಿಥಿಸತ್ಕಾರನಿಷ್ಠರು! ಅವರು ಮಾಡಿದ ಅಪಕಾರವನ್ನೂ ಮರೆಯುವಂತಹ ಮಹನೀಯರು. ರಾಮಚಂದ್ರ ನಿನ್ನನ್ನವರು ಕಂಡು ಆನಂದಪಡುವರು.

ರಾಮ—ಆ ಸಜ್ಜನವೃಂದವನ್ನು ನೋಡದೆ ನನ್ನ ಮನಸ್ಸು ಹೇಗೆ ನಿಂತೀತು?

ವಿಶ್ವಾಮಿತ್ರ—ನೋಡು, ನಮ್ಮೆದುರಿಗೊಬ್ಬ ರೈತ ಕಾಣುತ್ತಿದ್ದಾನೆ. ಅವನು ಉತ್ತು, ಬಿತ್ತಿ, ಕಳೆಕಿತ್ತು, ಹಗಲೆನ್ನದೆ ರಾತ್ರಿಯೆನ್ನದೆ ದುಡಿದು, ತನ್ನ ದುಡಿಮೆಯ ಫಲವನ್ನು ಪಡೆದು, ಇಂದ್ರಸುಖವನ್ನೂ ಹುಲ್ಲುಕಡ್ಡಿಗಿಂತ ಕಡೆಗಣಿಸಿ ಸಂತೋಷವಾಗಿದ್ದಾನೆ.

ಲಕ್ಷ್ಮಣ—ಆಹ! ರೈತರ ಜೀವನವದೆಷ್ಟು ಶ್ಲಾಘನೀಯವಾಗಿದೆ!

ವಿಶ್ವಾಮಿತ್ರ—ಖಂಡಿತ. ಅವರು ಮೈಮುರಿಯ ದುಡಿಯುವರು; ಫಲ ಕೊಡುವವನು ದೇವರೆನ್ನುವರು. ಎಲ್ಲರ ಜೀವನಕ್ಕೂ ಕಾರಣರಾದಿವರು ಎಷ್ಟು ಸಿಕ್ಕಿದರಷ್ಟರಿಂದಲೇ ತೃಪ್ತಿಹೊಂದುವರು. ಹೊಲವೇ ರೈತನ ಕಾರ್ಯಕ್ಷೇತ್ರ; ಹೆಂಡತಿ-ಮಕ್ಕಳು-ಮರಿಗಳೇ ಅವನ ಪ್ರಪಂಚ; ದನಕರುಗಳೇ ಅವನ ಬಂಧುಗಳು; ಅತಿಥಿ ಅಭ್ಯಾಗತರನ್ನು ಉಪಚರಿಸುವುದೇ ಅವನ ಪರಮಧರ್ಮ.

ರಾಮ—ಹಳ್ಳಿಯ ಈ ಎಲ್ಲ ಒಳ್ಳೆಯ ಗುಣಗಳೂ ಪಟ್ಟಣದವರಲ್ಲಿದ್ದರೆ ಮನುಷ್ಯನದೆಷ್ಟು ಪೂಜ್ಯಪದವಿಗೇರುತ್ತಾನೆ! ಈ ಹಳ್ಳಿಯವರಲ್ಲಿ ಹಲವರನ್ನು,

ನಾಗರಿಕರಿಗೆ ಆದರ್ಶವಾಗಿರಲೆಂದು, ನಗರಕ್ಕೆ ಕರೆದೊಯ್ಯಲು ನನಗೆ ಬಹಳ ಆಶೆ. ಅದರಿಂದ ಪಟ್ಟಣಗಳು ಸ್ವರ್ಗವನ್ನೂ ಮೀರಿಸುತ್ತವೆ; ಜೊತೆಗೆ ತಪೋವನಗಳನ್ನು ಹೋಲುತ್ತವೆ.

ವಿಶ್ವಾಮಿತ್ರ—ನಗರಗಳಲ್ಲಿ ಇವರು ವಾಸಿಸಲಾರಂಭಿಸಿದರೆ ಇವರ ಸದ್ಗುಣಗಳೆಲ್ಲ ಮಾಯವಾಗಿ ಆರಂಬಮಾಡುವುದನ್ನೇ ಮರೆತುಬಿಡುತ್ತಾರೆ. ಅವರವರ ಜಾಗದಲ್ಲಿದ್ದು, ಅವರವರ ಕಸುಬಿನಲ್ಲಿ ನಿರತರಾಗಿದ್ದರೆ ಜನರು ಉದ್ಧಾರವಾಗುತ್ತಾರಲ್ಲವೆ?

ರಾಮ—ಪೂಜ್ಯರು ಯಾವುದು ಹೇಗೆ ಪರಿಣಮಿಸುವುದೆಂಬುದನ್ನು ಬಲ್ಲರು; ಮತ್ತು ಎಲ್ಲರಿಗೂ ಚಿರಸುಖ ಸಿಗಲೆಂದು ಆಶಿಸುವರು.

ವಿಶ್ವಾಮಿತ್ರ—(ಮುಂದೆ ನೋಡಿ) ಅದೋ, ಒಬ್ಬ ಅಜ್ಜಿ ಹೊಲದಿಂದ ಕರುಗಳಿಗೆಂದು ಹುಲ್ಲಿನ ಹೊರೆಯನ್ನು ಹೊತ್ತು ಇತ್ತಲೇ ಬರುತ್ತಿದ್ದಾಳೆ.

(ರೈತರ ಅಜ್ಜಿಯು ಪ್ರವೇಶಿಸುವಳು)

ವಿಶ್ವಾಮಿತ್ರ—(ಬಳಿಸಾರಿ) ಅಜ್ಜಿ, ನಿನಗೊಳ್ಳೆಯದಾಗಲಿ.

ಅಜ್ಜಿ—ರುಸಿಗಳೇ, ನಮಸ್ಕಾರ.

ವಿಶ್ವಾಮಿತ್ರ—ಅಮ್ಮ, ಮನೆಯಲ್ಲೆಲ್ಲರೂ ಆರೋಗ್ಯವೇ?

ಅಜ್ಜಿ—ಎಲ್ರೂ ಕ್ಸೇಮ. ನನ್ನ ಮಕ್ಕಳ ತಂದೆ, ಮಗನ ಹೆಂಡ್ತೀನ ಕರಕೊಂಡು ಬರಾಕೆ ಪಕ್ಕದಳ್ಳೀಗೋಗವ್ನೆ. ಆ ಮಗ ಹೊಲದಾಗೆ ಹುಲ್ಲು ಬಣವೆ ಕಾಯ್ತಾವ್ನೆ. ಮೊಮ್ಮಕ್ಕಳು ಮನೇಕೆಲಸದಲ್ಲವ್ರೆ; ಬುದ್ಧಿಯವರಿವತ್ತು ನಮ್ಮನೇಗೆ ಬಂದು ನಮ್ಮನ್ನ ಪಾವನಮಾಡಬೇಕು. (ರಾಮಲಕ್ಷ್ಮಣರ ಕಡೆ ತೋರಿ) ಈ ಹೈದಗಳು ಯಾರ ಮಕ್ಕಳು?

ವಿಶ್ವಾಮಿತ್ರ—ಇವರು ದಶರಥ ಮಹಾರಾಜನ ಮಕ್ಕಳು.

ಅಜ್ಜಿ—ಇವರ ಹೆಸರೇನೋ?

ವಿಶ್ವಾಮಿತ್ರ—(ಒಬ್ಬೊಬ್ಬರನ್ನೇ ತೋರಿಸಿ) ಈತ ಮಹಾರಾಜನ ಜ್ಯೇಷ್ಠ ಪುತ್ರ ರಾಮ; ಇವನು ಲಕ್ಷ್ಮಣ.

ರಾಮ—(ಬಳಿಬಂದು) ಅಜ್ಜಿ, ನಮಸ್ಕಾರ.

ಲಕ್ಷ್ಮಣ—ಅಜ್ಜಿ, ಪೂಜ್ಯರಾಮನ ತಮ್ಮನಾದ ನಾನು ನಿನಗೆ ವಂದಿಸುತ್ತೇನೆ.

ಅಜ್ಜಿ—ಸುಕ್ಕಾ, ನೀವು ನೂರೊರ್‍ಸ ಬದುಕ್ರಪ್ಪ. (ನಿಟ್ಟಿಸಿ) ಯಾಕ್ರಪ್ಪ ನೀವಿಬ್ರೂ ಬಿಲ್ಲೂಬಾಣ ಧರಿಸಿದ್ದೀರಿ ?

ವಿಶ್ವಾಮಿತ್ರ—ಧರ್ಮವನ್ನು ರಕ್ಷಿಸಲು ಕ್ಷತ್ರಿಯರು ಸದಾ ಧನುರ್ಬಾಣ ಧಾರಿಗಳಾಗಿರುತ್ತಾರೆ. ನಾನು ಮಾಡುತ್ತಿದ್ದ ಯಜ್ಞಕ್ಕೆ ವಿಘ್ನವೊಡ್ಡಿದ ರಾಕ್ಷಸ ರನ್ನಿವರು ಕೊಂದರು.

ಅಜ್ಜಿ—ಈ ಹಳ್ಳಿಯ ಸುತ್ತುಮುತ್ತಣ ಕಾಡಿನಲ್ಲಿರೋ ಹುಲ್ಲೇಮರಿಗಳನ್ನ ಕೊಲ್ಲಬೇಡ್ರಪ್ಪ, ಪಾಪ !

ಲಕ್ಷ್ಮಣ—ಅವು ನಿಮ್ಮ ಹೊಲದ ಪೈರನ್ನೆಲ್ಲ ಮೇದು ಹಾಳುಮಾಡೋ ದಿಲ್ಲವೆ, ಅಜ್ಜಿ ?

ಅಜ್ಜಿ—ಆದ್ರೂ ಕೊಲ್ಲಬಾರ್‍ದು; ಬಿಡಿ, ನಾವೆಲ್ಲ ಅವನ್ನ ಕಲ್ಲುಬೀಸಿ ಬೆದರಿಸುತ್ತೀವಿ !

ಲಕ್ಷ್ಮಣ—ಅಪಕಾರಮಾಡೋ ಪ್ರಾಣಿಗಳ ಮೇಲೂ ನಿಮಗೆ ದಯೆ !

ಅಜ್ಜಿ—ನಾವವುಗಳ ಜೊತೆಯಲ್ಲೇ ಆಡಿ ಆಡಿ ಅವು ನಮ್ಮ ನೆಂಟರ್‍ಹಂಗವೆ; ಆಹ ! ಅವು ಬೆದರಿ ಓಡೋದನ್ನ ನೋಡೋದಕ್ಕೆ ಎರಡು ಕಣ್ಣು ಸಾಲ್ದು !

ವಿಶ್ವಾಮಿತ್ರ—(ರಾಮನನ್ನು ಕುರಿತು) ಇದು ಹಳ್ಳಿಯ ಹೃದಯ.

ರಾಮ—ನಿಜವಾಗಿಯೂ ಇವರ ಮನಸ್ಸು ದೇವತೆಗಳ ಮನಸ್ಸಿನಂತಹುದು.

ವಿಶ್ವಾಮಿತ್ರ—ಪೂಜ್ಯೆ, ನೀನು ಹುಲ್ಲಿನ ಹೊರೆ ಹೊತ್ತು ಬಹಳ ಹೊತ್ತು ನಿಂತೆ; ಇನ್ನು ಹೊರಡು, ನಾವು ನಿನ್ನ ಮನೆಗೀದಿನ ಬರುತ್ತೇವೆ.

ಅಜ್ಜಿ—ಆಗಲಿ, ಖಂಡಿತ ದಯಮಾಡಬೇಕು. (ಎನ್ನುತ್ತ ನಿಷ್ಕ್ರಮಿಸು ವಳು)

ವಿಶ್ವಾಮಿತ್ರ—(ಸ್ವಗತ) ಹೋರಾಟದಲ್ಲಿ ರಾವಣನನ್ನು ಜಯಿಸಲು ರಾಮ ಲಕ್ಷ್ಮಣರನ್ನು ಸಮರ್ಥರನ್ನಾಗಿ ಮಾಡಿದ್ದೇನೆ. ಅವರಿಗೀಗ ವ್ಯವಹಾರಜ್ಞಾನವೂ ತಿಳಿದಂತಾಗಿದೆ. ವಿದೇಹರಾಜನಾದ ಜನಕನು ತಾನು ಈಗ್ಗೆ ಒಂದು ವರ್ಷದಿಂದ ಮಾಡುತ್ತಿರುವ ಯಜ್ಞದ ಮುಕ್ತಾಯ ಸಮಾರಂಭಕ್ಕೆ ನನ್ನನ್ನು ಆಹ್ವಾನಿಸಿ ದ್ದಾನೆ. ಅವನಿಗೊಬ್ಬ ಮುದ್ದು ಮಗಳಿದ್ದಾಳೆ. ಆಕೆ ರಾಮನಿಗಾಗಿಯೇ ಬ್ರಹ್ಮ ನಿಂದ ಸೃಷ್ಟಿಯಾದಂತಿದ್ದಾಳೆ. ಆ ಜನಕನು ತನ್ನ ಬಳಿಯಿರುವ ಶಿವಧನುಸ್ಸಿಗೆ ಯಾವನು ಹೆದೆಯೇರಿಸುವನೋ ಆ ಶ್ಲಾಘ್ಯನೇ ತನ್ನ ಮಗಳಿಗೆ ತಕ್ಕ ವರನೆಂದು

ನಿಶ್ಚಯಿಸಿಕೊಂಡಿದ್ದಾನೆ. ರಾಮನಿಗಾ ಬಿಲ್ಲನ್ನು ಬಾಗಿಸಲಾಗದಿದ್ದರೆ, ಮತ್ತಾರಿಗೆ ತಾನೆ ಅದು ಸಾಧ್ಯ? (ಯೋಚಿಸಿ) ರಾಮನೇ ಸೀತೆಯನ್ನು ಮದುವೆಯಾಗಲು ಯೋಗ್ಯ. ರಾಮನಿಂದ ಈ ಕೆಲಸವನ್ನಾಗುಗೊಳಿಸಿ ದಶರಥನಿಗೆ ನನ್ನ ಋಣವನ್ನು ತೀರಿಸುತ್ತೇನೆ.

ರಾಮ—(ವಿಶ್ವಾಮಿತ್ರನ ಮುಖವನ್ನು ನಿಟ್ಟಿಸಿ) ಪೂಜ್ಯರೇನನ್ನೋ ಯೋಚಿಸುತ್ತಿರುವಂತಿದೆ?

ವಿಶ್ವಾಮಿತ್ರ—ವಿದೇಹರಾಜ್ಯಕ್ಕೆ ಹೋಗಬೇಕಾಗಿದೆ; ಪ್ರಯಾಣಮಾಡುವುದು ಹೇಗೆಂದು ಯೋಚಿಸುತ್ತಿದ್ದೇನೆ.

ರಾಮ—ಅಲ್ಲಿಯೂ ರಾಕ್ಷಸರ ಹಾವಳಿಯೇನು?

ವಿಶ್ವಾಮಿತ್ರ—ರಾಕ್ಷಸರ ಹಾವಳಿಯಿದ್ದರೂ ನೀವು ಹೋದೊಡನೆಯೆ ಹೇಳಹೆಸರಿಲ್ಲದಾಗುತ್ತದೆ. ಅಂಥದೇನೂ ಇಲ್ಲವೆಂದುಕೊಂಡಿದ್ದೇನೆ. ವಿದೇಹ-ರಾಜನಾದ ಪೂಜ್ಯ ಜನಕನು ಸಾಂವತ್ಸರಿಕ ಯಜ್ಞವನ್ನು ಕೈಗೊಂಡಿದ್ದಾನೆ. ಅದರ ಮುಕ್ತಾಯ ಸಮಾರಂಭಕ್ಕೆ ನನ್ನನ್ನು ಆಹ್ವಾನಿಸಿದ್ದಾನೆ.

ಲಕ್ಷ್ಮಣ—ನಾವೂ ನಿಮ್ಮ ಜೊತೆಯಲ್ಲಿ ಬರಬೇಕೆ?

ವಿಶ್ವಾಮಿತ್ರ—ಅಲ್ಲವೆ! ಅಲ್ಲಿಗೆ ನೀವು ಬರುವುದರಿಂದ ಆ ಯಜ್ಞ ಸಫಲವಾಗುತ್ತದೆ.

ಲಕ್ಷ್ಮಣ—ಮತ್ತೆ ನಾವು ಅಯೋಧ್ಯೆಗೆ ಹೋಗುವುದು ಯಾವಾಗ?

ವಿಶ್ವಾಮಿತ್ರ—ಆ ಜನಕರಾಜರ್ಷಿಯ ಯಜ್ಞಫಲವನ್ನನುಭವಿಸಿ.

ರಾಮ—ಅಂದರೆ?

ವಿಶ್ವಾಮಿತ್ರ—ಅಲ್ಲಿಗೆ ಹೋದಮೇಲೆ ನಿಮಗೇ ಎಲ್ಲಾ ಗೊತ್ತಾಗುತ್ತದೆ.

ಲಕ್ಷ್ಮಣ—ಫಲವಿಲ್ಲದೆ ಕಾರ್ಯವನ್ನು ಕೈಗೊಳ್ಳುವುದು ಬುದ್ಧಿವಂತಿಕೆಯಲ್ಲ.

ರಾಮ—'ಫಲವಿಲ್ಲದೆ' ಎನ್ನಬೇಡ. ಅಲ್ಲಿಗೆ ಹೋಗುವುದರಿಂದ ಫಲವಿದೆಯೆಂದು ಪೂಜ್ಯರು ಹೇಳುತ್ತಿದ್ದಾರೆ!

ವಿಶ್ವಾಮಿತ್ರ—ನಿಜ; ಫಲದ ಸ್ವರೂಪವೇನೆಂಬುದು ಫಲವನ್ನು ಪಡೆಕೊಂಡಮೇಲೇ ತಿಳಿಯಬೇಕು.

ರಾಮ—ಹಾಗೇ ಆಗಲಿ. ಪೂಜ್ಯರ ಮಾತು ವಿವಾದಾಸ್ಪದವಲ್ಲ.

ಲಕ್ಷ್ಮಣ—ಹಾಗೇ ಆಗಲಿ.

ವಿಶ್ವಾಮಿತ್ರ—(ಸ್ವಗತ) ರಾಮನು ಸೀತಾರಾಮನಾದರೆ ಸದ್ಯಕ್ಕೆ ನನ್ನ ಕೆಲಸ ಮುಗಿಯಿತು. ದಿವ್ಯಾಸ್ತ್ರಗಳ ವಿದ್ಯೆಯಂತೂ ಅವನಿಗೆ ನನ್ನಿಂದ ಸಿದ್ಧಿಸಿದೆ. ತಪಸ್ಸಿನಿಂದ ನಾನು ಬ್ರಹ್ಮತ್ವವನ್ನು ಪಡೆದೆನೆಂದಾಕ್ಷಣಕ್ಕೆ ನನ್ನಲ್ಲಿರುವ ಶಸ್ತ್ರಾಸ್ತ್ರ ವಿದ್ಯೆಗಳೆಲ್ಲ ನನ್ನಲ್ಲೇ ಅಡಗಿಹೋಗಬೇಕಾಗಿಲ್ಲ! ಆದುದರಿಂದಲೇ ಅವನ್ನೆಲ್ಲ ನಾನು ಗುಣವಂತನಾದ ಕ್ಷತ್ರಪುತ್ರನಲ್ಲಿ ನ್ಯಾಸಮಾಡಿದ್ದೇನೆ. ಶ್ರಮದಿಂದ ಸಂಪಾದಿಸಿದುದನ್ನು ಯಾರುತಾನೇ ವ್ಯರ್ಥಮಾಡಿಯಾರು?

(ಎಲ್ಲರೂ ನಿಷ್ಕ್ರಮಿಸುವರು)

ಏಳನೇ ದೃಶ್ಯ

(ನಾಲ್ವರು ಸೇವಕರು ಪ್ರವೇಶಿಸುವರು)

ಸ್ಥೂಲಾಂಸ—ಲೋ ಮುಷ್ಟಿಕ, ತಪೋವನದಿಂದ ಬಂದ ವಿಶ್ವಾಮಿತ್ರರು ಜನಕಮಹಾರಾಜನ ಅರಮನೆಯಲ್ಲಿಳಿದುಕೊಂಡಿದ್ದಾರೆ. ಅವರ ಸೇವೆ ಮಾಡಿಕೊಂಡಿರಲು ನಾವು ನಿಯೋಜಿತರಾಗಿದ್ದೇವೆ, ಕಣೋ! ಆ ಮಹರ್ಷಿಗಳಿಲ್ಲೆಷ್ಟು ಕಾಲ ನಿಲ್ಲುವರೋ!

ಮುಷ್ಟಿಕ—ಅಯ್ಯ, ಸ್ಥೂಲಾಂಸ, ನಿನಗೆಷ್ಟು ಗೊತ್ತೋ ನನಗೂ ಅಷ್ಟೆ! ಅವರ ಜೊತೆಯಲ್ಲಿ ಬಂದಿರುವ ಆ ಅರಸುಮಕ್ಕಳು ನೋಡಲದೆಷ್ಟು ರಮಣೀಯ ವಾಗಿದ್ದಾರೆ! ವಿಶ್ವಾಮಿತ್ರರ ಪಾದಗಳನ್ನು ಒತ್ತುವ ನೆಪದಲ್ಲಿ ಆ ಮಕ್ಕಳನ್ನು ಕಂಡು ನನ್ನ ಕಣ್ಣು ತಣಿಯಿತು.

ದಂಡಬಾಹು—ಮುಷ್ಟಿಕ, ವಯಸ್ಸಿಗೆ ಬಂದ ಆ ಯುವಕರಿಬ್ಬರನ್ನೂ ನೀನು ಮಕ್ಕಳೆಂದೇಕೆ ಕರೆಯುತ್ತೀ?

ಮುಷ್ಟಿಕ—ಲೋ, ದಂಡಬಾಹು, ವಿಶ್ವಾಮಿತ್ರರು ಮತ್ತು ನಮ್ಮ ಮಹಾರಾಜರು ಅವರನ್ನು 'ಮಕ್ಕಳೇ' ಎನ್ನುವುದರಿಂದ ನಾನೂ ಹಾಗೆಂದು ಕರೆದೆ.

ಸ್ಥೂಲಾಂಸ—ಆ ಇಬ್ಬರಲ್ಲಿ ದೊಡ್ಡ ಮಗುವಾದ ರಾಮನೆಂಬವನಿಗೆ ಆಗಲೇ ಯೌವನವಿಕಾರವಪ್ಪ?

ದಂಡಬಾಹು—ಹಾಗೆಂದರೇನಯ್ಯ?

ಸ್ಥೂಲಾಂಸ—ನಮ್ಮ ಮಹಾರಾಜರ ಮುದ್ದುಕುವರಿಯಾದ ಸೀತೆಯನ್ನು ಅವನು ಬಹಳ ನೋಡ್ತಾನೆ.

ಮುಷ್ಟಿಕ—ಮೊದಮೊದಲು ಲಕ್ಷ್ಮಣನು ರಾಮನ ನೆರಳಂತೆ ಇದ್ದ. ಈಗ ಲಾದರೋ ವಿಶ್ವಾಮಿತ್ರರು, ಉಪದೇಶ ಮಾಡ್ತೀನಿ ಬಾ ಅಂತ ಹೇಳಿ ಅವನನ್ನು ಬಹಳ ದೂರ ಕರೆದುಕೊಂಡುಹೋಗಿ, ರಾಮನೊಬ್ಬನೇ ಉದ್ಯಾನದಲ್ಲಿ ಉಳಿಯುವಂತೆ ಮಾಡುತ್ತಾರೆ.

ಸ್ಥೂಲಾಂಸ—ಸರಿ, ನಮ್ಮ ರಾಜಕುಮಾರಿಯೂ ಅಲ್ಲಿಗೆ ಬಂದು ಮರದ ಕೊಂಬೆಯ ಮರೆಯಲ್ಲಿ ನಿಂತು ಅವನನ್ನೇ ನೋಡುತ್ತಿರುತ್ತಾಳೆ.

ಮುಷ್ಟಿಕ—ಹಾಗಾದರೆ ಮಹಾರಾಜರೊಪ್ಪಿದ ಕೂಡಲೇ ಅವರಿಬ್ಬರಿಗೂ ಮದುವೆ!

ದೀರ್ಘಬಾಹು—ಅದಾಗದಿದ್ದರೆ ಅವರಿಬ್ಬರಿಗೂ ಹುಚ್ಚು ಹಿಡಿಯುವುದೇ ಖಂಡಿತ.

ಮುಷ್ಟಿಕ—ಮಹಾರಾಜರಿಗೂ ಮತ್ತು ವಿಶ್ವಾಮಿತ್ರರಿಗೂ ಇದೆಲ್ಲ ಗೊತ್ತಿದೆ ಯೇನು?

ದೀರ್ಘಬಾಹು—ಗೊತ್ತಿರಬೇಕು. ಗೊತ್ತಿರುವುದರಿಂದಲೇ ಅವರಿಬ್ಬರೂ ಪರಸ್ಪರ ಏಕಾಂತದಲ್ಲಿ ನೋಡಲು ಒಪ್ಪಿಗೆಯಾಗಿರಬೇಕು.

ಸ್ಥೂಲಾಂಸ—ಹಾಗಾದರೆ ಶೀಘ್ರವಾಗಿ ಅವರಿಬ್ಬರೂ ಮದುವೆಯಾಗುವು ದನ್ನು ಕಣ್ಣಾರೆ ಕಂಡು ಜನ್ಮವನ್ನು ಸಫಲಮಾಡಿಕೊಳ್ಳೋಣ.

ದೀರ್ಘಬಾಹು—(ನೋಡಿ) ಅದೋ, ನೋಡು ಆ ಶ್ರೀ ರಾಮಚಂದ್ರನೀ ಉದ್ಯಾನದ ಕಡೆಯೇ ಬರುತ್ತಿದಾನೆ; ಬನ್ನಿ ನಮ್ಮ ನಮ್ಮ ಕೆಲಸಕ್ಕೆ ಹೋಗೋಣ. (ಎಲ್ಲರೂ ನಿಷ್ಕ್ರಮಿಸುವರು)

(ಮದನಾವಸ್ಥೆಯ ರಾಮನು ಪ್ರವೇಶಿಸುವನು)

ರಾಮ—(ಪರಿಕ್ರಮಿಸಿ, ನಿಟ್ಟುಸಿರುಬಿಟ್ಟು) ಹೂಬಿಡಿಸುವ ಆ ಚಂದ್ರವದನೆ ಯನ್ನು ಕಂಡಾಗಿನಿಂದ ನನಗಿನ್ನೇನೊಂದೂ ಬೇಡವಾಗಿ, ಆಕೆಯನ್ನು ನೋಡುತ್ತಾ ನಿಲ್ಲುವುದೇ ಹಿತವಾಗಿದೆ. ಮೊಲೆಯೂಡಿ ಮುದ್ದಿಸಿದ ತಾಯಂದಿರ ನ್ನಗಲಿದಾಗ ನನ್ನ ಮನಸ್ಸಿಗೀ ರೀತಿ ತಲ್ಲಣವಾಗಿರಲಿಲ್ಲ! ಭಯಂಕರ ಆಯುಧ

ಗಳನ್ನು ಧರಿಸಿ ಮೇಲೆ ಬೀಳಲೆದುರಿಗೇ ನಿಂತ ರಾಕ್ಷಸರನ್ನು ಕಂಡಾಗಲೂ ನನ್ನ ಮನಸ್ಸೀ ರೀತಿ ಚಲಿಸಿರಲಿಲ್ಲ! ಆದರೆ ಆಕೆಯನ್ನು ಕಂಡಾಗಿನಿಂದ ನನ್ನ ಮನಸ್ಸೇ ನನ್ನಧೀನದಲ್ಲಿಲ್ಲದೇ ಹೋಗಿದೆ! ಆಹ! ಆ ಚೆಲುವೆಯನ್ನು ಮತ್ತೊಮ್ಮೆ ನೋಡ ಬೇಕೆಂಬ ಆಶೆ ನನಗದೆಷ್ಟು ಪ್ರಬಲವಾಗಿದೆ! ಛೆ! ಇದು ಸರಿಯಲ್ಲ. ಪೂಜ್ಯ ವಿಶ್ವಾಮಿತ್ರರನ್ನು ಬಿಟ್ಟು ಇಷ್ಟು ದೂರ ಬಂದಿರುವುದು ಉಚಿತವಲ್ಲ. ಇಂದು ನಾನಾಕೆಯನ್ನು ನೋಡದಿರುವುದರಿಂದ ನನಗದೆಷ್ಟೇ ದುಮ್ಮಾನವಾದರೂ ಸಹಿಸಿ ಕೊಳ್ಳುತ್ತೇನೆ—ಆದರೆ ಈ ರೀತಿಯ ನನ್ನ ಸದಾಚಾರಚ್ಯುತಿಯನ್ನೆಂದಿಗೂ ನಾನು ಸಹಿಸಲಾರೆ. (ಎಂದು ಹೋಗಲು ಯತ್ನಿಸಿ) ಅಯ್ಯೋ! ಹೋಗಲು ಕಾಲೇ ಬಾರವು; ನೆಲದಲ್ಲವು ನಟ್ಟಂತಿವೆ. ಆಕೆಯನ್ನು ನೋಡವ ನನ್ನ ಕಣ್ಣಿಗಿ ನ್ನೇನೂ ಬೇಡವಾಗಿದೆ. ಯಾವಳನ್ನು ಕಂಡು ನನ್ನ ಕಣ್ಣು ಆನಂದಭರಿತವಾಗು ತ್ತದೋ ಅವಳನ್ನು ಕಂಡು ಹೋಗುತ್ತೇನೆ.

(ತೆರೆಯ ಮರೆಯಲ್ಲಿ)

ಇತ್ತ, ಇತ್ತ ಸಖಿಯರೇ

ರಾಮ—(ಕಿವಿಗೊಟ್ಟಾಲಿಸಿ, ನೋಡಿ) ಇದು ಭ್ರಮೆಯೆ? ಅಲ್ಲ! ಇದು ಸತ್ಯ! ನನ್ನ ಕಣ್ಣಿಗನಂತಾನಂದಸ್ಯಂದಿನಿಯಾದ ಆ ಪೂರ್ಣೇಂದುವದನೆಯು, ಸಾಯುತ್ತಿರುವವನ ಬಳಿಗೆ, ತಂಬೆಳಕನ್ನು ಚೆಲ್ಲುತ್ತ, ಸಂಜೀವಿನಿಯಂತೆ ಇತ್ತಲೇ ಬರುತ್ತಿದ್ದಾಳೆ. ಬಾನಿನಲ್ಲಿ ಮುಗಿಲನ್ನು ಕಂಡ ನವಿಲು ನರ್ತಿಸುವಂತೆ ಸೀತೆಯ ಸಮಾಗಮನವನ್ನು ಕಂಡ ನನ್ನ ಮನಸ್ಸು ಆನಂದ ನಾಟ್ಯವಾಡುತ್ತಿದೆ. (ಎಂದು ಮರೆಯಾಗಿ ನಿಲ್ಲುವನು)

(ಅನಂತರ ಇಬ್ಬರು ಸಖಿಯರೊಡನೆ ಸೀತೆಯು ಪ್ರವೇಶಿಸುವಳು)

ಚಂದ್ರಕಲೆ—ರಾಜಕುಮಾರಿ, ಈ ಉದ್ಯಾನದಲ್ಲೆಲ್ಲಿ ಕುಳಿತುಕೊಳ್ಳೋಣ?

ಮಧುರಿಕೆ—ಮಾಧವೀಲತೆಯ ಬಳಿ ಅಥವಾ ಅಶೋಕವೃಕ್ಷದ ಕೆಳಗೆ.

ಸೀತೆ—ಗೆಳತಿ, ಚಂದ್ರಕಲೆ, 'ರಾಜಕುಮಾರಿ'ಯೆಂದೇಕೆ ನನ್ನನ್ನು ಕೂಗುತ್ತಿ? 'ಸಖಿ, ಸೀತೆ' ಎಂದು ಸಹಜವಾಗಿ ಕೂಗು.

ಚಂದ್ರಕಲೆ—ಅದೇನಿಂದು, ನೀನು ಪರವಶತೆಯಿಂದ ಅನ್ಯಳಂತೆ ಕಾಣುತ್ತಿ ದ್ದೀಯಲ್ಲಾ?

ಸೀತೆ—ಚಂದ್ರಕಲೆ, ಹೀಗೇಕೆ ಮಾತನಾಡುತ್ತೀ? ನಾನು ನಿಮ್ಮ ಅದೇ ನಚ್ಚಿನ ಗೆಳತಿ ಸೀತೆಯಲ್ಲವೆ?

ಮಧುರಿಕೆ—ನನಗೂ ನೀನನ್ಯಳಂತೆಯೇ ಕಾಣುತ್ತಿದ್ದೀಯೆ! ಮೊದಲಿನ ಆ ನಿನ್ನ ಲವಲವಿಕೆಯೆಲ್ಲಿ ಹೋಯ್ತು? ನಿನ್ನ ಕಣ್ಣು ಭಯಪಟ್ಟವಳ ಕಣ್ಣಿನಂತೆ ಭಾರವಾಗಿವೆ. ಅವು ಕೆಂಪಗಿರುವುದರಿಂದ ಯಾವುದೋ ನಿರೀಕ್ಷಣೆಯಲ್ಲಿ ಸದಾ ಎಚ್ಚರವಾಗಿರುವಂತಿವೆ. ರಹಸ್ಯವಾಗಿ ನೀನೇನು ಚಿಂತಿಸುತ್ತಿರುವೆಯೋ ನಾವರಿಯೆವು.

ಚಂದ್ರಕಲೆ—ಸಖಿ, ನೀನಿಂದಿಲ್ಲಿಗೆ ಹೊತ್ತಿಗೆ ಮುಂಚೆಯೇ ಬಂದಿದ್ದೀಯಲ್ಲಾ!

ಮಧುರಿಕೆ—ನಿನಗೂ ಹರೆಯ ಬಂತು, ನಿನ್ನ ಬಾಹುಲತೆಯನ್ನು ಕೊರಳಲ್ಲಿ ಅಲಂಕರಿಸಿಕೊಂಡು ಧನ್ಯನಾಗುವ ಆ ಅದೃಷ್ಟಶಾಲಿ ಯುವಕನೆಲ್ಲಿರುವನೋ!

ಸೀತೆ—ಹೋಗ್ರೇ ಅಮ್ಮಾ! ನೀವು ಅದೇನು ಹೇಳುತ್ತಿರುವಿರೋ ನನಗೊಂದೂ ಗೊತ್ತಾಗದು.

ರಾಮು—(ಸ್ವಗತ) ನನಗೂ ಇಂದು ಈಕೆ ಬೇರೆ ರೀತಿಯಲ್ಲಿ ಕಾಣುತ್ತಿರುವಳು. ಇವಳು ಬ್ರಹ್ಮರ್ಷಿಯೊಬ್ಬನ ಮಗಳಾಗಿ ನನಗೆ ದೊರಕದೇ ಹೋಗದಿರಲಿ—ದೇವರ ದಯೆಯಿಂದ. ಒಂದುಪಕ್ಷ ಇವಳು ಇನ್ನೊಬ್ಬನಿಗೆ ನಿಶ್ಚಯವಾದ ಹೆಣ್ಣಾದರೂ ನನಗಿವಳ ಲಭ್ಯವಿಲ್ಲ. ಆಗ ನಾನೀಕೆಯಲ್ಲಿ ಮನಸ್ಸಿಟ್ಟದ್ದು ವ್ಯರ್ಥ! (ಯೋಚಿಸಿ) ಹಾಗಾಗದು. ನನ್ನ ಮನಸ್ಸೀಕೆಯಲ್ಲಿ ಅನುರಕ್ತವಾಗಿರುವುದೇ ನನಗಿವಳು ದುರ್ಲಭಳಲ್ಲವೆಂಬುದಕ್ಕೆ ಸಾಕ್ಷಿ. ಏನು ಮಾಡಬೇಕು, ಏನು ಮಾಡಬಾರದೆಂಬುದರ ಬಗ್ಗೆ ಸಂತರ ಮನಸ್ಸೇ ಪ್ರಮಾಣ.

ಸೀತೆ—ಯಾಕೋ ಕಾಣೆನಲ್ಲಾ! ನನ್ನ ಮನಸ್ಸಿಗಿಂದು ಎಂದಿನಂತೆ ಉದ್ಯಾನದಲ್ಲಿ ನೆಮ್ಮದಿಯಿಲ್ಲ. ದೇಹವೆಲ್ಲ ಉರಿಯುವಂತಿದೆ; ಅಲುಗಲೂ ಅಶಕ್ತಳಾಗಿದ್ದೇನೆ.

ಮಧುರಿಕೆ—ಮರದ ನೆರಳಿರುವ ಈ ಮಣಿಖಚಿತವಾದ ಶಿಲಾಪೀಠದ ಮೇಲೆ ಬಾ ಕುಳಿತುಕೊ, ಈ ಉದ್ಯಾನದ ತಂಪುಕಂಪಿನ ಎಳೆಗಾಳಿ ನಿನ್ನ ದೇಹವನ್ನು ಹಾಯಾಗಿಡುವುದು.

ಸೀತೆ—ಆಗಲಿ, ಬನ್ನಿ ಕುಳಿತುಕೊಳ್ಳೋಣ. (ಎಲ್ಲರೂ ಕುಳಿತುಕೊಳ್ಳುವರು)

ಸೀತೆ—(ನಿಟ್ಟುಸಿರು ಬಿಟ್ಟು) ನನ್ನ ದೇಹದ ಉರಿಯಿನ್ನೂ ಹೆಚ್ಚುತ್ತಿದೆ.

(ಮಧುರಿಕೆಯು ತಾವರೆಯ ದಳದಿಂದ ಬೀಸುವಳು)

ರಾಮ—(ಸ್ವಗತ) ಆಕೆಯ ದೇಹದ ಉರಿಯಿಂದ ನಾನೂ ಇಲ್ಲಿ ಬೇಯುತ್ತಿದ್ದೇನೆ!

ಸೀತೆ—ಈ ತಾಪವು ತಂಗಾಳಿಯಿಂದ ತಗ್ಗುವುದಿಲ್ಲ! ಆದ್ದರಿಂದ ಬೀಸಿ ಬಳಲ ಬೇಡಿ, ಸುಮ್ಮನಿರಿ.

ಮಧುರಿಕೆ—ಚಂದ್ರಕಲೆ, ನಾನು ಆಗಲೇ ಆಲೋಚಿಸಿದಂತೆ ನಮ್ಮ ಸಖಿಗೆ ಅದೇ ಸಂತಾಪ. ಇದು ಶರೀರದ ಸಂತಾಪವಲ್ಲ, ಮಾನಸಿಕವಾದುದು.

ಚಂದ್ರಕಲೆ—ಏನು ಮಾಡುವುದು? ರಾಮಕುಮಾರನು ತನ್ನ ಮನಸ್ಸಿನಲ್ಲಿ ರುವುದೇನೆಂಬುದನ್ನು ಬಿಚ್ಚಿ ಹೇಳನಲ್ಲಾ!

ಮಧುರಿಕೆ—ಆ ಪೂಜ್ಯ ರಾಮಚಂದ್ರನು ದೃಢವ್ರತನು, ವಿಶ್ವಾಮಿತ್ರರಿಗೆ ವಿಧೇಯ; ಆತನನ್ನು ಒಲಿಸುವುದಸಾಧ್ಯ.

ರಾಮ—(ಸ್ವಗತ) ಸಂತಪಿಸುತ್ತಿರುವ ಸೀತೆಯ ಮುಖವು ಬಿಳುಪೇರಿದ್ದರೂ ಕಳೆಗುಂದಿಲ್ಲ.

ಚಂದ್ರಕಲೆ—ಇನ್ನೇನು ಗತಿ? ನಮ್ಮ ಪ್ರಿಯಸಖಿಯ ಸ್ಥಿತಿ ಶೋಚನೀಯ ವಾಗಿದೆ.

ಮಧುರಿಕೆ—ಆಗಲಿ. ವಿಶ್ವಾಮಿತ್ರರ ಅಭಿಪ್ರಾಯದಲ್ಲಿ, ಧರ್ಮ ವಿರುದ್ಧವಾದ ಪ್ರೇಮವನ್ನು ಬೆಳೆಸಬಾರದು. ಆದರೆ ಈ ಪ್ರೇಮ ಧರ್ಮಸಮ್ಮತವಾಗಿದೆ. ಇವರಿಬ್ಬರ ವಿವಾಹದಿಂದ ವಿಶ್ವಾಮಿತ್ರರು ಪ್ರಸನ್ನರಾಗುವರೆಂಬುದು ನಿಸ್ಸಂಶಯ.

ಚಂದ್ರಕಲೆ—ಈ ಶುಭಕಾರ್ಯವನ್ನು ಹೇಗೆ ಪ್ರಾರಂಭಿಸುವುದೋ?

ಸೀತೆ—ಸಖಿಯರೇ, ಬಿಸಿಲಿನ ತಾಪ ಬಹಳವಾಯಿತು!

ಮಧುರಿಕೆ—ಪ್ರಿಯಸಖಿ, ಸೀತೆ, ನೀನು ತಣ್ಣೆಳಲಲ್ಲಿರುವೆಯಲ್ಲಾ! ಬಿಸಿಲೆಲ್ಲಿ ಬಂತು!?

ಸೀತೆ—(ಲಜ್ಜೆಯಿಂದ) ಓಹೋ! ಇದು ನೆಳಲೇನು?

ಮಧುರಿಕೆ—ಪ್ರಿಯಸಖಿ, ಸೀತೆ, ಈ ನಿನ್ನ ಸಂತಾಪ, ಮನ್ಮಥನಿಗೆ ಸಂಬಂಧಿ ಸಿದಂತೆ ಕಾಣುವುದು. ಏಕೆಂದರೆ—ನೀನು ಈ ಉದ್ಯಾನದಲ್ಲಿ ಶ್ರೀರಾಮನನ್ನು

ನೋಡಿದಂದಿನಿಂದ ನಿನಗೀ ಸಂತಾಪ ಪ್ರಾರಂಭವಾಗಿದೆ! ಇದು ದಿನೇ ದಿನೇ ಹೆಚ್ಚುತ್ತಲೇ ಇದೆ. ಈ ಮಾತು ನಿಜವಾದರೆ—ಹೇಳಿಬಿಡು, ಏನಾದರೂ ಒಂದು ಉಪಾಯ ಮಾಡೋಣ.

ಸೀತೆ—ಸಖಿ, ನನ್ನ ಮನದ ಮರೆಯ ವಿಚಾರ ಇದೇ ಎಂದು ನಿನಗೆ ಹೇಗೆ ಗೊತ್ತು?

ಮಧುರಿಕೆ—ಮತ್ತೆ, ನಿನಗೆ ಸಂತಾಪವಾಗುತ್ತಿರುವುದಿನ್ನಾವುದರಿಂದ?

ಸೀತೆ—(ಸೀತೆಯು ಲಜ್ಜೆಯಿಂದ ಮೌನವಾಗಿರುವಳು)

ಮಧುರಿಕೆ—ನಾಚಿಕೆಯೇಕೆ? ಕಾರಣವೇನೆಂದು ತಿಳಿಯದೆ, ನಿನ್ನ ಸಂತಾಪವನ್ನು ನಾವು ನಿವಾರಿಸುವುದಾದರೂ ಹೇಗೆ?

ಸೀತೆ—ನಿಜ! ನೀವು ಹೇಳಿದ್ದು ಸತ್ಯ! ನನ್ನ ದುಃಖವನ್ನು ನಿಮಗಲ್ಲದೆ ಮತ್ತಾರಿಗೆ ಹೇಳಲಿ?

ರಾಮ—(ಹರ್ಷದಿಂದ) ಈಗ ನನಗೆ ಜೀವ ಬಂದಂತಾಯಿತು!

ಮಧುರಿಕೆ—ಮಹಾರಾಜರಿಗೆ, ವಿಶ್ವಾಮಿತ್ರರಿಗೆ, ಆರ್ಯ ರಾಮನಿಗೆ ಈ ವೃತ್ತಾಂತವನ್ನಿನ್ನು ತಿಳಿಯುವಂತೆ ಮಾಡೋಣ.

ಸೀತೆ—(ನಿಟ್ಟುಸಿರುಬಿಟ್ಟು) ಚಂದ್ರಕಲೆ, ನೀವೊಂದು ಮುಖ್ಯವಾದ ಅಂಶವನ್ನೇ ಮರೆತುಬಿಟ್ಟಿರುವಿರಲ್ಲಾ!?

ಮಧುರಿಕೆ—ಏನು? ಏನದು!?

ಚಂದ್ರಕಲೆ—ಹೌದು, ನನಗೀಗ ನೆನಪಾಯಿತು. ಶಿವಧನುಸ್ಸಿಗೆ ಹೆದೆಯೇರಿಸಿದವನೇ ಈಕೆಗೆ ಗಂಡನಾಗಬೇಕೆಂದು ಮಹಾರಾಜರು ನಿಶ್ಚಯ ಮಾಡಿಕೊಂಡಿದ್ದಾರೆ! ಅದು ದುಷ್ಕರವಲ್ಲವೆ?

ಸೀತೆ—ಹ!

ಮಧುರಿಕೆ—ರಾಮನೇನೋ ಬಲಶಾಲಿಯೇ, ನಿಜ. ಆದರೆ ಅವನು ನೋಡಲು ಬಹಳ ರಮಣೀಯನಾಗಿರುವುದರಿಂದ, ಅವನು ಶಿವಧನುಸ್ಸನ್ನು ಬಗ್ಗಿಸಲಾರನೆಂದು ನನಗೆ ಭಯ!

ಸೀತೆ—ಹಾಗಾದರೆ ನಾನಿನ್ನು ಜೀವಿಸಿರಲಾರೆ. (ಎಂದು ಮೂರ್ಛೆ ಬೀಳುವಳು)

ಚಂದ್ರಕಲೆ—ದೇವರೇ ಕಾಪಾಡು. ಸೀತೆಯು ಮೂರ್ಛೆಹೋದಳು!

ರಾಮ—(ಜಾಗ್ರತೆ ಮುಂದೆ ಬಂದು) ಹೆದರ ಬೇಡಿ. ಈ ನನ್ನ ಪ್ರಿಯೆ ಹೇಗೆ....(ಎಂದು ಅರ್ಧೋಕ್ತಿಯಲ್ಲೇ ಮೌನವಾಗಿ ನಿಲ್ಲುವನು)

ಮಧುರಿಕೆ—ಪೂಜ್ಯನಿಗೆ ಸ್ವಾಗತ. ನಮ್ಮ ಈ ಪ್ರಿಯಸಖಿಯು ಶೋಕ ನೀಯಲಾಗದಂತೆ ನೋಡಿಕೊಳ್ಳುವುದು ನಿನ್ನ ಕರ್ತವ್ಯ.

ರಾಮ—ನಾನೆಲ್ಲವನ್ನೂ ಕೇಳಿಸಿಕೊಂಡೆ. ನನಗೊಂದು ಸಂಶಯವಿದೆ; ಕೇಳಲೆ ?

ಮಧುರಿಕೆ—ಕೇಳು.

ರಾಮ – ಈಕೆಯ ತಂದೆ ಯಾರು ?

ಚಂದ್ರಕಲೆ—ಬ್ರಹ್ಮಜ್ಞರಲ್ಲಿ ಅಗ್ರಗಣ್ಯನಾದ ಜನಕರಾಜರ್ಷಿ.

ರಾಮ—(ಸ್ವಗತ) ಇವಳು ಕ್ಷತ್ರಿಯಕನ್ಯೆ! ಹಾಗಾದರಿವಳು ನನಗೆ ಅಗಮ್ಯಳಲ್ಲ; ಮತ್ತು ಈಕೆಯಾದರೂ ನನ್ನಲ್ಲಿಟ್ಟಿರುವ ಪ್ರೇಮವು ಧರ್ಮ ಸಮ್ಮತವಾಗಿಯೇ ಇದೆ. (ಪ್ರಕಾಶ) ನಿಶ್ಚಯವಾಗಿಯೂ ಈಕೆಯ ಮನೋ ರಥವು ಸಫಲವಾಗುವುದು. ಇವಳನ್ನು ಕಾಣದೆ ನನಗೂ ಜಗತ್ತೆಲ್ಲವೂ ಶೂನ್ಯ ವಾಗಿತ್ತು. (ಹೀಗೆಂದು ಅರ್ಧಕ್ಕೆ ನಿಲ್ಲಿಸಿ, ಸ್ವಗತ) ನಾನೆಂತಹ ವಿವೇಕವಿಲ್ಲದ ಮಾತಾಡಿದೆ !

ಚಂದ್ರಕಲೆ—(ಸ್ವಗತ) ತಿಳಿಯಬೇಕಾದುದನ್ನು ತಿಳಿದಂತಾಯಿತು.

ಮಧುರಿಕೆ—ಮಗಳಿಗೆ ಮದುವೆ ಮಾಡಲು ಮಹಾರಾಜರು ಒಡ್ಡಿರುವ ಪಣ ಬಹು ದುಷ್ಕರವಾದುದು.

ರಾಮ—ಆ ಶಿವಧನುಸ್ಸನ್ನು ಬಾಗಿಸುವುದು ಮನುಷ್ಯಬಲದಿಂದ ಸಾಧ್ಯವಿದ್ದ ಪಕ್ಷಕ್ಕೆ ನೀವೀ ಸಂಬಂಧವಾಗಿ ಶೋಕಿಸಬೇಡಿ—ಈಕೆ ನನ್ನವಳೇ ಆಗುವಳು. ಜನಕರಾಜರ್ಷಿಯೇನಾದರೂ ತನ್ನ ಮಗಳ ಮದುವೆಯನ್ನು ತಡೆಯಲೆಂದೇ ಈ ಪಣವನ್ನು ಒಡ್ಡಿದ್ದರೆ, ಆಗ ಮಾತ್ರ ನಮ್ಮ ಸುಖದ ಆಶೆ ವಿಫಲವೆಂಬುದು ಖಚಿತ.

ಮಧುರಿಕೆ—ಎಲೆ ವೀರ, ದುಷ್ಕರವಾದುದನ್ನೂ ನೀನು ಮಾಡಬಲ್ಲೆ.

(ತೆರೆಯ ಮರೆಯಲ್ಲಿ)

ಇತ್ತ, ಇತ್ತ, ಮಹಾರಾಜರು

(ಸೀತೆಗೆ ಪ್ರಜ್ಞೆ ಬರುವುದು)

ರಾಮ—ಸಾಧಿಸಲಸಾಧ್ಯವಾದ ಬ್ರಹ್ಮವನ್ನು ಸಿಂಹಾಸನದ ಮೇಲೆ ಕುಳಿತಿದ್ದೂ ಸಾಕ್ಷಾತ್ಕಾರ ಮಾಡಿಕೊಂಡ ಮಹನೀಯನಿವನು; ಮಹರ್ಷಿಗಳು ಕೂಡ ಬ್ರಹ್ಮಜ್ಞಾನವನ್ನು ಪಡೆಯಲು ಈತನಲ್ಲಿಗೆ ಬರುವರು. ಸಂಸಾರದಲ್ಲಿದ್ದೂ ವಿಷಯರಹಿತನಾದ, ಯೋಗದಿಂದ ಆಶೆಗಳನ್ನು ಜಯಿಸಿದ ಆ ರಾಜರ್ಷಿಯಿತ್ತಲೇ ಗಂಭೀರವಾದ ನಡಿಗೆಯಿಂದ ಬರುತ್ತಿದ್ದಾನೆ. ನಾನೀಗ ಇಲ್ಲಿ ನಿಲ್ಲುವುದು ಸಲ್ಲದು. (ಎಂದು ನಿಷ್ಕ್ರಮಿಸುವನು)

ಸೀತೆ—(ಚೇತರಿಸಿಕೊಂಡು ಕುಳಿತು) ಗೆಳತಿಯರೇ, ಈಗೇನು ಮಾಡೋಣ?

ಚಂದ್ರಕಲೆ—ಈಗ ಮಾಡಬೇಕಾದಂಥದೇನಿದೆ ಹೊಸದು ? ಮಹಾರಾಜರು ಬಂದಾಗ ನಮಸ್ಕರಿಸು.

ಸೀತೆ—ನನ್ನ ಸಂತಾಪವೃತ್ತಾಂತವೊಂದಿಷ್ಟೂ ಮಹಾರಾಜರಿಗೆ ಗೊತ್ತಾಗ ಬಾರದು.

ಮಧುರಿಕೆ—ಈ ಸಂಶಯವನ್ನು ಬಿಡು. (ನಕ್ಕು) ಗೊತ್ತಾದರೆ ತಾನೆ ಏನು ? ನಿನ್ನ ಸಂತಾಪವನ್ನು ಕಳೆಯುವ ಉಪಾಯವನ್ನು ಕೈಗೊಳ್ಳುವರು.

ಸೀತೆ—ನಾನು ದುಃಖದಲ್ಲಿರುವಾಗ ನಿನಗೆ ಹಾಸ್ಯವೆ?

ಮಧುರಿಕೆ—ನಿನಗಿನ್ನೆಲ್ಲಿಯದು ದುಃಖ ? (ನಗುವಳು)

ಸೀತೆ—ಅದೋ ಮತ್ತೆ ಹಾಸ್ಯ!

ಮಧುರಿಕೆ—ಇದು ಹಾಸ್ಯವಲ್ಲ, ಕೇಳು: ರಾಮನಿಲ್ಲದೆ ನೀನು ಸಂತಪಿಸುವಂತೆ, ನೀನಿಲ್ಲದೆ ರಾಮನೂ ಸಂತಪಿಸುತ್ತಿದ್ದಾನೆ.

ಸೀತೆ—ಹೋಗೆ ನೀನು, ಅವರ ಹೆಸರು ಹೇಳುವೆಯಲ್ಲ!

ಮಧುರಿಕೆ—ಅವನು ನಿನಗೆ ಆರ್ಯಪುತ್ರ, ನಮಗೆ ಸ್ನೇಹಿತ.

ಸೀತೆ—ಅದು ನಿನಗೆ ಹೇಗೆ ಗೊತ್ತು ?

ಮಧುರಿಕೆ—(ಸೀತೆಯ ಕಿವಿಯಲ್ಲಿ ಹೇಳಿ) ಗೊತ್ತಾಯಿತೇ ?

ಸೀತೆ—ಸತ್ಯವಾಗಿ ?

ಮಧುರಿಕೆ—ಸತ್ಯವಾಗಿ!

ಸೀತೆ—(ಸಲೀಲೆಯಿಂದ) ಹೋಗೇಮ್ಮಾ! ನೀನು ಸಿಕ್ಕಿದಂತೆ ಮಾತನಾಡುತ್ತಿದ್ದೀಯೆ. ನೀನೇನು ಹೇಳಿದೆಯೋ ನನಗೆ ಕೇಳಿಸಲೇ ಇಲ್ಲವಮ್ಮ.

(ತೆರೆಯ ಮರೆಯಲ್ಲಿ)

ಇತ್ತ, ಇತ್ತ, ಮಹಾರಾಜರು.

ಚಂದ್ರಕಲೆ—ಮಹಾರಾಜರು ಬಂದರು.

(ಚೇಟಿಯರೊಡನೆ ಜನಕಮಹಾರಾಜನು ಪ್ರವೇಶಿಸುವನು)

ಜನಕ—ವಿದ್ವಾಂಸನ ವಿದ್ಯೆಯು ಗುಣವಂತನಿಗೆ ಕೊಟ್ಟ ಹೊರತು ಸಫಲ ವಾಗುವುದಿಲ್ಲ; ಹಾಗೆಯೇ ಮಗಳನ್ನು ಸಾಕಿ ಸಲಹಿ ಯೋಗ್ಯನಿಗೆ ಕೊಟ್ಟ ಹೊರತು ತಂದೆಯೂ ಕೃತಾರ್ಥನಾಗುವುದಿಲ್ಲ.

ಸೀತೆ—(ಬಳಿ ಬಂದು) ಅಪ್ಪಾಜಿ, ನಮಸ್ಕಾರ.

ಜನಕ—ಮಗು, ಸೀತೆ, ಸರ್ವಗುಣಸಂಪನ್ನನಾದ ಪತಿಯನ್ನು ಪಡೆಯಮ್ಮ ನೀನು.

ಸಖಿಯರು—ಪ್ರಿಯ ಸಖಿ, ನಿನ್ನ ತಂದೆಯ ಈ ಆಶೀರ್ವಾದ ಅವರು ನಿನಗೆ ಕೊಟ್ಟ ವರವೆಂದು ತಿಳಿ.

ಸೀತೆ—(ಕಂಬನಿದುಂಬಿ) ನಮ್ಮ ತಂದೆಯು ನನ್ನನ್ನು ದೇಶಾಂತರ ಕಳುಹಿಸುವರೇನು?

ಜನಕ—ದೇಶಾಂತರಕ್ಕೋ, ಜನ್ಮಾಂತರಕ್ಕೋ ಜೀವರು ತಮ್ಮ ಕರ್ಮಕ್ಕನು ಸಾರವಾಗಿ ಹೋಗುತ್ತಲೇ ಇರುತ್ತಾರೆ. ಹೋಗಿ, ತಮ್ಮ ಬಂಧುಬಳಗಕ್ಕೆ ಅವಮಾನವಾಗದಂತೆ ನಡೆದುಕೊಂಡರೆ, ಆಗವರು ತಾವೂ ದುರ್ಗತಿಗೀಡಾಗದೆ ಇನ್ನೊಬ್ಬರಿಗೂ ಮಾನ್ಯರಾಗುವರು.

ಸೀತೆ—ಧೀರರಾದ ತಂದೆಯವರ ಚಿತ್ತಸ್ಥೈರ್ಯ ನನಗಿಲ್ಲ.

ಜನಕ—ಕಾಲಬಂದಾಗ ಆ ಚಿತ್ತಸ್ಥೈರ್ಯ ನಿನಗೂ ಬರುತ್ತದೆ. ಪ್ರಿಯನ ಮೇಲಣ ಪ್ರೇಮದಿಂದ ನಮ್ಮನ್ನೆಲ್ಲ ಜಾಗ್ರತೆ ಮರೆತುಬಿಡುತ್ತೀಯೆ!

ಸೀತೆ—ಅಪ್ಪಾಜಿ, ನೀವೇನು ಹೀಗೆ ಮಾತನಾಡುತ್ತಿರುವಿರಿ? ಎಂದಿನವರಿಗೆ ನನ್ನ ದೇಹದಲ್ಲಿ ಚೇತನವಿರುವುದೋ, ಬುದ್ಧಿ ಸ್ಥಿಮಿತವಾಗಿರುವುದೊ ಅಲ್ಲಿಯ ವರಿಗೆ ನಿಮ್ಮ ಪವಿತ್ರಪಾದಗಳನ್ನು ಮರೆಯಲಾರೆ!

ಜನಕ—ಅನಿವಾರ್ಯವಾದ ಆ ಅಗಲಿಕೆಯನ್ನು ಕುರಿತು ಈಗೇಕೆ ಚಿಂತೆ? ಹೋಗು, ನಿನ್ನ ಗೆಳತಿಯರೊಡನೆ ವಿನೋದವಾಗಿರು ಹೋಗು; (ಚೇಟಿಯನ್ನು

ಕುರಿತು) ಜಯೆ, ನೀನು ಪೂಜ್ಯ ವಿಶ್ವಾಮಿತ್ರರ ಬಳಿ ಹೋಗಿ ಹೇಳು—"ಸಂಧ್ಯೋಪಾಸನೆಯಾದ ಮೇಲೆ ತಮಗೇನನ್ನೋ ಅರಿಕೆಮಾಡಿಕೊಳ್ಳಲು ನಾನು ಬರುವೆ"ನೆಂದು.

ಎಲ್ಲರೂ—ಅಪ್ಪಣೆಯಂತಾಗಲಿ. (ಎಂದು ಹೊರಡುವರು)

ಜನಕ—ಇನ್ನು ಆರು ದಿನಗಳಿಗೆ ನಾನು ಮಾಡುವ ಯಜ್ಞ ಮುಗಿದು ನನಗೆ ಅವಭೃತಸ್ನಾನವಾಗುವುದು. ಆಗ ವಿಧಿವತ್ತಾಗಿ ಸೀತೆಯನ್ನು ರಾಮನಿಗೆ ಧಾರೆ ಯೆರೆದುಕೊಡುವೆನು. ಸೀತೆಯನ್ನು ಮದುವೆಯಾಗುವವನು ಶಿವಧನುಸ್ಸನ್ನೇರಿಸ ಬೇಕೆಂಬ ನಿಯಮವನ್ನು ನಿರ್ವಹಿಸುವುದರಲ್ಲಿ ರಾಮನು ಸಮರ್ಥನೆಂಬ ಭರವಸೆ ಯನ್ನು ವಿಶ್ವಾಮಿತ್ರರು ನನಗೆ ಕೊಟ್ಟಿದ್ದಾರೆ. ಎಷ್ಟೋ ಜನ ವೀರರು ನನ್ನ ಈ ನಿಯಮವನ್ನು ಕೇಳಿ, ಶಿವಧನಸ್ಸನ್ನು ಬಾಗಿಸುವೆನೆಂಬ ಭರವಸೆಯಿಂದ ಬಂದು, ಅದು ಬಗ್ಗದಿರಲು, ನಾಚಿಕೆಯಿಂದ ತಲೆ ತಗ್ಗಿಸಿಕೊಂಡು ಹೋದರು. ಈಗ ವಿಶ್ವಾಮಿತ್ರರ ಮಾತಿನಿಂದ ನಂಬಿಕೆ ಹುಟ್ಟಿ, ನಾನು ಭಾಗ್ಯಶಾಲಿಯೆಂದುಕೊಂಡಿ ದ್ದೇನೆ. (ಯೋಚಿಸಿ) ನನ್ನ ಪರಮಮಿತ್ರನಾದ ದಶರಥಮಹಾರಾಜನಿಗೆ ಈ ಸಂಬಂಧವಾಗಿ ವಾರ್ತೆಯನ್ನು ಕಳುಹಿಸಿ ಆತನನ್ನೂ ಬರಮಾಡಿಕೊಳ್ಳುತ್ತೇನೆ. (ಎಂದು ನಿಷ್ಕ್ರಮಿಸುವನು)

ಎಂಟನೇ ದೃಶ್ಯ

(ಯಜ್ಞಮಂಟಪದಲ್ಲಿ ದಶರಥನು ಪುತ್ರರೊಡನೆಯೂ, ಜನಕನು ಪರಿವಾರ ದೊಡನೆಯೂ ಕುಳಿತಿದ್ದಾರೆ. ವಸಿಷ್ಠ ವಿಶ್ವಾಮಿತ್ರ ಶತಾನಂದರೂ ಮಂತ್ರಿಗಳೂ, ವಿದೂಷಕ ಮುಂತಾದವರೂ ಇರುವರು)

ಜನಕ—ಯಜ್ಞವನ್ನೆಲ್ಲರೂ ವಿಧಿಪೂರ್ವಕವಾಗಿ ಮಾಡಲೇ ಬೇಕು. ಯಜ್ಞ ದಿಂದ ದೇವತೆಗಳು ವರದರಾಗುತ್ತಾರೆ. ಯಜ್ಞದಲ್ಲಿ ಈಶನನ್ನೂ, ದೇಶದ ಜನರನ್ನೂ ಆರಾಧಿಸಿದರೆ ಯಥೇಚ್ಛವಾಗಿ ಯಜ್ಞಫಲವನ್ನನುಭವಿಸುವರು. ಅಪರಾಹ್ಣದಲ್ಲಿ ಯಜ್ಞ ಮುಗಿದು ಅವಭೃತಸ್ನಾನಮಾಡಿದೆ. ರಾಮಚಂದ್ರನಿಗೆ ರಸೋದ್ಭವೆಯಾದ ಸೀತೆಯನ್ನು ಕೊಟ್ಟೆ. ಮತ್ತು ರಾಮನಂತೆಯೇ ಗುಣವಂತ

ರಾದ ಭರತಲಕ್ಷ್ಮಣಶತ್ರುಘ್ನರೆಂಬ ರಾಮನ ತಮ್ಮಂದಿರಿಗೆ ಮಾಂಡವಿ, ಊರ್ಮಿಳೆ, ಶ್ರುತಕೀರ್ತಿ ಎಂಬವರನ್ನೂ ಕೊಟ್ಟೆ. ಈ ಎರಡು ರಾಜವಂಶಗಳ ಸಂಬಂಧವು ನಿಮ್ಮೆಲ್ಲರಿಗೆ ಒಪ್ಪಿಗೆಯಾದರೆ ಮೂರು ಸಲ 'ಸ್ವಸ್ತಿ'ಯೆನ್ನಿ.

ಎಲ್ಲರೂ—ಸ್ವಸ್ತಿ ! ಸ್ವಸ್ತಿ ! ಸ್ವಸ್ತಿ !

(ಹೂಮಳೆಗರೆಯುವುದು)

(ತೆರೆಯ ಮರೆಯಲ್ಲಿ)

ಆಃ ಇಷ್ಟೆಲ್ಲವನ್ನೂ ನನಗೆ ತಿಳಿಸದೆಯೇ ಮಾಡಿಬಿಟ್ಟರೋ !?

ವಸಿಷ್ಠ—ಆಹ! ಭಗವಾನ್ ಭಾರ್ಗವನು ಭ್ರೂಭಂಗದಿಂದ ಭುವನಗಳನ್ನೆಲ್ಲ ಭಯಗೊಳಿಸುತ್ತ ಇತ್ತಲೇ ಬರುತ್ತಿರುವನು !

(ಎಲ್ಲರೂ ಎದ್ದು ತಲೆಬಾಗಿ ನಿಲ್ಲುವರು)

ರಾಮ—(ಎದ್ದು) ಹೆದರಬೇಡಿ, ವಿಪ್ರರು ಕ್ರೋಧಗೊಂಡು ಶಸ್ತ್ರದಿಂದಾಗಲೀ ಶಾಪದಿಂದಾಗಲೀ ಕೊಲ್ಲಲೈತಂದರೂ, ವಿನಯದಿಂದ ಕೇಳಿಕೊಂಡೊಡನೆಯೇ ಕೋಪವನ್ನು ಬಿಟ್ಟು ಪ್ರಸನ್ನರಾಗುವರು.

(ಆಮೇಲೆ ಕ್ರೋಧಾವಿಷ್ಟನಾದ ಪರಶುರಾಮನ ಪ್ರವೇಶ)

(ಎಲ್ಲರೂ ನಮಸ್ಕರಿಸುವರು)

ಪರಶುರಾಮ—(ಜನಕನನ್ನು ಕುರಿತು) ಶೈವಧನುಸ್ಸು ರಾಮನಿಂದ ಭಗ್ನ ವಾಯಿತೆಂದು ಕೇಳಿ, ತಪವನ್ನು ಬಿಟ್ಟು ಬೇಗ ಬಂದಿದ್ದೇನೆ. ಆ ಬಾಲಕನಿಂದ ಅದು ಹೇಗೆ ಸಾಧ್ಯವಾಯಿತು? ಸಿಂಹದ ಮರಿಯಾದರೂ ಹೇಗೆ ಮರವನ್ನು ಬುಡಮೇಲು ಮಾಡೀತು ?

ಜನಕ—ಪೂಜ್ಯರೇ, ಯಾವನಾ ಧನುಸ್ಸಿಗೆ ನಾರಿಯನ್ನೇರಿಸುವನೋ ಅವನಿಗೆ ನನ್ನ ಮಗಳಾದ ಸೀತೆಯನ್ನು ಕೊಡುವೆನೆಂದು ನಿಯಮಮಾಡಿ ಕೊಂಡಿದ್ದೆ.

ಪರಶುರಾಮ—ಅದೆಲ್ಲ ನನಗೆ ಗೊತ್ತಯ್ಯ. ಆಮೇಲೇನಾಯಿತು ?

ಜನಕ—ಆಯುಷ್ಮಂತ ರಾಮನು ಆ ಧನುಸ್ಸನ್ನೆತ್ತಿದಾಗ ಅದು ಮುರಿಯಿತು.

ಪರಶುರಾಮ—(ರಾಮನನ್ನು ಕುರಿತು) ಹೌದೇನೋ ಮಗು?

ರಾಮ—ಪೂಜ್ಯರು ನನ್ನ ಬಾಲಚಾಪಲ್ಯವನ್ನು ಮನ್ನಿಸ ಬೇಕು.

ಪರಶುರಾಮ—ಅದೆಂತಹುದಯ್ಯ ಬಾಲಚಾಪಲ್ಯ?!

ರಾಮ—ಬಹಳ ಕಾಲದಿಂದ ಬಾಗಿಸಿ ಬಳಸದೆ ಹಳೆಯದಾದುದನ್ನರಿಯದೆ, ನಾರಿಯನ್ನೆಳೆದು ಬಾಗಿಸಲು ಹೋದೆ, ಅದು ಮುರಿದು ಎರಡಾಯಿತು.

ಪರಶುರಾಮ—ಹಾಗಾದರೆ, ಈ ನನ್ನ ಧನುಸ್ಸಿಗೂ ನಾರಿಯೇರಿಸು ನೋಡೋಣ! (ಧನುಸ್ಸನ್ನು ಕೊಡುವನು)

ರಾಮ—ಪೂಜ್ಯರ ಅಪ್ಪಣೆಯಂತಾಗಲಿ. (ಧನುಸ್ಸನ್ನು ಇಸುಕೊಳ್ಳುವನು)

ಪರಶುರಾಮ—ನಿಲ್ಲು! ನಿನ್ನ ವೈಷ್ಣವರೂಪವನ್ನು ಕಂಡಂತಾಯಿತು! (ಸ್ವಗತ) ನನ್ನ ಆಶೆ ಈಡೇರಿತು! ಪಾಪಿಗಳನ್ನೂ, ಅಧರ್ಮಿಷ್ಟರನ್ನೂ, ಬಲಿಷ್ಠರಾದ ಖಳರನ್ನೂ, ಬ್ರಹ್ಮದ್ವೇಷಿಗಳನ್ನೂ ನಾನು ವಿಧಿವಶದಿಂದ ಕೊಂದು ಪೂರೈಸಿಲ್ಲ. ನಾನು ತಪಸ್ಸಿಗೆ ತೆರಳಿದ ಮೇಲೆ ಅವರನ್ನೆಲ್ಲ ಕೊಲ್ಲುವವರಾರೆಂದು ಚಿರಕಾಲದಿಂದ ನನಗೊಂದು ಚಿಂತೆಯಿತ್ತು. ಈಗ ಶ್ರೀ ವಿಷ್ಣುವಿನ ಅಂಶದಿಂದ ಹುಟ್ಟಿದ ಈ ರಾಮನು ನಾನಾರಂಭಿಸಿದ ಆ ಕಾರ್ಯವನ್ನು ಪೂರೈಸುವನು. ನನಗೆ ಸಂಶಯವಿಲ್ಲ; (ಪ್ರಕಾಶ) ಮಗು ದಶರಥನ ಕಂದ ವೈಕುಂಠವಾಸಿಯಾದ ದೇವ, ತಪೋವನದಲ್ಲಿ ನೀನು ರಾಕ್ಷಸರನ್ನು ಕೊಂದೆಯೆಂಬ ಸುದ್ದಿಯನ್ನು ಕೇಳಿ ಪುರುಷೋತ್ತಮನು ರಾಮನ ರೂಪದಲ್ಲಿ ಬಂದಿರುವನೆಂದು ತಿಳಿದೆ. ಈಗ ಅದು ನನಗೆ ಸಾಕ್ಷಾತ್ಕಾರವಾಯಿತು. ಇದೋ, ತೆಗೆದುಕೋ ಪ್ರಣಾಮಪೂರ್ವಕವಾಗಿ ನಿನಗೆ ನನ್ನೀ ಧನುಸ್ಸನ್ನು ಅರ್ಪಿಸುತ್ತೇನೆ. ಪಾಪಿಗಳನ್ನು ಕೊಲ್ಲಲು ಮಾತ್ರ ಇದನ್ನು ಬಳಸು. ಪ್ರಭು, ಧರ್ಮಾತ್ಮರು ಸದಾ ನಿನ್ನಿಂದ ಅಭಯವನ್ನು ಪಡೆಯಲಿ.

ರಾಮ—ಹಾಗೇ ಆಗಲಿ.

ಪರಶುರಾಮ—ಧರ್ಮದಿಂದ ನಾನು ಜಯಿಸಿದ ಲೋಕಗಳನ್ನೆಲ್ಲ ಇಲ್ಲಿ ನೆರೆದಿರುವ ಸಭ್ಯರಿಗೆ ಕೊಟ್ಟು, ತತ್ತ್ವಚಿಂತನೆಗಾಗಿ ಹೋಗುತ್ತೇನೆ. ಚಿದಾನಂದ ಮಯವೂ, ಶಾಶ್ವತವೂ, ಪರಾತ್ಪರವೂ ಆದ ಬ್ರಹ್ಮದಲ್ಲಿ ನಾನು ಸದಾ ಲೀನನಾಗಿರುವಂತಾಗಲಿ.

ವಿದೂಷಕ—(ಸ್ವಗತ) ಜಾಗ್ರತೆ ಹೋಗ ಬಾರದೆ ಈ ಮುದಿಗರಡಿ!

ಪರಶುರಾಮ—ಇದೋ, ಹೋಗುತ್ತೇನೆ. (ಎಂದು ಶೀಘ್ರವಾಗಿ ನಿಷ್ಕ್ರಮಿಸುವನು)

ಜನಕ—ಆಹ! ಅಮಿತಬಲಪ್ರಭಾವದ ಪರಶುರಾಮನೀಗದೆಷ್ಟು ಶಾಂತನಾದ! ಇನ್ನು ಕ್ಷತ್ರಿಯರು ಸುಖವಾಗಿ ನಿದ್ರಿಸುವರು.

ರಾಮ—ಪರಶುರಾಮನು ವಹಿಸಿಕೊಟ್ಟಿರುವ ಮಹತ್ಕಾರ್ಯವನ್ನು ಮಾಡಿ ಮುಗಿಸುವವರೆಗೆ ನನಗೆ ನಿದ್ರೆಯಿಲ್ಲ.

ದಶರಥ—ಆಹ! ಭಾರ್ಗವನಿಗೆ ಬ್ರಹ್ಮತ್ವವಳವಟ್ಟಿತು.

ವಿದೂಷಕ—(ಸ್ವಗತ) ಹೋದ ಮೇಲೂ ಆ ಮುದಿರೆಗಡಿಯ ಗುಣಗಾನವನ್ನೇಕೆ ಮಾಡುತ್ತಿರುವರಿವರು!?

ವಿಶ್ವಾಮಿತ್ರ—(ಮೇಲೆ ನೋಡಿ) ದೇವತೆಗಳ ಆಶೀರ್ವಾದವನ್ನು ಸ್ವೀಕರಿಸಲು, ದಶರಥಕುಲಪ್ರದೀಪರಾದ ಮಕ್ಕಳು ನಾಲ್ವರೂ, ಪತ್ನಿಯರೊಡಗೂಡಿ ಯಜ್ಞಾಂಗಣದ ಮಧ್ಯೆ ಬಂದು ನಿಲ್ಲಲಿ.

ವಸಿಷ್ಠ—ಏನು?

ವಿಶ್ವಾಮಿತ್ರ—ನೀವೆಲ್ಲರೂ ಮೇಲೆ ನೋಡಿ (ಎಲ್ಲರೂ ಮೇಲೆ ನೋಡುವರು) ಬ್ರಹ್ಮ, ವಿಷ್ಣು, ಮಹೇಶ್ವರ, ಇಂದ್ರ, ನಾರದ, ತುಂಬುರು-ಮುಂತಾದವರು ಮಂದಾರದ ಹೂಗಳನ್ನು ಕೈಗಳಲ್ಲಿ ತುಂಬಿಕೊಂಡು ಕಲ್ಯಾಣವಾಗಲೆಂದು ಹರಸಲು ಆಕಾಶದಲ್ಲಿ ನಿಂತಿದ್ದಾರೆ.

ದಶರಥಜನಕರು—ಸತ್ಯ!

(ಆಗ ನಾಲ್ವರು ವಧುಗಳು ಬಂದು, ತಮ್ಮ ತಮ್ಮ ಪತಿಗಳ ಎಡಪಕ್ಕದಲ್ಲಿ ನಿಲ್ಲುವರು. ಆಕಾಶದಿಂದ ಹೂಮಳೆಗರೆಯುವುದು)

ಸರ್ವರೂ—ಸ್ವಸ್ತಿ! ಸ್ವಸ್ತಿ! ಸ್ವಸ್ತಿ!

ವಿಶ್ವಾಮಿತ್ರ—ಗೆಳೆಯ ದಶರಥ, ನಿನಗಿನ್ನೇನು ಪ್ರಿಯವನ್ನು ಮಾಡಲಿ?

ದಶರಥ—ಮಕ್ಕಳಿಲ್ಲವೆಂಬ ದುಃಖ ಮಾಯವಾಯಿತು; ರಾಜರ್ಷಿ ಜನಕನೊಡನೆ ಸಂಬಂಧವಾಯಿತು; ಶೂರರಾದ ನನ್ನ ಮಕ್ಕಳೆಲ್ಲ ಪರಸ್ಪರ ಪ್ರೀತಿಯಿಂದಿದಾರೆ—ನನಗಿನ್ನೇನು ಬೇಕು!

ವಿಶ್ವಾಮಿತ್ರ—ಒಳ್ಳೆಯದಾಗಲಿ. (ಎಂದು ನಿಷ್ಕ್ರಮಿಸುವನು)

ಒಂಭತ್ತನೇ ದೃಶ್ಯ

(ಅಯೋಧ್ಯೆಯಲ್ಲಿ ದಶರಥನ ಅರಮನೆ. ಪ್ರತೀಹಾರಿಯು ಪ್ರವೇಶಿಸುವಳು)

ಪ್ರತೀಹಾರಿ—ಅಯ್ಯ, ಇಲ್ಲಿರುವ ಕಾಂಚುಕೀಯನಾರು?

ಕಾಂಚುಕೀಯ—(ಪ್ರವೇಶಿಸಿ) ಅಮ್ಮ, ನಾನೇ, ಏನಾಗ ಬೇಕು?

ಪ್ರತೀಹಾರಿ—ದಶರಥಮಹಾರಾಜರು ಆಜ್ಞಾಪಿಸಿದರು–ಕುಮಾರ ಶ್ರೀರಾಮನಿಗೆ ಪಟ್ಟಾಭಿಷೇಕ ಮಾಡಲು ಅವಶ್ಯವಾದ ಸಾಮಗ್ರಿಗಳನ್ನೆಲ್ಲ ಬೇಗ ತರಬೇಕಂತೆ.

ಕಾಂಚುಕೀಯ—ಶ್ರೀಮನ್ಮಹಾರಾಜರು ಏನಾಜ್ಞೆ ಮಾಡಿದ್ದರೋ ಅದೆಲ್ಲ ಅಣಿಯಾಗಿದೆ. ಶ್ವೇತಚ್ಛತ್ರ, ಚಾಮರ, ಮಂಗಳವಾದ್ಯ, ಭದ್ರಪೀಠ, ಹೊನ್ನಿನ ಪೂರ್ಣಕುಂಭಗಳು, ಹೂಡಿದ ರಥ—ಎಲ್ಲ ಸಿದ್ಧವಾಗಿವೆ. ಮಂತ್ರಿಗಳನ್ನು ಮುಂದುಮಾಡಿಕೊಂಡು ಪೌರರೆಲ್ಲರೂ ಬಂದು ನೆರೆದಿದ್ದಾರೆ. ಮಂಗಳಕಾರ್ಯವನ್ನು ನೆರವೇರಿಸಲು ಪೂಜ್ಯ ವಸಿಷ್ಠರೂ ಆಗಲೇ ವೇದಿಕೆಯಲ್ಲಿ ಮಂಡಿಸಿರುವರು.

ಪ್ರತೀಹಾರಿ—ಹಾಗಾದರೆ ಒಳ್ಳೆಯದೇ ಆಯಿತು, ನೀನೂ ಬೇಗ ಬೇಗ ನಡಿ.

ಕಾಂಚುಕೀಯ—ಅಮ್ಮ, ಇದೋ ಹೊರಟೆ. (ನಿಷ್ಕ್ರಮಿಸುವನು)

ಪ್ರತೀಹಾರಿ—(ಸುತ್ತಲೂ ನೋಡಿ) ಅಯ್ಯ, ಸಂಭವಕ! ಸಂಭವಕ! ಮಹಾರಾಜರು ಹೇಳಿದರೆಂದು—ಪೂಜ್ಯ ಪುರೋಹಿತರನ್ನು ಜಾಗ್ರತೆ ಬರಹೇಳು (ಮತ್ತೊಂದು ಕಡೆ ನೋಡಿ) ಸಾರಸಿಕೇ! ಸಾರಸಿಕೇ! ಸಂಗೀತಶಾಲೆಗೆ ಹೋಗಿ ನಟರಿಗೆ ಹೇಳು: ಸಮಯೋಚಿತವಾದ ನಾಟಕವೊಂದನ್ನಾಡಲು ಸಜ್ಜಾಗಬೇಕೆಂದು. ನಾನೂ ಹೋಗಿ, ಎಲ್ಲ ಸಿದ್ಧವಾಗಿದೆಯೆಂದು ಮಹಾರಾಜರಿಗೆ ಹೇಳುತ್ತೇನೆ. (ನಿಷ್ಕ್ರಮಿಸುವಳು)

(ಅವದಾತಿಕೆಯು ನಾರುಮಡಿಯನ್ನು ಹಿಡಿದು ಪ್ರವೇಶಿಸುವಳು)

ಅವದಾತಿಕೆ—ಅಯ್ಯೋ, ಏನನ್ಯಾಯ! ಕೇವಲ ಹುಡುಗಾಟಕ್ಕಾಗಿ ಈ ನಾರುಮಡಿಯನ್ನು ಯಾರೂ ಕಾಣದಂತೆ ತಂದಿರುವುದರಿಂದಲೇ ನನಗಿಷ್ಟು ಭಯವಾಗುತ್ತಿರಬೇಕಾದರೆ, ಇನ್ನು ಪರಧನವನ್ನು ಲೋಭದಿಂದ ಅಪಹರಿಸುವವರಿಗೆ ಹೇಗಾಗಬೇಕು? ನನಗೆ ನಗು ಬರುತ್ತಿದೆ, ಆದರೆ ಒಬ್ಬಳೇ ನಕ್ಕರೇನು ಚಂದ!

(ಪರಿವಾರದೊಡನೆ ಸೀತೆಯು ಪ್ರವೇಶಿಸುವಳು)

ಸೀತೆ—ಏನೇ, ಅವದಾತಿಕೆಯು ಗಾಬರಿಗೊಂಡವಳಂತೆ ತೋರುವಳು. ಅದೇನಿದ್ದೀತು.

ಚೇಟಿ—ರಾಜಕುವರಿ, ಊಳಿಗದವರು ತಪ್ಪುಮಾಡುವುದು ಅಪರೂಪವೇನೂ ಅಲ್ಲ. ಏನೋ ಅಪರಾಧ ಮಾಡಿದ್ದಾಳೆ.

ಸೀತೆ—ಇಲ್ಲ, ಇಲ್ಲ, ನಗಬೇಕೆನ್ನುವಂತಿದ್ದಾಳೆ.

ಅವದಾತಿಕೆ—(ಹತ್ತಿರ ಬಂದು) ನಮಸ್ಕಾರ ತಾಯಿ, ನಾನೇನೂ ಅಪರಾಧ ಮಾಡಿದವಳಲ್ಲ.

ಸೀತೆ—ಹಾಗೆಂತ ನಿನ್ನನ್ನು ಯಾರು ಕೇಳಿದರು, ಅವದಾತಿಕೆ? ಏನದು ನಿನ್ನೆಡಗೈಯಲ್ಲಿರುವುದು?

ಅವದಾತಿಕೆ—ರಾಜಕುಮಾರಿ ಇದು ನಾರುಸೀರೆ.

ಸೀತೆ—ನಾರುಸೀರೆಯನ್ನೇಕೆ ತಂದಿದೀಯೆ?

ಅವದಾತಿಕೆ—ರಂಗಮಂಟಪದ ರೇವಮ್ಮನಿಲ್ಲವೇ? ಆಕೆಯನ್ನು ರಂಗ ಪೂಜೆಯ ಕೆಲಸ ತೀರಿದ ಮೇಲೆ, ಉಳಿದ ಅಶೋಕದ ಚಿಗುರನ್ನು ಕೊಡೆಂದು ಕೇಳಿದ್ದೆ. ಅವಳದನ್ನು ಕೊಡಲೇ ಇಲ್ಲ. ಆಗಲಿ, ಅವಳಿಗೆ ಮಾಡುತ್ತೇನೆಂದು ಇದನ್ನು ಕಾಣದಂತೆ ತಂದಿದ್ದೇನೆ.

ಸೀತೆ—ಛೇ, ಪಾಪ ಮಾಡಿದೆ. ಹೋಗು; ಹಿಂತಿರುಗಿಸು.

ಅವದಾತಿಕೆ—ಅಮ್ಮ, ಹಾಸ್ಯಕ್ಕಾಗಿಯಲ್ಲವೆ ನಾನಿದನ್ನು ತಂದಿರುವುದು?

ಸೀತೆ—ಹುಚ್ಚಿ, ಹೀಗೇ ದೋಷ ಬೆಳೆಯುವುದು. ಹೋಗು, ಹಿಂತಿರುಗಿಸು, ಮೊದಲು ಹಿಂತಿರುಗಿಸು.

ಅವದಾತಿಕೆ—ತಾಯಿ, ಅಪ್ಪಣೆ. (ಹೋಗಲುದ್ಯೋಗಿಸುವಳು)

ಸೀತೆ—ಎಲ್ಲಿ, ಇಲ್ಲಿ ಬಾ.

ಅವದಾತಿಕೆ—ಬಂದೆ ರಾಜಕುಮಾರಿ, ಏನು?

ಸೀತೆ—ಅಲ್ಲಾ, ಉಟ್ಟರೆ ಇದು ನನಗೂ ಒಪ್ಪುವುದಲ್ಲವೆ?!

ಅವದಾತಿಕೆ—ರಾಜಕುಮಾರಿ, ನೋಡಲು ಚೆಲುವಾಗಿರುವವರಿಗೆ ಎಲ್ಲವೂ ಚೆನ್ನ. ಉಟ್ಟುಕೊಳ್ಳಿ ತಾಯಿ.

ಸೀತೆ—ಹಾಗಾದರೆ ಇಲ್ಲಿ ತಾ. (ಎಂದು ತೆಗೆದು ಉಟ್ಟು) ನೋಡೇ ಚೆನ್ನಾಗಿ ಕಾಣುವುದೇನೋ?

ಅವದಾತಿಕೆ—ನಿಮಗದೆಷ್ಟು ಚೆನ್ನಾಗಿ ಕಾಣುವುದಮ್ಮ. ನಾರುಮಡಿಯು ಜರತಾರಿ ಸೀರೆಯುಂತಿದೆಯಲ್ಲ!

ಸೀತೆ—(ಚೇಟಿಯು ಕಡೆ ನೋಡಿ) ಏನೇ, ನೀನೇನೂ ಹೇಳುತ್ತಲೇ ಇಲ್ಲ!

ಚೇಟಿ—ಅಮ್ಮ, ಮಾತಿನಿಂದೇನು ಪ್ರಯೋಜನ? ನೋಡಿ ಈ ನನ್ನ ಮೈಯ ರೋಮಾಂಚವೇ ಹೇಳುತ್ತಿದೆಯಲ್ಲ! (ಎಂದು ರೋಮಾಂಚವನ್ನು ತೋರುವಳು)

ಸೀತೆ—ಎಲ್ಲಿ, ಹಾಗಾದರೆ ಕನ್ನಡಿಯನ್ನಿಲ್ಲಿ ತಾ.

ಚೇಟಿ—ಬಂದೆ ತಾಯಿ (ಎಂದು ಹೋಗಿ ತಂದು) ಇದೋ ನೋಡಿ ಕನ್ನಡಿ.

ಸೀತೆ—(ಚೇಟಿಯು ಮುಖವನ್ನು ನೋಡಿ) ಕನ್ನಡಿ ಹಾಗಿರಲಿ; ನೀನೇನೋ ಹೇಳಬೇಕೆಂದಿರುವಂತಿದೆ.

ಚೇಟಿ—ರಾಜಕುಮಾರಿ, ನನಗೇನೋ ಒಂದು ಮಾತು ಕಿವಿಯ ಮೇಲೆ ಬಿದ್ದಿದೆ. ಕಂಚುಕಿಯಾದ ಬಾಲಾಕಿ ಅಜ್ಜನು 'ಅಭಿಷೇಕ, ಅಭಿಷೇಕ' ಅನ್ನುತ್ತಿದ್ದನು.

ಸೀತೆ—ಯಾವನೋ ಒಬ್ಬ ರಾಜಕುಮಾರನಿಗೆ ಪಟ್ಟಾಭಿಷೇಕವಾಗಬಹುದು.

(ಇನ್ನೊಬ್ಬ ಚೇಟಿ ಬಂದು)

ಚೇಟಿ—ತಾಯಿ, ಸಂತೋಷ ಸಮಾಚಾರ! ಸಂತೋಷ ಸಮಾಚಾರ!

ಸೀತೆ—ಏನು ಏನು! ಯಾವುದನ್ನು ಕುರಿತು ಇಷ್ಟು ಸಡಗರ?

ಚೇಟಿ—ರಾಜಕುಮಾರ ಶ್ರೀರಾಮಚಂದ್ರನಿಗಿಂದು ಪಟ್ಟಾಭಿಷೇಕವಲ್ಲವೆ!

ಸೀತೆ—ಹಾಗಾದರೆ ಮಾವನವರು ಆರೋಗ್ಯ ತಾನೇ?

ಚೇಟಿ—ಮಹಾರಾಜರೇ ನಿಂತು ಎಲ್ಲವನ್ನೂ ಮಾಡುವರು.

ಸೀತೆ—ಹಾಗಾದರೆ ಇದು ನನಗೆ ಎರಡನೇ ಶುಭವಾರ್ತೆ; ಎಲ್ಲಿ, ನಿನ್ನ ಮಡಿಲನ್ನು ಅಗಲವಾಗಿ ಹಿಡಿ.

ಚೇಟಿ—ತಾಯಿ, ಆಗಲಿ (ಮಡಿಲೊಡ್ಡುವಳು)

(ಸೀತೆ ಮೈಮೇಲಣ ಒಡವೆಗಳನ್ನು ಬಿಚ್ಚಿ ಮಡಲಿಗೆ ಹಾಕುವಳು)

ಚೇಟಿ—ತಾಯಿ, ಅದೋ ಮಂಗಳವಾದ್ಯಗಳ ಶಬ್ದ!

ಸೀತೆ—ನಿಜ, ಅದೇ!

ಚೇಟಿ—ಇದೇನು? ಇದ್ದಕ್ಕಿದ್ದಂತೆ ಮಂಗಳವಾದ್ಯದ ಶಬ್ದ ನಿಂತು ಹೋಯಿತು.

ಸೀತೆ—ಅಭಿಷೇಕಕ್ಕಡ್ಡಿಯೇನು ಬಂತೋ ಕಾಣೆನಲ್ಲ! ಘಳಿಗೆಗೊಂದು ವೃತ್ತಾಂತ, ಅರಮನೆಗಳ ಹಣೆಯ ಬರಹವೇ ಇಷ್ಟು.

ಚೇಟಿ—ರಾಜಕುಮಾರಿ, ಮಹಾರಾಜರು ರಾಜಕುಮಾರನಿಗೆ ಪಟ್ಟಾಭಿಷೇಕ ಮಾಡಿಯಾದ ಮೇಲೆ ಕಾಡಿಗೆ ಹೋಗುವರಂತೆ.

ಸೀತೆ—ಹಾಗಾದರೆ ಇದು ಪಟ್ಟಾಭಿಷೇಕವಲ್ಲ; ಕಣ್ಣೀರಿನಭಿಷೇಕ.

(ರಾಮನು ಪ್ರವೇಶಿಸುತ್ತಾನೆ)

ರಾಮ—ಆಹ! ಮಂಗಳವಾದ್ಯಗಳು ಭೋರ್ಗರೆದವು. ಗುರು ಜನರು ಭದ್ರಾಸನಗಳಲ್ಲಿ ಕುಳಿತಿದ್ದರು. ಪುಣ್ಯತೀರ್ಥಗಳಿಂದ ತುಂಬಿದ ಸುವರ್ಣಕಳಶವನ್ನು ಹೆಗಲ ಮೇಲೆ ಹೊತ್ತು, ಇನ್ನೇನು ನನಗಭಿಷೇಕಮಾಡಬೇಕೆಂದು ಆ ಕಳಶವನ್ನು ಬಾಗಿಸುವಷ್ಟರಲ್ಲೇ ತಂದೆಯವರದನ್ನು ತಡೆದು, ನನ್ನನ್ನು ಕಳಿಸಿಕೊಟ್ಟರು. ಆಗ ನಾನು ತೋರಿದ ಚಿತ್ತಸಮಾಧಾನವನ್ನು ಕಂಡು, ಜನ ಬೆರಗಾಗಿದ್ದಾರೆ. ಮಗನು ತನ್ನ ತಂದೆಯ ವಾಕ್ಯವನ್ನು ಪರಿಪಾಲಿಸಿದರೆ ಅಲ್ಲಿ ಆಶ್ಚರ್ಯವೇನಿದೆಯೋ? ಮಗು ಈಗ ವಿಶ್ರಮಿಸಿಕೋ ಎಂದು, ಸ್ವಯಂ ಮಹಾರಾಜರೇ ನನ್ನನ್ನು ಕಳಿಸಿಕೊಟ್ಟುದ್ದರಿಂದ. ಹೊತ್ತ ಭಾರವನ್ನಿಳಿಸಿ ಬಿಡುಗಡೆಯ ನಿಟ್ಟುಸಿರನ್ನು ಬಿಟ್ಟಂತೆ ನನ್ನ ಮನಸ್ಸೀಗ ಹಗುರವಾಗಿದೆ. ನಾನು ಎಂದಿನ ರಾಮನಾಗಿಯೇ ಉಳಿದು, ಮಹಾರಾಜರು ಮಹಾರಾಜರಾಗಿಯೇ ಇರುವುದೊಂದು ಸುದೈವವಲ್ಲವೆ! ಈಗ ಮೈಥಿಲಿಯನ್ನಾದರೂ ನೋಡೋಣ.

ಅವದಾತಿಕೆ—ಅಮ್ಮ ರಾಜಕುಮಾರರು ಬಂದೇ ಬಿಟ್ಟರು. ನೀವು ನಾರುಸೀರೆಯನ್ನು ಬಿಡಲಿಲ್ಲವಲ್ಲ!

ರಾಮ—(ಸೀತೆಯ ಬಳಿಸಾರಿ) ಮೈಥಿಲಿ, ಏಸು ಕುಳಿತೆ?

ಸೀತೆ—(ಎದ್ದು) ಆರ್ಯಪುತ್ರನಿಗೆ ಒಳ್ಳೆಯದಾಗಲಿ.

ರಾಮ—ಕುಳಿತುಕೋ, ಮೈಥಿಲಿ (ಕುಳಿತುಕೊಳ್ಳುವನು)

ಸೀತೆ—ಆರ್ಯಪುತ್ರನಪ್ಪಣೆ (ಕುಳಿತುಕೊಳ್ಳುವಳು)

ಅವದಾತಿಕೆ—ತಾಯಿ, ರಾಜಪುತ್ರರ ಉಡಿಗೆತೊಡಿಗೆಯಲ್ಲಿ ವಿಶೇಷವೇನೂ

ಇಲ್ಲ, ಎಂದಿನಂತೆಯೇ ಇದೆ. ನಾವು ಕಿವಿಯಿಂದ ಕೇಳಿದುದದೆಲ್ಲ ಸುಳ್ಳಿರಬೇಕು.

ಸೀತೆ—ಆರ್ಯಬಾಲಾಕಿಯಂತವರು ಸುಳ್ಳನ್ನೆಂದಿಗೂ ಹೇಳರು. ಅಥವಾ ಘಳಿಗೆಗೊಂದು ವೃತ್ತಾಂತ, ಅರಮನೆಗಳ ಹಣೆಯ ಬರಹವೇ ಇಷ್ಟು.

ರಾಮ—ಮೈಥಿಲಿ, ನೀನೇನ್ನುತ್ತಿರುವುದೇನು ?

ಸೀತೆ—ಏನೂ ಇಲ್ಲ ; ಈ ಹುಡುಗಿ 'ಪಟ್ಟಾಭಿಷೇಕ, ಪಟ್ಟಾಭಿಷೇಕ' ಎನ್ನುತ್ತಿದ್ದಳು.

ರಾಮ—ನಿನ್ನ ಕುತೂಹಲವೇನೆಂದು ನನಗರ್ಥವಾಯಿತು. ಅಭಿಷೇಕದ ಮಾತಿದ್ದುದು ನಿಜ. ಇವತ್ತು ನಮ್ಮ ತಂದೆಯವರು ನನ್ನನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಉಪಾಧ್ಯಾಯರು, ಮಂತ್ರಿಗಳು, ಪ್ರಜೆಗಳು—ಇವರೆಲ್ಲರ ಮುಂದೆ: "ಕೌಸಲ್ಯೆಯ ಕಂದ ರಾಮ, ರಾಜ್ಯವನ್ನು ಸ್ವೀಕರಿಸಪ್ಪ" ಎಂದರು.

ಸೀತೆ—ಆಗ ನೀವೇನೆಂದಿರಿ ?

ರಾಮ—ಮೈಥಿಲಿ, ನೀನೇ ಊಹಿಸು—ನಾನೇನು ಹೇಳಿರಬಹುದು ?

ಸೀತೆ—ನೀವು ಮರುಮಾತಾಡದೆ, ಸಿಟ್ಟುಸಿರು ಬಿಟ್ಟು, ಮಾವನವರ ಕಾಲಿಗೆ ಬಿದ್ದಿರಬೇಕು.

ರಾಮ—ಸರಿಯಾಗಿಯೇ ಊಹಿಸಿದೆ—ಹೀಗೆ ಗಂಡಹೆಂಡಿರು ಒಂದೇ ಸ್ವಭಾವದವರಾಗಿರುವುದು ಅತಿ ವಿರಳ. ನಿಜ, ನಾನಲ್ಲೇ ಅವರ ಕಾಲಿಗೆ ಬಿದ್ದೆ. ಇಬ್ಬರ ಕಣ್ಣಿಂದಲೂ ಕಂಬನಿ ಹರಿಯಿತು—ನಮ್ಮ ತಂದೆಯವರ ಕಣ್ಣೀರಿನಿಂದ ನನ್ನ ತಲೆ ತೊಯ್ದಿತು, ನನ್ನ ಕಣ್ಣೀರಿನಿಂದ ಅವರ ಪಾದ ನೆಂದಿತು.

ಸೀತೆ—ಆಮೇಲೆ ?

ರಾಮ—ಆಮೇಲೆ, ಅವರ ನಯವಾದ ಮಾತಿಗೆ ನಾನು ಒಪ್ಪದಿರಲು, ಮುದುಕರಾದ ನಮ್ಮ ತಂದೆ, ತಮ್ಮ ಪ್ರಾಣದ ಮೇಲಾಣೆಯಿಟ್ಟು, ನನ್ನನ್ನು ರಾಜನಾಗಲೇ ಬೇಕೆಂದರು.

ಸೀತೆ—ಆಮೇಲೆ ?

ರಾಮ—ಆಮೇಲೆ, ಶತ್ರುಘ್ನ ಲಕ್ಷ್ಮಣರು ಅಭಿಷೇಕಮಾಡಲು ಕಳಶವನ್ನೆತ್ತಿ ನಿಂತಿದ್ದರು. ಸ್ವಯಂ ಮಹಾರಾಜರು ಕಣ್ಣೀರಿಡುತ್ತ ಚಾಮರವನ್ನು ಹಿಡಿದಿದ್ದರು ; ಆ ಸಮಯಕ್ಕೆ ಸರಿಯಾಗಿ ಮಂಥರೆಯು ಬಂದು ತಂದೆಯ ಕಿವಿಯಲ್ಲೇ-ನನ್ನೋ ಉಸಿರಿದಳು—ನಾನು ರಾಜನಾಗುವುದು ತಪ್ಪಿತು.

ಸೀತೆ—ಇದು ನನಗೆ ಪ್ರಿಯವೇ ಆಯಿತು. ಮಹಾರಾಜರು ಮಹಾರಾಜರೇ! ನೀವು ನೀವೇ !!

ರಾಮ—ಮೈಥಿಲಿ, ಒಡವೆಗಳನ್ನೇಕೆ ಬಿಚ್ಚಿದ್ದೀಯೇ?

ಸೀತೆ—ನಾನಿನ್ನೂ ಇಟ್ಟುಕೊಂಡಿರಲಿಲ್ಲ.

ರಾಮ—ಇಲ್ಲ; ನೀನಿದೇ ತಾನೆ ಒಡವೆಗಳನ್ನು ಬಿಚ್ಚಿಟ್ಟಿರಬೇಕು. ಏಕೆಂದರೆ: ಓಲೆಗಳನ್ನು ಅವಸರದಲ್ಲಿ ತೆಗೆದಿರುವುದರಿಂದ ಹಾಲೆಗಳ ಆ ಜಾಗಗಳಿನ್ನೂ ಬೆಳ್ಳಗಿವೆ; ಬಲಾತ್ಕಾರದಿಂಡ ಬಳೆಗಳನ್ನು ತೆಗೆದುದರಿಂದ ಅಂಗೈಗಳಿನ್ನೂ ನಲುಗಿದಂತಿವೆ. ಒಡವೆಯಿಟ್ಟಿದ್ದ ನಿನ್ನ ದೇಹಭಾಗಗಳಿನ್ನೂ ತಮ್ಮ ಮೊದಲಸ್ಥಿತಿಗೆ ಬಂದಿಲ್ಲವಲ್ಲ!

ಸೀತೆ—ಸುಳ್ಳನ್ನೂ ಸತ್ಯವೆಂದು ತೋರುವಂತೆ ಮಾತನಾಡುವ ಸಾಮರ್ಥ್ಯವಿದೆ ನಿಮಗೆ!

ರಾಮ—ಆಗಲಿ, ಅಲಂಕಾರಮಾಡಿಕೊ, ನಾನು ಕನ್ನಡಿ ಹಿಡಿಯುತ್ತೇನೆ. (ಹಾಗೆ ಮಾಡಿ, ಕನ್ನಡಿಯಲ್ಲಿ ನಿಟ್ಟಿಸಿ ನೋಡಿ) ತಾಳು, ಇದೇನು ಕನ್ನಡಿಯಲ್ಲಿ ನಾರುಸೀರೆಯಂತಿದೆ; ಏನವು ಸೂರ್ಯರಶ್ಮಿಗಳೋ? (ಸೀತೆಯ ಕಡೆ ನೋಡಿ) ಓಹೋ! ನೀನು ಪರಿಹಾಸ್ಯ ಮಾಡುತ್ತಿರುವುದರಿಂದ ಗೊತ್ತಾಯಿತು, ಕಾಡಿಗೆ ಯೋಗ್ಯವಾದ ಈ ನಾರುಸೀರೆಯನ್ನು ನೀನುಟ್ಟಿರುವುದು ಕೇವಲ ವಿನೋದಕ್ಕೆಂದು! ಅವದಾತಿಕೆ, ಏನಿದೆಲ್ಲಾ?

ಅವದಾತಿಕೆ—ಒಡೆಯ, ಚೆನ್ನಾಗಿ ಕಾಣುವುದೋ ಇಲ್ಲವೋ ನೋಡೋಣವೆಂದುಟ್ಟುಕೊಂಡಿದ್ದಾಳೆ.

ರಾಮ—ಮೈಥಿಲೀ, ನಮ್ಮ ಇಕ್ಷ್ವಾಕುವಂಶದವರು ವೃದ್ಧರಾಗಿ ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಿ ಕಾಡಿಗೆ ಹೋಗುವಾಗ ಉಡುವ ಉಡುಗೆಯನ್ನುಟ್ಟಿದ್ದೀಯಲ್ಲ! ಇದನ್ನು ಕಂಡರೆ ನನಗೂ ಇಷ್ಟ—ಕೊಡು.

ಸೀತೆ—ಬೇಡಿ. ಬಿಡಿತು ಎನ್ನಿ; ನೀವು ಅಮಂಗಲವನ್ನಾಡಬಾರದು.

ರಾಮ—ಮೈಥಿಲೀ, ನೀನೇಕೆ ನನಗಡ್ಡಿ ಮಾಡುತ್ತಿ?

ಸೀತೆ—ಪಟ್ಟಾಭಿಷೇಕ ತಪ್ಪಿದ ನಿಮ್ಮ ಬಾಯಲ್ಲಿ ಆ ಮಾತು ಅಮಂಗಳವೆನಿಸಿತು.

ರಾಮ—ತಾಳು, ತಳಮಳಗೊಳ್ಳಬೇಡ. ತಮಾಷೆಗೆ ಹಾಗೆಂದೆ. ನನ್ನ

ಅರ್ಧಾಂಗಿಯಾದ ನೀನು ನಾರುಮಡಿಯುಟ್ಟಿರುವುದರಿಂದ ನಾನೂ ಅರ್ಧ ಉಟ್ಟಂತೆಯೇ ಆಗಿದೆ.

(ತೆರೆಯ ಮರೆಯಲ್ಲಿ)

ಅಯ್ಯೋ! ಅಯ್ಯೋ! ಮಹಾರಾಜಾ!

ಸೀತೆ—ಆರ್ಯಪುತ್ರ, ಏನದು?

ರಾಮ—(ಕಿವಿಗೊಟ್ಟು ಕೇಳಿ) ಆಯ್ತು, ಹೆಂಗಸರೂ ಗಂಡಸರೂ ಹೀಗೆ ಮಿತಿಮೀರಿ ಗೋಳಾಡುತ್ತಿರುವುದರಿಂದ, ದೈವವು ಮೂಲಕ್ಕೇ ಕೊಡಲಿ ಪೆಟ್ಟು ಕೊಟ್ಟಿದೆಯೆಂಬುದು ಸ್ಪಷ್ಟವಾಯ್ತು. ನೋಡಿ, ಅದೇನು ಶಬ್ದವೊ?

(ಕಾಂಚುಕೀಯನ ಪ್ರವೇಶ)

ಕಾಂಚುಕೀಯ—ರಾಜಕುಮಾರ, ರಕ್ಷಿಸು, ರಕ್ಷಿಸು!

ರಾಮ—ಅಜ್ಜ, ರಕ್ಷಣೆ ಬೇಕಾಗಿರುವುದು ಯಾರಿಗೆ?

ಕಾಂಚುಕೀಯ—ಮಹಾರಾಜರಿಗೆ!

ರಾಮ—ಏನು! ಮಹಾರಾಜರಿಗೆಂದಿರಾ? ಅಜ್ಜ, ಮಹಾರಾಜರ ರೂಪದಲ್ಲಿ ಮೂರ್ತಿಗೊಂಡ ಇಡೀ ಭೂಮಂಡಲಕ್ಕೇ ರಕ್ಷಣೆ ಬೇಕಾಗಿದೆ ಎನ್ನಿ. ಯಾರಿಂದ ಬಂತು ಆ ವಿಪತ್ತು?

ಕಾಂಚುಕೀಯ—ಇನ್ನಾರಿಂದ? ಸ್ವಜನರಿಂದಲೇ.

ರಾಮ—ಏನು! ಸ್ವಜನರಿಂದಲೇ? ಅಯ್ಯೋ, ಅದಕ್ಕೆ ಪರಿಹಾರವೆಲ್ಲಿ ಬಂತು? ಶತ್ರುಗಳು ಶರೀರವನ್ನಿರಿದರೆ, ಸ್ವಜನರು ಹೃದಯವನ್ನೇ ಇರಿಯುವರು. 'ಸ್ವಜನ' ಎಂಬ ಮಾತಿನಿಂದ ನನಗೀಗ ಅವಮಾನವಾದಂತಾಗಿದೆ. ಯಾರಾ ಸ್ವಜನರು?

ಕಾಂಚುಕೀಯ—ಇನ್ನಾರು, ಪೂಜ್ಯ ಕೈಕೆ!

ರಾಮ—ಏನು! ಮಾತೃಶ್ರೀಯವರೇ? ಹಾಗಾದರೆ ಇದರಿಂದ ಉಜ್ವಲವಾದ ಭವಿಷ್ಯವಿದೆ.

ಕಾಂಚುಕೀಯ—ಅದು ಹೇಗೆ?

ರಾಮ—ಹೇಗೆ! ನೋಡು, ದೇವೇಂದ್ರನಿಗೆ ಸಮನಾದ ಗಂಡನೂ,

ನನ್ನಂತಹ ಮಗನೂ ಇರುವಾಗ, ಆಕೆ ಮತ್ತಿನ್ನಾವ ಫಲಕ್ಕಾಗಿ ಅಕಾರ್ಯವನ್ನು ಮಾಡುವಳು ?

ಕಾಂಚುಕೀಯ—ಅಪ್ಪ ರಾಜಕುಮಾರ, ಸಾಕು. ಆ ಹಾಳು ಹೆಂಗುಸಿನ ಬುದ್ಧಿಯಲ್ಲಿ ನಿನ್ನ ಋಜುತ್ವವನ್ನು ಕಾಣಬೇಡ. ಆಕೆಯ ಮಾತಿನಿಂದಲೇ ಅಲ್ಲವೇ ನಿನಗೆ ಪಟ್ಟಾಭಿಷೇಕ ತಪ್ಪಿದ್ದು !

ರಾಮ—ಅಜ್ಜ, ಅದರಿಂದ ಒಳ್ಳೆಯದೇ ಆಯಿತಲ್ಲ !

ಕಾಂಚುಕೀಯ—ಅದು ಹೇಗಪ್ಪ ?

ರಾಮ—ಕೇಳು, ತಂದೆಯವರು ಕಾಡಿಗೆ ಹೋಗುವುದು ತಪ್ಪಿತು ; ಮತ್ತು ನಾನವರ ಅದೇ ಪ್ರಿಯಪುತ್ರನಾಗುಳಿದಿದ್ದೇನೆ ; ರಾಜನು ಹೊಸಬನಾದನಲ್ಲಾ, ಏನೋ ಎಂತೋ ಎಂಬ ಶಂಕೆ ಪ್ರಜೆಗಳಿಗಿಲ್ಲ ; ಎಲ್ಲಕ್ಕಿಂತ ಹೆಚ್ಚಾಗಿ ನನ್ನ ತಮ್ಮಂದಿರಿಗೆ ತಾವನುಭವಿಸುತ್ತಿರುವ ಭೋಗಭಾಗ್ಯಗಳಲ್ಲಿ ಕೊರತೆಯೇನೂ ಆಗಲಿಲ್ಲ.

ಕಾಂಚುಕೀಯ—ಹೌದೋ ?! ಆಕೆ, ಯಾರೂ ಕರೆಯದಿದ್ದರೂ, ತಾನೇ ಬಂದು, ಭರತನಿಗೇ ರಾಜ್ಯಾಭಿಷೇಕವಾಗಲಿ ಎಂದಳು. ಇದರಲ್ಲೂ ದುರಾಶೆ ಯೇನೂ ಇಲ್ಲವೋ ?

ರಾಮ—ಅಜ್ಜ, ನೀವು ನನ್ನ ಮೇಲಣ ಮಮತೆಯಿಂದ ಸತ್ಯವನ್ನು ಕಾಣಲಾರಿರಿ. ಕನ್ಯಾಶುಲ್ಕದ ರೂಪದಲ್ಲಿ ತನಗೆ ಬರಬೇಕಾದ ರಾಜ್ಯವನ್ನು ತನ್ನ ಮಗನಿಗೆ ಕೊಡೆಂದು ಕೇಳುವುದರಲ್ಲಿ ದುರಾಶೆಯೇನಿದೆ ? ತಮ್ಮನ ರಾಜ್ಯವನ್ನು ಅಪಹರಿಸಬೇಕೆಂದಿದ್ದ ನಮ್ಮದಲ್ಲವೆ ದುರಾಶೆ ?

ಕಾಂಚುಕೀಯ—ಆಮೇಲೆ .... (ಇನ್ನೂ ಏನನ್ನೋ ಹೇಳಲುದ್ಯೋಗಿ ಸುವನು)

ರಾಮ—ಇನ್ನು ಮಾತೃನಿಂದೆಯನ್ನು ಕೇಳಲಾರೆ ! ತಂದೆಯವರ ಸಮಾ ಚಾರವೇನಾದರೂ ಇದ್ದರೆ ಹೇಳಿ.

ಕಾಂಚುಕೀಯ—ಆಮೇಲೆ ಮಹಾರಾಜರು ಮಾತಿಲ್ಲದೆ ಕೈಸನ್ನೆಯಿಂದಲೇ ನನ್ನನ್ನು ಹೋಗೆಂದರು. ಏನು ಹೇಳಬೇಕೆಂದಿದ್ದರೋ ! ಹಾಗೇ ಮೂರ್ಛೆ ಹೋದರು.

ರಾಮ—ಏನು, ಮೂರ್ಛೆ ಹೋದರೆ ?

(ತೆರೆಯ ಮರೆಯಲ್ಲಿ)

ಏನು, ಏನು, ಮೂರ್ಛೆ ಹೋದರೆಂದೆಯಾ? ಮಹಾರಾಜರು ಮೂರ್ಛೆ ಹೋದರೆಂಬುದನ್ನು ಕೇಳಿ ಸಹಿಸಲಾಗದಿದ್ದರೆ ಬಿಲ್ಲನ್ನು ಹಿಡಿ, ದಯೆ ತೋರಿಸಬೇಡ.

ರಾಮ—(ಆಲಿಸಿ, ಮುಂದೆ ನೋಡಿ) ಧೈರ್ಯಸಾಗರನಾದ ಲಕ್ಷ್ಮಣನೆಂದೂ ಕ್ಷೋಭೆಗೊಂಡವನಲ್ಲ; ಏಕೆ ಕ್ಷೋಭೆಗೊಂಡನೋ! ಆತನು ಕೆರಳಿದನೆಂದರೆ ನನ್ನೆದುರು ನೂರು ಜನರಿದ್ದಂತಿರುವುದು.

(ಬಿಲ್ಲುಬಾಣವನ್ನು ಹಿಡಿದು ಲಕ್ಷ್ಮಣನು ಪ್ರವೇಶಿಸುತ್ತಾನೆ)

ಲಕ್ಷ್ಮಣ—ಏನು, ಏನು, ಮೂರ್ಛೆ ಹೋದರೆಂದೆಯಾ? ಮಹಾರಾಜರು ಮೂರ್ಛೆ ಹೋದರೆಂಬುದನ್ನು ಕೇಳಿ ಸಹಿಸಲಾಗದಿದ್ದರೆ ಬಿಲ್ಲನ್ನು ಹಿಡಿ, ದಯೆ ತೋರಿಸಬೇಡ. ನಮ್ಮವರು ತಮ್ಮವರೆಂದು ಹೆಣಗಾಡುವ ಮೃದುಸ್ವಭಾವದವರೆಲ್ಲ ಹಾಳಾಗುವುದು ಹೀಗೇ. ನಿನಗಿಷ್ಟವಿಲ್ಲದಿದ್ದರೆ ನನಗೆ ಹೇಳು—ಲೋಕದಲ್ಲಿ ಈ ಕೈಕೆಯಂತಹ ಕೆಟ್ಟ ಯುವತಿಯರೇ ಇಲ್ಲದಂತೆ ಮಾಡಿಬಿಡುತ್ತೇನೆ.

ಸೀತೆ—ಆರ್ಯಪುತ್ರ, ಕಣ್ಣೀರಿಡಬೇಕಾದ ಕಾಲದಲ್ಲಿ ಸೌಮಿತ್ರಿಯು ಕೈಗೆ ಬಿಲ್ಲನ್ನು ತೆಗೆದುಕೊಂಡ. ಪಾಪ, ಎಷ್ಟು ಆಯಾಸಪಡುತ್ತಾನೆ.

ರಾಮ—ಸೌಮಿತ್ರಿ, ಏನಿದೆಲ್ಲ?

ಲಕ್ಷ್ಮಣ—ಏನೆಂದರೆ? ನಾನೇನು ಹೇಳಲಿ! ಕ್ರಮಪ್ರಾಪ್ತವಾದ ರಾಜ್ಯ ಕೈತಪ್ಪಿದೆ; ತಂದೆ ಶೋಚನೀಯವಾದ ಸ್ಥಿತಿಯಲ್ಲಿ ನೆಲದಲ್ಲಿ ಬಿದ್ದಿದ್ದಾರೆ. ಇನ್ನೂ ಸುಮ್ಮನಿರುವುದೆಂದರಿದೇನು ಕ್ಷಮಾಗುಣವೋ, ಬುದ್ಧಿ-ಹೀನತೆಯೋ ನನಗಂತೂ ಸಂದೇಹ.

ರಾಮ—ಸೌಮಿತ್ರಿ, ನನಗೆ ರಾಜ್ಯ ತಪ್ಪಿದ್ದು ನಿನಗಷ್ಟು ಕ್ರೋಧವನ್ನುಂಟು ಮಾಡಿದೆಯಲ್ಲವೆ? ಛೇ, ನೀನು ಬುದ್ಧಿವಂತನಲ್ಲ. ಭರತನು ರಾಜನಾದರೇನು. ನಾನಾದರೇನು—ಎರಡೂ ಸಮವಲ್ಲವೆ? ನಿನಗೆ ಬಿಲ್ಲು ಹಿಡಿಯುವುದು ಬಂದರೆ, ತಂದೆಯ ಯೋಗಕ್ಷೇಮವನ್ನು ನೋಡಿಕೋ ಹೋಗು.

ಲಕ್ಷ್ಮಣ—ರೋಷವನ್ನು ತಡೆಯಲಾರೆನಲ್ಲಾ; ಆಗಲಿ, ಆಗಲಿ; ಹೋಗುತ್ತೇನೆ. (ಹೊರಡಲನುವಾಗುವನು)

ರಾಮ—(ತಡೆದು) ತಮ್ಮ, ಸೌಮಿತ್ರಿ, ಅಪರಿಹಾರ್ಯವಾದ ಅದೃಷ್ಟದೀಕ್ಷೆ

ಯಂತೆ ನಿನ್ನ ಹುಬ್ಬು ಗಂಟಿಕ್ಕಿದೆಯಲ್ಲ! ಇದೇನು ಮೂರು ಲೋಕವನ್ನೂ ಸುಡಲೆಂದೆದ್ದ ಉರಿಯೋ? ಬಾಯಿಲ್ಲಿ.

ಲಕ್ಷ್ಮಣ—ಅಣ್ಣ, ಇದೋ ಬಂದೆ.

ರಾಮ—ನಿನಗೆ ಧೈರ್ಯಕೊಡಲೆಂದು ನಾನು ಹಾಗೆ ಹೇಳಿದೆ. ಈಗ ಹೇಳು—ಸತ್ಯಸಂಧನಾದ ತಂದೆಯ ಕಡೆಗೆ ಶರಸಂಧಾನ ಮಾಡಲೋ ಅಥವಾ ತನ್ನ ಸ್ವತ್ತನ್ನು ತಾನು ತೆಗೆದುಕೊಂಡ ತಾಯ ಕಡೆಗೋ? ಅಲ್ಲದಿದ್ದರೆ ನಿರಪರಾಧಿಯಾದ ಭರತನ ಕಡೆಗೋ? ಈ ಮೂರು ಮಹಾಪಾತಕಗಳಲ್ಲಿ ಯಾವುದನ್ನು ಮಾಡಲಿ ಹೇಳು—ನಿನ್ನ ಕೋಪ ತಗ್ಗಬೇಕಾದರೆ.

ಲಕ್ಷ್ಮಣ—(ಕಂಬನಿದುಂಬಿ) ಅಣ್ಣ, ನಾನು ದುರದೃಷ್ಟಶಾಲಿ. ನನ್ನ ಅಭಿಪ್ರಾಯವನ್ನರಿಯದೇ ನೀನು ನನ್ನನ್ನಾಕ್ಷೇಪಿಸುತ್ತಿದ್ದೀಯೆ! ಇಷ್ಟೆಲ್ಲ ಕ್ಲೇಶಕ್ಕೆ ಕಾರಣಕಾರಿಯಾದ ರಾಜ್ಯದ ಮೇಲೆ ನನಗಾಶೆಯಿಲ್ಲ. ನೀನು ಹದಿನಾಲ್ಕು ವರ್ಷಗಳ ದೀರ್ಘಕಾಲ ಕಾಡಿನಲ್ಲಲೆಯಬೇಕಲ್ಲಾ ಎಂಬುದೊಂದೇ ಚಿಂತೆ ನನಗೆ.

ರಾಮ—ಅದನ್ನು ಮನಸ್ಸಿಗೆ ಹಚ್ಚಿಕೊಂಡೇ ನೀನಿಷ್ಟು ಮುಂದುಗೆಟ್ಟಿರುವುದು. ಛೆ, ನಿನ್ನ ಮನಸ್ಸು ನಿನ್ನಧೀನದಲ್ಲಿಲ್ಲವೆಂದು ವ್ಯಕ್ತವಾಯಿತು. ಮೈಥಿಲಿ, ಆ ನಾರುಮಡಿಯನ್ನಿಲ್ಲಿ ಕೊಡು, ಒಳ್ಳೆಯದೇ ಆಯಿತು. ರಾಜಪುತ್ರರಾರೂ ಮಾಡದ ಧರ್ಮವೊಂದನ್ನೀಗ ಕೈಗೊಳ್ಳುತ್ತೇನೆ.

ಸೀತೆ—ಇದೋ, ತೆಗೆದುಕೊಳ್ಳಿ.

ರಾಮ—ಮೈಥಿಲಿ, ನೀನೇನು ತೀರ್ಮಾನಿಸಿರುವೆ?

ಸೀತೆ—ನಾನು ನಿಮ್ಮ ಸಹಧರ್ಮಚಾರಿಣಿಯಲ್ಲವೆ?

ರಾಮ—ಹಾಗಲ್ಲ, ಹೋಗಬೇಕಾಗಿರುವುದು ನಾನೊಬ್ಬನೇ!

ಸೀತೆ—ಆದ್ದರಿಂದಲೇ ಜೊತೆಯಲ್ಲಿ ನಾನೂ ಬರಬೇಕಾಗಿದೆ.

ರಾಮ—ವಾಸಮಾಡಬೇಕಾದ್ದು ಕಾಡಿನಲ್ಲಿ.

ಸೀತೆ—ಅದೇ ನನಗೆ ಅರಮನೆ.

ರಾಮ—ಅತ್ತೆಮಾವಂದಿರ ಶುಶ್ರೂಷೆಯನ್ನು ನೀನು ಮಾಡಬೇಕಾಗಿದೆ.

ಸೀತೆ—ಅವರಿಗೊಳ್ಳೆಯದಾಗಲೆಂದು, ದೇವರನ್ನು, ಅಲ್ಲಿಂದಲೇ ಪ್ರಾರ್ಥಿಸುತ್ತೇನೆ.

ರಾಮ—ಲಕ್ಷ್ಮಣ, ಈಕೆಯನ್ನು ತಡೆದು ನಿಲ್ಲಿಸು.

ಲಕ್ಷ್ಮಣ—ಅಣ್ಣ, ಮೆಚ್ಚಬೇಕಾದ ಸಮಯದಲ್ಲಿ ಪೂಜ್ಯಳಾದೀಕೆಯನ್ನು ತಡೆದು ನಿಲ್ಲಿಸಲು ನನಗೆ ಮನಸ್ಸುಬಾರದು. ಏಕೆಂದರೆ—ರಾಹುಗ್ರಸ್ತನಾದರೂ ಕೂಡ, ತಾರಾದೇವಿಯು ಚಂದ್ರನನ್ನು ಹಿಂಬಾಲಿಸುತ್ತಾಳೆ; ಮರ ಬೀಳುವಾಗ, ಅದನ್ನಾಶ್ರಯಿಸಿದ್ದ ಬಳ್ಳಿಯು ಕೆಳಕ್ಕುರುಳುತ್ತದೆ; ಕೆಸರಿನಲ್ಲಿ ಸಿಕ್ಕಿಬಿದ್ದ ಸಲಗನನ್ನು ಹೆಣ್ಣಾನೆಯೆಂದಿಗೂ ತೊರೆಯದು; ಸತಿಗೆ ಪತಿಯೇ ಗತಿಯಲ್ಲವೆ? ಬರಲಿ ಬಿಡಣ್ಣ—ಅತ್ತಿಗೆಯವರು ತಮ್ಮ ಧರ್ಮವನ್ನು ತಾವನುಸರಿಸಲಿ.

(ನಾರುಮಡಿಯನ್ನು ಕೈಯಲ್ಲಿ ಹಿಡಿದು ಚೇಟಿಯ ಪ್ರವೇಶ)

ಚೇಟಿ—ರಾಜಕುಮಾರಿ, ಒಳ್ಳೆಯದಾಗಲಿ. "ಅವದಾತಿಕೆಯು ಸಂಗೀತ ಶಾಲೆಯಿಂದ ಯಾರಿಗೂ ಕಾಣದಂತೆ ಬಿಟ್ಟ ನಾರುಮಡಿಗಳನ್ನು ತಂದಿದ್ದಾಳೆ. ಈ ನಾರುಮಡಿಗಳು ಯಾರೂ ಉಟ್ಟುಬಿಟ್ಟವಲ್ಲ, ಸ್ವೀಕರಿಸಿ—ಬೇಕಾದರೆ ಉಪಯೋಗಿಸಿಕೊಳ್ಳಿ" ಎಂದು ರಂಗಮಂಟಪದ ರೇವಮ್ಮನು ಅರಿಕೆಮಾಡಿಕೊಳ್ಳುತ್ತಾಳೆ.

ರಾಮ—ಎಲ್ಲಮ್ಮ, ಅವನ್ನಿಲ್ಲಿ ಕೊಡು. ಆಕೆಗೆ ಸಾಕು, ಬೇಕಾಗಿರುವುದು ನನಗೆ.

ಚೇಟಿ—ಒಡೆಯ, ತೆಗೆದುಕೊಳ್ಳಿ, (ಕೊಟ್ಟು ನಿಷ್ಕ್ರಮಿಸುವಳು)

(ರಾಮನು ತೆಗೆದುಕೊಂಡು ಧರಿಸುವನು)

ಲಕ್ಷ್ಮಣ—ಅಣ್ಣ, ಅನುಗ್ರಹಿಸು; ಒಡವೆ ವಸ್ತುಗಳಲ್ಲೆಲ್ಲಾ ಸಮಾರ್ಧ ಪಾಲನ್ನು ನನಗೆ ಕೊಡುತ್ತಿದ್ದವನು, ಈ ನಾರುಬಟ್ಟೆಯನ್ನೇಕೆ ನೀನೊಬ್ಬನೇ ಉಟ್ಟುಕೊಂಡೆ? ನಾರುಡಿಗೆಯ ಮೇಲೇಕೆ ನಿನಗಷ್ಟು ಕಣ್ಣು!

ರಾಮ—ಮೈಥಿಲೀ, ಈತನನ್ನು ತಡೆದು ನಿಲ್ಲಿಸು.

ಸೀತೆ—ಸೌಮಿತ್ರಿ, ನೀನು ನಿಲ್ಲು.

ಲಕ್ಷ್ಮಣ—ಪೂಜ್ಯೆ, ಗುರುಸದೃಶನಾದ ನಮ್ಮಣ್ಣನ ಸೇವೆಯನ್ನು ನೀನೊಬ್ಬಳೇ ಮಾಡಬೇಕೆಂದಿರುವೆಯಾ? ಆತನ ಬಲಗಾಲಿನ ಸೇವೆ ನಿನಗೇ ಇರಲಿ; ನನಗಾತನ ಎಡಗಾಲನ್ನು ಸೇವಿಸುವ ಭಾಗ್ಯವಾದರೂ ಸಿಕ್ಕಲಿ ಸಾಕು.

ಸೀತೆ—ಒಪ್ಪಿಕೊಳ್ಳಿ, ಪಾಪ, ಸೌಮಿತ್ರಿಯು ಸಂತಪಿಸುತ್ತಿದ್ದಾನೆ.

ರಾಮ—(ನಾರುಮಡಿಯನ್ನು ನೀಡುತ್ತ) ತಮ್ಮ, ಈ ನಾರುಮಡಿಯನ್ನು

ವುದು ತಪಸ್ಸೆನ್ನುವ ಯುದ್ಧರಂಗಕ್ಕೆ ವಜ್ರಕವಚ, ನೇಮವೆಂಬಾನೆಯನ್ನು ನಡೆಸುವ ಅಂಕುಶ, ಇಂದ್ರಿಯವೆಂಬ ಕುದುರೆಗಳನ್ನು ನಿಗ್ರಹಿಸುವ ಕಡಿವಾಣ ; ಇದೋ ಧರ್ಮ ಸಾರಥಿಯಾದ ನೀನಿದನ್ನು ತೆಗೆದುಕೊ.

ಲಕ್ಷ್ಮಣ—ಅನುಗೃಹೀತನಾದೆ (ತೆಗೆದುಕೊಂಡು ಉಡುವನು)

ರಾಮ—ನಮ್ಮ ವನಗಮನವೃತ್ತಾಂತವನ್ನು ಕೇಳಿ ಕಿಕ್ಕಿರಿದ ಜನಸಂದಣಿಯಿಂದ ರಾಜಮಾರ್ಗದಲ್ಲಡ್ಡಿಯಾಗಿದೆ. ದಾರಿಬಿಡಿ, ದಾರಿಬಿಡಿ.

ಲಕ್ಷ್ಮಣ—ಅಣ್ಣ, ನಾನು ದಾರಿಮಾಡಿಕೊಡಲು ಮುಂದೆ ಹೋಗುತ್ತೇನೆ. (ಎಂದು ಮುಂದೆ ಹೋಗಿ) ದಾರಿಬಿಡಿ, ದಾರಿಬಿಡಿ,

ರಾಮ—ಮೈಥಿಲಿ, ಮುಖದ ಮೇಲಣ ಮುಸುಗನ್ನು ತೆಗೆ.

ಸೀತೆ—ಅಪ್ಪಣೆ (ತೆಗೆಯುವಳು)

ರಾಮ—ಪುರಜನರೇ ಕಿವಿಗೊಟ್ಟು ಕೇಳಿ ತಾವೆಲ್ಲ! ಕಂಬನಿದುಂಬಿದ ಕಣ್ಣಿಂದ ನನ್ನೀ ಮನದನ್ನೇ ಮೈಥಿಲಿಯನ್ನು ಮನಸಾರೆ ನೋಡಿರಿ. ಯಜ್ಞವಾಟಿಕೆಯಲ್ಲಿ, ಮದುವೆಯ ಮಂಟಪದಲ್ಲಿ, ವಿಪತ್ತಿನಲ್ಲಿ, ವನದಲ್ಲಿ ಪರಸ್ತ್ರೀಯರನ್ನು ನೋಡುವುದೇನೂ ದೋಷವಲ್ಲ.

(ಕಾಂಚುಕೀಯನ ಪ್ರವೇಶ)

ಕಾಂಚುಕೀಯ—ರಾಜಕುಮಾರ, ಬೇಡ, ಹೋಗಬಾರದು, ನಿಲ್ಲು. ಸೀತೆ ಮತ್ತು ಸೌಮಿತ್ರಿಯನ್ನೊಡಗೊಂಡು ನೀನು ಕಾಡಿಗೆ ಹೋಗುತ್ತಿರುವೆಯೆಂಬ ಸುದ್ದಿಯನ್ನು ಕೇಳಿ, ಮೂರ್ಛೆಬಿದ್ದು ಮೈಯೆಲ್ಲ ಧೂಳಾದ ಮಹಾರಾಜನು ಮೇಲೆದ್ದು, ಬಡವಾದ ಕಾಡಾನೆಯಂತೆ ಬರುತ್ತಿದ್ದಾನೆ ನಿಮ್ಮನ್ನು ನೋಡಬೇಕೆಂದು, ನಿಲ್ಲು!

ಲಕ್ಷ್ಮಣ—ಅಜ್ಜ, ನಾರುಬಟ್ಟೆಯುಟ್ಟ ಕಾಡುಜನರನ್ನೇನು ನೋಡುವುದು?

ರಾಮ—ನಾವು ಹೋದಮೇಲೆ ನಮ್ಮ ಭಾವಚಿತ್ರಗಳನ್ನು ನೋಡಲಿ.

(ನಿಷ್ಕ್ರಮಿಸುವರು)

ಹತ್ತನೇ ದೃಶ್ಯ

(ಶೈತ್ಯೋಪಚಾರದ ಸಮುದ್ರಗೃಹದಲ್ಲಿ ರಾಜನು ಹಾಸಿಗೆಹಿಡಿದು ಮಲಗಿದ್ದಾನೆ. ಕೌಸಲ್ಯೆ ಮತ್ತು ಸುಮಿತ್ರೆಯವರು ಅವನನ್ನು ಸಂತೈಸಿ ಉಪಚರಿಸುತ್ತಿದ್ದಾರೆ.)

ದಶರಥ—ಅಯ್ಯೋ, ಲೋಕನಯನಾಭಿರಾಮನಾದ ರಾಮ; ಮುದ್ದು ಲಕ್ಷ್ಮಣ, ಪತಿವ್ರತೆ ಮೈಥಿಲಿ. ಹ! ನನ್ನ ಕಂದಮ್ಮಗಳು ಕಾಡುಪಾಲಾದರಲ್ಲ. ಅಣ್ಣನ ಮೇಲಣ ಪ್ರೀತಿಯಿಂದ ತಂದೆಯನ್ನೂ ತ್ಯಜಿಸಿದ ಲಕ್ಷ್ಮಣನನ್ನೇ ನೋಡಲಿಚ್ಛೆಯಾಗಿದೆ ನನಗೆ—ಇದೂ ಒಂದು ವಿಚಿತ್ರವೇ ಸರಿ. ಅಮ್ಮ, ವೈದೇಹಿ, ರಾಮನೂ ಲಕ್ಷ್ಮಣನೂ ನನ್ನ ಕೈಬಿಟ್ಟರು; ನೀನೂ ಬಿಟ್ಟರೆ ನನಗಿನ್ನು ಲೋಕದಲ್ಲಿ ಅಪಕೀರ್ತಿಯು ಕಟ್ಟಿಟ್ಟ ಗಂಟು. ಅಯ್ಯೋ! ಸರ್ವಜನಹೃದಯ ನಯನಾಭಿ ರಾಮನಾದ ಆ ರಾಮನೆಲ್ಲಿ, ತಂದೆಗೆ ವಿಧೇಯನಾದ ಆ ಸುಪುತ್ರನೆಲ್ಲಿ? ಶೋಕಸಂತಪ್ತರನ್ನು ಕಂಡರೆ ಮರುಗುವ ಆ ಮಹನೀಯನೆಲ್ಲಿ? ಸಮಸ್ತ ರಾಜ್ಯೈಶ್ವರ್ಯವನ್ನೂ ಹುಲ್ಲಿಗಿಂತಲೂ ಕಡೆಯೆಂದು ಗಣಿಸಿ ಹೋದ ಆ ಮಹಾತ್ಯಾಗಿಯೆಲ್ಲಿ?! ರಾಮನು ಸೂರ್ಯನಂತೆ ಕಣ್ಮರೆಯಾದ, ಸೂರ್ಯನ ಹಿಂದೆ ಹಗಲಿನಂತೆ ಲಕ್ಷ್ಮಣನೂ ಅವನನ್ನು ಅನುಸರಿಸಿ ಹೋದ; ಸೂರ್ಯನು ಅಸ್ತಮಿಸಿ, ಹಗಲು ಮುಗಿದಮೇಲೆ, ನೆಳಲಿನಂತೆ ಸೀತೆಯೂ ಅದೃಶ್ಯಳಾದಳು! ನಾನು ಅಪುತ್ರಕನಾಗಿ, ರಾಮನು ಇನ್ನೊಬ್ಬ ರಾಜನಿಗೆ ಮಗನಾಗಿ, ಕೈಕೆಯು ಕಾಡಿನಲ್ಲಿ ಹೆಣ್ಣುಹುಲಿಯಾಗಿದ್ದರದೆಷ್ಟು ಚೆನ್ನಾಗಿತ್ತು! ಹಾಳು ದೇವರೀ ಮೂರನ್ನೇಕೆ ಮಾಡಲಿಲ್ಲವೋ!

ಕೌಸಲ್ಯೆ—(ಕಣ್ಣೀರಿಡುತ್ತ) ಸಾಕು, ಮಹಾರಾಜರೀಗ ಮಿತಿಮೀರಿ ದುಃಖಿಸಿ ಮೂರ್ಛೆ ಹೋಗುವುದು ಬೇಡ. ಆಕೆಯೂ, ಅವರಿಬ್ಬರೂ, ನೀವು ಗೊತ್ತುಮಾಡಿರುವ ಗಡು ಮುಗಿದೊಡನೆಯೇ, ಬಂದು ನಿಮ್ಮನ್ನು ಕಾಣುವರು.

ದಶರಥ—ಓ, ನೀನು ಯಾರು?

ಕೌಸಲ್ಯೆ—ಪ್ರೀತಿಗೆ ಒಳಗಾಗದೇ ಹೋದ ಪುತ್ರನನ್ನು ಹೆತ್ತವಳಲ್ಲವೆ ನಾನು?

ದಶರಥ—ಏನೆಂದೆ? ಸರ್ವಜನ ಹೃದಯನಯನಾಭಿರಾಮನಾದ ರಾಮನನ್ನು ಹೆತ್ತ ಕೌಸಲ್ಯಾಮಾತೆಯೇ ನೀನು?

ಕೌಸಲ್ಯೆ—ಮಹಾರಾಜ, ಆ ಭಾಗ್ಯಹೀನಳೇ ನಾನು.

ದಶರಥ—ಕೌಸಲ್ಯೇ, ನೀನೇ ಭಾಗ್ಯವಂತಳಲ್ಲವೆ! ರಾಮನನ್ನು ಹೊತ್ತು ಹೆತ್ತು ಹೊರೆದವಳು ನೀನು. (ಸುಮಿತ್ರೆಯ ಕಡೆ ನೋಡಿ) ಇವಳಿನ್ನೊಬ್ಬಳು ಯಾರು?

ಕೌಸಲ್ಯೆ—ಮಹಾರಾಜ, ವತ್ಸ ಲಕ್ಷ್ಮಣ....(ಎನ್ನುವಷ್ಟರಲ್ಲಿ)

ದಶರಥ—(ಥಟ್ಟನೆದ್ದು) ಆಹ! ಲಕ್ಷ್ಮಣನೆಲ್ಲಿ? ಎಲ್ಲಿ? ಕಾಣನಲ್ಲಾ! ಅಯ್ಯೋ ಕಷ್ಟ.

(ರಾಣಿಯರಿಬ್ಬರೂ ಗಾಬರಿಯಿಂದೆದ್ದು ರಾಜನನ್ನು ಹಿಡಿದು ಮೆಲ್ಲನೆ ಮಲಗಿಸುವರು)

ಕೌಸಲ್ಯೆ—ಮಹಾರಾಜ, ಈಕೆ ವತ್ಸ ಲಕ್ಷ್ಮಣನ ಜನನಿ ಸುಮಿತ್ರೆಯೆಂದು ಹೇಳುವುದರಲ್ಲಿದ್ದೆ.

ದಶರಥ—ಓ ಸುಮಿತ್ರೆ, ನಿನ್ನ ಪುತ್ರನೇ ಸುಪುತ್ರ—ಏಕೆಂದರೆ, ಆತನು ರಾತ್ರಿ ಹಗಲೂ ರಘುಕುಲಶ್ರೇಷ್ಠನಾದ ರಾಮನನ್ನು ನೆರಳಂತೆ ಅನುಸರಿಸುತ್ತಿದ್ದಾನೆ.

(ಕಾಂಚುಕೀಯನು ಪ್ರವೇಶಿಸುವನು)

ಕಾಂಚುಕೀಯ—ಮಹಾರಾಜರಿಗೊಳ್ಳೆಯದಾಗಲಿ. ಇದೋ ಪೂಜ್ಯ ಸುಮಂತ್ರ ಬಂದಿದ್ದಾನೆ.

ದಶರಥ—(ಜಗ್ಗನೆದ್ದು ಸಂತೋಷದಿಂದ) ರಾಮನೊಡನೆಯೇನು?

ಕಾಂಚುಕೀಯ—ಇಲ್ಲ, ರಥದೊಡನೆ.

ದಶರಥ—ಏನು! ಏನು! ಬರೀ ರಥದೊಡನೆಯೇ? (ಎಂದು ಮೂರ್ಛೆ ಹೋಗುವನು)

ದೇವಿಯರು—ಮಹಾರಾಜ, ಸಮಾಧಾನ, ಸಮಾಧಾನ (ಎಂದು ಮೈ ಸವರುವರು)

ಕಾಂಚುಕೀಯ—ಅಯ್ಯೋ ಕಷ್ಟ! ಇಂಥಹ ಮಹಾಪುರುಷರಿಗೂ ಈ ವಿಧ

ವಾದ ಆಪತ್ತೊದಗುವುದೆಂದರೆ, ಅದೃಷ್ಟವನ್ನು ಮೀರುವುದಸಾಧ್ಯ. ಮಹಾರಾಜ, ಸಮಾಧಾನ, ಸಮಾಧಾನ.

ದಶರಥ—(ಎಚ್ಚತ್ತು ಸ್ವಲ್ಪ ಸುಧಾರಿಸಿಕೊಂಡು) ಬಾಲಾಕಿ, ಸುಮಂತ್ರನೊಬ್ಬನೇ ಬಂದನೇನು ?

ಕಾಂಚುಕೀಯ—ಹೌದು, ಮಹಾರಾಜ.

ದಶರಥ—ಅಯ್ಯೋ ಕಷ್ಟ. ಬರೀ ರಥ ಬಂದಿತೆಂದರೆ ನಾನು ಭಗ್ನಮನೋರಥನಾದೆ. ಈ ದಶರಥನನ್ನು ಕೊಂಡೊಯ್ಯಲೆಂದೇ ಈಗ ಯಮನು ರಥವನ್ನು ಕಳಿಸಿದಂತಿದೆ ; ಹಾಗಾದರೆ ಜಾಗ್ರತೆ ಬರಹೇಳು.

ಕಾಂಚುಕೀಯ—ಅಪ್ಪಣೆ (ನಿಷ್ಕ್ರಮಿಸುವನು)

(ಸುಮಂತ್ರನು ಪ್ರವೇಶಿಸುತ್ತಾನೆ)

ಸುಮಂತ್ರ—(ಬಳಿಗೆ ಬಂದು) ಮಹಾರಾಜನಿಗೊಳ್ಳೆಯದಾಗಲಿ.

ದಶರಥ—ತಮ್ಮಾ, ಸುಮಂತ್ರ, ನನ್ನ ಜ್ಯೇಷ್ಠಪುತ್ರ ರಾಮನೆಲ್ಲಿ ? ನಾನು ಹೇಳಿದ್ದು ಸರಿಯಲ್ಲ. ನಿನ್ನ ಜ್ಯೇಷ್ಠಪುತ್ರ ರಾಮನೆಲ್ಲಿ ? ಮುದ್ದುಗುವರ ಲಕ್ಷ್ಮಣನೆಲ್ಲಿ ? ಆ ನಚ್ಚಿನ ಸೊಸೆ ಸೀತೆಯೆಲ್ಲಿ ? ಸಾವು ಸಮೀಪಿಸಿರುವ ಈ ಮುದಿತಂದೆಗೇನಾದರೂ ಅವರು ಹೇಳಿದರೇ ?

ಸುಮಂತ್ರ—ಮಹಾರಾಜ, ಹೀಗೆ ಅಮಂಗಲವನ್ನಾಡಬೇಡ. ಇನ್ನೇನು ಸ್ವಲ್ಪ ಕಾಲದಲ್ಲೇ ಅವರನ್ನೆಲ್ಲಾ ನೋಡುತ್ತಿ.

ಸುಮಿತ್ರೆ—ಸುಮಂತ್ರ, ಚಿಕ್ಕವಳಾದರೂ ನಡತೆಯಲ್ಲಿ ಚಿಕ್ಕವಳಲ್ಲದ, ಗಂಡನ ಸಹಧರ್ಮಚಾರಿಣಿಯಾದ, ಬಹುವಲ್ಕಲಾಲಂಕೃತ ಸೀತೆ ನಮ್ಮನ್ನೂ ಮಹಾರಾಜನನ್ನೂ ಕುರಿತೇನನ್ನೂ ಹೇಳಲಿಲ್ಲವೆ ?

ಸುಮಂತ್ರ—ಅವರೆಲ್ಲರೂ ಮಹಾರಾಜನನ್ನು....

ದಶರಥ—ಅಲ್ಲ, ಹಾಗಲ್ಲ ! ಕಿವಿಗಳಿಗೆ ಜೇನಿನಂತಹ, ನನ್ನ ಹೃದಯವ್ಯಾಧಿಗೆ ಸಂಜೀವಿನಿಯಂತಹ ಅವರ ಹೆಸರುಗಳನ್ನು ಬಿಡಿಸಿ ಹೇಳು ; ಕೇಳೋಣ.

ಸುಮಂತ್ರ—ಅಪ್ಪಣೆ : ಆಯುಷ್ಮಂತ ರಾಮನು....

ದಶರಥ—ರಾಮನೆಂದೆಯಾ? ಇವನು ರಾಮ. ಆ ಹೆಸರು ನನ್ನ ಕಿವಿ ಸೋಕಿದ ಮಾತ್ರದಿಂದಲೇ ಅವನ ಮೈ ಸೋಕಿದಷ್ಟು ಸುಖವಾಯಿತು ನನಗೆ. ಆಮೇಲೆ ?

ಸುಮಂತ್ರ—ಆಯುಷ್ಮಂತ ಲಕ್ಷ್ಮಣನು....

ದಶರಥ—ಇವನು ಲಕ್ಷ್ಮಣ, ಆಮೇಲೆ?

ಸುಮಂತ್ರ—ಆಯುಷ್ಮತಿಯಾದ ಜನಕರಾಜಪುತ್ರಿ ಸೀತೆ....

ದಶರಥ—ಇವಳು ವೈದೇಹಿ. ರಾಮ, ಲಕ್ಷ್ಮಣ, ವೈದೇಹಿ ಎಂದೆಯಾ? ಇದು ಹೇಳಬೇಕಾದ ಕ್ರಮವಲ್ಲ.

ಸುಮಂತ್ರ—ಮತ್ತೆ ಯಾವುದು ಕ್ರಮ?

ದಶರಥ—ರಾಮ, ವೈದೇಹಿ, ಲಕ್ಷ್ಮಣ ಎಂದು ಹೇಳು. ರಾಮಲಕ್ಷ್ಮಣರ ಮಧ್ಯೆ ಮೈಥಿಲಿಯಿರಲಿ. ಅರಣ್ಯದಲ್ಲಿ ಅಪಾಯ ಹೆಚ್ಚು, ಆಕೆಗೆ ರಕ್ಷಣೆಯಿರಲಿ. ರಾಮ, ವೈದೇಹಿ, ಲಕ್ಷ್ಮಣ! ಮಕ್ಕಳೇ ಬನ್ನಿ; ನನ್ನನ್ನಪ್ಪಿಕೊಳ್ಳಿ.

ಸುಮಂತ್ರ—ಶೃಂಗಿಬೇರಪುರದಲ್ಲಿ ರಥದಿಂದಿಳಿದು ಅಯೋಧ್ಯೆಯ ಕಡೆ ಮುಖ ಮಾಡಿ, ರಾಮ, ವೈದೇಹಿ, ಲಕ್ಷ್ಮಣರು ನಿಮಗೆ ತಲೆಬಾಗಿ ನಮಸ್ಕರಿಸಿ ವಿಜ್ಞಾಪಿಸಿಕೊಳ್ಳಲಾರಂಭಿಸಿದರು; ಅವರ ತುಟಿಗಳಲುಗಿದುವು. ಕಣ್ಣೀರಿನಿಂದ ಕಂಠ ಬಿಗಿದು ಬಂದು, ಏನೋ ಹೇಳಲು ಹೋಗಿ, ಏನೂ ಹೇಳದೆ ಕಾಡನ್ನು ಪ್ರವೇಶಿಸಿದರು.

ದಶರಥ—ಏನೆಂದೆ? ಏನೂ ಹೇಳದೆ ಕಾಡನ್ನು ಪ್ರವೇಶಿಸಿದರೆ? (ಇಮ್ಮಡಿಸಿದ ಮೂರ್ಛೆಯಲ್ಲಿ ಮೈಮರೆಯುವನು)

ಸುಮಂತ್ರ—(ಗಾಬರಿಯಿಂದ) ಬಾಲಾಕಿ, ಹೋಗು ಮಂತ್ರಿಗಳಿಗೆ ಹೇಳು, ಮಹಾರಾಜರು ಅಪರಿಹಾರ್ಯವಾದ ಅತ್ಯುತ್ಕಟಸ್ಥಿತಿಯಲ್ಲಿರುವರೆಂದು.

ಕಾಂಚುಕೀಯ—ಆಗಲಿ (ನಿಷ್ಕ್ರಮಿಸುವನು)

ದೇವಿಯರು—ಮಹಾರಾಜ, ಸಮಾಧಾನ, ಸಮಾಧಾನ.

ದಶರಥ—(ಎಚ್ಚತ್ತು ಸ್ವಲ್ಪ ಚೇತರಿಸಿಕೊಂಡು) ಕೌಸಲ್ಯೆ, ಎಲ್ಲಿದ್ದೀಯೆ ಬಾ; ನನ್ನನ್ನು ಮುಟ್ಟು. ನೀನು ನನಗೆ ಕಾಣುತ್ತಿಲ್ಲ. ರಾಮನ ಹಿಂದೆ ಹೋದ ನನ್ನ ಪ್ರಜ್ಞೆಯಿನ್ನೂ ಹಿಂತಿರುಗಿ ಬರಲೇ ಇಲ್ಲ; ಮಗು, ರಾಮ, ಬಹಳ ಕಾಲದಿಂದ ನನಗೊಂದು ಬಯಕೆಯಿದ್ದಿತು. ನಿನಗೆ ಪಟ್ಟಕಟ್ಟಿ ಒಳ್ಳೆಯ ರಾಜನು ನಮಗೆ ಸಿಕ್ಕಿದನೆಂಬ ಸಮಾಧಾನವನ್ನು ಪ್ರಜೆಗಳಿಗುಂಟುಮಾಡಿ, ಸದಾ ನಿನ್ನ ತಮ್ಮಂದಿರನ್ನು ನಿನ್ನಂತೆಯೇ ನೋಡಿಕೋ, ಎಂದು ನಿನಗೆ ಹೇಳಿ, ಕಾಡಿಗೆ ನಾನು ಹೋಗೋಣ ಎಂದಿದ್ದೆ—ಕೈಕೆಯಿಂದ ಒಂದು ಕ್ಷಣದಲ್ಲಿ ಎಲ್ಲ ಹಾಳಾಯಿತು;

ಸುಮಂತ್ರ, ಕೈಕೆಗೆ ಹೇಳು—"ರಾಮ ಹೋದ—ನಿನ್ನ ಹೊಟ್ಟೆ ತಣ್ಣಗಾಗಲಿ. ನಾನು ಸತ್ತೆ; ನಿನ್ನ ಮಗನನ್ನು ಕರೆಸಿಕೊ—ನಿನ್ನ ಪಾಪಯೋಚನೆ ಫಲಿಸಲಿ" ಎಂದು.

ಸುಮಂತ್ರ—ಅಪ್ಪಣೆ, ಮಹಾರಾಜ.

ದಶರಥ—(ಆಕಾಶವನ್ನು ನೋಡಿ) ರಾಮಕಥಾಶ್ರವಣಸಂದಗ್ಧ ಹೃದಯನಾದ ನನ್ನನ್ನು ಸಮಾಧಾನಪಡಿಸಲು ನನ್ನ ಪಿತೃಗಳದೋ ಬಂದಿದ್ದಾರೆ. ಯಾರಲ್ಲಿ?

(ಕಾಂಚುಕೀಯನ ಪ್ರವೇಶ)

ಕಾಂಚುಕೀಯ—ಮಹಾರಾಜನಿಗೊಳ್ಳೆಯದಾಗಲಿ.

ದಶರಥ—ನೀರು, ನೀರು ತಾ.

ಕಾಂಚುಕೀಯ—ಅಪ್ಪಣೆ. (ನಿಷ್ಕ್ರಮಿಸಿ, ಪ್ರವೇಶಿಸಿ) ಒಡೆಯ, ಇದೋ ನೀರು.

ದಶರಥ—(ಆಚಮನ ಮಾಡಿ ಮೇಲೆ ನೋಡುತ್ತ) ಈತನು ದೇವೇಂದ್ರನ ಮಿತ್ರ ದಿಲೀಪ; ಈತ ರಘು; ಈತ ನನ್ನ ಪೂಜ್ಯ ತಂದೆ ಅಜ; ಓ! ಪುಣ್ಯಾತ್ಮರುಗಳಿರಾ, ನೀವಿಂದು ನನಗೆ ಗೋಚರವಾದ ಕಾರಣವೇನು? ನನಗೂ ನಿಮ್ಮ ಜೊತೆಯಲ್ಲಿರುವ ಸಮಯ ಬಂದಿತೆಂದೆ? ರಾಮ—ವೈದೇಹಿ—ಲಕ್ಷ್ಮಣ, ನಾನಿನ್ನು ಪಿತೃಗಳ ಬಳಿಸಾರುವೆನು. ಓ! ಪುಣ್ಯಾತ್ಮರಾದ ಪಿತೃಗಳೇ ಇದೋ ನಿಮ್ಮ ಬೆನ್ನಲ್ಲೇ ಬಂದೆ. (ಮೂರ್ಛೆ ಹೋಗಿ ಸಾಯುವನು)

(ಕಾಂಚುಕೀಯನು ಅವನ ಮೇಲೆ ಮುಸುಕೆಳೆಯುವನು)

ಎಲ್ಲರೂ—ಅಯ್ಯೋ ಮಹಾರಾಜ! ಅಯ್ಯೋ ಮಹಾರಾಜ!

ಹನ್ನೊಂದನೇ ದೃಶ್ಯ

(ಸುಣ್ಣಬಳಿಯುವನ ಪ್ರವೇಶ)

ಸುಣ್ಣಗಾರ—(ಸುಣ್ಣಬಳಿಯುವುದನ್ನು ಮುಗಿಸಿ) ಆಗಲಿ, ಈಗ ಆರ್ಯ ಸಂಭವಕನು ಹೇಳಿದ್ದ ಕೆಲಸವೆಲ್ಲ ಮಾಡಿಯಾಯಿತು. ಸ್ವಲ್ಪ ಹೊತ್ತು ಮಲಗುತ್ತೇನೆ. (ಮಲಗುತ್ತಾನೆ)

(ಭಟನ ಪ್ರವೇಶ)

ಭಟ—(ಸುಣ್ಣಗಾರನ ಬಳಿ ಹೋಗಿ ಅವನನ್ನು ಹೊಡೆದು) ಅಲ್ಲವೋ, ಸೂಳೇ ಮಗನೇ, ಯಾಕೋ ಕೆಲಸವನ್ನು ಮಾಡುತ್ತಿಲ್ಲ? (ಮತ್ತೆ ಹೊಡೆಯುವನು)

ಸುಣ್ಣಗಾರ—(ನೆಗೆದೆದ್ದು) ಹೊಡಿ, ಹೊಡಿ!

ಭಟ—ಹೊಡೆದರೇನೋ ಮಾಡ್ತೀಯ?

ಸುಣ್ಣಗಾರ—ನತದ್ರಷ್ಟನಾದ ನನಗೆ ಕಾರ್ತವೀರ್ಯನಿಗಿದ್ದಂತೆ ಸಾವಿರ ಕೈಗಳಿಲ್ಲವಲ್ಲ!

ಭಟ—ಕೈಗಳು ಸಾವಿರವೇಕೆ ಬೇಕೋ?

ಸುಣ್ಣಗಾರ—ನಿನ್ನನ್ನರೆದು ಸುಣ್ಣಗೆ ಮಾಡಲಿಕ್ಕೆ!

ಭಟ—ಬಾರೋ ಸೂಳೇಮಗನೇ; ಸಾಯೋತನಕ ಬಿಡೋದಿಲ್ಲ. (ಮತ್ತೆ ಹೊಡೆಯುವನು)

ಸುಣ್ಣಗಾರ—ಒಡೆಯ, ನನ್ನ ಅಪರಾಧವೇನೆಂದು ಈಗಲಾದರೂ ಕೇಳಲೆ?

ಭಟ—ಅಪರಾಧವೇನು ಬಂತು ಅಪರಾಧ!? ರಾಜಪುತ್ರನಾದ ರಾಮನು ರಾಜ್ಯವನ್ನು ತೊರೆದು ಅರಣ್ಯಕ್ಕೆ ಹೋದುದರಿಂದ ಅತ್ಯಂತ ದುಃಖಾಕ್ರಾಂತ ನಾಗಿ ದಶರಥನು ಸ್ವರ್ಗಸ್ಥನಾದನು. ಅವನ ಈ ಪ್ರತಿಮಾ ಗೃಹವನ್ನು ನೋಡಲು ಕೌಸಲ್ಯೆ ಮುಂತಾದ ಅಂತಃಪುರದವರೆಲ್ಲ ಬರುವರೆಂದು ನಿನಗೆ ಹೇಳಿರಲಿಲ್ಲವೆ? ಈಗ ನೀನೇನೇನು ಮಾಡಿದ್ದೀ ತೋರಿಸು!

ಸುಣ್ಣಗಾರ—ನೋಡಿ, ಸ್ವಾಮಿ! ಪಾರಿವಾಳದ ಗೂಡನ್ನೆಲ್ಲ ಕಿತ್ತು, ಗರ್ಭ ಗೃಹವನ್ನು ಶುದ್ಧಿಮಾಡಿದ್ದೇನೆ. ಗೋಡೆಗಳಿಗೆಲ್ಲ ಸುಣ್ಣ ಬಳಿದು ಗಂಧದಲ್ಲಿ ಹಸ್ತ ವನ್ನು ಅದ್ದಿ, ಆ ಗೋಡೆಗಳಿಗೆಲ್ಲ ಒತ್ತಿ ಅಲಂಕಾರಮಾಡಿದ್ದೇನೆ. ಬಾಗಿಲು ಗಳಿಗೆಲ್ಲ ಹೂವಿನ ಹಾರದ ತೋರಣ ಕಟ್ಟಿದ್ದೇನೆ; ದಾರಿಗೆಲ್ಲ ಸುಣ್ಣನೆಯ ಮರಳೆರಚಿದ್ದೇನೆ. ಇನ್ನು ನಾನಿಲ್ಲಿ ಮಾಡದೆ ಬಿಟ್ಟಿರುವುದೇನಿದೆ ಸ್ವಾಮಿ?

ಭಟ—ಹಾಗಾದರೆ ಹೆದರಬೇಡ ಹೋಗು; ನಾನೂ ಹೋಗಿ, ಕೆಲಸವಾಯಿ ತೆಂದು ಮಂತ್ರಿಗೆ ಅರಿಕೆಮಾಡಿಕೊಳ್ಳುತ್ತೇನೆ. (ಹೊರಡುವರು)

(ರಥಸ್ಥರಾದ ಭರತನೂ, ಸೂತನೂ ಪ್ರವೇಶಿಸುವರು)

ಭರತ—(ದುಃಖದಿಂದ) ಸೂತ, ಬಹಳ ಕಾಲ ಮಾವನ ಮನೆಯಲ್ಲಿದ್ದು

ಇಲ್ಲಿನ ವಿಷಯವೇನೂ ನನಗೆ ತಿಳಿಯದು. ಮಹಾರಾಜರಿಗೆ ಬಹಳ ಕಾಯಿಲೆ ಯೆಂದು ಕೇಳಿದ್ದೆ! ಆ ಸಮಾಚಾರವೇನು? ಹೇಳು! ನಮ್ಮ ತಂದೆಗೆ ಏನು ಕಾಯಿಲೆ?

ಸೂತ—ಅತ್ಯದ್ಭುತ ಹೃದಯಪರಿತಾಪ!

ಭರತ—ವೈದ್ಯರೇನೆಂದು ಹೇಳಿದರು?

ಸೂತ—ಅದಕ್ಕೆ ಚಿಕಿತ್ಸೆಮಾಡುವ ನಿಪುಣ ವೈದ್ಯರೇ ಇಲ್ಲ.

ಭರತ—ಊಟ ಸೇರುತ್ತದೆಯೆ? ನಿದ್ರೆ ಮಾಡುತ್ತಾರೆಯೆ?

ಸೂತ—ಅನ್ನ ಬಿಟ್ಟು, ನೆಲದಲ್ಲಿ ಮಲಗಿದ್ದಾನೆ.

ಭರತ—ಭರವಸೆಯೇನಾದರೂ ಉಂಟೋ?

ಸೂತ—ದೇವರೇ ಗತಿ.

ಭರತ—ನನ್ನೆದೆ ನಡುಗುತ್ತಿದೆ. ಬೇಗ ರಥವನ್ನು ನಡೆಸು.

ಸೂತ—ಆಯುಷ್ಮಂತನ ಅಪ್ಪಣೆ. (ರಥವನ್ನು ನಡೆಸುವನು)

ಭರತ—ಆಹ! ಸ್ವಜನ ದರ್ಶನಕ್ಕಾಗಿ ನನ್ನ ಮನಸ್ಸದೆಷ್ಟು ಹಾತೊರೆಯು ತ್ತಿದೆ! ಇನ್ನೇನು ತಂದೆಯ ಪಾದಗಳಲ್ಲಿ ನಾನು ತಲೆಯಿಟ್ಟು ನಮಸ್ಕರಿಸುವೆ. ತಂದೆಯವರು ನನ್ನನ್ನು ಮೇಲೆತ್ತಿ ಮುದ್ದಿಸುವರು. ತಾಯಂದಿರ ಕಣ್ಣೀರ ಧಾರೆ ಯಿಂದ ನೆಂದ ನನ್ನನ್ನು ನೋಡಲು ಅಣ್ಣತಮ್ಮಂದಿರೋಡಿ ಬರುವರು. ಭೃತ್ಯರು ಬಂದು ನನ್ನ ಸೇವೆ ಮಾಡಿ ತಂದೆಯಂತೆಯೇ ಇದ್ದಾನೆ, ಅದೆಷ್ಟು ದೊಡ್ಡವನಾಗಿ ದ್ದಾನೆ, ಅದೆಂತಹ ಮೈಕಟ್ಟು ಎಂದು ಬೆರಗಾಗುವರು! ನನ್ನ ವೇಷ ಮತ್ತು ಭಾಷೆಯನ್ನು ಕಂಡು ಲಕ್ಷ್ಮಣನು ನಗುವನೇನೋ!

ಸೂತ—(ಸ್ವಗತ) ಅಯ್ಯೋ ಕಷ್ಟ. ಮರಣವಾರ್ತೆಯನ್ನರಿಯದೆ ಭರತ ಕುಮಾರನು–ನಿರಾಶೆಯೇ ಕಾದಿದ್ದರೂ ಭವಿಷ್ಯದಲ್ಲಿ ಭರವಸೆಯಿಟ್ಟು–ಅಯೋಧ್ಯೆ ಯನ್ನು ಪ್ರವೇಶಿಸುತ್ತಿದ್ದಾನೆ. ಪಾಪ! ಆ ದಾರುಣವಾರ್ತೆಯನ್ನು ನಾವೂ ಹೇಳುವ ಹಾಗಿಲ್ಲ. ಏಕೆಂದರೆ, ತಂದೆಯ ಸಾವನ್ನೂ, ತಾಯ ದುರಾಶೆಯನ್ನೂ, ದೊಡ್ಡಣ್ಣನ ವನವಾಸವಾರ್ತೆಯನ್ನೂ—ಈ ಮೂರು ದೋಷಗಳನ್ನು ಯಾರು ತಾನೇ ನಾಲಗೆಗೆ ತಂದು ಹೇಳಿಯಾರು!?

(ಭಟನ ಪ್ರವೇಶ)

ಭಟ—ಕುಮಾರನಿಗೆ ಜಯವಾಗಲಿ.

ಭರತ—ಅಯ್ಯ, ಶತ್ರುಘ್ನನೇನಾದರೂ ನನ್ನನ್ನೆದುರುಗೊಳ್ಳಲು ಬಂದನೆ?

ಭಟ—ಎದುರುಗೊಳ್ಳಲು ಬರುತ್ತಿದಾರೆ. ಆದರೆ ಉಪಾಧ್ಯಾಯರು ನಿಮಗೆ ಒಂದು ಮಾತನ್ನು ಹೇಳಿಕಳಿಸಿರುವರು.

ಭರತ—ಏನೆಂದು, ಏನೆಂದು ?!

ಭಟ—"ಕೃತ್ತಿಕಾನಕ್ಷತ್ರ ಮುಳುಗುವುದಿನ್ನು ಕಾಲು ಘಂಟೆಯಿದೆ. ಅದುವರೆಗೂ ತಡೆದು, ರೋಹಿಣೀ ನಕ್ಷತ್ರ ಉದಯವಾದ ಮೇಲೆ ಕುಮಾರನು ಅಯೋಧ್ಯೆಯನ್ನು ಪ್ರವೇಶಿಸಲಿ" ಎಂದು.

ಭರತ—ಹಾಗೇ ಆಗಲಿ. ನಾನು ಗುರುಗಳ ವಚನವನ್ನು ಹಿಂದೆಂದೂ ಉಲ್ಲಂಘಿಸಿದವನಲ್ಲ. ಹೋಗಿ ಹೇಳು.

ಭಟ—ಕುಮಾರನ ಅಪ್ಪಣೆ (ನಿಷ್ಕ್ರಮಿಸುವನು)

ಭರತ—ಮತ್ತೆಲ್ಲಿ ವಿಶ್ರಮಿಸಿಕೊಳ್ಳಲಿ? ಆಗಲಿ, ಈ ತೋಪಿನ ಮಧ್ಯೆ ಕಾಣುವ ದೇವಾಲಯದಲ್ಲಿ ಸ್ವಲ್ಪ ಕಾಲ ಇರುತ್ತೇನೆ. ಅದರಿಂದ ದೇವರ ಪೂಜೆಯೂ ವಿಶ್ರಾಂತಿಯೂ ಎರಡೂ ಲಭಿಸಿದಂತಾಗುವುದು. ಅದೂ ಅಲ್ಲದೆ ಹೊರಗಡೆ ಸ್ವಲ್ಪ ಕುಳಿತಿದ್ದು ಆಮೇಲೆಯೇ ನಗರಗಳನ್ನು ಪ್ರವೇಶಿಸಬೇಕೆಂಬುದೊಂದು ಶಿಷ್ಟಾಚಾರವಿದೆ; ಅಯ್ಯ ಸೂತ, ರಥವನ್ನು ನಿಲ್ಲಿಸು.

ಸೂತ—ಆಯುಷ್ಮಂತನ ಅಪ್ಪಣೆಯಂತಾಗಲಿ (ರಥವನ್ನು ನಿಲ್ಲಿಸುವನು)

ಭರತ—(ರಥದಿಂದ ಇಳಿದು) ಸೂತ, ರಥದ ನೊಗ ಕಳಚಿ, ಕುದುರೆಗಳನ್ನು ಏಕಾಂತದಲ್ಲಿ ಬಿಡು.

ಸೂತ—ಆಯುಷ್ಮಂತನ ಅಪ್ಪಣೆ (ಎಂದು ನಿಷ್ಕ್ರಮಿಸುವನು)

ಭರತ—(ಸ್ವಲ್ಪ ದೂರ ಹೋಗಿ) ಹೂವು-ಅರಳುಗಳಿಂದ ಪೂಜೆ ನಡೆದಿದೆ. ಇದು ಯಾವ ದೇವರ ಗುಡಿಯೋ! ಆಯುಧ, ಧ್ವಜ ಅಥವಾ ಮತ್ತಾವ ಬಾಹ್ಯ ಚಿಹ್ನವೂ ಕಾಣುತ್ತಿಲ್ಲ. ಆಗಲಿ, ಒಳಹೊಕ್ಕು ನೋಡುತ್ತೇನೆ (ಒಳಹೊಕ್ಕು ನೋಡಿ) ಆಹ! ಕಲ್ಲಿನಲ್ಲಿ ಮಾಡಿದ ಕೆತ್ತನೆಯ ಕೆಲಸದ ಕೌಶಲ್ಯದ ಮೋಡಿಯಿದೇನು! ಆಕೃತಿಗಳದೆಷ್ಟು ಭಾವಪೂರ್ಣವಾಗಿವೆ! ದೇವತೆಗಳೆಂದು ಕೆತ್ತಿದ್ದರೂ ಸಾಕ್ಷಾತ್ ಮನುಷ್ಯರೇ ನಿಂತಂತಿವೆ ಈ ಪ್ರತಿಮೆಗಳು. ಇದು ಯಾವ ಚತುರ್ದೇವತೆಗಳ ಸಮೂಹವೋ! ಯಾವುದಾದರೇನು ? ನನಗಂತೂ ಮನಸ್ಸು ಪ್ರಸನ್ನವಾಯಿತು ; ನಮಸ್ಕರಿಸುತ್ತೇನೆ. (ಎಂದು ತಲೆಬಾಗಿ ಕೈಮುಗಿಯುವನು)

ದೇವಕುಲಿಕ—ಈಗತಾನೆ ಪೂಜೆ ಮುಗಿಸಿಕೊಂಡು ನಾನು ಊಟಕ್ಕೆ ಕುಳಿತುಕೊಂಡಿದ್ದೆ. ಈತನಾರು, ಪ್ರತಿಮಾಗೃಹವನ್ನು ಪ್ರವೇಶಿಸಿದ್ದಾನೆ? ಇವನ ಆಕಾರಕ್ಕೂ ಪ್ರತಿಮೆಗಳ ಆಕಾರಕ್ಕೂ ಅಷ್ಟೇನೂ ವ್ಯತ್ಯಾಸವೆ ಇಲ್ಲ! ಯಾರೀತನು? ಇರಲಿ, ಒಳಗೆ ಹೋಗಿ ತಿಳಿಯುತ್ತೇನೆ (ಒಳಕ್ಕೆ ಹೋಗುತ್ತಾನೆ)

ಭರತ—(ಪ್ರತಿಮೆಗಳ ಕಡೆ ತಿರುಗಿ) ನಮೋಸ್ತು!

ದೇವಕುಲಿಕ—ಬೇಡ, ಬೇಡ; ನಮಸ್ಕಾರ ಮಾಡಬೇಡ.

ಭರತ—ಅಯ್ಯ, ನೀನೇಕೆ ನನ್ನನ್ನು ತಡೆಯುತ್ತಿ? ನನ್ನಲ್ಲೇನಾದರೂ ತಪ್ಪಿದೆಯೆ? ಅಥವಾ ಇದೇನಾದರೂ ಒಂದು ವಿಶಿಷ್ಟ ಸಂದರ್ಭವೋ? ಏಕೆ ನನ್ನನ್ನು ನಮಸ್ಕಾರಮಾಡಬೇಡವೆಂದು ತಡೆದೆ? ಇದು ನಿನ್ನ ನಿಯಮಸಾಮರ್ಥ್ಯವೋ?

ದೇವಕುಲಿಕ—ತಮ್ಮನ್ನು ಈ ಯಾವ ಕಾರಣಕ್ಕಾಗಿಯೂ ತಡೆಯುತ್ತಿಲ್ಲ. ಆದರೆ ದೇವರೆಂಬ ಶಂಕೆಯಿಂದ ಬ್ರಾಹ್ಮಣರೇನಾದರೂ ನಮಸ್ಕರಿಸಿಯಾರೆಂದು ತಡೆದೆ. ಇವರೆಲ್ಲ ಕ್ಷತ್ರಿಯರು.

ಭರತ—ಓಹೋ! ಇವರೆಲ್ಲ ಕ್ಷತ್ರಿಯರೋ? ಹಾಗಾದರೆ ಯಾವ ಕ್ಷತ್ರಿಯರೋ?

ದೇವಕುಲಿಕ—ಇಕ್ಷ್ವಾಕುಗಳು.

ಭರತ—(ಸಂತೋಷದಿಂದ) ಇಕ್ಷ್ವಾಕುಗಳೇನು? ಹಾಗಾದರೆ ಇವರು ಅಯೋಧ್ಯಾಧಿನಾಥರು! ಅಸುರರನ್ನು ಸಂಹರಿಸಿದ ದೇವಾಸುರ ಸಂಗ್ರಾಮದಲ್ಲಿ ಮುಂದಾಳುಗಳಾಗಿದ್ದವರು ಇವರಲ್ಲವೆ? ಇವರಲ್ಲವೆ ತಮ್ಮ ಪುಣ್ಯದ ಬಲದಿಂದ ದೇಶದ ಜನರನ್ನೆಲ್ಲ ದೇವಲೋಕಕ್ಕೆ ಒಡಗೊಂಡು ಹೋದವರು? ಇವರಲ್ಲವೆ ತಮ್ಮ ಭುಜಬಲದಿಂದ ಭೂಮಂಡಲವನ್ನೆಲ್ಲ ಗೆದ್ದವರು? ತಮ್ಮ ಅಭಿಲಾಷೆಗನುಸಾರವಾಗಿ ಮೃತ್ಯುಮುಟ್ಟದ ಮಹನೀಯರಿವರಲ್ಲವೆ? ಆಹ! ಆಕಸ್ಮಿಕವಾಗಿ ನನಗೆಂತಹ ಸುಕೃತವು ಲಭಿಸಿತು! ಅಪ್ಪ, ಈತನಾರು? ಹೇಳು.

ದೇವಕುಲಿಕ—ವಜ್ರವೈಡೂರ್ಯಾದಿ ರತ್ನಗಳನ್ನು ಸಂಪಾದಿಸಿ, ವಿಶ್ವಜಿತೆಂಬ ಯಜ್ಞವನ್ನು ಮಾಡಿ, ಧರ್ಮವೆಂಬ ದೀಪವನ್ನು ಹಚ್ಚಿದ ದಿಲೀಪನಿವನು.

ಭರತ—ಧರ್ಮಪರಾಯಣನಿಗೆ ನಮಸ್ಕಾರ! ಈತನು ಯಾರು?

ದೇವಕುಲಿಕ—ಮಲಗುವಾಗಲೂ ಮೇಲೆ ಏಳುವಾಗಲೂ ಬಹುಸಹಸ್ರ

ಬ್ರಾಹ್ಮಣರ ಬಾಯಿಂದ 'ಪುಣ್ಯಾಹಮಸ್ತು' ಎಂಬ ಮಂಗಳಶಬ್ದವನ್ನು ಶ್ರವಣ ಮಾಡುತ್ತಿದ್ದ ರಘುಮಹಾರಾಜನಿವನು.

ಭರತ—ಆಹ! ಆ ದಿವ್ಯರಕ್ಷೆಯನ್ನೂ ಅತಿಕ್ರಮಿಸಿ ಬಂದ ಮೃತ್ಯುವೆಷ್ಟು ಬಲಶಾಲಿ? ಮಹಾತ್ಮ, ರಾಜ್ಯಫಲವನ್ನೆಲ್ಲ ಬ್ರಾಹ್ಮಣಜನಕ್ಕೆ ನಿವೇದಿಸಿದ ನಿನಗೆ ನಮಸ್ಕಾರ! ಈ ಮಹನೀಯನು ಯಾರು?

ದೇವಕುಲಿಕ—ಪ್ರಿಯಾವಿಯೋಗನಿರ್ವೇದದಿಂದ ರಾಜ್ಯಭಾರವನ್ನು ತ್ಯಜಿಸಿ, ನಿತ್ಯಾವಭೃತಸ್ನಾನದಿಂದ ಪ್ರಶಾಂತಮನಸ್ಕನಾದ ಅಜಮಹಾರಾಜನಲ್ಲವೇ ಇವನು!

ಭರತ—ಶ್ಲಾಘನೀಯ ಪಶ್ಚಾತ್ತಾಪದ ದಿವ್ಯಪ್ರೇಮಿಗೆ ನಮಸ್ಕಾರ! (ದಶರಥನ ಪ್ರತಿಮೆಯನ್ನು ನೋಡುತ್ತ ಪರ್ಯಾಕುಲನಾಗಿ) ಅಯ್ಯ, ಇವರ ಮಹಿಮೆಯನ್ನೆಲ್ಲ ಕೇಳಿ ವಿಸ್ಮಯಗೊಂಡ ನಾನು ಮೈಮರೆತಿದ್ದೆ. ನೀನೇನೇನು ಹೆಸರುಗಳನ್ನು ಹೇಳಿದೆಯೋ ಸರಿಯಾಗಿ ನೆನಪಿಲ್ಲ. ಈ ಮಹನೀಯರ ಹೆಸರುಗಳನ್ನು ಮತ್ತೆ ಹೇಳು.

ದೇವಕುಲಿಕ—ಈತನು ದಿಲೀಪ!

ಭರತ—ಮಹಾರಾಜ ದಶರಥನ ತಂದೆಯ ತಾತ; ಆಮೇಲೆ?

ದೇವಕುಲಿಕ—ಈತನು ರಘು!

ಭರತ—ಮಹಾರಾಜ ದಶರಥನ ತಾತ! ಆಮೇಲಾಮೇಲೆ?

ದೇವಕುಲಿಕ—ಈ ಪೂಜ್ಯನು ಅಜ!

ಭರತ—(ಸ್ವಗತ) ನಮ್ಮ ತಂದೆಯ ತಂದೆ. (ಪ್ರಕಾಶ) ಏನೆಂದೆ? ಏನೆಂದೆ?

ದೇವಕುಲಿಕ—ಈತ ದಿಲೀಪ, ಇವನು ರಘು, ಈತ ಅಜ.

ಭರತ—ನಿನ್ನನ್ನೊಂದು ಮಾತು ಕೇಳಲೆ? ಜೀವಿಸಿರುವವರ ಪ್ರತಿಮೆಗಳನ್ನೂ ಇಲ್ಲಿ ಸ್ಥಾಪಿಸುವರೇನು?

ದೇವಕುಲಿಕ—ಇಲ್ಲ, ಇಲ್ಲ! ತೀರಿಹೋದವರದು ಮಾತ್ರ.

ಭರತ—ಹಾಗಾದರೆ ಹೋಗಿಬರುತ್ತೇನೆ, ನಮಸ್ಕಾರ. (ಹೊರಡಲನುವಾಗುವನು)

ದೇವಕುಲಿಕ—ನಿಲ್ಲು! ಸ್ತ್ರೀಶುಲ್ಕಕ್ಕಾಗಿ ಪ್ರಾಣವನ್ನೂ ರಾಜ್ಯವನ್ನೂ ತೆತ್ತ ಈ ದಶರಥನ ಪ್ರತಿಮೆಯನ್ನೇಕೆ ಕುರಿತು ಕೇಳಲಿಲ್ಲ?

ಭರತ—ಅಯ್ಯೋ ತಂದೆ! (ಮೂರ್ಛೆ ಬೀಳುವನು. ಮತ್ತೆ ಚೇತರಿಸಿಕೊಂಡು) ಅಯ್ಯೋ ಹೃದಯವೇ! ನೀನಂದುಕೊಂಡಿದ್ದುದಾಯಿತು! ತಂದೆಯ ಸಾವಿನ ಯಾವ ಸುದ್ದಿಯನ್ನು ನೀನು ಶಂಕಿಸಿದ್ದೆಯೋ, ಅದನ್ನೇ ಕೇಳಬೇಕಾಯಿತು. ನೀನೀಗ ಕಲ್ಲಾಗು! ಶುಲ್ಕವೆನ್ನುವ ನೀಚಶಬ್ದವೇನಾದರೂ ನನಗಂಟಿದ್ದೇ ಆದರೆ, ಈ ಪಾಪಶರೀರವನ್ನು ಹೇಗೆ ಶುದ್ಧಮಾಡಿಕೊಳ್ಳಲಿ? ಆರ್ಯ!

ದೇವಕುಲಿಕ—(ಸ್ವಗತ) 'ಆರ್ಯ' ಎಂಬುದು ಇಕ್ಷ್ವಾಕುಕುಲದವರು ಸಂಬೋಧಿಸುವ ರೀತಿಯಲ್ಲವೆ?! (ಪ್ರಕಾಶ) ನೀನು ಕೈಕೆಯ ಮಗನಾದ ಭರತನಲ್ಲವೇನು?

ಭರತ—ಅಲ್ಲವೇ ಅಲ್ಲ! ನಾನು ಕೈಕೆಯೆ ಮಗನಲ್ಲ, ದಶರಥಪುತ್ರನಾದ ಭರತ ನಾನು!

ದೇವಕುಲಿಕ—ಹಾಗಾದರೆ ಹೋಗಿಬರುತ್ತೇನೆ. (ಹೋಗಲನುವಾಗುವನು)

ಭರತ—ನಿಲ್ಲು! ಮಿಕ್ಕ ಸಮಾಚಾರವನ್ನೆಲ್ಲ ಹೇಳು.

ದೇವಕುಲಿಕ—ಇನ್ನೇನು ಗತಿ! ಕೇಳು: ದಶರಥನು ಸತ್ತ. ಸೀತೆ ಮತ್ತು ಲಕ್ಷ್ಮಣರೊಡಗೂಡಿ ರಾಮನೇಕೆ ಕಾಡಿಗೆ ಹೋದನೋ ನನಗೆ ತಿಳಿಯದು.

ಭರತ—ಏನು? ಏನು? ಅಣ್ಣನು ಕಾಡಿಗೆ ಹೋದನೆ? (ಇಮ್ಮಡಿಸಿದ ಮೂರ್ಛೆಗೆ ಸಲ್ಲುವನು)

ದೇವಕುಲಿಕ—ಕುಮಾರ, ಸಮಾಧಾನ ಮಾಡಿಕೋ; ಸಮಾಧಾನ ಮಾಡಿಕೋ!

ಭರತ—(ಚೇತರಿಸಿಕೊಂಡು) ತಂದೆ ಮತ್ತು ಅಣ್ಣಂದಿರಿಲ್ಲದ ಈ ಅಯೋಧ್ಯೆಯು ನನ್ನ ಪಾಲಿಗಿಂದು ಅರಣ್ಯವಾಯಿತು. ಬತ್ತಿದ ತೊರೆಯ ಕಡೆ ಬಾಯಾರಿದವನಂತೆ ನಾನು ಅಯೋಧ್ಯೆಯ ಕಡೆ ಓಡುತ್ತಿದ್ದೇನೆ. ಅಯ್ಯ, ವಿವರವನ್ನು ಕೇಳಿದರೆ ನನ್ನ ಮನಸ್ಸಿಗೆ ಧೈರ್ಯ ಬರುವುದು. ಆದ್ದರಿಂದ ಎಲ್ಲವನ್ನೂ 'ಚಚು' ತಪ್ಪದೆ ಹೇಳಿಬಿಡು.

ದೇವಕುಲಿಕ—ಕೇಳು: ನಿನ್ನ ಪೂಜ್ಯ ತಂದೆಯು ಶ್ರೀರಾಮನಿಗೆ ಅಭಿಷೇಕ ಮಾಡಬೇಕೆಂದಿರುವಷ್ಟರಲ್ಲಿ, ನಿನ್ನ ತಾಯಿ ಬಂದು, ಒಂದು ಮಾತನ್ನು ಹೇಳಿದಳು....

ಭರತ—ನಿಲ್ಲು! ಆ ಪಾಪಿಯು ಶುಲ್ಕವನ್ನು ನೆನಪುಮಾಡಿಕೊಂಡು ನನ್ನ,

ಮಗನಿಗೇ ರಾಜ್ಯವಾಗಲೆಂದು ಹೇಳಿದಳೇನೋ! ಆ ಆಡಬಾರದುದನ್ನು ಆಡಿ ಮತ್ತಷ್ಟು ಧೈರ್ಯಗೊಂಡು, 'ರಾಮ, ಅರಣ್ಯಕ್ಕೆ ಹೋಗು' ಎಂದು ಆಕೆ ಅಣ್ಣನಿಗೆ ಹೇಳಿರಬೇಕು. ನಾರುಮಡಿಯುಟ್ಟು ನಿಂತ ಅಣ್ಣನನ್ನು ಕಣ್ಣಿಂದ ನೋಡಲಾರದೆ ತಂದೆಯು ತರವಲ್ಲದ ಸಾವನ್ನು ಸತ್ತು, ಕಣ್ಣುಮುಚ್ಚಿದನೇನೋ! ಹೀಗಿರುವಾಗ ಜನರು ನನಗಿನ್ನು ಧಿಕ್ಕಾರಗಳನ್ನು ಹಾಕದೆ ಬಿಟ್ಟಾರೆ? (ಮೂರ್ಛೆ ಬೀಳುವನು)

(ತೆರೆಯ ಮರೆಯಲ್ಲಿ)

ಅಯ್ಯ, ದಾರಿಬಿಡಿ, ದಾರಿಬಿಡಿ.

ದೇವಕುಲಿಕ—(ನೋಡಿ) ಮಗನು ಮೂರ್ಛೆ ಬಿದ್ದಿರುವ ಸಮಯಕ್ಕೆ ಸರಿಯಾಗಿ ತಾಯಂದಿರು ಬಂದರು; ತಾಯಂದಿರ ಹಸ್ತಸ್ಪರ್ಶವು ಶೈತ್ಯೋಪಚಾರಕ್ಕಿಂತ ಶೀತಲವಾದುದು.

(ಆಮೇಲೆ ರಾಣಿಯರೂ ಸುಮಂತ್ರನೂ ಪ್ರವೇಶಿಸುವರು)

ಸುಮಂತ್ರ—ಅಮ್ಮ, ಈ ಕಡೆ, ಈ ಕಡೆ ಬನ್ನಿ, ಇದೇ ಅರಸನ ಪ್ರತಿಮಾಗೃಹ! ಇದರ ಔನ್ನತ್ಯ ಅರಮನೆಗೆಲ್ಲಿ ಬಂತು? ಇಲ್ಲಿ ಅಡ್ಡಿ ಅಡಚಣೆಗಳಿಲ್ಲ! ಬಾಗಿಲು ಕಾಯುವವರ ಉಪಟಳವಿಲ್ಲ. ನಮಸ್ಕಾರ ಮಾಡಬೇಕೆಂಬ ನಿಯಮವಿಲ್ಲ. ದಾರಿಗರಿಲ್ಲಿ ನಿರಾತಂಕವಾಗಿ ತಂಗುವರು. (ಪ್ರವೇಶಿಸಿ, ನೋಡಿ ತಾಯಿದಿರೇ, ಬೇಡಿ, ಬೇಡಿ, ಒಳಗೆ ಬರಬೇಡಿ, ಯಾವನೋ ಒಬ್ಬ ಯುವಕನಿಲ್ಲಿ ಬಿದ್ದಿದ್ದಾನೆ. ದಶರಥನು ತರುಣನಾಗಿದ್ದಾಗ ಹೇಗಿದ್ದನೋ ಹಾಗೆಯೇ ಇರುವನಿವನು.

ದೇವಕುಲಿಕ—ಯಾವನೋ ಒಬ್ಬನೆಂಬ ಶಂಕೆಯೇಕೆ, ಆತನು ಭರತಕುಮಾರನಲ್ಲವೆ!? ನೋಡಿ, ಹೋಗಿ. (ನಿಷ್ಕ್ರಮಿಸುವನು)

ದೇವಿಯರು—ಅಪ್ಪ, ಮಗನೇ, ಭರತ.

ಭರತ—(ಸ್ವಲ್ಪ ಚೇತರಿಕೊಂಡು) ಆರ್ಯ.

ಸುಮಂತ್ರ—ಜಯವಾಗಲಿ. ಮಹಾ....(ಎಂದರ್ಧೋಕ್ತಿಯಲ್ಲೇ ನಿಲ್ಲಿಸಿ, ವಿಷಾದದಿಂದ) ಆಹ! ಅದೇ ಸ್ವರ! ಪ್ರತಿಮೆಯಾಗಿ ನಿಂತಿರುವ ಮಹಾರಾಜನೇ ಮಾತನಾಡಿದಂತಿದೆ!

ಭರತ—ಈಗ ತಾಯಂದಿರ ಅವಸ್ಥೆಯೇನು?

ದೇವಿಯರು—ಮಗು, ಇದೋ ನಮ್ಮವಸ್ಥೆಯನ್ನು ನೋಡು! (ಮುಖದ ಮೇಲಣ ಮುಸುಗನ್ನು ತೆಗೆಯುವರು)

ಸುಮಂತ್ರ – ಪೂಜ್ಯೆಯರೇ, ದುಃಖವನ್ನು ಸಹಿಸಿಕೊಳ್ಳಿ.

ಭರತ—(ಸುಮಂತ್ರನನ್ನು ನೋಡಿ) ಎಲ್ಲ ಸದಾಚಾರದಲ್ಲಿ ನಿನಗಿರುವ ಸುಪರಿಚಯವೇ ಸೂಚಿಸುತ್ತಿದೆ: ನೀನು ತಾತ ಸುಮಂತ್ರನಲ್ಲವೆ?

ಸುಮಂತ್ರ—ಕುಮಾರ, ಅಲ್ಲದೆ ಏನು? ನಾನು ಸುಮಂತ್ರನೇ! ನಾನು ಬಹುಕಾಲ ಬದುಕಿ ಕಂಡುದೇನನ್ನು? ದುಃಖಪರಂಪರೆಯನ್ನಲ್ಲವೇ!? ನನ್ನ ಕೃತಘ್ನತೆಯು ನನ್ನನ್ನೇ ಈಗ ಅಣಕವಾಡುತ್ತಿರುವಂತಿದೆ. ದಶರಥ ಮಹಾರಾಜನು ಸತ್ತ ಮೇಲೂ ನಾನು ಬದುಕಿದ್ದು, ಆತನಿಲ್ಲದ ಶೂನ್ಯರಥಕ್ಕೆ ಸಾರಥಿಯಾಗಿದ್ದೇನೆ.

ಭರತ—ಅಯ್ಯೋ, ತಾತ! (ಮೇಲೆದ್ದು) ತಾತ, ತಾಯಂದಿರಿಗೆ ನಮಸ್ಕರಿಸುವ ಕ್ರಮವನ್ನು ನನಗೆ ಹೇಳಿಕೊಡು.

ಸುಮಂತ್ರ—ಆಗಲಪ್ಪ. ಈಕೆ ಪೂಜ್ಯನಾದ ರಾಮನ ತಾಯಿ ಕೌಸಲ್ಯೆ.

ಭರತ—ಅಮ್ಮ, ನಿರಪರಾಧಿಯಾದ ನಾನು ನಮಸ್ಕರಿಸುತ್ತೇನೆ.

ಕೌಸಲ್ಯೆ – ಮಗು, ಚಿಂತೆಯನ್ನು ಬಿಡು.

ಭರತ—(ಸ್ವಗತ) ಈ ಮಾತಿನಿಂದ ನನ್ನ ಕರುಳೇ ಕಿತ್ತು ಬಂದಂತಿದೆ. (ಪ್ರಕಾಶ) ಅನುಗ್ರಹೀತನಾದೆ; ಆಮೇಲಾಮೇಲೆ?

ಸುಮಂತ್ರ – ಈಕೆ ಪೂಜ್ಯ ಲಕ್ಷ್ಮಣನ ತಾಯಿ ಸುಮಿತ್ರೆ.

ಭರತ—ಅಮ್ಮ, ಅಣ್ಣನ ಹಿಂದೆ ತಾನೊಬ್ಬನೇ ಹೋದ ಲಕ್ಷ್ಮಣನಿಂದ ವಂಚಿತನಾಗಿರುವ ನಾನು ನಮಸ್ಕರಿಸುತ್ತೇನೆ.

ಸುಮಿತ್ರೆ—ಮಗು, ಯಶೋಭಾಗಿಯಾಗು.

ಭರತ—ಅಮ್ಮ, ಅದಕ್ಕಾಗಿ ಪ್ರಯತ್ನಿಸುತ್ತೇನೆ; ಅನುಗ್ರಹವಿರಲಿ; ಆಮೇಲಾಮೇಲೆ.

ಸುಮಂತ್ರ—ಈಕೆ ನಿನ್ನ ತಾಯಿ.

ಭರತ—(ರೋಷದಿಂದ) ಆಃ, ಪಾಪಿ; ನೀನು ಈ ನನ್ನ ಇಬ್ಬರು ತಾಯಂದಿರ ಮಧ್ಯೆ ನಿಲ್ಲಲು ಯೋಗ್ಯಳಲ್ಲ! ಗಂಗಾ ಯಮುನಾ ನದಿಗಳ ಮಧ್ಯೆ ಕೊಚ್ಚೆಯ ಕಾಲುವೆಯಂತಿದೀಯೆ ನೀನು!

ಕೈಕೆ ಮಗು, ನಾನೇನು ಮಾಡಿದೆನಪ್ಪ?

ಭರತ—ಏನು ಮಾಡಿದೆ ಎಂದೆ? ನಮಗೆ ಅಪಯಶಸ್ಸು; ಅಣ್ಣನಿಗೆ ನಾರು ಮಡಿ; ತಂದೆಗೆ ಗೃಹಮೃತ್ಯು; ಅಯೋಧ್ಯೆಗೆ ಗೋಳು; ಲಕ್ಷ್ಮಣನಿಗೆ ಮೃಗಗಳೊಡನಾಟ; ಮಕ್ಕಳನ್ನು ಹೆತ್ತ ತಾಯಂದಿರಿಗೆ ಶೋಕ; ಮನೆಯ ಸೊಸೆಗೆ ಮಾರ್ಗಾಯಾಸ; ನನಗೋ ಎಲ್ಲರಿಂದ ಧಿಕ್ಕಾರ! ನಿನ್ನಿಂದಾಗಿರುವುದು ಒಂದೇ ಎರಡೇ, ಹಲವು ಅನರ್ಥಗಳು!

ಕೌಸಲ್ಯೆ—ಮಗು, ಎಲ್ಲ ಶಿಷ್ಟಾಚಾರವನ್ನು ಬಲ್ಲ ನೀನು, ತಾಯಿಗೇಕಪ್ಪ ನಮಸ್ಕರಿಸದೇ ಇದ್ದೀಯೆ!?

ಭರತ—ತಾಯೆ? ಅಮ್ಮ, ನೀನೇ ನನ್ನ ತಾಯಿ! ತಾಯಿ ನಮಸ್ಕರಿಸುತ್ತೇನೆ.

ಕೌಸಲ್ಯೆ—ಅಲ್ಲ, ಅಲ್ಲ! ಈಕೆ ನಿನ್ನ ಹೆತ್ತ ತಾಯಲ್ಲವೆ?

ಭರತ—ಅದು ಹಿಂದಿನ ಮಾತು; ಇಂದಿನ ಮಾತು ಬೇರೆ. ಪೂಜ್ಯಳೇ ನೋಡು—ಮಕ್ಕಳು ಕೆಟ್ಟವರಾದರೆ ಇಟ್ಟಿದ್ದ ಪ್ರೀತಿಯನ್ನು ಬಿಟ್ಟು, ಅವರು ನಮ್ಮ ಮಕ್ಕಳೇ ಅಲ್ಲವೆಂದು ತಾಯಿತಂದೆಗಳು ಕೈಬಿಡುತ್ತಾರೆ. ಹಾಗೆಯೇ ನಾನಿಂದು ಪ್ರಪಂಚದಲ್ಲಿ ಒಂದು ಅಪೂರ್ವ ಧರ್ಮವನ್ನು ಸ್ಥಾಪಿಸುತ್ತೇನೆ—ತನ್ನ ಗಂಡನಿಗೆರಡು ಬಗೆದವಳು ಹೆತ್ತವಳಾದರೂ ತಾಯೆನಿಸಿಕೊಳ್ಳದೆ ಹೋಗಲಿ.

ಕೈಕೆ—ಮಗು, ಮಹಾರಾಜನ ಸತ್ಯವಂತಿಕೆಯನ್ನು ಉಳಿಸುವುದಕ್ಕಾಗಿ ನಾನು ಹಾಗೆ ಮಾಡಬೇಕಾಯಿತು.

ಭರತ—ಏನಂದೆ? ಇನ್ನೊಂದು ಸಲ ಅನ್ನು!

ಕೈಕೆ—ನನ್ನ ಮಗನು ರಾಜನಾಗಲೆಂದೆ.

ಭರತ—ಹಾಗಾದರೆ ನಮ್ಮಣ್ಣನು ನಿನಗೇನಾಗಬೇಕು? ಅವನು ನಮ್ಮಪ್ಪನ ಮಗನಲ್ಲವೆ? ನ್ಯಾಯವಾಗಿ ಪಟ್ಟಾಭಿಷಿಕ್ತನಾಗಲು ಅವನಲ್ಲವೆ ಮೊದಲಿಗ? ನಾವು ಅಣ್ಣತಮ್ಮಂದಿರೆಲ್ಲ ಅನ್ಯೋನ್ಯವಾಗಿರಲಿಲ್ಲವೆ? ಅಥವಾ ಅವನು ಪ್ರಜೆಗಳಿಗೆ ಪ್ರಿಯನಾಗಿರಲಿಲ್ಲವೋ!? ಹೀಗೇಕೆ ಮಾಡಿದೆ?

ಕೈಕೆ—ಮಗು, ಶುಲ್ಕಲುಬ್ಧಳನ್ನಲ್ಲವೆ ನೀನು ಹೀಗೆಲ್ಲ ಪ್ರಶ್ನೆಮಾಡಬೇಕಾದುದು?

ಭರತ—ರಾಜ್ಯಶ್ರೀಯನ್ನು ತೊರೆದು, ಸೀತೆಯೊಡವೆರೆದು, ನಾರುಬಟ್ಟೆ

ಯನ್ನುಟ್ಟು ಕಾಲ್ನಡಿಗೆಯಲ್ಲಿ ಹೊರಟ ರಾಮನನ್ನು ಅಡವಿಗೆ ಹೋಗೆಂದೆಯಲ್ಲಾ—ನಿನ್ನ ಶುಲ್ಕದಲ್ಲಿ ಅದೂ ಸೇರಿತ್ತೇನು?

ಕೈಕೆ—ಮಗು, ಸಕಾಲದಲ್ಲಿ, ಸರಿಯಾದ ಜಾಗದಲ್ಲಿ, ಎಲ್ಲವನ್ನೂ ತಿಳಿಯ ಹೇಳುತ್ತೇನೆ.

ಭರತ—ನಿನಗೆ ಅಪಕೀರ್ತಿಯಲ್ಲಿ ಆಶೆಯಿದ್ದರೆ, ಅದಕ್ಕೆ ನನ್ನ ಹೆಸರನ್ನೇಕೆ ಬಳಸಿಕೊಳ್ಳುತ್ತೀಯೆ? ನಿನಗೆ ರಾಜವೈಭವದ ಮೇಲೆ ಮೋಹವಿದ್ದರೆ ಅದು ನಮ್ಮ ತಂದೆಯಿಂದ ನಿನಗೆ ಸಿಗುತ್ತಿರಲಿಲ್ಲವೆ? ಅಥವಾ ರಾಜನ ತಾಯೆನಿಸಿಕೊಳ್ಳುವ ಚಾಪಲ್ಯವಿದ್ದರೆ—ನಿಜವನ್ನು ಹೇಳು—ನಮ್ಮಣ್ಣನಾದ ರಾಮನು ನಿನಗೆ ಮಗನಲ್ಲವೆ? ನೀನು ಮಾಡಿದುದೆಂತಹ ನೀಚ ಕೆಲಸ!? ನೀನು ರಾಜ್ಯಕ್ಕಾಶೆಪಟ್ಟು ರಾಜನ ಪ್ರಾಣಕ್ಕೂ ಬೆಲೆ ಕೊಡದೆ ಹೋದೆ. ಜ್ಯೇಷ್ಠಪುತ್ರನನ್ನೇ ನೀನು ವನಕ್ಕೆ ಹೋಗೆಂದುಬಿಟ್ಟೆ. ಸೀತೆಯು ಕಾಡಿಗೆ ಹೋದುದನ್ನು ಕಂಡೂ ನಿನ್ನ ಕಠಿನಹೃದಯ ಒಡೆದು ಹೋಗಲಿಲ್ಲ. ವಿಧಿಯು ಆ ನಿನ್ನ ಹೃದಯವನ್ನು ವಜ್ರದಿಂದ ಮಾಡಿರಬೇಕು.

ಸುಮಂತ್ರ—ಕುಮಾರ, ನಿನಗೆ ಪಟ್ಟಾಭಿಷೇಕಮಾಡಲೆಂದು ವಸಿಷ್ಠವಾಮದೇವ ಋಷಿಗಳು ಪ್ರಜೆಗಳೊಡಗೂಡಿ ನಿನ್ನನ್ನು ಇದಿರುಗೊಂಡು ಕರೆದುಕೊಂಡು ಹೋಗಲು ಬಂದಿದಾರೆ. ಗೋಪಾಲನಿಲ್ಲದ ಗೋವುಗಳು ಹಾಳಾಗುವಂತೆ ರಾಜನಿಲ್ಲದ ಪ್ರಜೆಯೂ ಹಾಳಾಗುವುದೆಂದು, ಅವರು ಕಳವಳಪಡುತ್ತಿದ್ದಾರೆ.

ಭರತ—ಪ್ರಜೆಗಳು ನನ್ನನ್ನನುಸರಿಸಿ ಬರಲಿ. (ಹೊರಡುವನು)

ಸುಮಂತ್ರ—ಅಭಿಷೇಕವನ್ನು ತಿರಸ್ಕರಿಸಿ, ನೀನೆಲ್ಲಿಗೆ ಹೋಗುತ್ತಿದ್ದೀಯೆ?

ಭರತ—ಅಭಿಷೇಕವೆಂದಿರೇನು? ಇಗೊ, ಇಲ್ಲಿದಾಳಲ್ಲಾ! ಈಕೆಗೆ ಮಾಡಿ.

ಸುಮಂತ್ರ—ಅಯೋಧ್ಯೆಗೆ ಬರದೆ ನೀನೆಲ್ಲಿಗೆ ಹೊರಟೆಯಪ್ಪ?

ಭರತ—ಲಕ್ಷ್ಮಣನೆಲ್ಲಿರುವನೋ ಅಲ್ಲಿಗೆ ಹೋಗಿ, ಅಲ್ಲಿಯೇ ಇರುವೆನು. ಅಣ್ಣನಿಲ್ಲದ ಅಯೋಧ್ಯೆ, ಅಯೋಧ್ಯೆಯಲ್ಲ! ರಾಘವನೆಲ್ಲಿರುವನೋ ಅದೇ ನನಗೆ ಅಯೋಧ್ಯೆ!

(ಎಲ್ಲರೂ ನಿಷ್ಕ್ರಮಿಸುವರು)

ಹನ್ನೆರಡನೇ ದೃಶ್ಯ

(ಭರತನೂ, ಸುಮಂತ್ರನೂ ಪ್ರವೇಶಿಸುವರು)

ಭರತ—ನನ್ನ ತಂದೆಯು ತಾನು ಮಾಡಿದ ಪುಣ್ಯದ ಫಲವಾಗಿ ಸ್ವರ್ಗಕ್ಕೆ ಸಂದನು. ಆತ್ಮಶ್ರೀಸಂಪನ್ನತಪೋವನದಲ್ಲಿ ತಣ್ಣನೆಯ ಚಂದ್ರನಂತಿರುವ ರಾಮಚಂದ್ರನ ಬಳಿಗೆ, ನಾನು ಪ್ರಜೆಗಳ ಕಣ್ಣೀರಿನ ಹೊನಲಲ್ಲಿ ತೇಲಿ, ಹೋಗುತ್ತೇನೆ. (ಸುಮಂತ್ರನನ್ನು ಕುರಿತು) ತಾತ!

ಸುಮಂತ್ರ—ಮಗು, ಏನಪ್ಪ?

ಭರತ—ಪೂಜ್ಯನಾದ ನಮ್ಮಣ್ಣನೆಲ್ಲಿ? ನಮ್ಮ ತಂದೆಯ ಪ್ರತಿನಿಧಿಯಾದ ಆತನೆಲ್ಲಿ? ರಾಜ್ಯಲುಬ್ಧೆಯಾದ ಕೈಕೆಯ ಪ್ರತ್ಯಾದೇಶನೆಲ್ಲಿ? ಆ ಯಶೋನಿಧಿಯೆಲ್ಲಿ? ಆ ಮಹಾರಾಜಪುತ್ರನೆಲ್ಲಿ? ಎಲ್ಲಿರುವನಾ ಸತ್ಯವ್ರತ? ಆತನು ನನ್ನ ತಾಯನ್ನು ಸಂತೋಷಪಡಿಸಲೋಸ್ಕರ ರಾಜ್ಯಲಕ್ಷ್ಮಿಯನ್ನೂ ಬಿಡಲು ಹಿಂತೆಗೆಯಲಿಲ್ಲ—ನನ್ನ ಪರಮದೈವವಾದ ಆತನನ್ನು ನೋಡುವ ಬಯಕೆ ನನಗೆ.

ಸುಮಂತ್ರ—ಮಗು, ನೋಡಪ್ಪ, ಇದೇ ಆಶ್ರಮದಲ್ಲಿದಾನೆ. ರಾಮ-ಸೀತೆ-ಲಕ್ಷ್ಮಣರು ಮೂವರೂ ಸತ್ಯ-ಶೀಲ-ಭಕ್ತಿಗಳು ಮೈವೆತ್ತಂತೆ ಇಲ್ಲಿದಾರೆ.

ಭರತ—ತಾತ, ಹಾಗಾದರೆ ಹೋಗು, ತಿಳಿಸು! ತಿಳಿಸು!!

ಸುಮಂತ್ರ—ಮಗು, ಏನೆಂದು ತಿಳಿಸಬೇಕಪ್ಪ?

ಭರತ—ರಾಜ್ಯಲುಬ್ಧಳಾದ ಕೈಕೆಯ ಮಗ ಭರತನು ಬಂದಿರುವನೆಂದು!

ಸುಮಂತ್ರ—ಮಗು, ತಾಯ ನಿಂದೆಯನ್ನು ಮಾಡುವುದು ಸಾಕು.

ಭರತ—ನಿಜ! ಪರರ ತಪ್ಪನ್ನೆತ್ತಿ ಆಡುವುದು ಬೇಡ. ಆದ್ದರಿಂದಲೇ, ಕುಲಕ್ಕೆ ಕಳಂಕಪ್ರಾಯನಾದ ಭರತನು ದರ್ಶನಾಕಾಂಕ್ಷಿಯಾಗಿ ಬಂದಿರುವನೆಂದು ಹೇಳು.

ಸುಮಂತ್ರ—ಮಗು, ಹಾಗೆಂದು ಹೇಳಲು ನನ್ನಿಂದಾಗದು! ಭರತನು ಬಂದಿರುವನೆಂದಿಷ್ಟು ಮಾತ್ರ ತಿಳಿಸುತ್ತೇನೆ, ನೋಡು!

ಭರತ—ಅಷ್ಟೇ ಸಾಲದು, ಸಾಲದು! ಕೇವಲ ಹೆಸರನ್ನು ಹೇಳಿಕೊಳ್ಳುವುದರಿಂದ ಪ್ರಾಯಶ್ಚಿತ್ತವನ್ನು ಮಾಡಿಕೊಂಡಂತಾಗುವುದಿಲ್ಲವೆನ್ನಿಸುತ್ತದೆ ನನಗೆ. ಬ್ರಹ್ಮಹತ್ಯಾಪಾತಕಿಗೂ ಪರಾಕು ಹೇಳಲೊಬ್ಬನಿರಬೇಕೇನು? ಬೇಡ, ನಿಲ್ಲು

ತಾತ; ಬಂದಿರುವೆನೆಂದು ನಾನೇ ತಿಳಿಸುತ್ತೇನೆ—ಹೋ! ಹೋ! ತಿಳಿಯ ಪಡಿಸಿ ಪಿತೃವಾಕ್ಯಪರಿಪಾಲಕನಾದ ಪೂಜ್ಯ ರಾಘವನಿಗೆ: ಕ್ರೂರಿಯೂ, ಕೃತಘ್ನನೂ, ಕಿರಾತನೂ, ಕೊಲೆಗಾರನೂ, ಆದೊಬ್ಬನು ಅವನಲ್ಲಿ ಭಕ್ತಿ ಯನ್ನಿಟ್ಟು ಸಂದರ್ಶನಕ್ಕಾಗಿ ಬಂದಿದಾನೆ—ನಿಲ್ಲಲೋ, ತೊಲಗಿ ಹೋಗಲೋ, ಕೇಳಿ!

(ಸೀತಾಲಕ್ಷ್ಮಣರೊಡನೆ ರಾಮನ ಪ್ರವೇಶ)

ರಾಮ—(ಸಂತೋಷದಿಂದ ಆಲಿಸಿ) ಸೌಮಿತ್ರಿ, ಕೇಳಿಸಿತೇನು? ಎಲೇ ವಿದೇಹರಾಜಪುತ್ರಿ ನಿನಗೂ ಕೇಳಿಸಿತೇ? ಯಾರದಿರಬಹುದಾಸ್ವರ. ನನ್ನ ತಂದೆ ಯವರ ಸ್ವರದಂತೆಯೇ ಇದೆ! ಗಾಂಭೀರ್ಯದಲ್ಲಿ ಮೇಘನಾದವನ್ನೂ ಮಿರಿಸಿ ದಂತಿದೆ! ನನ್ನ ಹೃದಯಕ್ಕೆ ನೆಂಟನೆಂಬ ಶಂಕೆಯನ್ನುಂಟುಮಾಡಿರುವ ಆಕ್ಕರೆಯ ಆ ಕೂಗು, ಕಿವಿಗೆ ಸವಿಯಾಗಿದೆ.

ಲಕ್ಷ್ಮಣ—ಅಣ್ಣ, ನನಗೂ, ಆ ಸ್ವರವು ಬಂಧುಗಳಾರದೋ ಇರಬಹುದೆಂಬ ಅನುಮಾನವನ್ನುಂಟುಮಾಡುತ್ತಿದೆ.

ರಾಮ—ಖಂಡಿತ! ಅದು ಎಂದಿಗೂ ಬಂಧುವಲ್ಲದವನ ಸ್ವರಸಂಯೋಗವಲ್ಲ. ಕೇಳಿ ನನ್ನೆದೆ ಕರಗುತ್ತಿದೆ! ತಮ್ಮ ಲಕ್ಷ್ಮಣ, ಹೋಗು ನೋಡು.

ಲಕ್ಷ್ಮಣ–ಅಣ್ಣನ ಆಜ್ಞೆಯಂತಾಗಲಿ. (ಮುಂದೆ ಬರುವನು)

ಭರತ—ಅಯ್ಯೋ! ಯಾರೊಬ್ಬರೂ ಮರುಮಾತನ್ನೇ ಆಡುತ್ತಿಲ್ಲವಲ್ಲಾ! ಕೈಕೆಯ ಮಗ ಭರತ ಬಂದನೆಂದೇನಾದರೂ ತಿಳಿದುಹೋಯಿತೋ?

ಲಕ್ಷ್ಮಣ—(ದಿಟ್ಟಿಸಿ) ಏನಿವನು ರಾಮನೆ? ಅಲ್ಲ, ಅಲ್ಲ! ಅವನ ಹಾಗೇ ಇರುವನಲ್ಲ! ಮುಖ ನಮ್ಮಣ್ಣನ ಮುಖದಂತೆಯೇ ಪ್ರಕಾಶಮಾನವಾಗಿದೆ; ಹುಣ್ಣಿಮೆಯ ಚಂದ್ರನಂತೆ ಮನೋಹರವಾಗಿದೆ. ರಾಕ್ಷಸರ ಬಾಣದೇಟಿನ ಗುರುತಿರುವ ನಮ್ಮ ತಂದೆಯವರ ಎದೆಯಂತೆ ಇವನೆದೆಯೊ ವಿಸ್ತಾರವಾಗಿದೆ. ಜಗತ್ಪ್ರಿಯದರ್ಶಿ-ದಿವ್ಯತೇಜೋಪರಿವೃತನಾದಿವನು ನಮ್ಮ ತಂದೆಯೋ? ಇಲ್ಲವೇ ದೇವೇಂದ್ರನೋ? ಅಥವಾ ಸ್ವಯಂ ಶ್ರೀವಿಷ್ಣುವೋ? (ಸುಮಂತ್ರನನ್ನು ಕಂಡು) ಆಂ! ತಾತ ಬಂದಿದ್ದಾನೆ!

ಸುಮಂತ್ರ—(ಭರತನನ್ನು ಕುರಿತು) ಅಯ್ಯ, ಕುಮಾರ ಲಕ್ಷ್ಮಣನು ಬಂದ.

ಭರತ—ಹೌದೇನು? (ದಿಟ್ಟಿಸಿ ಗುರುತು ಹಿಡಿದು) ಈತನು ನಮ್ಮಣ್ಣ! ಅಣ್ಣ, ನಮಸ್ಕಾರ.

ಲಕ್ಷ್ಮಣ—ಬಾಪ್ಪ, ಬಾ. ಆಯುಷ್ಮಂತನಾಗಿ ಬಾಳು. (ಸುಮಂತ್ರನನ್ನು ಕುರಿತು) ತಾತ, ಈ ಮಹನೀಯನು ಯಾರು?

ಸುಮಂತ್ರ—ಅಪ್ಪ, ಈತನು: ರಘುಮಹಾರಾಜನಿಂದ ನಾಲ್ಕನೆಯವನು; ಅಜನಿಂದ ಮೂರನೆಯವನು; ತೇಜಸ್ವಿಯಾದ ನಿನ್ನ ತಂದೆಯಿಂದ ಎರಡನೆಯವನು. ರಘುಕುಲತಿಲಕನಾದ ಶ್ರೀರಾಮಚಂದ್ರನಿಗೆ ನಿನ್ನಂತೆಯೇ ತಮ್ಮನಾದ ಭರತಕುಮಾರನಿವನು.

ಲಕ್ಷ್ಮಣ—ಬಾರಪ್ಪ, ಬಾ, ಇಕ್ಷ್ವಾಕುಕುಮಾರ, ನಿನಗೊಳ್ಳೆಯದಾಗಲಿ. ಆಯುಷ್ಮಂತನಾಗು. ನಮ್ಮ ವಂಶದವರು ರಾಕ್ಷಸರೊಡನಾದ ಯುದ್ಧಗಳಲ್ಲಿ ದಕ್ಷತೆಯಿಂದ ಹೋರಾಡಿದರು; ಇಂದ್ರನ ವಜ್ರಾಯುಧಕ್ಕೆ ಸರಿಮಿಗಿಲಾಗಿ ಅವರ ಬಿಲ್ಲು, ಶತ್ರುಗಳ ಮೇಲೆ ಬಾಣಗಳನ್ನು ಕಾರಿತು. ಅಂತಹ ಅನುಪಮ ಬಲಶಾಲಿಗಳಾದ ರಘುಕುಲದವರಿಗೆ ಶೌರ್ಯದಲ್ಲಿ ಸಮ ನೀನು. ಯಜ್ಞಗಳಲ್ಲಿ ದಾನ ಮಾಡಿ ಮಾಡಿ ಧನವೆಲ್ಲ ಸವೆದು ಬಡವನಾದರೂ ಯಶಸ್ವಿಯಾದ ರಘುಮಹಾರಾಜನಂತೆ ನೀನೂ ಗುಣವಂತನಾಗು.

ಭರತ—ಅನುಗೃಹೀತನಾದೆ.

ಲಕ್ಷ್ಮಣ—ತಮ್ಮಾ, ಇಲ್ಲೇ ನಿಲ್ಲು. ನೀನು ಬಂದೆಯೆಂದು ಅಣ್ಣನಿಗೆ ಹೇಳಿ ಬರುತ್ತೇನೆ.

ಭರತ—ಅಣ್ಣ, ಪೂಜ್ಯನಿಗೆ ಈ ಕೂಡಲೇ ಪೊಡಮಡಬೇಕೆಂದಿದ್ದೇನೆ. ಜಾಗ್ರತೆ ಹೇಳು.

ಲಕ್ಷ್ಮಣ—ಖಂಡಿತ. (ರಾಮನ ಬಳಿಸಾರಿ) ಅಣ್ಣ, ನಿನ್ನ ಅಣುಗದಮ್ಮ ಭರತನು ಬಂದಿದಾನೆ. ಕನ್ನಡಿಯಲ್ಲಿ ಪ್ರತಿಫಲಿತವಾದ ನಿನ್ನ ಪ್ರತಿಬಿಂಬದಂತೆಯೇ ಇದೇ ಅವನ ರೂಪ. ಅದೋ ಅಲ್ಲಿ ನಿಂತಿದ್ದಾನೆ.

ರಾಮ—ಲಕ್ಷ್ಮಣ, ಏನೆಂದೆ? ಭರತನು ಬಂದನೆಂದೆಯಾ?

ಲಕ್ಷ್ಮಣ—ಹೌದಣ್ಣ, ಅದೋ.

ರಾಮ—ಮೈಥಿಲಿ, ಭರತನನ್ನು ನೋಡಲು ಕಣ್ಣರಳಿಸು.

ಸೀತೆ—ಆರ್ಯಪುತ್ರ, ಭರತನು ಬಂದಿರುವನೆ?

ರಾಮ—ಮೈಥಿಲಿ, ಹೌದು. ನನ್ನನ್ನಗಲಿ ನನ್ನ ತಂದೆಯವರು ಏನೊಂದು ಯಾತನೆ ತಿಂದಿರುವರೆಂಬುದು ನನಗೀಗ ಗೊತ್ತಾಯಿತು. ತಮ್ಮನೊಬ್ಬನು ಅಣ್ಣನನ್ನು ಪ್ರೀತಿಸುವುದಿಷ್ಟು ಗಾಢವಾದರೆ, ತಂದೆಯು ತನ್ನ ಹೆತ್ತಮಗನನ್ನು ಇನ್ನೆಷ್ಟು ಪ್ರೀತಿಸಿರಬೇಕು!

ಲಕ್ಷ್ಮಣ – ಅಣ್ಣ, ತಮ್ಮನನ್ನು ಬರಹೇಳಲೇನು?

ರಾಮ—ಲಕ್ಷ್ಮಣ, ಇದಕ್ಕೂ ನನ್ನನ್ನು ಕೇಳಬೇಕೆ? ಹೋಗು, ಸತ್ಕಾರ ಪೂರ್ವಕವಾಗಿ ತಮ್ಮನನ್ನು ಜಾಗ್ರತೆ ಕರೆದುಕೊಂಡು ಬಾ.

ಲಕ್ಷ್ಮಣ—ಆಗಲಿ (ಎಂದು ಹೊರಡಲನುವಾಗುವನು)

ರಾಮ—(ತಡೆದು) ಅಥವಾ ನಿಲ್ಲು ನೀನು. ಮಗನನ್ನು ತಾಯಿ ಕರೆತರು ವಂತೆ, ಸ್ವಯಂ ಸೀತೆಯೇ ಭರತನನ್ನು ಆದರಿಸಿ ಕರೆತರಲಿ. ಮಂಜಿನ ಹನಿ ತುಂಬಿದ ತಾವರೆಯಂತಹ ಅವಳ ಕಣ್ಣಿನ ತುಂಬ ಆನಂದಭಾಷ್ಪ ಹನಿಯುತ್ತಿದೆ.

ಸೀತೆ—ಆರ್ಯಪುತ್ರನ ಅಪ್ಪಣೆಯಂತಾಗಲಿ (ಎದ್ದು ಮುಂದೆ ನಡೆದು ಭರತ ನನ್ನು ಕಂಡು) ಹ! ಏನು? ಅವರಿಷ್ಟು ಜಾಗ್ರತೆ ಇಲ್ಲಿ ಬಂದು ನಿಂತಿರುವರೇ? ಇಲ್ಲ, ಇಲ್ಲ, ಅವರ ಹಾಗೆಯೇ ಇದ್ದಾನೆ.

ಸುಮಂತ್ರ—ಅಯ್ಯ, ಸೀತಾಸತಿಯು ಬಂದಳು.

ಭರತ—ಆಹ! ಈಕೆ ಪೂಜ್ಯಳಾದ ಜನಕರಾಜಪುತ್ರಿ! ನೇಗಿಲ ಗೆರೆಯಿಂದ ಹೊರಬಂದ ಸ್ತ್ರೀರೂಪದ ತೇಜೋರಾಶಿಯೀಕೆ! ರಾಜರ್ಷಿ ಜನಕನ ಅಪಾರ ತಪಸ್ಸಿದ್ಧಿಸ್ವರೂಪಳೀಕೆ! ಪೂಜ್ಯಳೇ ನಮಸ್ಕಾರ—ನಾನು ಭರತ.

ಸೀತೆ—(ಸ್ವಗತ) ರೂಪವೊಂದೇ ಅಲ್ಲ, ಸ್ವರವೂ ಹಾಗೆಯೇ ಇದೆ! (ಪ್ರಕಾಶ) ವತ್ಸ, ಚಿರಂಜೀವಿಯಾಗು.

ಭರತ—ಅನುಗೃಹೀತನಾದೆ.

ಸೀತೆ—ಬಾರಪ್ಪ, ಅಣ್ಣನ ಮನೋರಥವನ್ನು ಪೂರೈಸು!

ಸುಮಂತ್ರ—ಮಗು, ಹೋಗು.

ಭರತ—ತಾತ, ನೀನಿಲ್ಲಿದ್ದೇನು ಮಾಡುವೆ?

ಸುಮಂತ್ರ—ನಾನು ಆಮೇಲೆ ಬರುತ್ತೇನೆ. ಮಹಾರಾಜನು ಸ್ವರ್ಗಸ್ಥನಾದ ಮೇಲೆ ನಾನು ಶ್ರೀರಾಮನನ್ನು ನೋಡುತ್ತಿರುವುದಿದೇ ಮೊದಲನೆಯ ಸಲ! ಹೋಗು, ನೀನು.

ಭರತ—ಆಗಲಿ, (ರಾಮನ ಬಳಿ ಬಂದು) ಅಣ್ಣ ನಮಸ್ಕಾರ. ನಾನು ಭರತ.

ರಾಮ—(ಹರ್ಷದಿಂದ) ಬಾರಪ್ಪ, ಬಾ, ಇಕ್ಷ್ವಾಕುಕುಮಾರ, ನಿನ ಗೊಳ್ಳಿಯದಾಗಲಿ; ಆಯುಷ್ಮಂತನಾಗು. ಕವಾಟಪುಟದಂತೆ ವಿಸ್ತಾರವಾದ ನಿನ್ನೆದೆಯನ್ನು ಒಡ್ಡಿ, ತೋರವಾದ ನಿನ್ನ ನಿಡುದೋಳುಗಳನ್ನು ನೀಡಿ ನನ್ನನ್ನು ತಬ್ಬು ಬಾ. ಎಲ್ಲಿ? ಶರತ್ಕಾಲದ ಚಂದ್ರಬಿಂಬದಂತಹ ನಿನ್ನ ಮುಖಬಿಂಬ ವನ್ನು ಮೇಲೆತ್ತಿ, ವ್ಯಸನದಗ್ಧವಾದೀ ನನ್ನ ಒಡಲುರಿಯನ್ನಾರಿಸಿ ಸಂತೋಷ ಗೊಳಿಸು, ಬಾ.

ಭರತ—ಅನುಗೃಹೀತನಾದೆ. (ತಬ್ಬಿಕೊಳ್ಳುವನು)

ಸುಮಂತ್ರ—(ಬಳಿಸಾರಿ) ಆಯುಷ್ಮಂತನಿಗೆ ಜಯವಾಗಲಿ.

ರಾಮ—ಹಾ! ತಾತ, ನಮ್ಮ ತಂದೆಯವರು ಪ್ರೀತಿಪಾತ್ರನಾದ ನಿನ್ನನ್ನಗಲಿ ಸ್ವರ್ಗಕ್ಕೆ ಸಂದು, ಅಲ್ಲಿ ತಮ್ಮ ಪಿತೃಗಳೊಡನೆ ಆನಂದದಿಂದಿರುವರೆ?

ಸುಮಂತ್ರ—(ಶೋಕದಿಂದ) ಅಪ್ಪ, ನಾನೇಕಿಷ್ಟು ದೀರ್ಘಕಾಲ ಬದುಕಿರು ವೆನೊ!? ಮಹಾರಾಜನ ಸಾವು, ನಿನ್ನ ಅರಣ್ಯವಾಸ, ಭರತನ ವಿಷಾದ ಮತ್ತು ರಘುಕುಲದ ಅನ್ಯವಸ್ಥೆ—ಈ ಎಲ್ಲ ದುಃಖಪರಂಪರೆಗಳನ್ನು ಅನುಭವಿಸಬೇಕಾ ಯಿತು, ನನ್ನೀ ಹಾಳು ದೀರ್ಘಾಯುಷ್ಯದಿಂದ!

ಸೀತೆ—ತಾತ, ಏನಿದು? ಮೊದಲೇ ಕಣ್ಣೀರಿಡುತ್ತಿರುವ ಆರ್ಯಪುತ್ರನು ಮತ್ತಷ್ಟು ಅಳುವಂತೆ ಮಾಡುತ್ತಿದ್ದೀಯೆ?

ರಾಮ—ಮೈಥಿಲಿ, ಇದೋ, ನನ್ನ ದುಃಖವನ್ನು ತಡೆಹಿಡಿಯುತ್ತೇನೆ. ತಮ್ಮ, ಲಕ್ಷ್ಮಣ, ನೀರನ್ನು ತಾ.

ಲಕ್ಷ್ಮಣ—ಆಗಲಿ.

ಭರತ—ಅಣ್ಣ, ಇದು ನ್ಯಾಯವಲ್ಲ. ಕ್ರಮಪ್ರಕಾರವಾಗಿ ಸೇವೆ ಮಾಡ ಬೇಕಾದವನು ನಾನು, ಆದ್ದರಿಂದ ನಾನೇ ಹೋಗಿ ನೀರು ತರುತ್ತೇನೆ. (ಎಂದು ಕಲಶವನ್ನು ಕೈಗೆತ್ತಿಕೊಂಡು ನಿಷ್ಕ್ರಮಿಸಿ ಮತ್ತೆ ಪ್ರವೇಶಿಸಿ) ಇದೋ ನೀರು.

ರಾಮ—(ಆಚಮನಿಸಿ) ಮೈಥಿಲಿ, ಲಕ್ಷ್ಮಣನ ಸೇವೆಗೆ ಭಂಗ ಬಂತು!

ಸೀತೆ—ಆರ್ಯಪುತ್ರ, ನಿಮ್ಮ ಸೇವೆಯನ್ನೀತನೂ ಮಾಡಬೇಕಲ್ಲವೆ?

ರಾಮ—ನಿಜ. ಇಲ್ಲಿ ನನ್ನ ಸೇವೆಯನ್ನು ಲಕ್ಷ್ಮಣನು ಮಾಡಲಿ; ಭರತನು ಅಲ್ಲಿದ್ದುಕೊಂಡೇ ನನ್ನ ಸೇವೆಮಾಡುತ್ತಿರಲಿ.

ಭರತ—ಅಣ್ಣ, ಕೃಪೆದೋರು! ಇಲ್ಲೇ ನಾನಿದ್ದುಕೊಂಡು, ಅಲ್ಲಿನ ನಿನ್ನ ಕೆಲಸವನ್ನೆಲ್ಲ ಮಾಡುವ ಹೊಣೆಯನ್ನು ಹೊರುತ್ತೇನೆ. ಕೇವಲ ನಿನ್ನ ಹೆಸರಿನ ಮಹಿಮೆಯಿಂದಲೇ ರಾಜ್ಯವು ಸುರಕ್ಷಿತವಾಗಿರುತ್ತದೆ.

ರಾಮ—ಕೈಕೆಯಿಯ ಮುದ್ದುಮಗನೇ, ನೀನು ಹಾಗೆ ಮಾಡಬಾರದು. ನಾನು ಕಾಡಿಗೆ ದರ್ಪದಿಂದ ಬಂದೆನೆ? ಭಯದಿಂದ ಬಂದೆನೆ! ಭ್ರಾಂತಿಯಿಂದ ಬಂದೆನೆ? ಅಲ್ಲ. ತಂದೆಯ ವಾಕ್ಯವನ್ನು ಪರಿಪಾಲಿಸಲೆಂದು ಬಂದೆ. ಏಕೆಂದರೆ ಸತ್ಯ ಸಂಧತೆಯೇ ನಮ್ಮ ವಂಶದ ಪರಮೈಶ್ವರ್ಯ. ಹೀಗಿರುವಲ್ಲಿ ನೀನು ಹೇಗೆ ತಾನೇ ಅದಕ್ಕೆ ತಪ್ಪಿನಡೆಯಲು ಸಾಧ್ಯ?

ಸುಮಂತ್ರ—ಹಾಗಾದರೆ, ಅಭಿಷೇಕೋದಕವೀಗ ಯಾರ ತಲೆಯ ಮೇಲೆ ಬೀಳಬೇಕು?

ರಾಮ—ಎಲ್ಲಿ ಬೀಳಲೆಂದು ನನ್ನ ತಾಯಿ ಹೇಳಿದಳೋ ಅಲ್ಲಿ ಬೀಳ ಬೇಕು.

ಭರತ—ಅಣ್ಣ, ಪ್ರಸನ್ನನಾಗು. ಗಾಯದ ಮೇಲೆ ಬರೆ ಎಳೆಯಬೇಡ. ಅಣ್ಣಯ್ಯ, ನಮ್ಮಿಬ್ಬರ ವಂಶವೂ ಒಂದೇ, ನಮ್ಮಿಬ್ಬರ ತಂದೆಯೂ ಒಬ್ಬನೇ: ತಾಯಿ ಮಾಡಿದ ದೋಷ ಮಗನಿಗೆಂದಿಗೂ ಅಂಟದು. ಆದುದರಿಂದ ದುಃಖದಿಂದ ಬೆಂದ ಈ ನಿನ್ನ ತಮ್ಮನಾದ ಭರತನನ್ನು ಕರುಣೆಯಿಂದ ಕಾಣು.

ಸೀತೆ—ಭರತನು ಅತ್ಯಂತ ಕರುಣಾಜನಕವಾಗಿ ಮಾತನಾಡುತ್ತಿದ್ದಾನೆ. ಆರ್ಯಪುತ್ರ, ನೀವದೇನನ್ನೋ ಚಿಂತಿಸುತ್ತಿರುವಿರಲ್ಲಾ!

ರಾಮ—ಮೈಥಿಲೀ, ಭರತನಂತಹ ಸತ್ಪುತ್ರನ ಸುಗುಣಗಳನ್ನು ಇದ್ದು ನೋಡುವ ಲಭ್ಯವಿಲ್ಲದೆ ಸ್ವರ್ಗಕ್ಕೆ ಸಂದ ನಮ್ಮ ತಂದೆಯವರನ್ನು ಕುರಿತು ಚಿಂತಿಸುತ್ತಿದ್ದೇನೆ. ಗುಣನಿಧಿಯಾದ ಇಂತಹ ಮಗನನ್ನು ಪಡೆದ ಮಹನೀಯ ರಿಗೂ ಈ ಗತಿಯಾಗುವುದಾದರೆ ಆ ವಿಧಿಗೆ ಧಿಕ್ಕಾರ. ತಮ್ಮಾ, ಕೈಕೆಯ ಮುದ್ದುಮಗನೇ, ನಿನ್ನ ಆತ್ಮ ನಿಷ್ಕಲ್ಮಷವಾದುದರಿಂದ ನಿನ್ನನ್ನು ಕಂಡು ನನಗೆ ಸಂತೋಷವಾಗಿದೆ. ನಿನ್ನ ಸದ್ಗುಣಕ್ಕೆ ನಾನು ಮನಸೋತು ನೀನು ಹೇಳಿದಂತೆ ಮಾಡಲು ಸಿದ್ಧನಾಗಿದ್ದೇನೆ. ಆದರೆ ತಂದೆಯವರ ವಾಕ್ಯ ನಿನ್ನಿಂದ ಸುಳ್ಳಾಗು ವುದು ಸರಿಯಲ್ಲ. ನಿನ್ನಂತಹ ಸತ್ಪುತ್ರನನ್ನು ಪಡೆದೂ ತಂದೆಯು ಸುಳ್ಳುಗಾರ ನೆನಿಸಬಹುದೇ? ಯೋಚಿಸು.

ಭರತ—ಅಣ್ಣ, ನನ್ನ ದೊರೆಯೆ, ನಿನ್ನ ವನವಾಸದ ನಿಯಮವು ಮುಗಿಯುವವರೆಗೆ ನಿನ್ನ ಪಾದಸನ್ನಿಧಿಯಲ್ಲೇ ಇರಬೇಕೆಂಬ ಅಭಿಲಾಷೆ ನನಗೆ.

ರಾಮ—ಬೇಡ, ಹಾಗೆನ್ನಬೇಡ. ನಮ್ಮ ತಂದೆಯವರು ತಮ್ಮ ಸುಕೃತದಿಂದ ಸಿದ್ಧಿಯನ್ನು ಪಡೆಯುವ ಹಾದಿಗೆ ಅಡ್ಡಿಯಾಗಬೇಡ. ನೀನು ಸ್ವರಾಜ್ಯವನ್ನು ಸಂರಕ್ಷಿಸದೇ ಹೋದರೆ ನನ್ನಾಣೆ.

ಭರತ—ಅಯ್ಯೋ! ನನ್ನ ಬಾಯಿ ಕಟ್ಟಿತಲ್ಲಾ! ಒಂದು ಕರಾರಿನ ಮೇಲೆ ನಿನ್ನ ರಾಜ್ಯವನ್ನು ಪರಿಪಾಲಿಸಲು ಒಪ್ಪಿಕೊಳ್ಳುತ್ತೇನೆ.

ರಾಮ—ತಮ್ಮಾ, ಏನಪ್ಪ ಆ ಕರಾರು?

ಭರತ—ನನ್ನ ಕೈಯಲ್ಲಿಟ್ಟ ನಿನ್ನ ರಾಜ್ಯವನ್ನು ಹದಿನಾಲ್ಕು ವರ್ಷಗಳು ಮುಗಿಯುತ್ತಲೇ ಮತ್ತೆ ಅದನ್ನು ನೀನು ಹಿಂತೆಗೆದುಕೊಳ್ಳಬೇಕು.

ರಾಮ—ಹಾಗೇ ಆಗಲಿ.

ಭರತ—ಪೂಜ್ಯನ ಈ ಮಾತನ್ನು—ಅಣ್ಣಾ, ನೀನು ಕೇಳಿದೆ? ಅತ್ತಿಗೆ. ನೀನೂ ಕೇಳಿದೆ? ತಾತ, ನೀನೂ ಕೇಳಿರುವೆಯಷ್ಟೆ?

ಎಲ್ಲರೂ—ಕೇಳಿದ್ದೇವೆ. ನಾವೆಲ್ಲರೂ ಸಾಕ್ಷಿಗಳು.

ಭರತ—ಅಣ್ಣ, ಇನ್ನೊಂದು ವರವನ್ನು ನಿನ್ನಿಂದ ಪಡೆಯಬೇಕೆಂದಿಚ್ಛಿಸುತ್ತೇನೆ.

ರಾಮ—ತಮ್ಮಾ, ನೀನೇನನ್ನಿಚ್ಛಿಸುವೆ? ನಾನೇನನ್ನು ಕೊಡಲಿ? ಹೇಳು. ನಾನೀಗೇನು ಮಾಡಬೇಕಾಗಿದೆ?

ಭರತ—ನೀನು ಮೆಟ್ಟಿರುವ ಪಾದುಕೆಗಳನ್ನು ನನಗೆ ಕರುಣಿಸು; ನಿನ್ನ ಪಾದಕ್ಕೆ ನನ್ನ ತಲೆಯೊತ್ತಿ ಕೇಳಿಕೊಳ್ಳುತ್ತೇನೆ. ನಿನ್ನ ವ್ರತ ಮುಗಿಯುವವರೆಗೆ ಆ ನಿನ್ನ ಪಾದುಕೆಗಳಿಗೆ ವಿಧೇಯನಾಗಿ ರಾಜ್ಯಭಾರವನ್ನು ಮಾಡುತ್ತಿರುತ್ತೇನೆ.

ರಾಮ—(ಸ್ವಗತ) ಆಹ! ಇದೇನಾಶ್ಚರ್ಯ! ನಾನು ಅಪಾರ ಕಾಲಾವಧಿಯಲ್ಲಿ ಯಾವ ಕಿಂಚಿತ್‌ಕೀರ್ತಿಯನ್ನು ಸಂಪಾದಿಸಿದ್ದೇನೋ ಅಷ್ಟನ್ನೂ ಭರತನು ಅತ್ಯಲ್ಪ ಕಾಲದಲ್ಲಿಯೇ ಸಂಪಾದಿಸಿಬಿಟ್ಟ.

ಸೀತೆ—ಆರ್ಯಪುತ್ರ, ಭರತನು ಬೇಡಿದ ವರವನ್ನು ಕೊಡುವಿರಲ್ಲವೆ?

ರಾಮ—ಹಾಗೇ ಆಗಲಿ; ತಮ್ಮಾ, ಬಾರಪ್ಪ ತೆಗೆದುಕೋ.

ಭರತ—ಅನುಗೃಹೀತನಾದೆ. (ಪಾದುಕೆಗಳನ್ನು ತೆಗೆದುಕೊಂಡು) ಅಣ್ಣ, ಇವುಗಳ ಮೇಲೆ ಅಭಿಷೇಕೋದಕವನ್ನೆರೆಯಬೇಕೆಂದಿಷ್ಟಪಡುತ್ತೇನೆ.

ರಾಮ—(ಸುಮಂತ್ರನ ಕಡೆ ತಿರುಗಿ) ತಾತ, ಭರತನಿಗೇನಿಷ್ಟವೋ ಅದನ್ನೆಲ್ಲ ಈಡೇರಿಸಿಕೊಡು.

ಸುಮಂತ್ರ—ಆಯುಷ್ಮಂತನ ಅಪ್ಪಣೆಯಂತಾಗಲಿ.

ಭರತ—(ಸ್ವಗತ). ನಾನೀಗ ಸ್ವಜನರ ವಿಶ್ವಾಸಕ್ಕೆ ಪಾತ್ರನಾದೆ. ಪೌರರಿಗೆ ಪ್ರಿಯನಾದೆ; ಲೋಕದ ಕಣ್ಣಿಗೆ ತಂಪಾದೆ; ಸ್ವರ್ಗದಲ್ಲಿರುವ ನನ್ನ ತಂದೆಯವರಿಗೆ ನಾನೀಗ ಒಳ್ಳೆಯ ಮಗನಾದೆ; ಗುಣಶಾಲಿಗಳಾದ ಅಣ್ಣಂದಿರಿಗೆ ಅಚ್ಚುಮೆಚ್ಚಿನವನಾದೆ; ಕೀರ್ತಿ ಬಂತು: ಗುಣವಂತರ ಮಾತುಕತೆಗೆ ಮುಖ್ಯ ವಿಷಯವಾದೆ: ಪ್ರಿಯವಾದುದನ್ನೆಲ್ಲ ಪಡೆದವರಿಗೂ ಪ್ರಿಯನಾದೆ.

ರಾಮ—ಅಯ್ಯ ಕೈಕೆಯ ಮುದ್ದುಕುಮಾರ, ರಾಜ್ಯವೆಂಬುದೊಂದು ನಿಮಿಷವಾದರೂ ಉಪೇಕ್ಷಿಸತಕ್ಕುದಲ್ಲ. ವಿಜಯಕ್ಕಾಗಿ ನೀನಿಂದೇ ಅಯೋಧ್ಯೆಗೆ ಹಿಂತಿರುಗು.

ಸೀತೆ—ಹ! ಭರತಕುಮಾರನಿಂದೇ ಹೊರಡುವನೇನು?

ರಾಮ—ಸೀತೆ, ಸಾಕು; ಅತಿಯಾದ ಸ್ನೇಹ ಬೇಡ. ವಿಜಯಕ್ಕಾಗಿ ಆತನಿಂದೇ ಅಯೋಧ್ಯೆಗೆ ಹಿಂತಿರುಗಲಿ.

ಭರತ—ಅಣ್ಣ, ನಾನಿವತ್ತೇ ಹೋಗುತ್ತೇನೆ. ನಿನ್ನ ದರ್ಶನಾಕಾಂಕ್ಷಿಗಳಾಗಿ ಪೌರರು ಪಟ್ಟಣದಲ್ಲಿ ಕಾತುರತೆಯಿಂದ ಕಾಯುತ್ತಿದ್ದಾರೆ. ನೀನು ಕರುಣಿಸಿ ಕೊಟ್ಟಿರುವ ಪಾದುಕೆಗಳನ್ನವರಿಗೆ ತೋರಿಸಿ ಆನಂದವನ್ನುಂಟುಮಾಡುತ್ತೇನೆ.

ಸುಮಂತ್ರ—(ರಾಮನ ಕಡೆ ತಿರುಗಿ) ಆಯುಷ್ಮಂತನೇ ನಾನೀಗೇನು ಮಾಡಬೇಕಾಗಿದೆ?

ರಾಮ—ತಾತ, ಮಹಾರಾಜರಾಗಿದ್ದ ನಮ್ಮ ತಂದೆಯವರನ್ನು ಹೇಗೋ ಹಾಗೆ ಈ ಭರತಕುಮಾರನನ್ನು ನೋಡಿಕೋ.

ಸುಮಂತ್ರ—ನಾನು ಬದುಕಿದ್ದರೆ, ನೀನು ಹೇಳಿದಂತೆ ಮಾಡಲು ಯತ್ನಿಸುತ್ತೇನೆ.

ರಾಮ—ತಮ್ಮಾ, ನನ್ನೆದುರಿಗೇ ರಥವನ್ನು ಹತ್ತು.

ಭರತ—(ತೆರೆಯ ಕಡೆ ತಿರುಗಿ) ಸೂತ, ನಾವು ಬಂದ ರಥವನ್ನು ತಾ.

(ಎಂದೊಡನೆಯೇ ರಥ ಬರುವುದು) ಅಣ್ಣನ ಅಪ್ಪಣೆಯಂತಾಗಲಿ (ಎಂದು ರಥವನ್ನು ಹತ್ತುವನು)

ರಾಮ—ಮೈಥಿಲಿ, ಬಾ ಇಲ್ಲಿ. ತಮ್ಮಾ ಲಕ್ಷ್ಮಣ, ನೀನೂ ಬಾ. ಈ ನಮ್ಮ ಆಶ್ರಮದ ಬಾಗಿಲವರೆಗಾದರೂ ಭರತನನ್ನು ಕಳಿಸಿಕೊಟ್ಟು ಬರೋಣ.

(ಎಲ್ಲರೂ ನಿಷ್ಕ್ರಮಿಸುವರು)

ಹದಿಮೂರನೇ ದೃಶ್ಯ

(ತಾಪಸಿಯೊಬ್ಬಳೊಡನೆ ಸೀತೆಯು ಪ್ರವೇಶ)

ಸೀತೆ—ಆರ್ಯೆ, ಚೆಲ್ಲಿದ ಹೂಗಳನ್ನು ತೆಗೆದು, ಆಶ್ರಮವನ್ನೆಲ್ಲ ಗುಡಿಸಿ ಸಾರಿಸಿದ್ದಾಯಿತು. ನಮ್ಮ ಆಶ್ರಮದಲ್ಲಿರುವೆಲ್ಲ ವೈಭವದಿಂದ ದೇವರ ಪೂಜೆಯನ್ನೂ ಮಾಡಿದೆ. ಈಗ ಪತಿದೇವರು ಬರುವವರೆಗೂ, ಪಾಪ, ಈ ಸಸಿಗಳಿಗೆ ನೀರೆರೆಯುತ್ತೇನೆ.

ತಾಪಸಿ—ಆಗಲಿ, ನೀರೆರೆಯುವ ನಿನ್ನ ಕೆಲಸ ಸುಸೂತ್ರವಾಗಿ ನಡೆಯಲಿ.

(ರಾಮನು ಪ್ರವೇಶಿಸುತ್ತಾನೆ)

ರಾಮ—(ದುಃಖದಿಂದ) ನಾನಿಲ್ಲದ ಮತ್ತು ನಮ್ಮ ತಂದೆಯಿಲ್ಲದ ಅಯೋಧ್ಯೆಯನ್ನು ಶೂನ್ಯವೆಂದು ಬಿಟ್ಟು, ಅಣ್ಣನಾದ ನನಗೇ ಪಟ್ಟಕಟ್ಟಬೇಕೆಂದು ಬಂದ ಭರತಕುಮಾರನನ್ನು—ರಾಜ್ಯಾಡಳಿತವನ್ನು ನಡೆಸಲೆಂದು—ಪಾಪ, ಮತ್ತೆ ಹಿಂದಕ್ಕೇ ಕಳಿಸಿಕೊಟ್ಟೆ. ಅವನೆಷ್ಟು ಗುಣಸಂಪನ್ನ! ರಾಜ್ಯಭಾರದ ಹೊರೆಯನ್ನೆಲ್ಲ ಒಬ್ಬನೇ ಹೇಗೆ ಹೊರುವನೋ, ಪಾಪ, ಕಷ್ಟ. (ವಿಚಾರಪರನಾಗಿ) ಇದು ಅನಿವಾರ್ಯ. ನನ್ನ ಕಷ್ಟಸುಖಗಳಲ್ಲಿ ಸಹಭಾಗಿನಿಯಾದ ಸೀತೆಯನ್ನು ಕಂಡು ಈ ದುಃಖವನ್ನೆಲ್ಲ ಮರೆಯುತ್ತೇನೆ. ವೈದೇಹಿಯೆಲ್ಲಿ ಹೋದಳೋ. (ಮುಂದೆ ಬಂದು ನೋಡಿ) ಇದೋ ವೈದೇಹಿಯಿಲ್ಲಿರುವಳು! ಮೊದಲು ಕನ್ನಡಿ ಹಿಡಿದರೂ ಕೈಸೋತಿತೆನ್ನುತ್ತಿದ್ದವಳೀಗ ತುಂಬಿದ ಕೊಡವನ್ನೆತ್ತಿಯೂ ಬಳಲುತ್ತಿಲ್ಲ! ಲತೆಗಳ ಮತ್ತು ಲತಾಂಗಿಯರ ಅಂಗಸೌಕುಮಾರ್ಯವನ್ನು ಕಾಡು ಕಠಿನ

ಗೊಳಿಸುತ್ತದೆ. (ಬಳಿಸಾರಿ) ಮೈಥಿಲಿ. ನಿನ್ನ ತಪಸ್ಸು ವರ್ಧಿಸುತ್ತಿದೆಯೆ?

ಸೀತೆ—ಹ! ಆರ್ಯಪುತ್ರ! ಆರ್ಯಪುತ್ರ, ನಿಮಗೆ ಜಯವಾಗಲಿ.

ರಾಮ—ಮೈಥಿಲಿ, ನಿನ್ನ ಆಚಾರಕ್ಕೆ ಅಡ್ಡಿಯಾಗದಿದ್ದರೆ, ಬಾ ಕುಳಿತುಕೋ.

ಸೀತೆ—(ಕುಳಿತು) ಅಪ್ಪಣೆ.

ರಾಮ—ಮೈಥಿಲಿ, ನೀನೇನನ್ನೋ ಕೇಳಬೇಕೆಂದಿರುವಂತಿದೆ. ಏನದು?

ಸೀತೆ—ದುಃಖದಿಂದ ದಿಕ್ಕುಗೆಟ್ಟವರಂತೆ ನಿಮ್ಮ ಮುಖ ಬಿಳಿಚಿಪೇರಿದೆ! ಚಿಂತೆಯೇನು?

ರಾಮ—ಮೈಥಿಲಿ, ನಾನು ಚಿಂತಿಸದೆ ಹೇಗಿರಲಿ? ತಂದೆಯ ಸಾವಿನ ಶೂಲ ನನ್ನ ದೇಹವನ್ನು ಚುಚ್ಚಿ ಹೃದಯದಲ್ಲಿ ನಾಟಿದೆ! ಆ ಹೃದಯದ ಹುಣ್ಣಿಗೇ ಮೇಲೆ ಮೇಲೆ ನಾನಾ ಶೋಕದ ಬಾಣಗಳು ಬಂದು ಬಂದು ಬೀಳುತ್ತಿವೆ.

ಸೀತೆ—ಆರ್ಯಪುತ್ರ, ನಿಮ್ಮ ಆ ಶೋಕವೇನು?

ರಾಮ—ನಾಳೆ ನಮ್ಮ ತಂದೆಯವರ ವರ್ಷದ ಶ್ರಾದ್ಧ. ಶ್ರಾದ್ಧ-ಕಲ್ಪದ ವಿಧಿಗನುಸಾರವಾಗಿ ಪಿತೃಗಳಿಗೆ ಪಿಂಡಪ್ರದಾನಮಾಡಬೇಕಾಗಿದೆ. ಅದನ್ನು ಹೇಗೆ ಮಾಡಬೇಕೋ, ನನಗೊಂದೂ ಬಗೆಹರಿಯದಾಗಿದೆ: ಅಥವಾ ನಾವಿರುವ ಸ್ಥಿತಿ ಪಿತೃಗಳಿಗೆ ತಿಳಿಯದೆ? ಏನು ಕೊಟ್ಟರದರಿಂದಲೇ ಅವರು ತೃಪ್ತಿಯನ್ನು ಹೊಂದುವರು. ಆದರೂ ರಾಮನ ತಂದೆಯ ಮತ್ತು ರಾಮನ ಯೋಗ್ಯತೆಗೆ ಅನುರೂಪವಾದುದನ್ನು ಕೊಟ್ಟು ಪೂಜೆಯನ್ನು ಮಾಡಬೇಕೆಂದಿದೇನೆ.

ಸೀತೆ—ಭರತನು ಶ್ರಾದ್ಧವನ್ನು ವಿಜೃಂಭಣೆಯಿಂದ ಮಾಡಿಯೇ ಮಾಡುತ್ತಾನೆ; ನಿಮ್ಮ ಸ್ಥಿತಿಗತಿಗನುಸಾರವಾಗಿ ಫಲೋದಕದಿಂದಲೇ ನೀವು ಶ್ರಾದ್ಧವನ್ನು ಮಾಡಿ, ಮುಗಿಸಿ. ಅಷ್ಟರಿಂದಲೇ ಮಾವನವರು ಸಂತೃಪ್ತರಾಗುತ್ತಾರೆ.

ರಾಮ—ದರ್ಭೆಯ ಹುಲ್ಲಿನ ಮೇಲೆ, ನನ್ನ ಕೈಯಿಂದಲೇ ಹರಿದಿಟ್ಟ ಹಣ್ಣುಗಳನ್ನು ನಮ್ಮ ತಂದೆಯವರು ಕಂಡು—ನಮ್ಮ ವನವಾಸವನ್ನು ನೆನೆದು—ಸ್ವರ್ಗದಲ್ಲಿದ್ದೂ ಅವರು ಕಣ್ಣೀರಿಡುವರು.

(ಸನ್ಯಾಸಿಯ ವೇಷ ಧರಿಸಿದ ರಾವಣನು ಪ್ರವೇಶಿಸುವನು)

ರಾವಣ—(ಸ್ವಗತ) ಜಿತೇಂದ್ರಿಯನಲ್ಲದ ನಾನು ಜಿತೇಂದ್ರಿಯರ ಈ ವೇಷವನ್ನು ಧರಿಸಿ, ರಾಮನನ್ನು ವಂಚಿಸಿ, ಅವನನ್ನು ದೂರ ಕಳಿಸಿ, ಮಂತ್ರಹೀನವಾದ

ಹವಿಷ್ಯನ್ನು ಅಪಹರಿಸುವಂತೆ, ಜನಕಸುತೆಯಾದ ಸೀತೆಯನ್ನು ಕದ್ದೊಯ್ಯಲು ಬಂದಿದ್ದೇನೆ. ಆ ರಾಮನು ಖರಾಸುರನನ್ನು ಕೊಂದ ಸೇಡನ್ನು ನಾಸೀಗ ತೀರಿಸಿಕೊಳ್ಳುತ್ತೇನೆ. (ಮುಂದೆ ಬಂದು ನೋಡಿ) ಇದೇ ರಾಮನಾಶ್ರಮ; ಆಗಲಿ, ಅತಿಥಿಯಂತೆ ನಟಿಸುತ್ತೇನೆ. (ಪ್ರಕಾಶ) ಅತಿಥಿಯೊಬ್ಬನು ಬಂದಿದ್ದೇನೆ—ಯಾರಿದೀರಿ ?

ರಾಮ—(ಆಲಿಸಿ) ಅತಿಥಿಗೆ ಸ್ವಾಗತ.

ರಾವಣ—(ಸ್ವಗತ) ನನ್ನೀ ಸ್ವರವು ನಾಸೀಗ ಧರಿಸಿರುವ ವೇಷಕ್ಕೆ ಖಂಡಿತವಾಗಿ ಕಳೆಕೊಟ್ಟಿದೆ.

ರಾಮ—(ದಿಟ್ಟಿಸಿ, ಸ್ವಗತ) ಆಹ! ಯಾರೋ ಸ್ವಾಮಿಗಳು ಬಂದಿದ್ದಾರೆ. (ಪ್ರಕಾಶ) ಪೂಜ್ಯರೇ ನಮಸ್ಕಾರ.

ರಾವಣ—ಒಳ್ಳೆಯದಾಗಲಿ.

ರಾಮ—ಸ್ವಾಮಿ, ಇದೋ ಆಸನ; ಬನ್ನಿ, ಕುಳಿತುಕೊಳ್ಳಿ.

ರಾವಣ—(ಸ್ವಗತ) ಏನಿವನು ನನಗೆ ಆಜ್ಞೆ ಮಾಡಿದನೆನಿಸುತ್ತಿದೆ. (ಪ್ರಕಾಶ) ಆಗಲಿ (ಎಂದು ಕುಳಿತುಕೊಳ್ಳುವನು)

ರಾಮ—ಮೈಥಿಲಿ, ಪೂಜ್ಯರ ಪಾದಗಳಿಗೆ ನೀರನ್ನು ತಾ.

ಸೀತೆ—ಅಪ್ಪಣೆ (ನಿಷ್ಕ್ರಮಿಸಿ, ಪ್ರವೇಶಿಸಿ) ಇದೋ ನೀರು

ರಾಮ—ಸ್ವಾಮಿಗಳಿಗೆ ಸೇವೆ ಮಾಡು.

ಸೀತೆ—ಆರ್ಯಪುತ್ರನ ಅಪ್ಪಣೆಯಂತಾಗಲಿ. ಬನ್ನಿ ಸ್ವಾಮಿ. ಕುಳಿತುಕೊಳ್ಳಿ.

ರಾವಣ—(ಮಾಯೆಯೆಲ್ಲಿ ಬಯಲಾಗುವುದೋ ಎಂದು ಗಾಬರಿಯಾಗಿ) ಆಗಲಿ, ಸಂತೋಷ! ಅಯ್ಯ, ಮಾನವಸ್ತ್ರೀಯರಲ್ಲಿ ಅರುಂಧತಿಯೆಂಬ ಕೀರ್ತಿಗೆ ಪಾತ್ರಳಾದವಳಿವಳೊಬ್ಬಳೇ! ಇಂಥವಳ ಗಂಡನೆಂದು ನಿನ್ನನ್ನು ಹೆಂಗಸರೆಲ್ಲ ಮೆಚ್ಚಿ ಹೊಗಳುತ್ತಿದ್ದಾರೆ.

ರಾಮ—ಸರಿ. ನೀರನ್ನಿಲ್ಲಿ ಕೊಡು. ನಾನೇ ಇವರಿಗೆ ಸೇವೆ ಮಾಡುತ್ತೇನೆ.

ರಾವಣ—ಅಯ್ಯ ನಿನ್ನ ಛಾಯೆಯಂತಿರುವ ಸೀತೆಯಿಂದಲೇ ನಾನು ಸೇವೆಯನ್ನು ಕೈಗೊಳ್ಳದ ಮೇಲೆ, ಆಕೆಗೆ ಪೂಜ್ಯನಾದ ನಿನ್ನಿಂದ ಹೇಗೆ ಕೈಗೊಳ್ಳಲಿ? ಸಾಕು; ಒಳ್ಳೆಯ ಮಾತೇ ಅತಿಥಿಸತ್ಕಾರ! ನನಗಿಷ್ಟರಿಂದಲೇ ಸಂತೋಷವಾಗಿದೆ. ಬಾ, ಕುಳಿತುಕೋ.

ರಾಮ—ಆಗಲಿ. (ಕುಳಿತುಕೊಳ್ಳುವನು)

ರಾವಣ—(ಸ್ವಗತ) ನಾನು ಈಗ ಬ್ರಾಹ್ಮಣನಂತೆ ನಡೆದುಕೊಳ್ಳುತ್ತೇನೆ. (ಪ್ರಕಾಶ) ಅಯ್ಯ, ನನ್ನದು ಕಾಶ್ಯಪಗೋತ್ರ. ವೇದವನ್ನು ಸಾಂಗೋಪಾಂಗ ವಾಗಿ ಅಧ್ಯಯನಮಾಡಿದ್ದೇನೆ. ಮನುವಿನ ಧರ್ಮಶಾಸ್ತ್ರ, ಮಹೇಶ್ವರನ ಯೋಗಶಾಸ್ತ್ರ, ಬೃಹಸ್ಪತಿಯ ಅರ್ಥಶಾಸ್ತ್ರ, ಮೇಧಾತಿಥಿಯ ನ್ಯಾಯಶಾಸ್ತ್ರ, ಪ್ರಚೇತಸನ ಶ್ರಾದ್ಧಕಲ್ಪ—ಎಲ್ಲವನ್ನೂ ಬಲ್ಲೆ ನಾನು.

ರಾಮ—ಏನು, ಏನು? ಶ್ರಾದ್ಧಕಲ್ಪವನ್ನು ಬಲ್ಲೆನೆಂದಿರಾ?

ರಾವಣ—ಸರ್ವಶ್ರುತಿಗಳನ್ನೂ ಬಿಟ್ಟು, ಶ್ರಾದ್ಧಕಲ್ಪದಲ್ಲೇಕೆ ನಿನಗಿಷ್ಟು ಆಶೆ?

ರಾಮ—ಪೂಜ್ಯರೇ, ತಂದೆಯನ್ನು ನೀಗಿಕೊಂಡ ನನಗೆ ಅದೇ....

ರಾವಣ—ಬೇಡ, ಮರೆಮಾಜಬೇಡ! ಕೇಳಬೇಕೆಂದಿರುವುದನ್ನು ಕೇಳು!

ರಾಮ—ಪೂಜ್ಯರೇ, ಶ್ರಾದ್ಧಕಾಲದಲ್ಲಿ ಯಾವುದರಿಂದ ಪಿತೃಗಳು ತೃಪ್ತರಾಗುವರು?

ರಾವಣ—ಗೊತ್ತಿಲ್ಲವೇ "ಶ್ರದ್ಧೆಯಿಂದ ದತ್ತವಾದುದೆಲ್ಲ ಶ್ರಾದ್ಧ."

ರಾಮ—ಅನಾದರದಿಂದ ಕೊಟ್ಟಿದ್ದನ್ನು ಪಿತೃಗಳು ಮುಟ್ಟಿಯಾರೆ? ಅವರಿಗೆ ವಿಶೇಷ ಸಂತೋಷವಾಗುವುದು ಯಾವುದರಿಂದ ಎಂದು ಕೇಳಿದೆ.

ರಾವಣ—ಹಾಗಾದರೆ ಕೇಳು: ಗರಿಕೆಗಳಲ್ಲಿ ದರ್ಭೆ, ಧಾನ್ಯಗಳಲ್ಲಿ ಎಳ್ಳು, ದಂಟುಗಳಲ್ಲಿ ಕೆಸವೆ, ಮೀನುಗಳಲ್ಲಿ ಮಹಾಶಫರ, ಹಕ್ಕಿಗಳಲ್ಲಿ ವಾಧ್ರಾಣಸ, ಪಶುಗಳಲ್ಲಿ ಗೋವು—ಇವೇ ಮುಂತಾದುವು ಮನುಷ್ಯರು ಮಾಡುವ ಶ್ರಾದ್ಧಗಳಲ್ಲಿ ವಿಹಿತವಾದುವು.

ರಾಮ—ಸ್ವಾಮಿ, 'ಮುಂತಾದುವು' ಎಂಬ ಮಾತಿನಿಂದ ಇವಲ್ಲದೆ ಮತ್ತೆ ಬೇರೆಯಿದೆಯೆಂದಂತಾಯಿತು.

ರಾವಣ—ಇದೆ, ಅದೊಂದು ವಿಧವಾದ ಜಿಂಕೆ! ಆದರೆ ಅದನ್ನು ಸಾಮರ್ಥ್ಯವಿದ್ದರೆ ಮಾತ್ರ ಸಂಪಾದಿಸಲು ಸಾಧ್ಯ!

ರಾಮ—ಸ್ವಾಮಿ, ನಿಶ್ಚಯವಾಗಿ ನನಗೆ ಅದೇ ಬಹಳ ಇಷ್ಟ. ನನ್ನಲ್ಲಿ ಧನುಶ್ಶಕ್ತಿ, ತಪಶ್ಶಕ್ತಿ—ಎರಡೂ ಇವೆ. ತಪಸ್ಸಿನಿಂದಾಗದಿದ್ದರೆ ಧನುಸ್ಸಿನಿಂದ ಸಂಪಾದಿಸುತ್ತೇನೆ; ಧನುಸ್ಸಿನಿಂದಾಗದಿದ್ದರೆ ತಪಸ್ಸಿನಿಂದ ಸಂಪಾದಿಸುತ್ತೇನೆ!

ರಾವಣ—ಅವೇನೋ ಇವೆ! ಹಿಮಾಲಯದಲ್ಲಿವೆ!

ರಾಮ—ಹಿಮಾಲಯದಲ್ಲಿ ? ಎಲ್ಲಿ ?

ರಾವಣ—ಹಿಮಾಲಯದ ಏಳನೇ ಶಿಖರದಲ್ಲಿವೆ, ಅವು ಕುಡಿಯುವುದು ಸಾಕ್ಷಾತ್ ಶಿವನ ಶಿರಸ್ಸಿನಿಂದ ಧುಮುಕುವ ಗಂಗಾ ಜಲವನ್ನೇ! ಅವುಗಳ ಬೆನ್ನು ವೈಡೂರ್ಯಶ್ಯಾಮಲ ವರ್ಣದಿಂದ ಸುಂದರವಾಗಿರುತ್ತದೆ. ಅವುಗಳ ವೇಗ ವಾಯುವೇಗ; ಆ ಜಾತಿಯ ಜಿಂಕೆಗಳ ಹೆಸರು 'ಕಾಂಚನ ಪಾರ್ಶ್ವ' ಎಂದು. ವೈಖಾನಸರು, ವಾಲಖಿಲ್ಯರು, ನೈಮಿಷೀಯರೇ ಮೊದಲಾದ ಋಷಿಗಳು ನೆನೆದೊಡನೆಯೇ, ಅವು ಒದಗಿ ಬಂದು, ತಾವೇ ಪ್ರಾಣಬಿಟ್ಟು ಅವರ ಶ್ರಾದ್ಧಗಳ ವಿಜೃಂಭಣೆಯನ್ನು ಹೆಚ್ಚಿಸುತ್ತವೆ. ಅವುಗಳನ್ನು ಸಮರ್ಪಿಸಿದರೆ ಪಿತೃಗಳು ಸಂತೃಪ್ತರಾಗಿ–ಮಕ್ಕಳನ್ನು ಪಡೆದುದು ಸಾರ್ಥಕವಾಯಿತೆಂದುಕೊಳ್ಳುವರು. ಅಷ್ಟೇ ಅಲ್ಲದೆ, ಅವರು ಮುಪ್ಪನ್ನು ಬಿಟ್ಟು ಮತ್ತೆ ಹರೆಯವನ್ನು ಹೊಂದಿ, ಕಳಕಳಿಸುತ್ತ ಸ್ವರ್ಗವನ್ನು ಸೇರುವರು. ಅಲ್ಲಿ ಸುರರಿಗೆ ಸಮವಾಗಿ ವಿಮಾನಗಳಲ್ಲಿ ನೆಲಸುವರು. ಆಗವರು ಎಂದೆಂದಿಗೂ ವಿಷಯದ ಸುಳಿಗೆ ಸಿಕ್ಕಿ ಕೆಳಗಿಳಿಯುವುದಿಲ್ಲ.

ರಾಮ—ಮೈಥಿಲಿ, ನಿನ್ನ ಮಕ್ಕಳಂತಿರುವ ಈ ಹರಿಣಶಿಶುಗಳನ್ನೂ ಸಸಿಗಳನ್ನೂ, ಗೆಳತಿಯರಂತಿರುವ ಬಳ್ಳಿಗಳನ್ನೂ, ಈ ವಿಂಧ್ಯವನವನ್ನೂ ಬೀಳ್ಕೊಟ್ಟು ನಡೆ; ನಾನು ಜ್ಯೋತಿರ್ಲತೆಗಳ ಬೆಳಗಿಂದ ಕಂಗೊಳಿಸುವ ಹಿಮಗಿರಿಯರಣ್ಯಗಳಲ್ಲಿ ವಾಸಮಾಡಬೇಕೆಂದಿದ್ದೇನೆ.

ಸೀತೆ—ಆರ್ಯಪುತ್ರನ ಅಪ್ಪಣೆಯಂತಾಗಲಿ.

ರಾವಣ—ಕೌಸಲ್ಯಾಪುತ್ರ, ಬೇಡ, ಈ ಮಹತ್ವಾಕಾಂಕ್ಷೆಯನ್ನು ಬಿಡು! ಅವು ಮನುಷ್ಯರಿಗೆ ಕಾಣುವುದಿಲ್ಲ!

ರಾಮ—ಸ್ವಾಮಿ, ಅವು ಹಿಮಾಲಯದಲ್ಲಿ ವಾಸಿಸುತ್ತವೆ ತಾನೆ ?!

ರಾವಣ—ಅಲ್ಲವೆ ?!

ರಾಮ—ಹಾಗಾದರೆ ನೀವೇ ನೋಡುತ್ತಿರಿ! ಆ ಸುವರ್ಣಮೃಗಗಳನ್ನು ಹಿಮವಂತನು ನನಗೆ ಕಾಣಿಕೆಯಾಗಿ ಕೊಡುವನು. ಕೊಡದಿದ್ದರೆ ಕುಮಾರ-ಸ್ವಾಮಿಯು ಕ್ರೌಂಚಪರ್ವತವನ್ನು ಸೀಳಿದಂತೆ, ನಾನು ಹಿಮವತ್ಪರ್ವತವನ್ನು ಎರಡಾಗಿ ಸೀಳಿಬಿಟ್ಟೇನು.

ರಾವಣ—(ಸ್ವಗತ) ಇವನ ಗರ್ವವು ಸಹಿಸಲಸಾಧ್ಯವಾಯಿತು. (ಪ್ರಕಾಶ) ಅದೇನು! ಮಿಂಚು ಮಿಂಚಿದಂತೆ ಕಾಣುತ್ತದೆ.

ರಾಮ—(ದಿಕ್ಕುದಿಕ್ಕಿಗೆ ನೋಡಿ) ಹೌದು, ಮಿಂಚು ಮಿಂಚಿದಂತಿದೆ.

ರಾವಣ—ರಾಮ, ನೀನಿಲ್ಲಿರುವಂತೆಯೇ ನಿನ್ನನ್ನು ಹಿಮವಂತನು ಗೌರವಿಸಿದ್ದಾನೆ. ನೋಡು! ಅದೋ ಕಾಂಚನಪಾರ್ಶ್ವ!

ರಾಮ—ಇದೆಲ್ಲ ತಮ್ಮ ಪ್ರಭಾವ.

ಸೀತೆ—ಇದು ಆರ್ಯಪುತ್ರನ ಅದೃಷ್ಟ.

ರಾಮ—ಅಲ್ಲ, ಅಲ್ಲ. ಈ ಕಾಂಚನಪಾರ್ಶ್ವವಿಲ್ಲಿಗೆ ತಾನೇ ತಾನಾಗಿ ಬಂದಿರುವುದು ನಮ್ಮ ತಂದೆಯವರ ಭಾಗ್ಯ. ನಮ್ಮ ತಂದೆಯವರ ಪೂಜೆಗಿದು ಸಲ್ಲಬೇಕು. ಹೋಗು, ಲಕ್ಷ್ಮಣನಿಗೆ ಹೇಳು.

ಸೀತೆ—ತೀರ್ಥಯಾತ್ರೆಯಿಂದ ಹಿಂತಿರುಗಿ ಬರುವ ಕುಲಪತಿಗಳನ್ನು ಇದಿರುಗೊಂಡು ಕರೆತರಲು ಹೋಗೆಂದು ಸೌಮಿತ್ರಿಗೆ ನೀವೇ ಹೇಳಿ ಕಳಿಸಿದಿರಲ್ಲಾ!

ರಾಮ—ಹಾಗಾದರೆ ನಾನೇ ಹೋಗುತ್ತೇನೆ.

ಸೀತೆ—ಆರ್ಯಪುತ್ರ, ನಾನೇನು ಮಾಡಲಿ?

ರಾಮ—ಸ್ವಾಮಿಗಳ ಶುಶ್ರೂಷೆಮಾಡುತ್ತಿರು.

ಸೀತೆ—ಆರ್ಯಪುತ್ರ, ನೀನು ಆಜ್ಞಾಪಿಸಿದಂತಾಗಲಿ.

(ರಾಮನು ನಿಷ್ಕ್ರಮಿಸುವನು)

ರಾವಣ—ಅಯ್ಯೋ! ಇದೇನು! ರಾಮನು ನನಗೆ ಕೊಡಲೆಂದು ತಂದ ಅರ್ಘ್ಯವನ್ನೆತ್ತಿಕೊಂಡೇ ಹೊರಟುಬಿಟ್ಟ. ನನಗೆ ಸತ್ಕಾರ ಮಾಡುವುದನ್ನು ಮರೆತುಬಿಟ್ಟು—ಆತನು ಜಿಂಕೆಯು ಓಡಿಹೋಗುತ್ತಿರುವುದನ್ನು ಕಂಡು—ಅದೋ ಬಿಲ್ಲಿಗೆ ಬಾಣವನ್ನೇರಿಸುತ್ತಿದ್ದಾನೆ. ಆಹ! ಆತನ ಬಲವೇನು! ವೀರ್ಯವೇನು! ಸತ್ತ್ವವೇನು! ವೇಗವೇನು! ಆದ್ದರಿಂದಲೇ ಅಲ್ಲವೆ ರಾಮನೆಂಬೆರಡಕ್ಷರದಿಂದ ಜಗತ್ತೆಲ್ಲವೂ ತುಂಬಿಹೋಗಿದೆ! ಅದೋ ಆ ಜಿಂಕೆಯು ಒಂದೇ ಜಿಗಿತಕ್ಕೆ ದಟ್ಟವಾದರಣ್ಯವನ್ನು ಪ್ರವೇಶಿಸಿಬಿಟ್ಟಿತು!

ಸೀತೆ—(ಸ್ವಗತ) ಆರ್ಯಪುತ್ರನನ್ನಗಲಿದ ನನಗೆ ಭಯವಾಗುತ್ತಿದೆ.

ರಾವಣ—(ಸ್ವಗತ) ನನ್ನ ಮಾಯೆಯಿಂದ ರಾಮನೀಗ ದೂರವಾದ. ಏಕಾಂಗಿನಿಯಾದ ಸೀತೆಯನ್ನು—ಅತ್ತರೂ ಬಿಡುವುದಿಲ್ಲ—ಮಂತ್ರವಿಲ್ಲದ ಹವಿಸ್ಸನ್ನಂತೆ ಅಪಹರಿಸಿಕೊಂಡು ಹೋಗುತ್ತೇನೆ.

ಸೀತೆ—(ಹೋಗಲಿಚ್ಛಿಸಿ) ಪರ್ಣಶಾಲೆಯೊಳಕ್ಕೆ ಹೋಗುತ್ತೇನೆ.

ರಾವಣ—(ನಿಜರೂಪವನ್ನು ತೋರಿ) ಸೀತೆ, ನಿಲ್ಲು, ನಿಲ್ಲು.

ಸೀತೆ—(ಭಯದಿಂದ) ಹ! ಇದಾರಿವನು?!

ರಾವಣ—ಗೊತ್ತಿಲ್ಲವೇನು? ದೇವದಾನವರಿಗೆ ಮಣ್ಣುಮುಕ್ಕಿಸಿದ ಮಹಾ ವೀರ ನಾನು. ಶೂರ್ಪನಖಿಗೆ ವಿರೂಪ ಮಾಡಿದುದನ್ನೂ, ನನ್ನ ತಮ್ಮಂದಿರಿಬ್ಬರನ್ನು ಕೊಂದುದನ್ನೂ ಕೇಳಿದೆ. ಗರ್ವೋನ್ಮತ್ತನಾದ ಆ ರಾಮುನನ್ನು ಯಾವುದಾದರೂ ನೆಪದಿಂದ ದಿಕ್ಕುಗೆಡಿಸಿ; ಎಲೆ, ವಿಶಾಲನಯನೆ, ನಿನ್ನನ್ನು ಕದ್ದೆತ್ತಿಕೊಂಡು ಹೋಗಲೆಂದು ಬಂದಿದ್ದೇನೆ.

ಸೀತೆ—ಹ! ರಾವಣನೇನು!? (ಹೊರಡಲುದ್ಯೋಗಿಸುವಳು)

ರಾವಣ—ರಾವಣನ ಕಣ್ಣಿಗೆ ಬಿದ್ದಮೇಲಿನ್ನು ನೀನೆಲ್ಲಿಗೆ ತಾನೇ ಹೋದೀಯೇ? ನಿಲ್ಲು!

ಸೀತೆ—ಆರ್ಯಪುತ್ರ, ಕಾಪಾಡು, ಕಾಪಾಡು! ಸೌಮಿತ್ರಿ, ಕಾಪಾಡು, ಕಾಪಾಡು!

ರಾವಣ—ಸೀತೆ, ನನ್ನ ಪರಾಕ್ರಮವನ್ನು ಕೇಳು: ದೇವೇಂದ್ರನನ್ನು ಭಂಗ ಪಡಿಸಿದೆ, ಕುಬೇರನನ್ನು ತತ್ತರಿಸುವಂತೆ ಮಾಡಿದೆ; ಚಂದ್ರನನ್ನು ಕೇಳಗೆಳೆದು ಬಿಸಾಡಿದೆ; ಯಮುನನ್ನು ತುಳಿದೊರಸಿದೆ; ಅಂಜುಬುರಕು ದೇವತೆಗಳಿಂದ ಕೂಡಿದ ಸ್ವರ್ಗಕ್ಕೆ ಧಿಕ್ಕಾರ. ಸೀತೆ, ನೀನಿರುವ ಈ ಭೂಲೋಕಕ್ಕೆ ಪುರಸ್ಕಾರ.

ಸೀತೆ—ಆರ್ಯಪುತ್ರ, ಕಾಪಾಡು, ಕಾಪಾಡು! ಸೌಮಿತ್ರಿ, ಕಾಪಾಡು, ಕಾಪಾಡು!

ರಾವಣ—ರಾಮುನಿಗಾದರೂ ಮೊರೆಯಿಡು, ಲಕ್ಷ್ಮಣನಿಗಾದರೂ ಮೊರೆಯಿಡು; ಸ್ವರ್ಗದಲ್ಲಿರುವ ದಶರಥನಿಗೇ ಮೊರೆಯಿಡು. ಕಾಪುರುಷರನ್ನು ಕೂಗಿಕೊಂಡ ಈ ಮಾತುಗಳಿಂದ ನನಗೇನಾದೀತು? ಹುಲಿಯ ಮೇಲೆ ಹುಲ್ಲೆಯ ಮರಿಗಳೆಂದಾದರೂ ಬಿದ್ದಾವೆ?

ಸೀತೆ—ಆರ್ಯಪುತ್ರ, ಕಾಪಾಡು, ಕಾಪಾಡು! ಸೌಮಿತ್ರಿ, ನನ್ನನ್ನು ಕಾಪಾಡು!

ರಾವಣ—ಎಲೆ ವಿಶಾಲನೇತ್ರೆ ಹಲುಬುವೆಯೇಕೆ? ನನ್ನನ್ನೂ ನಿನ್ನ ಗಂಡ

ನೆಂದೇ ಗಣಿಸು. ರಾಮನು ವಿಪುಲಬಲಶಾಲಿಯಿರಬಹುದು ; ಅವನಿಗೆ ದೇವತೆಗಳ ಬೆಂಬಲವಿರಬಹುದು ; ಆದರವನೆಂದೂ ನನ್ನೊಡನೆ ಹೋರಾಡಲಾರ.

ಸೀತೆ—ನಿನಗೆ ನನ್ನ ಶಾಪ ತಟ್ಟಲಿ.

ರಾವಣ—ಹಹಹ! ಆಹ! ಪತಿವ್ರತೆಯ ಮಹಿಮೆ! ಸವೇಗವಾಗಿ ಸೂರ್ಯನ ಮೇಲೆರಗಿದ ನನ್ನನ್ನು ಅವನ ರಶ್ಮಿಗಳೂ ಏನನ್ನೂ ಮಾಡಲಾರದೇ ಹೋದು ವೆಂದಮೇಲೆ, ಶಾಪ ತಟ್ಟಲಿಯೆಂದು ಇವಳಾಡಿದ ಕೆಲವಕ್ಷರಗಳೇನುಮಾಡಿ ಯಾವು?

ಸೀತೆ—ಆರ್ಯಪುತ್ರ, ಕಾಪಾಡು, ಕಾಪಾಡು!

ರಾವಣ—(ಸೀತೆಯನ್ನೆತ್ತಿಕೊಂಡು) ಎಲೆ, ಎಲೆ, ಜನಸ್ಥಾನದಲ್ಲಿ ವಾಸಿಸುವ ತಪಸ್ವಿಗಳೇ ಕೇಳಿ, ಕಿವಿಗೊಟ್ಟು ಕೇಳಿ : ಹತ್ತು ತಲೆಯ ರಾವಣನು ಬಲಾತ್ಕಾರ ದಿಂದ ಸೀತೆಯನ್ನು ಹೊತ್ತುಕೊಂಡು ಹೋಗುತ್ತಿದಾನೆ. ರಾಮನಿಗೆ ಕ್ಷತ್ರಿಯ ಧರ್ಮವನ್ನು ಪರಿಪಾಲಿಸಬೇಕೆಂಬ ಛಲವಿದ್ದರೆ ಅವನು ಪರಾಕ್ರಮವನ್ನು ತೋರಿಸಲಿ.

ಸೀತೆ—ಆರ್ಯಪುತ್ರ, ಕಾಪಾಡು, ಕಾಪಾಡು!

ರಾವಣ—(ಮುಂದೆ ನಡೆದು ನೋಡಿ) ಆಹ! ತನ್ನ ರೆಕ್ಕೆಯ ಗಾಳಿಯಿಂದ ಇಡೀ ಕಾಡೆಲ್ಲ ಕ್ಷೋಭೆಗೊಳ್ಳುವಂತೆ ರಭಸದಿಂದ ವಜ್ರಸಮ—ಚಂಡಚಂಚು ವನ್ನು ಚಾಚಿ, ಜಟಾಯುವಿತ್ತಲೇ ಬರುತ್ತಿದಾನೆ! ಆಗಲಿ! ಎಲೋ ಜಟಾಯು, ಬಾ! ಒರೆಯಿಂದೆಳೆದ ಹರಿತವಾದ ನನ್ನ ಖಡ್ಗದಿಂದ ನಿನ್ನ ರೆಕ್ಕೆಗಳನ್ನು ಸವರಿ ನಿನಗೆ ರಕ್ತಸ್ನಾನಮಾಡಿಸಿ, ನಿನ್ನನ್ನು ಯಮನ ಮನೆಗೆ ದಬ್ಬುತ್ತೇನೆ.

(ಎಲ್ಲರೂ ನಿಷ್ಕ್ರಮಿಸುವರು)

ಹದಿನಾಲ್ಕನೇ ದೃಶ್ಯ

(ಅಯೋಧ್ಯೆಯಲ್ಲಿ ಭರತನ ಅರಮನೆ. ಕಾಂಚುಕೀಯನ ಪ್ರವೇಶ)

ಕಾಂಚುಕೀಯ—ಯಾರೀ ಭಂಗಾರದ ಬಾಗಿಲಲ್ಲಿ ಕಾವಲಿರುವವರು?

ಪ್ರತೀಹಾರಿ—ಅಯ್ಯ, ನಾನು ವಿಜಯೆ ; ಏನು ಮಾಡಬೇಕು?

ಕಾಂಚುಕೀಯ—ವಿಜಯೆ, ಹೋಗಿ ಭರತಕುಮಾರನಿಗೆ ಹೇಳು: ರಾಮ ದರ್ಶನಕ್ಕೆಂದು ಜನಸ್ಥಾನಕ್ಕೆ ಹೋಗಿದ್ದ ಪೂಜ್ಯ ಸುಮಂತ್ರನು ಹಿಂತಿರುಗಿ ಬಂದಿರುವನೆಂದು ತಿಳಿಸು, ಹೋಗು.

ಪ್ರತಿಹಾರಿ—ಅಯ್ಯ, ತಾತ ಸುಮಂತ್ರನು ಹೋಗಿದ್ದ ಕೆಲಸವಾಯಿತೆ?

ಕಾಂಚುಕೀಯ—ಅಮ್ಮ, ನನಗದೆಲ್ಲ ಗೊತ್ತಿಲ್ಲ! ಬಂದಿರುವ ಅವನ ಮುಖವನ್ನು ನೋಡಿದೆ; ಹೃದಯದಲ್ಲಿನ ಯಾವುದೋ ಶೋಕದ ಬೆಂಕಿಯಿಂದ ಅವನ ಆ ಮುಖವೆಲ್ಲ ಬೆಂದು ಬಾಡಿದೆ! ಆತನನ್ನು ನೋಡಿದೊಡನೆಯೇ ನನ್ನ ಹೃದಯ ಕಿವುಚಿದಂತಾಯಿತು.

ಪ್ರತೀಹಾರಿ—ಈ ವೃತ್ತಾಂತವನ್ನು ಕೇಳಿ ನನ್ನ ಹೃದಯವೂ ವ್ಯಾಕುಲಗೊಂಡಿದೆ.

ಕಾಂಚುಕೀಯ—ಮತ್ತಿದೇನು, ಇನ್ನೂ ಇಲ್ಲೇ ನಿಂತಿರುವೆಯಲ್ಲಾ! ಓಡು, ತಿಳಿಸು.

ಪ್ರತೀಹಾರಿ—ಅಯ್ಯ, ಇದೋ ತಿಳಿಸಿದೆ. (ನಿಷ್ಕ್ರಮಿಸುವಳು)

ಕಾಂಚುಕೀಯ—(ನೋಡಿ) ಆಹ! ಇದೋ, ಪೂಜ್ಯ ಭರತಕುಮಾರನು, ಸುಮಂತ್ರನು ಬಂದನೆಂದು ಕುತೂಹಲದಿಂದ ಇತ್ತಲೇ ಬರುತ್ತಿದಾನೆ; ನಾರು ಬಟ್ಟೆಯನ್ನುಟ್ಟು, ತೋರವಾದ ಜಟೆಯ ಗಂಟನ್ನೆತ್ತಿಕಟ್ಟಿದಾನೆ.

(ಪ್ರತೀಹಾರಿಯೂ, ಭರತನೂ ಪ್ರವೇಶಿಸುವರು)

ಕಾಂಚುಕೀಯ—(ಬಳಿಸಾರಿ) ಕುಮಾರನಿಗೆ ಜಯವಾಗಲಿ.

ಭರತ—ತಾತನು ಬಂದನೆ?! ಎಲ್ಲಿದಾನೆ?!

ಕಾಂಚುಕೀಯ—ಕಾಂಚನತೋರಣದ್ವಾರದಲ್ಲಿದಾನೆ; ಹೋಗಿ ಕರೆಯುತ್ತೇನೆ. (ನಿಷ್ಕ್ರಮಿಸಿ ಸುಮಂತ್ರನೊಡನೆ ಪ್ರವೇಶಿಸುವನು)

ಸುಮಂತ್ರ—(ಶೋಕದಿಂದ) ಅಯ್ಯೋ, ಕಷ್ಟ! ಈ ಮುದಿಗಣ್ಣುಗಳಿಂದ ಮಹಾರಾಜನ ಸಾವನ್ನು ಕಂಡೆ; ಆ ಮಹಾರಾಜನ ಮಗನ ಶೋಕವನ್ನು ಕಂಡೆ; ಈಗ ಸೀತೆ ಕಣ್ಮರೆಯಾದುದನ್ನು ಈ ಕಿವಿಯಿಂದಲೇ ಕೇಳಿದೆ. ಆರೋಗ್ಯದ ಲಕ್ಷಣವಾದ ಈ ನನ್ನ ದೀರ್ಘಾಯುಸ್ಸು ನನಗೊಂದು ದೊಡ್ಡ ರೋಗವಾಗಿ ಪರಿಣಮಿಸಿದಂತಿದೆ.

ಪ್ರತೀಹಾರಿ—(ಸುಮಂತ್ರನನ್ನು ಕುರಿತು) ಅಜ್ಜ, ಬನ್ನಿ, ಬನ್ನಿ! ಇದೋ, ಒಡೆಯರು ಇಲ್ಲೇ ಇದಾರೆ. ಹತ್ತಿರ ಹೋಗಿ.

ಸುಮಂತ್ರ—(ಬಳಿಸಾರಿ) ಕುಮಾರನಿಗೆ ಜಯವಾಗಲಿ.

ಭರತ—ತಾತ, ಲೋಕದ ಕಣ್ಣಿಗೆ ಸಾಕಾರಗೊಂಡ ಪಿತೃಪ್ರೇಮವನ್ನು ಕಂಡಾ? ಅರುಂಧತಿಯ ಪಡಿಯಚ್ಚನ್ನು ನೋಡಿದಾ? ಕಾರಣವಿಲ್ಲದೆ ಕಾಡಿಗೆ ಹೋದ ಸೋದರಪ್ರೇಮವನ್ನು ನೋಡಿದೆಯಾ?

(ಸುಮಂತ್ರನು ಚಿಂತಾಕ್ರಾಂತನಾಗಿ ನಿಲ್ಲುವನು)

ಪ್ರತೀಹಾರಿ—ರಾಜಕುಮಾರರು ನಿಮ್ಮನ್ನೇ ಅಲ್ಲವೆ ಕೇಳುತ್ತಿರುವುದು?

ಸುಮಂತ್ರ—ಏನಮ್ಮ, ನನ್ನನ್ನೇ?

ಭರತ—(ಸ್ವಗತ) ತಾತನಿಗೆ ಆಯಾಸ ಅತಿಯಾಗಿರಬೇಕು. ಸಂತಾಪದಿಂದ ಶೂನ್ಯಹೃದಯನಾಗಿದ್ದಾನೆ! (ಪ್ರಕಾಶ) ತಾತ, ನೀನು ಅರ್ಧದಾರಿಯಲ್ಲೇ ಹಿಂತಿರುಗಿ ಬಂದುಬಿಟ್ಟೆಯಾ?

ಸುಮಂತ್ರ—ನಿನ್ನ ಆಜ್ಞೆಯ ಪ್ರಕಾರ, ರಾಮದರ್ಶನಾರ್ಥವಾಗಿ, ಜನಸ್ಥಾನಕ್ಕೆಂದು ಹೋದವನು ಅರ್ಧದಾರಿಯಲ್ಲೇ ಹೇಗೆ ಹಿಂತಿರುಗಿ ಬಂದೇನು?

ಭರತ—ಅಥವಾ ಅವರು, ಕ್ರೋಧದಿಂದ—ಇಲ್ಲವೇ, ಲಜ್ಜೆಯಿಂದ ಕಾಣಿಸಿಕೊಳ್ಳದೇ ಹೋದರೋ!?

ಸುಮಂತ್ರ—ಮಗು, ವಿನೀತರಿಗೆ ಕ್ರೋಧವೆಲ್ಲಿ ಬಂತು? ಸಮಾಧಾನಚಿತ್ತರಿಗೆ ಲಜ್ಜೆಯೆಲ್ಲಿ ಬಂತು? ಅವರಿಲ್ಲದೆ ಶೂನ್ಯವಾಗಿದ್ದ ತಪೋವನವನ್ನು ನೋಡಿ ಬಂದೆ ನಾನು.

ಭರತ—ಆಹ! ಅವರೆಲ್ಲಿ ಹೋದರೆಂಬುದಾದರೂ ತಿಳಿಯಬಂತೆ?

ಸುಮಂತ್ರ—ವಾನರರ ನಿವಾಸಸ್ಥಾನವಾದ ಕಿಷ್ಕಿಂಧೆಯಿದೆಯಲ್ಲಾ ಅಲ್ಲಿಗೆ ಹೋದರಂತೆ.

ಭರತ—ಜನರ ಯೋಗ್ಯತೆಯನ್ನರಿಯದ ಪ್ರಾಣಿಗಳಲ್ಲವೆ ಆ ವಾನರರು?

ಸುಮಂತ್ರ—ಪ್ರಾಣಿಗಳಾದರೂ ಅವರಿಗೆ ಮಾಡಿದುಪಕಾರವನ್ನು ಸ್ಮರಿಸುವ ಗುಣವಿದೆ.

ಭರತ—ತಾತ, ಅದು ಹೇಗೆ?

ಸುಮಂತ್ರ—ಸುಗ್ರೀವನೆಂಬವನು ತನ್ನ ದೊಡ್ಡಣ್ಣನಾದ ವಾಲಿಯೆಂಬವನಿಂದ ರಾಜ್ಯಭ್ರಷ್ಟನಾಗಿ, ಹೆಂಡತಿಯನ್ನು ಕಳೆದುಕೊಂಡು, ಬೆಟ್ಟವೊಂದರಲ್ಲಿ ಬೀಡುಬಿಟ್ಟಿದ್ದನಂತೆ. ಆಗ ರಾಮನು, ತನ್ನಂತೆಯೇ ದುಃಖಿಯಾಗಿದ್ದ ಸುಗ್ರೀವನನ್ನು ಆ ದುಃಖದಿಂದ ಪಾರುಮಾಡಿದನಂತೆ.

ಭರತ—ತಾತ, 'ತನ್ನಂತೆಯೇ' ಎಂದೇನೋ ಹೇಳಿದಿರಲ್ಲಾ, ಅದೇನು ?

ಸುಮಂತ್ರ—(ಸ್ವಗತ) ಅಯ್ಯೋ, ಹೇಳಬಾರದುದನ್ನೆಲ್ಲ ಹೇಳಿಬಿಟ್ಟಂತಾಯಿತೇ! (ಪ್ರಕಾಶ) ಕುಮಾರ, ಏನೂ ಇಲ್ಲ ; ರಾಮನು, ತನ್ನಂತೆಯೇ ರಾಜ್ಯೈಶ್ವರ್ಯವನ್ನು ಕಳೆದುಕೊಂಡಿದ್ದ ಸುಗ್ರೀವನನ್ನು ದುಃಖದಿಂದ ಪಾರುಮಾಡಿದನೆಂದಷ್ಟೇ ನನ್ನಭಿಪ್ರಾಯ.

ಭರತ—ತಾತ, ನೀನೇನನ್ನೋ ಮುಚ್ಚುಮರೆ ಮಾಡುವಂತಿದೆ!? ನೀನು ಸತ್ಯವನ್ನು ಹೇಳದೆ ಹೋದರೆ, ಸ್ವರ್ಗಸ್ಥನಾದ ನಮ್ಮ ತಂದೆಯ ಮೇಲಾಣೆ.

ಸುಮಂತ್ರ—ಅಯ್ಯೋ, ಇನ್ನೇನು ಗತಿ! ಕೇಳಪ್ಪ: ಅವರು ಋಷಿಗಳಿಗೋಸ್ಕರ ರಾಕ್ಷಸರೊಡನೆ ದ್ವೇಷ ಕಟ್ಟಿಕೊಳ್ಳಬೇಕಾಯಿತು. ಈ ಸೇಡಿನಿಂದ ಮಾಯಾವಿಯಾದ ರಾವಣನು ಮೋಸದಿಂದ ಸೀತೆಯನ್ನು ಕದ್ದುಕೊಂಡುಹೋದನಂತೆ.

ಭರತ—ಏನು ? ಏನು ? ಸೀತೆಯನ್ನು ಕದ್ದುಕೊಂಡುಹೋದನೇ ? (ಮೂರ್ಛೆ ಬೀಳುವನು)

ಸುಮಂತ್ರ—ಕುಮಾರ, ಸಂತೈಸಿಕೋ, ಸಂತೈಸಿಕೊಳ್ಳಪ್ಪ.

ಭರತ—(ಚೇತರಿಸಿಕೊಂಡು) ಅಯ್ಯೋ ದುರದೃಷ್ಟವೇ! ತಂದೆಯನ್ನೂ ಬಂಧು ಜನರನ್ನೂ ಅಗಲಿ, ಕಾಡಿನಲ್ಲಿ ಕಡುದುಃಖದಿಂದ ನವೆಯುತ್ತಿದ್ದ ನಮ್ಮಣ್ಣನಿಗೆ ಸತೀವಿಯೋಗ ಬೇರೆ ಸಂಭವಿಸಿತೇ ! ಈಗೇನು ಮಾಡಲಿ ? ಆಗಲಿ, ಹೊಳೆಯಿತು. ತಾತ, ಬಾ ನನ್ನ ಹಿಂದೆ.

ಸುಮಂತ್ರ—ಕುಮಾರನ ಅಪ್ಪಣೆಯಂತಾಗಲಿ.

(ಇಬ್ಬರೂ ಮುಂದೆ ನಡೆಯುವರು)

ಸುಮಂತ್ರ—ಕುಮಾರ, ಹೋಗಬೇಡ, ನಿಲ್ಲು ನಿಲ್ಲು. ರಾಣಿಯರಿರುವ ಚತುಶ್ಶಾಲೆಯಿದು.

ಭರತ—ನನಗೆ ಕೆಲಸವಿರುವುದಿಲ್ಲೇ. ಯಾರಿಲ್ಲಿರುವ ಪ್ರತಿಹಾರಿ ?

ಪ್ರತೀಹಾರಿ—(ಪ್ರವೇಶಿಸಿ) ರಾಜಪುತ್ರನಿಗೆ ಜಯವಾಗಲಿ. ನಾನು ವಿಜಯೆ.

ಭರತ—ವಿಜಯೆ, ನಾನು ಬಂದಿರುವೆನೆಂದು ರಾಣಿಗೆ ತಿಳಿಸು.

ಪ್ರತೀಹಾರಿ—ರಾಣಿಯರಲ್ಲಿ ಯಾರಿಗೆ ತಿಳಿಸಲಿ ?

ಭರತ—ಯಾವಳಿಗೆ ನಾನು ರಾಜನಾಗಬೇಕೆಂಬ ಹಂಬಲೋ ಅವಳಿಗೆ.

ಪ್ರತೀಹಾರಿ—(ಸ್ವಗತ) ಇನ್ನೇನಾಗುವುದೋ ಕಾಣೆನಲ್ಲಾ ! (ಪ್ರಕಾಶ) ಒಡೆಯ, ಹಾಗೇ ಆಗಲಿ.

(ಕೈಕೆಯು ವಿಜಯೆಯೊಡನೆ ಪ್ರವೇಶಿಸುವಳು)

ಕೈಕೆ—ವಿಜಯೆ, ನನ್ನನ್ನು ನೋಡಲು ಭರತನು ಬಂದಿರುವನೆ ?

ಪ್ರತೀಹಾರಿ—ಹೌದು, ತಾಯಿ.

ಕೈಕೆ—(ಸ್ವಗತ) ಭರತನು ಇನ್ನೇನನ್ನೆತ್ತಿ ನನ್ನನ್ನು ಬಯ್ಯುವನೋ! (ಎಂದು ಮುಂದೆ ಬಂದು) ಮಗು, ವಿಜಯೆಯು ಹೇಳುತ್ತಾಳೆ—ರಾಮನ ಕಡೆಯಿಂದ ಸುಮಂತ್ರನು ಬಂದಿರುವನಂತೆ.

ಭರತ—ನಿನಗೆ ಸಂತೋಷಕರವಾದ ಒಂದು ಮಾತನ್ನು ಹೇಳಬೇಕಾಗಿದೆ.

ಕೈಕೆ—ಕಂದ, ಕೌಸಲ್ಯೆ ಸುಮಿತ್ರೆಯರನ್ನೂ ಕೂಗಲೆ ?

ಭರತ—ಬೇಡ ; ಅವರಿಗಾ ಮಾತು ಗೊತ್ತಾಗಬಾರದು.

ಕೈಕೆ—(ಸ್ವಗತ) ಹ ! ಅದೇನಿರಬಹುದು ! (ಪ್ರಕಾಶ) ಅದೇನು ಹೇಳಪ್ಪ.

ಭರತ—ಕಿವಿಗೊಟ್ಟು ಕೇಳು : ಸ್ವರಾಜ್ಯವನ್ನು ಬಿಟ್ಟು ನಿನ್ನ ಕಟ್ಟಪ್ಪಣೆಯಂತೆ ಕಾಡಿಗೆ ಹೋದ ಅಣ್ಣನ ಸತಿಯಾದ ಸೀತೆಯನ್ನು ರಾಕ್ಷಸ ರಾವಣನು ಕದ್ದುಕೊಂಡು ಹೋದನಂತೆ—ನಿನ್ನ ಮನೋರಥ ಪೂರೈಸಿತೇ ?

ಕೈಕೆ—ಹ !

ಭರತ—ಅಯ್ಯೋ ! ಸತ್ತ್ವಶಾಲಿಗಳೂ, ಜಿತೇಂದ್ರಿಯರೂ ಆದ ಇಕ್ಷ್ವಾಕು ಮನೆತನದವರು—ನಿನ್ನಂತಹ ಸೊಸೆಯನ್ನು ಮನೆಗೆ ತಂದುಕೊಂಡುದರಿಂದ—ಸೀತೆಯಂತಹ ಸೊಸೆಗಾದ ಅವಮಾನವನ್ನು ಸಹಿಸಕೊಳ್ಳಬೇಕಾಯಿತು.

ಕೈಕೆ—(ಸ್ವಗತ) ನಾನು ಹೇಳಬೇಕಾದುದನ್ನೆಲ್ಲ ಹೇಳಲು ಇದು ಸರಿಯಾದ ಕಾಲ ! (ಪ್ರಕಾಶ) ಮಹಾರಾಜನಿಗೆ ಬಂದಿದ್ದ ಶಾಪ ನಿನಗೆ ಗೊತ್ತಿಲ್ಲ.

ಭರತ—ಏನು, ಮಹಾರಾಜನಿಗೆ ಶಾಪವಿತ್ತೇ ! ?

ಕೈಕೆ—ಸುಮಂತ್ರ, ಎಲ್ಲವನ್ನೂ ವಿಸ್ತರಿಸಿ ಹೇಳು.

ಭರತ—ಪೂಜ್ಯೇ, ಅಪ್ಪಣೆಯಂತಾಗಲಿ. ಕುಮಾರ ಕೇಳು: ಒಂದು ದಿನ ಮಹಾರಾಜನು ಬೇಟೆಯಾಡಲು ಹೋಗಿದ್ದ. ಅಲ್ಲೊಂದು ಸರೋವರದಲ್ಲಿ ಒಬ್ಬ ಋಷಿಪುತ್ರನು ಕಲಶವನ್ನು ಮುಳುಗಿಸಿ ನೀರನ್ನು ತುಂಬುವಾಗ, ಶಬ್ದವೊಂದು ಕೇಳಿಸಿತು. ಅದನ್ನು ಕಾಡಾನೆಯ ಶಬ್ದವೆಂದು ಶಂಕಿಸಿ ಮಹಾರಾಜನು ಶಬ್ದ-ವೇಧಿಬಾಣವನ್ನು ಪ್ರಯೋಗಿಸಿದನು. ಕುರುಡನಾದ ಆ ಮಹರ್ಷಿಗೆ ಕಣ್ಣಿನಂತಿದ್ದ ಆ ಮಗನು ನೀರು ತುಂಬುತ್ತಿದ್ದಂತೆಯೇ ಆ ಬಾಣ ತಾಗಿ ಬಿದ್ದು ಸತ್ತು ಹೋದನು.

ಭರತ—ಅಯ್ಯೋ, ಪಾಪ! ಸತ್ತುಹೋದನೆ? ಆಮೇಲೇನಾಯಿತು?

ಸುಮಂತ್ರ—ಆಗ ಆ ಮಹರ್ಷಿಯು ಅಲ್ಲಿಗೆ ಬಂದ ದಶರಥನನ್ನು ಕುರಿತು 'ನನ್ನಂತೆಯೇ ನೀನೂ ಪುತ್ರಶೋಕದಿಂದ ಸಾಯಿ' ಎಂದು ಹೇಳಿ ಪುತ್ರ ಶೋಕವನ್ನು ತಾಳಲಾರದೆ ಕೆಳಗೆಬಿದ್ದು ಸತ್ತುಹೋದನು. ಋಷಿಗಳ ಮಾತೆಂದಿಗೂ ಸುಳ್ಳಾಗದಲ್ಲವೆ?

ಭರತ—ಅಯ್ಯೋ, ಏನನ್ಯಾಯ!

ಕೈಕೆ—ಈ ಕಾರಣದಿಂದ, ನಾನೇ ತಪ್ಪಿತಸ್ಥಳೆಂಬಂತೆ ಕಾಣಿಸಿಕೊಂಡು, ಪುತ್ರರಾಮನನ್ನು ಅರಣ್ಯಕ್ಕೆ ಕಳಿಸಬೇಕಾಯಿತು. ಅಷ್ಟೇ ಹೊರತು, ರಾಜ್ಯ ಲೋಭದಿಂದಲ್ಲ. ಎಂದೆಂದಿಗೂ ಸುಳ್ಳಾಗದ ಋಷಿಯ ಶಾಪವು ಮಗನ ಅಗಲಿಕೆಯಾದ ಹೊರತು ನಿಜವಾಗುವ ಹಾಗಿರಲಿಲ್ಲ.

ಭರತ—ಮಗನ ಅಗಲಿಕೆಯಷ್ಟೇ ಆಗಬೇಕೆಂದಿದ್ದ ಪಕ್ಷಕ್ಕೆ ನನ್ನನ್ನೇ ಅರಣ್ಯಕ್ಕೆ ಅಟ್ಟಬಹುದಾಗಿತ್ತಲ್ಲ!

ಕೈಕೆ—ಮಗು, ನೀನು ಬಹುಕಾಲದಿಂದ ಮಾವನ ಮನೆಯಲ್ಲಿದ್ದುದರಿಂದ ನಿನ್ನ ಅಗಲಿಕೆ ನಿಮ್ಮ ತಂದೆಯವರಿಗೆ ಒಗ್ಗಿಹೋಗಿತ್ತು.

ಭರತ—ಹಾಗಾದರೆ ಹದಿನಾಲ್ಕುವರ್ಷಗಳ ಗಡುವನ್ನೇಕೆ ಗೊತ್ತುಮಾಡಿದೆ?

ಕೈಕೆ—ಮಗು, ಹದಿನಾಲ್ಕು ದಿವಸವೆಂದು ಹೇಳೋಣವೆಂದಿದ್ದೆ. ಆದರೆ ಹೃದಯವ್ಯಾಕುಲದಿಂದ ಬಾಯ್ತಪ್ಪಿ ಹದಿನಾಲ್ಕು ವರ್ಷವೆಂದುಬಿಟ್ಟೆ.

ಭರತ—ಬಾಯ್ಬಡಿಯುವುದರಲ್ಲಿ ಬಲ್ಲಿದಳು ನೀನು! ಹಾಗಾದರಿದೆಲ್ಲ ಗುರುಹಿರಿಯರಿಗೆ ಗೊತ್ತಿತ್ತೆ?

ಸುಮಂತ್ರ—ಕಂದ, ವಸಿಷ್ಠ, ವಾಮದೇವ ಮುಂತಾದವರಿಗೆ ಅದು ವಿದಿತವೂ ಅನುಮತವೂ, ಆಗಿತ್ತು.

ಭರತ—ಆಹ! ಅವರು ತ್ರಿಲೋಕ ಸಾಕ್ಷಿಗಳಲ್ಲವೆ! ನನ್ನ ಸುದೈವದಿಂದ, ಪೂಜ್ಯಮಾತೆ, ನೀನು ನಿರಪರಾಧಿನಿ! ಅಮ್ಮ, ಕೋಪಗೊಂಡ ನಾನು, ಅಣ್ಣನ ಮೇಲಣ ಅಕ್ಕರೆಯಿಂದ ನಿನ್ನನ್ನು ಏನೇನು ದೂಷಿಸಿದ್ದೇನೋ ಅದನ್ನೆಲ್ಲ ಕ್ಷಮಿಸಿಬಿಡು. ತಾಯಿ, ನಿನ್ನ ಕಂದನಾದ ನಾನು ನಿನಗೆ ನಮಸ್ಕರಿಸುತ್ತೇನೆ. (ಎಂದು ಕಾಲಿಗೆ ಬೀಳುವನು)

ಕೈಕೆ—(ಮಗನನ್ನೆತ್ತಿ) ಕಂದ, ಯಾವ ತಾಯಿ ತಾನೆ ಮಗನ ತಪ್ಪನ್ನು ಕ್ಷಮಿಸದೆ ಇದ್ದಾಳು? ಏಳು, ಮೇಲೇಳು. ಇಲ್ಲಿ ನಿನ್ನದೇನು ತಪ್ಪು?

ಭರತ—ಅನುಗೃಹೀತನಾದೆ. ಅಮ್ಮ, ಅಣ್ಣನ ಸಹಾಯಾರ್ಥವಾಗಿ ರಾಜ್ಯ ಪಾಲರೆಲ್ಲರ ಸೈನ್ಯವನ್ನೂ ಸಿದ್ಧಪಡಿಸೋಣ.

(ಎಂದು ನಿಷ್ಕ್ರಮಿಸುವರು)

ಹದಿನೈದನೇ ದೃಶ್ಯ

(ಕಿಷ್ಕಿಂಧೆಯ ಸಮೀಪದಲ್ಲಿ: ರಾಮ, ಲಕ್ಷ್ಮಣ, ಸುಗ್ರೀವ, ಹನುಮಂತ ಇವರು ಪ್ರವೇಶಿಸುವರು)

ರಾಮ—ಸುಗ್ರೀವ, ಇಲ್ಲಿ ನೋಡು. ಈ ದಿನ ನಿನ್ನ ಶತ್ರುವನ್ನು ಒಂದೇ ಏಟಿಗೆ ನೆಲಕ್ಕುರುಳಿಸುತ್ತೇನೆ. ನನ್ನ ಬಾಣಾಘಾತದಿಂದ ಅವನ ದೇಹ ಸೀಳಿ ಚೂರಾಗುವುದು. ಭಯಪಡಬೇಡ; ನಿನ್ನ ಹತ್ತಿರವೇ ನಾನಿರುತ್ತೇನೆ. ಇನ್ನು ವಾಲಿ ಹತನಾದನೆಂದೇ ತಿಳಿ. ಅದನ್ನು ನೀನೇ ನೋಡುವೆ.

ಸುಗ್ರೀವ—ದೇವ, ನಿನ್ನ ಅನುಗ್ರಹವೊಂದಿದ್ದರೆ ದೇವರಾಜ್ಯವನ್ನಾದರೂ ಪಡೆಯಬಲ್ಲೆನೆಂಬ ಭರವಸೆ ನನಗಿದೆ. ಅಂದಮೇಲೆ ಈ ವಾನರರಾಜ್ಯವೇನು ಘನ? ಏಕೆಂದರೆ, ನಿನ್ನ ಬಾಣ ವಾಲಿಹೃದಯವನ್ನು ಸೀಳುವುದೆಂಬುದರಲ್ಲಿ ನನಗೆ ಸಂಶಯವೇ ಇಲ್ಲ. ಆ ನಿನ್ನ ಬಾಣ ಹಿಮಗಿರಿಯ ಶೃಂಗದಂತಹ

ಸಪ್ತಸಾಲಗಳನ್ನು ಭೇದಿಸಿಕೊಂಡು, ವೇಗವಾಗಿ ಭೂಗರ್ಭವನ್ನು ಹೊಕ್ಕು, ನಾಗಲೋಕವನ್ನು ಸೇರಿ ಸಮುದ್ರದಲ್ಲಿ ಮರುಮೊನೆಗೊಂಡು, ಹಿಂತಿರುಗಿ ಬಂದಿತಲ್ಲಾ, ಶ್ರೀಧರ.

ಹನುಮಂತ—ರಾಜ, ನಿನ್ನೀ ಮಾತಿಂದ ನಮ್ಮ ಭಯ ಮಾಯವಾಯಿತು; ನಮ್ಮ ಶೋಕ ನಾಶವಾಯಿತು. ರಘುವರ, ಸುಗ್ರೀವನಿಗೆ ಜಯವನ್ನು ಸಂಪಾದಿಸಿ ಕೊಡಲು ಕಾರ್ಮುಗಿಲಿನಂತೆ ಕಪ್ಪಗಿರುವ ಆ ಬೆಟ್ಟದ ಬಳಿ ನಡೆ.

ಲಕ್ಷ್ಮಣ—ಅಣ್ಣ, ಅಲ್ಲಿ ಕಾಣುವ ಪ್ರದೇಶದ ಸುತ್ತುಮುತ್ತಲೂ ನಿಬಿಡವಾದ ಮರಗಿಡಗಳು ತಂಪಾಗಿ ಕಾಣುತ್ತಿರುವುದರಿಂದ, ಹತ್ತಿರದಲ್ಲೇ ಕಿಷ್ಕಿಂಧೆ ಯಿರಬೇಕು.

ಸುಗ್ರೀವ—ಕುಮಾರನು ಹೇಳಿದ್ದು ಸರಿ. ವಾಲಿರಕ್ಷಿತ ಕಿಷ್ಕಿಂಧೆಯ ಬಳಿಗೀಗ ನಾವು ಬಂದಿದ್ದೇವೆ. ಇನ್ನು ನೀವಿಲ್ಲೇ ನಿಲ್ಲಿ; ಭೂಮಿ-ಭೂದರಗಳೆರಡೂ ನಡುಗು ವಂತೆ ನಾನು ವಾಲಿಯನ್ನು ಯುದ್ಧಕ್ಕೆ ಕರೆಯುತ್ತೇನೆ.

ರಾಮ—ಒಳ್ಳೆಯದಾಗಲಿ, ಹೋಗು.

ಸುಗ್ರೀವ—ಅಪ್ಪಣೆ, (ಪರಿಕ್ರಮಿಸಿ) ಹೋ! ನೀನು ಕೈಬಿಟ್ಟ ನಿರಪರಾಧಿ ಯಾದ ಸುಗ್ರೀವನು ಯುದ್ಧದಲ್ಲಿ ನಿನಗೆ ಪಾದಸೇವೆಯನ್ನು ಮಾಡಲಿಚ್ಛಿಸು ತ್ತಾನೆ.

(ತೆರೆಯ ಮರೆಯಲ್ಲಿ)

ಏನು ? ಏನು ? ಸುಗ್ರೀವನೇ ?

(ಉತ್ತರೀಯವನ್ನು ಹಿಡಿದು ತಡೆದು ನಿಲ್ಲಿಸುವ ತಾರೆಯೊಡನೆ
ವಾಲಿಯ ಪ್ರವೇಶ)

ವಾಲಿ—ಏನು ? ಏನು ? ಸುಗ್ರೀವನೇ ? ತಾರೆ, ನನ್ನ ವಸ್ತ್ರವನ್ನು ಬಿಡು; ದುಃಖದಿಂದ ದಿಕ್ಕುಗೆಟ್ಟು ನೀನು ಮಾಡುತ್ತಿರುವುದಿದೇನು ? ಸಾಯುವವನು ಸುಗ್ರೀವನೇ. ರಕ್ತದಲ್ಲಿ ಬಿದ್ದು ಹೊರಳಾಡುತ್ತಿರುವ ಆವನನ್ನು ನೀನಿನ್ನು ಸ್ವಲ್ಪ ಹೊತ್ತಿನಲ್ಲಿಯೇ ನೋಡುತ್ತೀಯೆ.

ತಾರೆ—ನಾನು ಹೇಳುವುದನ್ನು ಕೇಳಿ; ದಯವಿಟ್ಟು ಕೇಳಿ. ಸುಗ್ರೀವನು

ಸುಮ್ಮನೆ ಬರುವುದಿಲ್ಲ. ಅವನಿಗೆ ಯಾರದೋ ಬೆಂಬಲವಿರಬೇಕು. ಅಮಾತ್ಯರೊಡನೆ ಆಲೋಚಿಸಿ, ಆಮೇಲೆ ಹೋಗಿ.

ವಾಲಿ—ಚಂದ್ರಮುಖಿ, ಅವನಿಗೆ ಬೆಂಬಲವಾಗಿ ಇಂದ್ರನಿರಲಿ, ಪರಶುಹಸ್ತನಾದ ಶಿವನಿರಲಿ, ವಿಷ್ಣುವೇ ಇರಲಿ; ಯಾರೇ ಆಗಲಿ, ನನ್ನ ಮುಂದೆ ನಿಂತು ನನ್ನನ್ನು ಹೊಡೆಯಲಾರರು.

ತಾರೆ—ಬೇಡಿ, ದುಡುಕಬೇಡಿ. ನನ್ನ ಮಾತನ್ನು ಕೇಳಿ.

ವಾಲಿ—ನನ್ನ ಪರಾಕ್ರಮವನ್ನು ಕೇಳು : ಹಿಂದೆ ಅಮೃತಮಂಥನವಾಗುತ್ತಿದ್ದಾಗ, ನಾನು ಅಲ್ಲಿಗೆ ಹೋಗಿ, ದೇವದಾನವರನ್ನು ಮೂದಲಿಸಿ, ಉಗ್ರರೂಪನಾದ ಉರಗೇಂದ್ರನನ್ನು ನಾನೊಬ್ಬನೇ ತುಡುಕಿ, ಮಂದರದಿಂದ ಮಹಾಸಾಗರವನ್ನು ಕಡೆದೆ. ಅದನ್ನು ನೋಡಿ ಎಲ್ಲರೂ ಆಶ್ಚರ್ಯಚಕಿತರಾದರು.

ತಾರೆ—ಪ್ರಸನ್ನರಾಗಬೇಕು, ಪ್ರಸನ್ನರಾಗಬೇಕು.

ವಾಲಿ—ಆಃ ! ಹೇಳಿದಂತೆ ಕೇಳು ; ಹೋಗು ಒಳಕ್ಕೆ.

ತಾರೆ—ಇದೋ ಮಂದಭಾಗ್ಯಳಾದ ನಾನು ಹೋಗುತ್ತೇನೆ (ಎಂದು ನಿಷ್ಕ್ರಮಿಸುವಳು)

ವಾಲಿ—ಇನ್ನು ನಾನು ಹೋಗಿ, ಸುಗ್ರೀವನನ್ನು ಭಗ್ನಗ್ರೀವನನ್ನಾಗಿ ಮಾಡುತ್ತೇನೆ. (ಮುಂದೆ ನುಗ್ಗಿ) ಸುಗ್ರೀವ, ನಿಲ್ಲು ! ನಿಲ್ಲು ! ನಿನಗೆ ಸಹಾಯವಾಗಿ ಇಂದ್ರನಿರಲಿ ಅಥವಾ ಅವನು ಮಧುಸೂದನನೇ ಇರಲಿ; ನನ್ನ ಕಣ್ಣಿಗೆ ಬಿದ್ದಮೇಲೆ ನೀನಿನ್ನು ಜೀವಸಹಿತ ಹಿಂತಿರುಗಲಾರೆ. ಇದೋ, ಬಾ ಇಲ್ಲಿ.

ಸುಗ್ರೀವ—ಮಹಾರಾಜ, ನಿನ್ನ ಅಪ್ಪಣೆಯಂತಾಗಲಿ.

(ಇಬ್ಬರೂ ಯುದ್ಧ ಮಾಡುವರು)

(ರಾಮ, ಲಕ್ಷ್ಮಣ, ಹನುಮಂತರು ಮರೆಯಲ್ಲಿರುವರು)

ರಾಮ—ಇವನೇ ಏನು ವಾಲಿ? ಅವುಡುಗಚ್ಚಿ, ಕಣ್ಣೆಲ್ಲ ಕೆಂಪಗೆ ಮಾಡಿಕೊಂಡು, ಮುಷ್ಟಿಯೆತ್ತಿ, ಗರ್ಜಿಸುತ್ತಿರುವ ವಾಲಿಯು ಸರ್ವವನ್ನೂ ಸುಡಲಿದ್ದ ಪ್ರಳಯಾಗ್ನಿಯಂತೆ ಕಾಣುವನು.

ಲಕ್ಷ್ಮಣ—ಅಣ್ಣ, ಸುಗ್ರೀವನನ್ನು ನೋಡು. ಅರಳಿದ ಕಮಲದಂತೆ ಅವನ ಕಣ್ಣು ಕೆಂಪಾಗಿದೆ. ಚಿನ್ನದ ಬಾಹುಬಳೆಯಿಂದ ಅವನ ತುಂಬುತೋಳು

ಅಲಂಕಾರವಾಗಿದೆ. ಆದರೇನು? ಸಚ್ಚಾರಿತ್ರವನ್ನು ಅಲ್ಲಗಳೆದು, ತಂದೆಗೆ ಸಮಾನನಾದ ಅಣ್ಣನ ಮೇಲೆ ಬೀಳಲು ಹೋಗುತ್ತಿದ್ದಾನೆ. ಎಷ್ಟೇ ಆಗಲಿ, ವಾನರ! ಅದೋ, ವಾಲಿಯಿಂದ ಹೊಡೆತ ತಿಂದು, ನೆಲದಮೇಲೆ ಬಿದ್ದ ಸುಗ್ರೀವ.

ಹನುಮಂತ—ಹಾ! ಅಯ್ಯೋ! (ಸಸಂಭ್ರಮದಿಂದ ರಾಮನ ಬಳಿಸಾರಿ) ಸ್ವಾಮಿ, ವಾಲಿಯು ಬಲಶಾಲಿ; ನನ್ನ ಒಡೆಯನಾದ ಸುಗ್ರೀವನಾದರೋ ನಿರ್ಬಲ. ನೀನು ಕೊಟ್ಟ ಮಾತನ್ನೂ, ನನ್ನ ಒಡೆಯನ ಅವಸ್ಥೆಯನ್ನೂ ಆಲೋಚಿಸಿ ನೋಡು.

ರಾಮ—ಹನುಮಂತ, ಸಾಕು, ಗಾಬರಿ ಪಡಬೇಡ. ನೋಡು! (ಬಾಣವನ್ನು ಬಿಟ್ಟು) ಅದೋ, ವಾಲಿ ಬಿದ್ದ.

(ಎಲ್ಲರೂ ಅವನ ಬಳಿ ಹೋಗುವರು)

ಲಕ್ಷ್ಮಣ—ಇದೋ ಇದೋ ವಾಲಿ. ರಕ್ತಮಯವಾದ ದೇಹವನ್ನು ಹೇಗೋ ಮೆಲ್ಲಗೆ ಎಳೆದುಕೊಂಡು ಮೇಲೇಳುತ್ತಿದ್ದಾನೆ. ಅವನಿಗೆ ಪ್ರಾಣೋತ್ಕ್ರಮಣ ಕಾಲ ಸಮೀಪಿಸಿದೆ.

ವಾಲಿ—(ವಾಲಿ ತನಗೆ ನಾಟಿದ್ದ ಬಾಣದ ಮೇಲಿದ್ದ ನಾಮಾಕ್ಷರಗಳನ್ನು ಓದಿ, ರಾಮನನ್ನುದ್ದೇಶಿಸಿ) ಅಯ್ಯ, ವೀರ ರಾಮ, ನೀನು ರಾಜಧರ್ಮಾಚರಣೆಯಲ್ಲಿ ನಿರತನಾಗಿದ್ದೀಯೆ. ಧರ್ಮಾಧರ್ಮಗಳ ಬಗ್ಗೆ ನಿನಗೆ ಖಚಿತವಾದ ಜ್ಞಾನವಿದೆ. ಲೋಕದ ಮೋಸವನ್ನು ತಿದ್ದಲುದ್ಯುಕ್ತನಾದ ನೀನೇ ಹೀಗೆ ರಣರಂಗದಲ್ಲಿ ನನಗೆ ಮೋಸಮಾಡಬಹುದೆ? ಅಯ್ಯ ರಾಮ, ನಾರುಬಟ್ಟೆಯನ್ನುಟ್ಟು, ವೇಷ ಬದಲಾಯಿಸಿಕೊಂಡಮಾತ್ರಕ್ಕೇ ನಿನಗೆ ಬುದ್ಧಿಯೂ ಬದಲಾಯಿಸಿತೇ? ತಮ್ಮನೊಡನೆ ಯುದ್ಧವ್ಯಗ್ರನಾಗಿದ್ದ ನನ್ನನ್ನು ನೀನು ಮರೆಯಲ್ಲಿ ನಿಂತು ಕೊಂದುದು ಅಧರ್ಮವಲ್ಲವೆ?

ರಾಮ—ಮರೆಯಲ್ಲಿ ನಿಂತು ಕೊಂದುದು ಅಧರ್ಮ ಹೇಗಾದೀತು?

ವಾಲಿ—ಇದರಲ್ಲಿ ಸಂಶಯವೇನಿದೆ?

ರಾಮ—ಹಾಗಲ್ಲ, ನೋಡು, ಮರೆಯಲ್ಲಿ ನಿಂತು ಮೃಗಗಳನ್ನು ಕೊಲ್ಲಬೇಕು. ನೀನು ವಧ್ಯನೂ ಆಗಿ, ನಿನ್ನಲ್ಲಿ ಮೃಗತ್ವವೂ ಇದ್ದುದರಿಂದ ನಿನ್ನನ್ನು ಮರೆಯಲ್ಲಿದ್ದು ದಂಡಿಸಬೇಕಾಯಿತು.

ವಾಲಿ—ನಾನು ಈ ದಂಡನೆಗೆ ಅರ್ಹನೆಂದು ನೀನು ಭಾವಿಸುವೆಯ ?

ರಾಮ—ಸಂಶಯವೇನು ?

ವಾಲಿ—ಯಾವ ಕಾರಣಕ್ಕಾಗಿ ?

ರಾಮ—ತಮ್ಮನ ಹೆಂಡತಿಯೊಡನೆ ಕೂಡಿದ ಕೂಟಕ್ಕಾಗಿ.

ವಾಲಿ—ಅದು ನಮ್ಮ ಪದ್ಧತಿ.

ರಾಮ—ಆದು ಸರಿಯಲ್ಲವಯ್ಯ. ನೀನು ವಾನರೇಂದ್ರ; ಧರ್ಮಾಧರ್ಮಗಳನ್ನು ಬಲ್ಲವನು; ಹೀಗಿದ್ದೂ ಹಾಗೆ ಮಾಡಿದ್ದು ಸರಿಯಲ್ಲ.

ವಾಲಿ—ಸೋದರನ ಹೆಂಡತಿಯೊಡನೆ ಸಂಗಮಿಸಿದ ದೋಷವು ಅಣ್ಣ ತಮ್ಮಂದಿರಾದ ನಮ್ಮಿಬ್ಬರಲ್ಲೂ ಉಂಟು. ನನಗೆ ಮಾತ್ರ ಶಿಕ್ಷೆ; ಸುಗ್ರೀವನಿಗೇಕಿಲ್ಲ ?

ರಾಮ—ಚಿಕ್ಕವನು ಬುದ್ಧಿಯಿಲ್ಲದೆ ಹಾಗೆ ಮಾಡಿರಬಹುದು; ಆದರೆ ದೊಡ್ಡವನೂ ಬುದ್ಧಿವಂತನೂ ಆಗಿ ನೀನು ಹಾಗೆ ಮಾಡಬಹುದೆ ?

ವಾಲಿ—ಅಯ್ಯೋ, ಇನ್ನು ನನ್ನ ಬಾಯಿ ಕಟ್ಟಿತು. ನಿನ್ನ ಶಿಕ್ಷೆಯಿಂದ ನಾನಿನ್ನು ಪಾಪರಹಿತನಾದೆ.

ರಾಮ—ಒಳ್ಳೆಯದಾಗಲಿ.

ಸುಗ್ರೀವ—ಅಣ್ಣ, ರಾಮಬಾಣ ತಾಗಿ ಅಂಗದಗಳು ಕಳಚಿದ ತೋರವಾದ ನಿನ್ನ ತೋಳುಗಳೆರಡೂ ನೆಲದ ಮೇಲೆ ಜೋತುಬಿದ್ದಿರುವುದನ್ನು ಕಂಡು ನನ್ನ ಮನಸ್ಸೂ ಮುರಿದುಬಿದ್ದಂತಿದೆ.

ವಾಲಿ—ಸುಗ್ರೀವ, ವಿಷಾದ ಪಡಬೇಡ; ಲೋಕಧರ್ಮವೇ ಹೀಗೆ !

(ತೆರೆಯ ಮರೆಯಲ್ಲಿ)

ಅಯ್ಯೋ, ಮಹಾರಾಜ !

ವಾಲಿ—ಸುಗ್ರೀವ, ತಾರೆಯನ್ನಿಲ್ಲಿಗೆ ಬಿಡಬೇಡ; ತಡೆದು ನಿಲ್ಲಿಸು. ಈ ಅವಸ್ಥೆಯಲ್ಲಿರುವ ನನ್ನನ್ನು ಆಕೆ ನೋಡುವುದು ತರವಲ್ಲ.

ಸುಗ್ರೀವ—ಮಹಾರಾಜನ ಅಪ್ಪಣೆ. ಹನುಮಂತ ಹೋಗು....

ಹನುಮಂತ—ಕುಮಾರ, ಹಾಗೇ ಆಗಲಪ್ಪ (ನಿಷ್ಕ್ರಮಿಸುವನು)

(ಅಂಗದನೂ ಹನುಮಂತನೂ ಪ್ರವೇಶಿಸುವರು)

ಹನುಮಂತ—ಅಂಗದ, ಹೀಗೆ ಬಾರಪ್ಪ, ಬಾ.

ಅಂಗದ—ಹರಿವಂಶಲಲಾಮನಾದ ನಮ್ಮ ತಂದೆ ಕಾಲವಶನಾದನೆಂದು ಕೇಳಿ, ನಡೆಯಲು ಕಾಲೇ ಬರದಾಗಿದೆ. ಮಹಾರಾಜನೆಲ್ಲಿ ?

ಹನುಮಂತ—ಇದೋ ಮಹಾರಾಜನು ! ರಾಮನು ಬಿಟ್ಟ ಬಾಣದಿಂದ ಎದೆ ಸೀಳಿ, ಮಣ್ಣಿನಲ್ಲಿ ಉರುಳಿದ್ದಾನೆ—ಷಣ್ಮುಖನ ಶಕ್ತ್ಯಾಯುಧದಿಂದ ಸೀಳಿ ಕೆಳಗುರುಳಿದ ಕ್ರೌಂಚಪರ್ವತದಂತೆ ಕಾಣುತ್ತಿದ್ದಾನೆ.

ಅಂಗದ—(ಬಳಿಸಾರಿ) ಹಾ ತಂದೆ! ಬಾಣದಿಂದ ಛಿನ್ನಭಿನ್ನವಾದ ಈ ನಿನ್ನ ದೇಹವನ್ನೂ, ದಿಕ್ಕುಗೆಟ್ಟ ನನ್ನನ್ನೂ ಬಿಟ್ಟು ವೀರಸ್ವರ್ಗದ ಕಡೆ ನಡೆಯುವ ಸಂಭ್ರಮವೆ ನಿನಗೆ ? (ಭೂಮಿಯ ಮೇಲೆ ಬೀಳುವನು)

ವಾಲಿ—ಅಂಗದ, ಸಾಕು, ವಿಷಾದ ಪಡಬೇಡಪ್ಪ! ಅಯ್ಯ ಸುಗ್ರೀವ, ನಾನು ಮಾಡಿದ ತಪ್ಪನ್ನೆಲ್ಲ ಮರೆತು ಬಿಡು. ನನ್ನ ಮೇಲಣ ರೋಷವನ್ನು ಬಿಡು ; ಧರ್ಮವನ್ನು ಕೈಬಿಡದೆ, ನಮ್ಮ ವಂಶದ ಕುಡಿಯಾದ ಈ ಅಂಗದನನ್ನು ಕೈಹಿಡಿದು ನಡೆಸು.

ಸುಗ್ರೀವ—ಮಹಾರಾಜನ ಅಪ್ಪಣೆಯಂತಾಗಲಿ.

ವಾಲಿ—ಅಯ್ಯ ರಾಘವ, ಇವರಿಬ್ಬರೇನಾದರೂ ತಪ್ಪುಮಾಡಿದರೆ ಅದನ್ನು ವಾನರಚಾಪಲವೆಂದು ದಯವಿಟ್ಟು ಕ್ಷಮಿಸು.

ರಾಮ—ಖಂಡಿತ. ನಿನ್ನಿಷ್ಟದಂತಾಗಲಿ.

ವಾಲಿ—ಸುಗ್ರೀವ, ನಮ್ಮ ಕುಲಧನವಾದ ಈ ಹೇಮಮಾಲೆಯನ್ನು ತೆಗೆದು ಧರಿಸಿಕೋ.

ಸುಗ್ರೀವ—ಅನುಗೃಹೀತನಾದೆ (ತೆಗೆದುಕೊಳ್ಳುವನು)

ವಾಲಿ—ಹನುಮಂತ, ನೀರು, ನೀರು.

ಹನುಮಂತ—ಮಹಾರಾಜನ ಅಪ್ಪಣೆಯಂತಾಗಲಿ (ನಿಷ್ಕ್ರಮಿಸಿ ಪ್ರವೇಶಿಸಿ) ಇದೋ ನೀರು.

ವಾಲಿ—(ಆಚಮಿಸಿ) ನನಗೆ ಪ್ರಾಣಹೋಗುವಂತಾಗುತ್ತಿದೆ. ಇದೋ ಗಂಗೆ ಮುಂತಾದ ಪವಿತ್ರ ನದೀದೇವತೆಗಳು ! ಊರ್ವಶಿ ಮೊದಲಾದ ಅಪ್ಸರೆಯರು ನನ್ನನ್ನೆದುರುಗೊಳ್ಳಲು ಬರುತ್ತಿದ್ದಾರೆ. ಇದೋ ಬಂತು ! ಸಾವಿರ ಹಂಸಗಳನ್ನು ಹೂಡಿದ ವೀರವಾಹೀ ವಿಮಾನ. ಅದನ್ನು ಯಮನು ಕಳಿಸಿದ್ದಾನೆ. ಬಂತು ! ಒಳ್ಳೆಯದು, ಬಂದೆ, ಬಂದೆ. (ಸತ್ತನು)

ಸರ್ವರೂ—ಹಾ ಹಾ ಮಹಾರಾಜ!

ರಾಮ—ಅಯ್ಯೋ, ವಾಲಿಯು ಸ್ವರ್ಗಸ್ಥನಾದನು. ಸುಗ್ರೀವ, ಅವನಿಗೆ ಅಂತ್ಯಸಂಸ್ಕಾರಗಳನ್ನು ಮಾಡು.

ಸುಗ್ರೀವ—ಸ್ವಾಮಿ, ತಮ್ಮ ಅಪ್ಪಣೆಯ ಪ್ರಕಾರ.

ರಾಮ—ಲಕ್ಷ್ಮಣ, ಸುಗ್ರೀವನಿಗೆ ಪಟ್ಟಾಭಿಷೇಕವಾಗಲಿ.

ಲಕ್ಷ್ಮಣ—ಆರ್ಯನ ಅಪ್ಪಣೆಯಂತಾಗಲಿ.

(ಎಲ್ಲರೂ ತೆರಳುವರು)

ಹದಿನಾರನೇ ದೃಶ್ಯ

(ರಾಕ್ಷಸೀಗಣಪರಿವೃತ ಸೀತೆಯ ಪ್ರವೇಶ)

ಸೀತೆ—ಅಯ್ಯೋ! ಮಂದಭಾಗ್ಯಳಾದ ನನಗದೆಷ್ಟು ಧೈರ್ಯ? ಛೇ, ಆರ್ಯಪುತ್ರನಿಂದ ಅಗಲಿಕೆಯಾಯ್ತು. ರಾಕ್ಷಸನ ಮನೆಯಲ್ಲಿ ಬಲಾತ್ಕಾರದಿಂದ ಇರುವುದಾಯ್ತು; ಕೇಳಬಾರದ ಅನಿಷ್ಟ ಮಾತುಗಳನ್ನು ಕೇಳಬೇಕಾಯ್ತು. ಇನ್ನೂ ಜೀವಿಸಿದ್ದೇನೆ, ಈ ಭಾಗ್ಯಹೀನಳು. ಅಥವಾ ಆರ್ಯಪುತ್ರನ ಬಾಣದ ಮೇಲಣ ಭರವಸೆಯಿಂದ ಹೇಗೋ ಪ್ರಾಣಧಾರಣೆ ಮಾಡಿಕೊಂಡಿದ್ದೇನೆ. ಅದೇನೋ ಕಾಣೆನಲ್ಲಾ! ಪ್ರಜ್ವಲಿಸುವ ಕಮ್ಮಾರನ ಕುಲುಮೆಯ ಬೆಂಕಿಗೆ ನೀರು ಸುರಿದಂತೆ ನನ್ನೆದೆಯು ಸ್ವಲ್ಪ ತಣ್ಣಗಾಗುತ್ತಿದೆ. ಆರ್ಯಪುತ್ರನು ನನ್ನ ವಿಷಯದಲ್ಲಿ ಪ್ರಸನ್ನನಾದನೇನೋ.

(ಹನುಮಂತನು ಕೈಯಲ್ಲಿ ಉಂಗುರವನ್ನು ಹಿಡಿದು ಪ್ರವೇಶಿಸುವನು)

ಹನುಮಂತ—ಖಗೇಂದ್ರನಾದ ಸಂಪಾತಿಯಿಂದ ರಾಮಪತ್ನಿಯ ವೃತ್ತಾಂತವನ್ನು ತಿಳಿದು, ಮಹೇಂದ್ರಪರ್ವತವನ್ನೇರಿ, ಅಲ್ಲಿಂದ ಲಂಕೆಗೆ ಹಾರಿ ಬಂದೆ. ಸೀತೆಗಾಗಿ ಲಂಕೆಯನ್ನೆಲ್ಲ ಶೋಧಿಸಿಯಾಯಿತು, ನನ್ನ ಕಣ್ಣಿಗಾಕೆಯೆಲ್ಲೂ ಬೀಳಲೇ ಇಲ್ಲವಲ್ಲ. ಅಯ್ಯೋ, ನನ್ನ ಶ್ರಮವೆಲ್ಲ ವ್ಯರ್ಥವಾಯಿತು. ಇದು ರಾವಣನ ಮನೆಯಂತೆ! ಇಲ್ಲಿಯೂ ಹುಡುಕಿದೆ, ಕಾಣಲಿಲ್ಲ. ಆಗಲಿ, ಈ

ಉಪ್ಪರಿಗೆಯ ಮೇಲೆ ಹತ್ತಿ ನೋಡುತ್ತೇನೆ! (ಹತ್ತಿ) ಅರೇ, ಇದು ಪ್ರಮದವನ ರಾಶಿ. ಇದನ್ನು ಪ್ರವೇಶಿಸಿ ಪರೀಕ್ಷಿಸುತ್ತೇನೆ. (ಪ್ರವೇಶಿಸಿ ನೋಡಿ) ಯಾರಲ್ಲಿ ತೇಜಸ್ವಿನಿಯೊಬ್ಬಳು ಕಾಣುತ್ತಿದ್ದಾಳೆ? (ಎಂದು ಕಣ್ಣಿಟ್ಟು ನೋಡಿ) ವಿಕೃತ ರಾಕ್ಷಸಿಯರ ಮಧ್ಯದಲ್ಲಿರುವ ಆ ಸುಮಧ್ಯಮೆಯು ಕಾರ್ಮೋಡಗಳ ನಡುವಣ ವಿದ್ಯುಲ್ಲೇಖೆಯಂತೆ ಕಾಣುತ್ತಿದ್ದಾಳೆ. ಏಕವೇಣೀಧಾರಿಣಿಯಾದ ಅವಳು ತನ್ನ ಗಂಡನ ಧ್ಯಾನದಲ್ಲೇ ಸಂಸಕ್ತಚಿತ್ತಳಾಗಿರುವಂತಿದೆ: ಉಪವಾಸದಿಂದ ದೇಹ ಕೃಶವಾಗಿದೆ; ಕಣ್ಣೀರಿಂದ ಮುಖ ನೆಂದಿದೆ. ಅರೇ! ಎಲ್ಲಿಯದೀ ಬೆಳಕು? (ನೋಡಿ) ಓಹೋ ತಿಳಿಯಿತು; ರಾವಣ ಬಂದ. ಸುಂದರ ಯುವತಿಯರ ಮಧ್ಯೆ ಬರುತ್ತಿರುವ ಅವನು ಹುಲ್ಲೆಗಳ ಮಧ್ಯೆ ಇರುವ ಹುಲಿಯಂತೆ ಕಾಣುತ್ತಿದ್ದಾನೆ. ಈಗೇನು ಮಾಡಲಿ? ಇರಲಿ, ಈ ಅಶೋಕವೃಕ್ಷವನ್ನು ಹತ್ತಿ ಆ ಪೊಟರೆಯಲ್ಲಿ ಅವಿತಿದ್ದು ವೃತ್ತಾಂತವನ್ನೆಲ್ಲ ತಿಳಿಯುತ್ತೇನೆ. (ಹಾಗೇ ಮಾಡುವನು)

(ರಾವಣನು ಪರಿವಾರದೊಡನೆ ಪ್ರವೇಶಿಸುವನು)

ರಾವಣ—ತ್ರೈಲೋಕವೀರನಾದ ಈ ರಾವಣನೊಡನೆ ರಮಿಸದೆ, ಮುಗ್ಧೇಕ್ಷಣೆಯಾದ ಮುದ್ದು ಸೀತೆಯು ಕ್ಷುದ್ರಕ್ಷತ್ರಿಯತಾಪಸನೊಬ್ಬನಲ್ಲಿ ಅನುರಕ್ತಳಾಗಿದ್ದಾಳೆ. ಇದು ವಿಧಿವೈಚಿತ್ರ್ಯ. ಇಗೋ, ಸೀತೆಯು ತನ್ನ ದೇಹದಲ್ಲಿ ತಾನೇ ಅಡಗಿಕೊಳ್ಳಲಿಚ್ಛಿಸುವಂತೆ ಇಲ್ಲಿ ಕುಗ್ಗಿ ಕುಳಿತಿದ್ದಾಳೆ.

ಹನುಮಂತ—ಅಯ್ಯೋ, ತಿಳಿಯಿತು. ಇವಳೇ ಜನಕನ ಮಗಳೂ ರಾಮನ ಹೆಂಡತಿಯೂ ಆದ ಮೈಥಿಲಿ! ಸಿಂಹವನ್ನು ಕಂಡ ಹುಲ್ಲೆಯ ಮರಿಯಂತೆ ಪರಿತಪಿಸುತ್ತಿದ್ದಾಳೆ.

ರಾವಣ—(ಬಳಿಸಾರಿ) ಸೀತೆ, ಬಿಡು ಈ ಉಗ್ರವ್ರತವನ್ನು. ಕಾಮದ ಕಡೆ ಬೆನ್ನು ತಿರುಗಿಸಿದ ಆ ನೀರಸನನ್ನು ಮರೆತುಬಿಡು. ಅವನ ಆಯುಷ್ಯವನ್ನು ತುಂಬಿತೆಂದು ತಿಳಿ.

ಸೀತೆ—ಈ ರಾವಣನ ರೀತಿಯದೆಷ್ಟು ಹಾಸ್ಯಾಸ್ಪದವಾಗಿದೆ! ತನ್ನ ಮಾತಿನ ಪರಿಣಾಮವನ್ನಾಗಲೀ, ನನ್ನ ಮಾತಿನ ಮಹಿಮೆಯನ್ನಾಗಲೀ ಈ ನೀಚನರಿಯನಾಗಬಹುದು.

ಹನುಮಂತ—(ಕೋಪಗೊಂಡು) ಆಹ! ರಾವಣನದೆಷ್ಟು ಮದಿಸಿದ್ದಾನೆ!

ರಾಮನ ತೋರವಾದ ತೋಳುಗಳನ್ನೂ, ಅವುಗಳಲ್ಲಿರುವ ಅವನ ಮಹಾ ಧನುಸ್ಸನ್ನೂ, ಅದರಿಂದ ಜಿಗಿದುಬಂದು ತನ್ನನ್ನು ಕೊಂದು ಕೂಗುವ ಅಂಬನ್ನೂ ಅರಿಯದೆ, ಮೂಢ ರಾವಣನು ರಾಮನ ಆಯುಷ್ಯ ತುಂಬಿತೆನ್ನುತ್ತಿದ್ದಾನೆ. ಕೋಪವನ್ನು ತಡೆಯಲಾರೆನಲ್ಲ! ಆಗಲಿ, ಆರ್ಯ ರಾಮನು ಮಾಡಬೇಕಾದ ಕಾರ್ಯವನ್ನು ನಾನೇ ಮಾಡಿ ಮುಗಿಸಿಬಿಡಲೆ? ಬೇಡ, ಬೇಡ; ನಾನೊಂದು ಪಕ್ಷ ಇವನನ್ನು ಕೊಲ್ಲುವುದರಲ್ಲಿ ಜಯಶೀಲನಾದರೆ ಕಾರ್ಯ ಸಿದ್ಧಿಸಿದಂತೆಯೇ. ಆದರೆ, ಹಾಗಾಗದೆ, ಅವನೇ ನನ್ನನ್ನು ಕೊಂದುಬಿಟ್ಟರೆ, ಮಹಾಕಾರ್ಯವೊಂದು ಹಾಳಾಗಿಹೋಗುತ್ತದೆಯಲ್ಲ!

ರಾವಣ—ಎಲೆ ಬಡನಡುವಿನ ಕಡುಚಲುವೆ, ಬಹುವಿಧಮಣಿರತ್ನ ಭೂಷಿತಾಂಗನಾದ ಈ ದಶಮುಖನನ್ನು ಮನಸಾರ ಮುದ್ದಿಸು ಬಾ.

ಸೀತೆ—ಹ! ಈ ಪಾಪಿರಾಕ್ಷಸನು ಬದುಕಿರುವುದರಿಂದ ಧರ್ಮವು ತಲೆ ಕೆಳಗಾಗಿದೆ.

ರಾವಣ—ದೇವಿ, ಏನೆಂದೆ?

ಸೀತೆ—'ಹಾಳಾಗು' ಎಂದೆ.

ರಾವಣ—ಹಹಹ! ಅಬ್ಬ! ಪತಿವ್ರತೆಯ ಮಹಿಮೆ! ಇಂದ್ರನೇ ಮೊದಲಾದ ದೇವತೆಗಳೂ ದಾನವರೂ ನನ್ನಿಂದ ಭಂಗಪಟ್ಟರು. ಆ ನಾನಿಂದು ಸೀತೆಯ ಮೂರಕ್ಷರಗಳಿಂದ ಹಾಳಾಗಿಬಿಟ್ಟೆ! ಹಹಹ!

(ತೆರೆಯ ಮರೆಯಲ್ಲಿ)

ದೇವರಿಗೆ ಜಯವಾಗಲಿ, ಲಂಕೇಶ್ವರನಿಗೆ ಜಯವಾಗಲಿ. ಹತ್ತು ಘಂಟೆಯಾಯಿತು—ಸ್ನಾನದ ಸಮಯ ಮೀರುತ್ತಿದೆ, ಮಹಾರಾಜರು ದಯಮಾಡಬೇಕು. (ರಾವಣನು ಪರಿವಾರದೊಡನೆ ನಿಷ್ಕ್ರಮಿಸುವನು)

ಹನುಮಂತ—ರಾವಣನು ತೊಲಗಿದ; ರಾಕ್ಷಸಿಯರೆಲ್ಲ ಮಲಗಿ ನಿದ್ರೆ ಹೋದರು. ಸೀತಾದೇವಿಯ ಬಳಿಸಾರಲು ಇದು ಸರಿಯಾದ ಸಮಯ. (ಪೊಟರೆಯಿಂದ ಹೊರಬಂದು, ಮರದಿಂದಿಳಿದು) ಮುತ್ತೈದೆಗೆ ಮಂಗಳವಾಗಲಿ; ಆತ್ಮಜ್ಞಾನಿಯಾದ ಶ್ರೀರಾಮನ ಕಡೆಯಿಂದ ಬಂದಿದೇನೆ.

ಸೀತೆ—(ಆತ್ಮಗತ) ಈತನಾರಿರಬಹುದು? ಪಾಪಿರಾಕ್ಷಸನು ವಾನರ

ರೂಪಿನಿಂದ ಬಂದು, ನನ್ನನ್ನು ಮೋಸಗೊಳಿಸಬೇಕೆಂದಿರುವನೇನೋ! ಇರಲಿ, ಮಾತನಾಡದೆ ಸುಮ್ಮನಿರುತ್ತೇನೆ.

ಹನುಮಂತ — ತಾಯಿ, ನಿಮಗೆ ನಂಬಿಕೆ ಬರಲಿಲ್ಲವೆ? ಸಂಶಯ ಪಡಬೇಡಿ; ನನ್ನ ಮಾತನ್ನು ಕೇಳಿ: ಸುಗ್ರೀವನೊಡನೆ ಸಂಧಾನ ಮಾಡಿಕೊಂಡು ಶ್ರೀರಾಮಚಂದ್ರನು ನಿಮ್ಮನ್ನು ಹುಡುಕುವುದಕ್ಕಾಗಿ ನನ್ನನ್ನು ಕಳಿಸಿದ್ದಾನೆ—ನನ್ನ ಹೆಸರು ಹನುಮಂತ ಎಂದು.

ಸೀತೆ—(ಆತ್ಮಗತ) ಈತನು ಯಾರಾದರೂ ಸರಿಯೆ. ಆರ್ಯಪುತ್ರನ ಹೆಸರನ್ನು ಹೇಳುತ್ತಿರುವುದರಿಂದ, ನಾನೀತನೊಡನೆ ಮಾತನಾಡುತ್ತೇನೆ. (ಪ್ರಕಾಶ) ಅಪ್ಪ, ಆರ್ಯಪುತ್ರನ ವೃತ್ತಾಂತವೇನು?

ಹನುಮಂತ — ತಾಯಿ, ಕೇಳಿ: ಶ್ರೀರಾಮನು ನಿಮ್ಮ ಸದ್ಗುಣಗಳನ್ನೇ ಸದಾ ನೆನೆದು ನೆನೆದು, ಅದೇ ಚಿಂತೆಯಲ್ಲಿ ನವೆದು ಕಳೆಗುಂದಿದ್ದಾನೆ. ಹೊತ್ತಿಗೆ ಸರಿಯಾಗಿ ಊಟ ಮಾಡದೆ, ಅವನ ಮುಖ ಬಾಡಿ ಬಿಳುಪೇರಿದೆ. ನೀವೆಲ್ಲಿ ಹೋದಿರೋ, ಎಲ್ಲಿರುವಿರೋ ಎಂದು ಧೈರ್ಯಗುಂದಿ, ಕಂಬನಿದುಂಬಿ, ಈ ದೇಹ ಹೇಯವೆಂದು ಜಿಗುಪ್ಸೆಗೊಂಡಿದ್ದರೂ ಅದನ್ನು ಹೇಗೋ ಧರಿಸಿಕೊಂಡಿದ್ದಾನೆ.

ಸೀತೆ—(ಸ್ವಗತ) ಆಹ! ಆರ್ಯಪುತ್ರನ ವಿರಹವ್ಯಥೆಯೂ ಕೂಡ ನನಗೆ ಫಲಪ್ರದವೇ ಆಯಿತೆಂದುಕೊಳ್ಳುತ್ತೇನೆ. ಆರ್ಯಪುತ್ರನು ನನ್ನ ವಿರಹದಿಂದ ವ್ಯಥಿತನಾಗಿರುವುದನ್ನು ಕೇಳಿ ನನ್ನ ಹೃದಯವೊಂದು ಸಲ ಸುಖದ ಕಡೆಗೂ, ಮತ್ತೊಂದು ಸಲ ದುಃಖದ ಕಡೆಗೂ ಉಯ್ಯಾಲೆಯಾಡುವಂತಿದೆ. (ಪ್ರಕಾಶ) ಅಪ್ಪ, ಆರ್ಯಪುತ್ರನೊಡನೆ ನಿಮಗೆ ಹೇಗೆ ಪರಿಚಯವಾಯಿತು?

ಹನುಮಂತ—ತಾಯಿ, ಕೇಳಿ: ನಿಮ್ಮ ಕಾರಣಕ್ಕಾಗಿ ಶ್ರೀರಾಮನು ವಾಲಿಯನ್ನು ಕೊಂದು, ವಾನರರಾಜ್ಯಕ್ಕೆಲ್ಲ ಸುಗ್ರೀವನನ್ನು ಅಧಿಪತಿಯನ್ನಾಗಿ ಮಾಡಿದನು. ಆಮೇಲೆ, ನಿಮ್ಮ ಅನ್ವೇಷಣೆಗಾಗಿ, ನಮ್ಮ ರಾಜನಾದ ಸುಗ್ರೀವನು ವಾನರರನ್ನು ದಿಕ್ಕುದಿಕ್ಕಿಗೂ ಕಳಿಸಿದನು. ಅವರಲ್ಲಿ ನಾನೊಬ್ಬ—ನಿಮ್ಮನ್ನು ಕಂಡು ಕೃತಾರ್ಥನಾದೆ.

ಸೀತೆ—ಆರ್ಯಪುತ್ರನು ಈ ರೀತಿ ದುಃಖಿಯಾಗುವಂತೆ ಮಾಡಿದ ದೇವರು ಅದೆಷ್ಟು ನಿಷ್ಕರುಣಿ!

ಹನುಮಂತ—ತಾಯಿ, ಚಿಂತೆ ಮಾಡಬೇಡಿ. ರಾಮನು ಮಹಾಧನುಸ್ಸನ್ನು

ಕೈಗೆತ್ತಿಕೊಂಡು, ವಾನರಸೇನೆಯಿಂದ ಪರಿವೃತನಾಗಿ ದಶಗ್ರೀವನನ್ನು ಸಂಹಾರ ಮಾಡಲು ಲಂಕೆಗೆ ಲಗ್ಗೆ ಹತ್ತುತ್ತಾನೆ.

ಸೀತೆ—ಅಪ್ಪ, ನಾನು ಕಾಣುತ್ತಿರುವುದು ಸ್ವಪ್ನವೋ, ಸತ್ಯವೋ ತಿಳಿಯೆನಲ್ಲಾ.

ಹನುಮಂತ—ಅಮ್ಮ, ಮಹಾಧನುಸ್ಸನ್ನೂ ದಿವ್ಯಾಸ್ತ್ರಗಳನ್ನೂ ಕೈಯಲ್ಲಿ ಹಿಡಿದ ನಿಮ್ಮ ಪತಿದೇವರನ್ನು ಇಲ್ಲಿಗೆ ಕರೆದು ತರುತ್ತೇನೆ. ಅವನ ಬಳಿ ನಿಂತ ನಿಮಗೆ ದುಃಖ ದೂರವಾಗಿ, ನನ್ನ ಮೇಲಣ ಸಂಶಯವೂ ದೂರವಾಗುವುದು.

ಸೀತೆ—ಅಪ್ಪ, ಈ ನನ್ನ ಅವಸ್ಥೆಯನ್ನು ಕೇಳಿ ಆರ್ಯಪುತ್ರನು ಶೋಕಪರವಶನಾಗದ ರೀತಿಯಲ್ಲಿ ನನ್ನ ವೃತ್ತಾಂತವನ್ನು ತಿಳಿಸು.

ಹನುಮಂತ—ಅಮ್ಮ, ತಮ್ಮ ಅಪ್ಪಣೆಯಂತಾಗಲಿ.

ಸೀತೆ—ಹೋಗು, ಕಾರ್ಯಸಿದ್ಧಿಯಾಗಲಿ.

ಹನುಮಂತ—ಅನುಗೃಹೀತನಾದೆ. (ಮುಂದೆ ಬಂದು) ನಾನು ಬಂದ ಸಮಾಚಾರವನ್ನೀಗ ರಾವಣನಿಗೆ ಹೇಗೆ ತಿಳಿಯುವಂತೆ ಮಾಡಲಿ? ಆಗಲಿ, ಹೊಳೆಯಿತು. ಅಂದವಾದ ಈ ಉದ್ಯಾನವನ್ನೂ ತ್ರಿಕೂಟವನ್ನೂ ಕರಚರಣಾಘಾತದಿಂದ ಹಾಳುಮಾಡಿ ರಾಕ್ಷಸನ ಸೊಕ್ಕನ್ನಡಗಿಸುತ್ತೇನೆ.

(ನಿಷ್ಕ್ರಮಿಸುವನು)

ಹದಿನೇಳನೇ ದೃಶ್ಯ

(ಶಂಕುಕರ್ಣನ ಪ್ರವೇಶ)

ಶಂಕುಕರ್ಣ—ಯಾರಿಲ್ಲಿ, ಕಾಂಚನತೋರಣದ್ವಾರದ ಬಳಿ?

ಪ್ರತೀಹಾರಿ—ಅಯ್ಯ, ನಾನು ಜಯೆ. ಏನಾಗಬೇಕು?

ಶಂಕುಕರ್ಣ—ಜಯೆ, ಮಹಾರಾಜರಿಗೆ ಹೇಳು—'ಅಶೋಕ ವನವೆಲ್ಲ ಹಾಳಾಯಿತು. ಪಟ್ಟಮಹಿಷಿಯಾದ ಮಂಡೋದರಿಯು ಅಲಂಕಾರಪ್ರಿಯಳಾದರೂ, ಆ ವನದಲ್ಲಿ ಒಂದು ಚಿಗುರನ್ನಾದರೂ ಚಿಗುಟುತ್ತಿರಲಿಲ್ಲ. ಅಂತಹ

ಅಕ್ಕರೆಯ ಅಶೋಕವನವು ಹಾಳಾಯಿತೆಂದೂ, ಅದನ್ನು ರಕ್ಷಿಸಲೆಂದು ಹೋದ ಅಕ್ಷಕುಮಾರನು ಹತನಾದನೆಂದೂ' ಹೇಳು ಹೋಗು ! ಹೋಗು !

ಪ್ರತೀಹಾರಿ—ಅಯ್ಯ, ನಾವೆಂದೂ ಇಲ್ಲಿ ಇಂತಹ ಗಾಬರಿಯ ಸುದ್ದಿಯನ್ನು ಕೇಳಿದವರೇ ಅಲ್ಲ; ಇದೇನಿದ್ದೀತು ?

ಶಂಕುಕರ್ಣ—ಅಮ್ಮ, ತಲೆಹೋಗುವ ಕೆಲಸವಿದು ; ಜಾಗ್ರತೆ ಹೇಳು ; ಹೋಗು.

ಪ್ರತೀಹಾರಿ—ಅಯ್ಯ, ಇದೋ ಹೊರಟೆ (ನಿಷ್ಕ್ರಮಿಸುವಳು)

ಶಂಕುಕರ್ಣ—(ಮುಂದೆ ನೋಡಿ) ಓಹೋ, ಮಹಾರಾಜರು ರೋಷದಿಂದ ನುಗ್ಗಿಬರುತ್ತಿದ್ದಾರೆ.

(ರಾವಣನು ಪ್ರವೇಶಿಸುವನು)

ರಾವಣ—ಆಹಾ ! ಏನದು ? ಹೊಸ ಮಾತಾಡುತ್ತಿದ್ದೀಯಲ್ಲ ! ಹೇಳು, ಜಾಗ್ರತೆ ಹೇಳು. ಅಕ್ಷಕುಮಾರನನ್ನು ಕೊಂದು, ನನ್ನ ವನವನ್ನು ಹಾಳುಮಾಡಿ, ನನಗವಮಾನ ಮಾಡಿದವನದಾರು ? ಆ ಸಾಯುವುದಕ್ಕೆ ಇಚ್ಛಿಸುವವನು ಯಾರೆಂದು ಹೇಳು.

ಶಂಕುಕರ್ಣ—(ಬಳಿಸಾರಿ) ಮಹಾರಾಜರಿಗೆ ಜಯವಾಗಲಿ. ಸ್ವಾಮಿ, ನಮಗಾರಿಗೂ ತಿಳಿಯದೆ ಒಳಗೆ ಬಂದ ಒಂದು ಕೋತಿಯಿಂದ ಅಶೋಕವನವಷ್ಟೇ ಅಲ್ಲ, ಸರ್ವಸ್ವವೂ ಹಾಳಾಯಿತು.

ರಾವಣ—ಏನು? ಕೋತಿಯಿಂದಲೆ? ಹೋಗು, ಜಾಗ್ರತೆ ಹಿಡಿದುಕೊಂಡು ಬಾ.

ಶಂಕುಕರ್ಣ—ಸ್ವಾಮಿ, ಆ ಕೋತಿಯು ಮಹಾಬಲಶಾಲಿ. ಅದು ಸಾಲವೃಕ್ಷಗಳನ್ನು ತಾವರೆಯ ದಂಟಿನಂತೆ ಎಳೆದು ಕಿತ್ತೆಸೆದುಬಿಟ್ಟಿತು. ಮುಷ್ಟಿಯಿಂದ ದಾರುಪರ್ವತವನ್ನು ಗುದ್ದಿ ಪುಡಿಪುಡಿಮಾಡಿತು ; ಕೈಯಿಂದ ಹೊಸಗಿ ಲತಾಗೃಹಗಳನ್ನು ನೆಲಸಮಮಾಡಿತು ; ತೋಟದ ಮಾಲಿಗಳು ಅದರ ಕೂಗಿಗೇ ಹೆದರಿ ಮೂರ್ಛೆ ಹೋದರು ; ಅದನ್ನು ಹಿಡಿಯಲು ಹೋದ ಅಕ್ಷಕುಮಾರನು ಹತನಾದನು. ಅಕ್ಷಕುಮಾರನು ಹತನಾದುದನ್ನು ಕೇಳಿ ಇಂದ್ರಜಿತು ಕುಮಾರನು ಕ್ರೋಧಾವಿಷ್ಟಹೃದಯನಾಗಿ ಕೋತಿಯ ಮೇಲೆ ಬಿದ್ದು ಅದನ್ನು ಕೈಸೆರೆ ಹಿಡಿದು ತಂದಿದ್ದಾನೆ.

ರಾವಣ—ಇಂದ್ರಜಿತುಗೆ ಕೋತಿಯು ಸೆರೆಸಿಕ್ಕಿತೆನ್ನುವುದರಲ್ಲಿ ಆಶ್ಚರ್ಯವೇನಿದೆ ?! ಯಾರಲ್ಲಿ ?

(ರಾಕ್ಷಸನ ಪ್ರವೇಶ)

ರಾಕ್ಷಸ—ಜಯವಾಗಲಿ ಮಹಾರಾಜರಿಗೆ.

ರಾವಣ—ಹೋಗು, ವಿಭೀಷಣನನ್ನು ಬರಹೇಳು.

ರಾಕ್ಷಸ—ಅಪ್ಪಣೆ. (ನಿಷ್ಕ್ರಮಿಸಿ ವಿಭೀಷಣನೊಡನೆ ಪ್ರವೇಶಿಸುವನು)

ವಿಭೀಷಣ—(ಸವಿಮರ್ಶನಾಗಿ) ಮಹಾರಾಜನ ಬುದ್ಧಿ ವಿಪರೀತವಾಯಿತು. ಶ್ರೀರಾಮನ ಬಳಿಗೆ ಸೀತೆಯನ್ನು ಕಳಿಸಿಕೊಡೆಂದು ನಾನು ಬಹಳ ಹೇಳಿದೆ; ಆದರೂ ನನ್ನ ಮಾತನ್ನಿವನು ಕೇಳುತ್ತಿಲ್ಲ. (ಬಳಿಸಾರಿ) ಜಯವಾಗಲಿ ಮಹಾರಾಜನಿಗೆ.

ರಾವಣ—ವಿಭೀಷಣ, ಬಾ, ಬಾ. ಕುಳಿತುಕೋ.

ವಿಭೀಷಣ—ಅಪ್ಪಣೆ.

ರಾವಣ—ವಿಭೀಷಣ, ನೀನು ನಿರ್ವಿಣ್ಣನಾಗಿ ಕಾಣುತ್ತಿರುವಿಯಲ್ಲಾ !

ವಿಭೀಷಣ—ಹೇಳಿದ ಒಳ್ಳೆಯ ಮಾತನ್ನೂ ಕೇಳದ ಯಜಮಾನನ್ನು ಆಶ್ರಯಿಸಿದ ಆಳುಗಳಿಗೆ ನಿರ್ವಿಣ್ಣತೆಯಲ್ಲದೆ ಮತ್ತೇನು ?

ರಾವಣ—ಸಾಕು, ಆ ಕಥೆಯನ್ನಲ್ಲಿಗೆ ನಿಲ್ಲಿಸು.

(ರಾಕ್ಷಸರ ಹಿಡಿತಕ್ಕೆ ಸಿಕ್ಕಿದ ಹನುಮಂತನ ಪ್ರವೇಶ)

ಎಲ್ಲರೂ—ಆಃ ! ಇತ್ತ ಇತ್ತ !

ಹನುಮಂತ—ಈ ಬಡರಾಕ್ಷಸನು ನನ್ನನ್ನು ಸೆರೆಹಿಡಿದಾನೇ ? ರಾವಣನನ್ನು ನೋಡಲಿಚ್ಛಿಸಿ ನಾನೇ ಸೆರಸಿಕ್ಕಿದೆ. (ಬಳಿಸಾರಿ) ಅಯ್ಯ, ರಾಜ, ನೀನು ಕುಶಲವೆ ?

ರಾವಣ—(ಅವಜ್ಞೆಯಿಂದ) ವಿಭೀಷಣ, ಕುಶಲಪ್ರಶ್ನೆಯನ್ನು ಕೇಳುವುದೇ ಇವನ ಕೆಲಸವೇನು ?

ವಿಭೀಷಣ—ಮಹಾರಾಜ, ಇದಕ್ಕಿಂತಲೂ ಹೆಚ್ಚಿನದೇನೋ ಇರಬೇಕು.

ರಾವಣ—ಅದು ಹೇಗೆ ನಿನಗೆ ಗೊತ್ತು ?

ವಿಭೀಷಣ—ಮಹಾರಾಜ, ಅವನು ಯಾರೆಂದು ಕೇಳು.

ರಾವಣ—ಅಯ್ಯ, ವಾನರ, ನೀನು ಯಾರು? ಯಾವ ಕಾರಣದಿಂದ ನಮ್ಮ ಅಂತಃಪುರವನ್ನು ಪ್ರವೇಶಿಸಿ ಭಂಗಪಟ್ಟೆ?

ಹನುಮಂತ—ಅಯ್ಯ, ಕೇಳು—ನಾನು ಅಂಜಾನಾದೇವಿಯಲ್ಲಿ ಪ್ರಭಂಜನನಿಗೆ ಹುಟ್ಟಿದವನು! ನನ್ನ ಹೆಸರು 'ಹನುಮ'; ನನ್ನನ್ನು ಕಳಿಸಿದವನು ರಾಘವ.

ವಿಭೀಷಣ—ಮಹಾರಾಜ ಕೇಳಿದೋ?

ರಾವಣ—ಅದರಲ್ಲಿ ಕೇಳುವುದೇನಿದೆ?

ವಿಭೀಷಣ—ಹನುಮಂತ, ಪೂಜ್ಯ ರಾಮಚಂದ್ರನೇನೆಂದ?

ಹನುಮಂತ—ಇದೋ! ಕೇಳು ರಾಮಶಾಸನವನ್ನು!

ರಾವಣ—ಏನು, ಏನು? ರಾಮಶಾಸನವೆಂದೆಯಾ? ಆಃ! ಈ ಕೋತಿಯನ್ನು ಕೊಂದುಹಾಕಿರೋ!

ವಿಭೀಷಣ—ಪ್ರಸನ್ನನಾಗು, ಪ್ರಸನ್ನನಾಗು ಮಹಾರಾಜ. ರಾಮನ ಮಾತನ್ನು ಕೇಳಿ ಆಮೇಲೆ ನಿನ್ನಿಷ್ಟ ಬಂದಂತೆ ಮಾಡು.

ರಾವಣ—ಲೋ, ಕೋತಿ, ಆ ನರಮನುಷ್ಯನೇನೆಂದನೋ?

ಹನುಮಂತ—ಭೋಃ, ಕೇಳು: 'ಶರಣಾಗತರಕ್ಷಕನಾದ ಶಂಕರನನ್ನೇ ಮರೆಹೊಗು, ಅಥವಾ ಪ್ರವೇಶಿಸಲಸದಳವಾದ ರಸಾತಲವನ್ನಾದರೂ ಒಳಹೊಗು; ಮಿರುಗುವ ಬಾಣಗಳಿಂದ ನಿನ್ನ ಮೈಯನ್ನು ಕೊಚ್ಚಿ, ನಿನ್ನನ್ನು ಯಮನ ಮನೆಗೆ ನೂಕುತ್ತೇನೆ' ಎಂದನು.

ರಾವಣ—ಏ, ಕೋತಿ, ಆ ನರಮಾನವನಿಗೆ ನಾನು ಹೇಳಿದೆನೆಂದು ಹೇಳು: "ನಾನು ನಿನ್ನ ಹೆಂಡತಿಯನ್ನು ಅಪಹರಿಸಿ, ನಿನಗೆ ಸೋಲನ್ನು ತಿನಿಸಿದ್ದೇನೆ. ನಿನಗೆ ಬಿಲ್ಲನ್ನು ಹಿಡಿಯಲು ಬಂದರೆ ನನ್ನೊಡನೆ ಯುದ್ಧಕ್ಕೆ ಬಾ!" ಎಂದು ಹೇಳು.

ಹನುಮಂತ—ಸ್ವಲ್ಪ ತಾಳಿಕೋ—ಆ ಕೋತಿಗಳೇ ನಿನ್ನ ಈ ಲಂಕೆಗೆ ಮುತ್ತಿಗೆ ಹಾಕಿ ಧೂಳೀಪಟಮಾಡುವವು. ನೀನು ಆ ಶ್ರೀರಾಮನ ಮಹಾಧನುರ್ನಾದಕ್ಕೇ ಬೆದರಿ ಬೀಳುವೆ!

ರಾವಣ—ಆಃ! ಈ ವಾನರನ ಬಾಲಕ್ಕೆ ಬೆಂಕಿ ಹಚ್ಚಿ ದಬ್ಬಿರೋ ಹೊರಕ್ಕೆ.

ರಾಕ್ಷಸರು—ಏ, ಕೋತಿ, ಇತ್ತ ಬಾ, ಇತ್ತ.

(ರಾಕ್ಷಸರೊಡನೆ ಹನುಮಂತನು ನಿಷ್ಕ್ರಮಿಸುವನು)

ವಿಭೀಷಣ—ಮಹಾರಾಜನು ಪ್ರಸನ್ನನಾಗಬೇಕು. ಮಹಾರಾಜನಿಗೊಂದು ಮಾತನ್ನು ಹೇಳಬೇಕೆಂಬ ಆಶೆ ನನಗೆ.

ರಾವಣ—ಹೇಳು ; ಆ ಶ್ರೇಯಸ್ಕರವಾದ ಮಾತನ್ನು ಕೇಳಬೇಕೆಂದು ನನಗೂ ಆಶೆ.

ವಿಭೀಷಣ—ಖಂಡಿತವಾಗಿಯೂ ರಾಕ್ಷಸಕುಲಕ್ಕೆಲ್ಲ ವಿನಾಶಕಾಲ ಸಂಪ್ರಾಪ್ತವಾಯಿತು.

ರಾವಣ—ಕಾರಣ ?

ವಿಭೀಷಣ—ಮಹಾರಾಜನ ವಿಪರೀತ ಬುದ್ಧಿ !

ರಾವಣ—ನನ್ನ ವಿಪರೀತ ಬುದ್ಧಿ ಯಾವುದು ?

ವಿಭೀಷಣ—ಸೀತಾಪಹರಣವೊಂದು ಸಾಲದೆ ?

ರಾವಣ—ಸೀತಾಪಹರಣದಲ್ಲಿ ತಪ್ಪೇನಿದೆ ?

ವಿಭೀಷಣ—ನೀನು ಮಾಡುತ್ತಿರುವುದು ಅಧರ್ಮವಷ್ಟೇ ಅಲ್ಲ....

ರಾವಣ—ಹೇಳು, ಅದೇನು ಹೇಳಿಬಿಡು.

ವಿಭೀಷಣ—ಅಷ್ಟೇ !

ರಾವಣ—ವಿಭೀಷಣ, ಮುಚ್ಚುಮರೆಯೇಕೆ ? ನನ್ನಾಣೆ, ನೀನು ಅದೇನು ಹೇಳು !

ವಿಭೀಷಣ—ಮಹಾರಾಜನು ಅಭಯ ಕೊಡಬೇಕು.

ರಾವಣ—ಅಭಯ ಕೊಟ್ಟೆ, ಹೇಳು.

ವಿಭೀಷಣ—ನೀನು ಮಾಡುತ್ತಿರುವುದು ಅಧರ್ಮವಷ್ಟೇ ಅಲ್ಲ. ಬಲವದ್ವಿರೋಧವೂ ಹೌದು.

ರಾವಣ—(ಕೋಪದಿಂದ) ಏನು, ಏನು ? ಬಲವದ್ವಿರೋಧವೆಂದೆಯಾ ? ಈ ರಾಕ್ಷಸಾಧಮನು ಶತ್ರುಪಕ್ಷವನ್ನು ಸೇರಿ ಭಯವಿಲ್ಲದೆ ಬಾಯಿಗೆ ಬಂದಂತೆ ಬೊಗಳಿ ನನ್ನ ಕೋಪವನ್ನು ಕೆರಳಿಸುತ್ತಿದ್ದಾನೆ. ಯಾರಲ್ಲಿ ? ಒಂದೇ ಹೊಟ್ಟೆಯಲ್ಲಿ ಹುಟ್ಟಿದವರೆಂಬ ನಂಟನ್ನೂ ಕಡೆಗಣಿಸಿ ಶತ್ರುಪಕ್ಷವನ್ನು ಸೇರಿದ ಇವನು ನನ್ನ ಕಣ್ಣೆದುರಿಗಿರುವುದು ಬೇಡ, ತೊಲಗಿಸಿ ಆಚೆಗೆ !

ವಿಭೀಷಣ—ಮಹಾರಾಜನು ಪ್ರಸನ್ನನಾಗಬೇಕು ! ನಾನೇ ಹೋಗುತ್ತೇನೆ. ನಿನ್ನ ಅಪ್ಪಣೆಯ ಪ್ರಕಾರ ಹೋಗುತ್ತೇನೆ. ನನ್ನದೇನೂ ತಪ್ಪಿಲ್ಲ. ಆದರೆ ರೋಷ

ವನ್ನೂ, ಕಾಮವನ್ನೂ ಬಿಟ್ಟು, ಮಾಡಬೇಕಾದುದನ್ನು ಮಾಡು. (ಪರಿಕ್ರಮಿಸಿ) ಉಗ್ರಚಾಪಧಾರಿಯಾದರೂ ಕಮಲನೇತ್ರಗಳಿಂದ ಮನೋಹಾರಿಯಾದ ಶ್ರೀರಾಮನ ಬಳಿಗೀಗಲೇ ಹೊರಡುವೆನು. ಅವನೀ ರಾವಣನ ವಧೆಗಾಗಿ ಹೇಗೂ ಪ್ರತಿಜ್ಞೆಮಾಡಿದ್ದಾನೆ. ಆಶ್ರಿತಹಿತನಾದ ಆ ಶ್ರೀರಾಮನನ್ನು ಆಶ್ರಯಿಸಿ ನಾಶವಾಗುವ ನಿಶಾಚರಕುಲವನ್ನು ಉದ್ಧಾರಮಾಡುತ್ತೇನೆ. (ಹೊರಡುವನು)

ರಾವಣ—ಆಹ! ವಿಭೀಷಣನು ಹೊರಟೇ ಹೋದನಲ್ಲಾ! ಹೋಗಲಿ—ನಾನೂ ಕೋಟೆಕೊತ್ತಲಗಳನ್ನು ಬಲಪಡಿಸಿ ನಗರ ರಕ್ಷಣೆಗೆ ವ್ಯವಸ್ಥೆಮಾಡಿಸುತ್ತೇನೆ. (ನಿಷ್ಕ್ರಮಿಸುವನು)

ಹದಿನೆಂಟನೇ ದೃಶ್ಯ

(ರಾಮ ಲಕ್ಷ್ಮಣ ಸುಗ್ರೀವರ ಪ್ರವೇಶ)

ರಾಮ—ಹನುಮಂತನಿಂದ ಸೀತೆಯ ವೃತ್ತಾಂತ ತಿಳಿಯಿತು. ದುರ್ಗಮಾರಣ್ಯಗಳನ್ನು ಹೊಕ್ಕು, ದುರಾರೋಹ್ಯ ಪರ್ವತಗಳನ್ನು ಏರಿ ಇಳಿದುದಾಯಿತು. ಸಿಂಹ ವ್ಯಾಘ್ರ ಮತ್ತು ಮದಿಸಿದಾನೆಗಳು ಕುಡಿದ ನೀರಿನ ನದಿಗಳನ್ನು ದಾಟಿ ಕಳೆದುದಾಯ್ತು! ಆ ದುಷ್ಟ ರಾವಣನ ಮೇಲೆ ಸೇಡುತೀರಿಸಿಕೊಳ್ಳಲು ಕಡೆಗೂ ಕಪೀಂದ್ರ ಸೈನ್ಯಸಹಿತನಾಗಿ ಸಮುದ್ರತೀರವನ್ನು ಸೇರಿದ್ದೇನೆ.

(ವಿಭೀಷಣನೊಡನೆ ಹನುಮಂತನ ಪ್ರವೇಶ)

ಹನುಮಂತ—ಸ್ವಾಮಿಗೆ ಜಯವಾಗಲಿ. ರಾವಣನ ತಮ್ಮನಾದ ವಿಭೀಷಣನು ನಿನಗೆ ಶರಣಾಗತನಾಗಿ ಬಂದು ಹೊರಗೆ ನಿಂತಿರುವನು.

ರಾಮ—ಏನು? ವಿಭೀಷಣನು ಶರಣಾಗತನಾಗಲು ಬಂದಿರುವನೆ? ವತ್ಸ ಲಕ್ಷ್ಮಣ, ಹೋಗು ಅವನನ್ನು ಸತ್ಕರಿಸಿ ಕರೆದು ತಾ.

ಲಕ್ಷ್ಮಣ—ಆರ್ಯನ ಅಪ್ಪಣೆ.

ರಾಮ—ಸುಗ್ರೀವ, ನೀನೇನನ್ನೋ ಹೇಳಬೇಕೆನ್ನುವಂತೆ ಕಾಣುವೆ.

ಸುಗ್ರೀವ—ದೇವ, ರಾಕ್ಷಸರು ಮಾಯಾವಿಗಳು. ಚೆನ್ನಾಗಿ ಪರಿಶೀಲಿಸಿ ಬರಮಾಡಿಕೊಳ್ಳಿ.

ಹನುಮಂತ—ಮಹಾರಾಜ, ಹಾಗೆ ತಿಳಿಯಬೇಡಿ. ಸ್ವಾಮಿಯಾದ ಶ್ರೀರಾಮ ಚಂದ್ರನಲ್ಲಿ ನಾವೆಷ್ಟು ಭಕ್ತಿಯನ್ನಿಟ್ಟಿರುವೆವೋ, ಅಷ್ಟೇ ಭಕ್ತಿಯನ್ನು ವಿಭೀಷಣನೂ ಇಟ್ಟಿದ್ದಾನೆ. ಶ್ರೀರಾಮನ ಕಾರಣಕ್ಕಾಗಿ ಈ ವಿಭೀಷಣನು ತನ್ನಣ್ಣನನ್ನು ಪ್ರತಿಭಟಿಸಿದುದನ್ನು—ನಾನು ಮೊನ್ನೆ ಲಂಕೆಗೆ ಹೋಗಿದ್ದಾಗ—ಕಣ್ಣಾರೆ ಕಂಡಿದ್ದೇನೆ. ಆದರಿಂದಲೇ ವಿಭೀಷಣನನ್ನು ರಾವಣನು ತನ್ನ ರಾಜ್ಯದಿಂದ ಹೊರಗೆ ಹಾಕಿದ್ದಾನೆ.

ರಾಮ—ಲಕ್ಷ್ಮಣ, ಹಾಗಾದರೆ ಹೋಗು, ವಿಭೀಷಣನನ್ನು ಸತ್ಕರಿಸಿ ಕರೆದು ತಾ.

ಲಕ್ಷ್ಮಣ—ಆರ್ಯನ ಅಪ್ಪಣೆಯಂತಾಗಲಿ (ಪರಿಕ್ರಮಿಸಿ) ಅಯ್ಯ, ವಿಭೀಷಣ ಕ್ಷೇಮವೇ ನೀನು ?

ವಿಭೀಷಣ—ಆಹ! ಕುಮಾರ ಲಕ್ಷ್ಮಣನು. ಕುಮಾರ ನನಗೀಗ ಕ್ಷೇಮ ವಾಯಿತು.

ಲಕ್ಷ್ಮಣ—ವಿಭೀಷಣ, ಬಾ ಆರ್ಯನ ಬಳಿ ಹೋಗೋಣ.

ವಿಭೀಷಣ—ನಡೆ. (ಇಬ್ಬರೂ ಮುಂದೆ ಬಂದು)

ಲಕ್ಷ್ಮಣ—ಅಣ್ಣ, ಇದೋ ವಿಭೀಷಣ.

ವಿಭೀಷಣ—ಸ್ವಾಮಿಯು ಪ್ರಸನ್ನನಾಗಬೇಕು ; ನಿನಗೆ ಜಯವಾಗಲಿ.

ರಾಮ—ಅಯ್ಯ ವಿಭೀಷಣ, ನೀನು ಕ್ಷೇಮವೆ ?

ವಿಭೀಷಣ—ದೇವ, ಪದ್ಮಪತ್ರಾಕ್ಷ, ನಿನ್ನ ದರ್ಶನವಾದ ಮೇಲೆ ಶರಣಾಗತನಾದ ನಾನು ಕ್ಷೇಮವಲ್ಲದೆ ಮತ್ತೇನು ?

ರಾಮ—ನಾನು ಹೇಳುತ್ತೇನೆ : ಇಂದಿನಿಂದ ನೀನೇ ಲಂಕೇಶ್ವರನಾಗಿರು.

ವಿಭೀಷಣ—ಅನುಗೃಹೀತನಾದೆ.

ರಾಮ—ವಿಭೀಷಣ, ನಿನ್ನ ಆಗಮನದಿಂದಲೇ ನಮ್ಮ ಕಾರ್ಯ ಸಿದ್ಧಿಸಿತು. ಆದರೆ ಸಮುದ್ರವನ್ನು ದಾಟಲು ಏನು ಮಾಡಬೇಕೆಂಬುದೇ ಹೊಳೆಯುತ್ತಿಲ್ಲ.

ವಿಭೀಷಣ—ದೇವ, ಇಲ್ಲಿ ಚಿಂತಿಸುವುದೇನಿದೆ ? ದಾರಿ ಕೊಡದಿದ್ದರೆ ಸಮುದ್ರಕ್ಕೆ ದಿವ್ಯಾಸ್ತ್ರವನ್ನು ಪ್ರಯೋಗಿಸಿ.

ರಾಮ—ನಿಜ, ವಿಭೀಷಣ, ನಿಜ. ಆಗಲಿ, ಹಾಗೆಯೇ ಮಾಡುತ್ತೇನೆ (ಹಾಗೆಂದು ಬಿಲ್ಲುಬಾಣವನ್ನು ಕೈಗೆತ್ತಿಕೊಳ್ಳುವನು)

(ವರುಣನು ಪ್ರವೇಶಿಸುವನು)

ವಿಭೀಷಣ—ದೇವ, ತಾಳು, ಇದೋ ವರುಣದೇವನು ಪ್ರತ್ಯಕ್ಷನಾಗಿದ್ದಾನೆ.

ರಾಮ—ವರುಣಭಗವಂತನೇ ನಿನಗೆ ನಮಸ್ಕಾರ.

ವರುಣ—ದೇವಾಧಿದೇವನಾದ ನೀನು ನನಗೆ ನಮಸ್ಕರಿಸಬಾರದು. ನನ್ನಿಂದೇನು ಸೇವೆಯಾಗಬೇಕೆಂಬುದನ್ನು ಆಜ್ಞಾಪಿಸು.

ರಾಮ—ಲಂಕೆಗೆ ಹೋಗಲು ದಾರಿ ಕೊಡು.

ವರುಣ—ಇದೋ ದಾರಿ. ಬಿಜಯಮಾಡು (ಮಾಯವಾಗುವನು)

ರಾಮ—ವರುಣಭಗವಂತನು ಅಂತರ್ಧಾನನಾದನು! ವಿಭೀಷಣ, ನೋಡು, ನೋಡು! ಭಗವತ್ಪ್ರಸಾದದಿಂದ ಸಮುದ್ರವು ನಿಸ್ತರಂಗಸ್ತಬ್ಧವಾಯಿತು!

ವಿಭೀಷಣ—ಸ್ವಾಮಿ, ಈಗ ಸಮುದ್ರವು ಇಬ್ಭಾಗವಾದಂತೆ ಕಾಣುತ್ತಿದೆ!

ರಾಮ—ಹನುಮಂತನೆಲ್ಲಿ?

ಹನುಮಂತ—(ಬಂದು) ದೇವ, ನಮಸ್ಕಾರ.

ರಾಮ—ಹನುಮಂತ, ನೀನು ಮುಂದೆ ನಡೆ.

ಹನುಮಂತ—ಸ್ವಾಮಿಯ ಅಪ್ಪಣೆ. (ಎಲ್ಲರೂ ಪರಿಕ್ರಮಿಸುವರು)

ರಾಮ—(ವಿಸ್ಮಯದಿಂದ ನೋಡಿ) ವತ್ಸ ಲಕ್ಷ್ಮಣ, ಗೆಳೆಯ ವಿಭೀಷಣ, ಮಹಾರಾಜ ಸುಗ್ರೀವ, ಸ್ನೇಹಿತ ಹನುಮಂತ, ನೋಡಿ, ನೋಡಿ, ಭಗವತ್ಪ್ರಸಾದ ದಿಂದ ನಾವೆಲ್ಲ ಸಾಗರವನ್ನು ದಾಟಿದೆವು.

ಹನುಮಂತ—ಸ್ವಾಮಿ, ಇದೋ ಲಂಕೆ ಕಾಣಿಸುತ್ತಿದೆ.

ರಾಮ—(ನಟ್ಟ ದೃಷ್ಟಿಯಿಂದ ನೋಡಿ) ಅಯ್ಯೋ! ರಾಕ್ಷಸನಗರದ ಈ ವೈಭವಶ್ರೀಯೆಲ್ಲ ಇನ್ನೊಂದರೆಘಳಿಗೆಯಲ್ಲೇ ಹಾಳಾಗುವುದಲ್ಲಾ! ಸಮುದ್ರದ ನಡುವಣ ಹಡಗಿನಂತೆ ಈ ಲಂಕೆಯು, ನಾನು ಬಿಟ್ಟ ಬಾಣದ ಬಿರುಗಾಳಿಗೆ ತಿರ್ರನೆ ತಿರುಗಿ, ಕಪಿಸೈನ್ಯತರಂಗಗಳಿಂದ ತಾಡಿತವಾಗಿ, ಮುಳುಗಿ ಹಾಳಾಗುವುದು. ರಾವಣನೆನ್ನುವ ಒಬ್ಬ ಕರ್ಣಧಾರನ ದೋಷದಿಂದ ಅದೆಷ್ಟು ಅಪರಿಮಿತ ಅನಾಹುತ! ಸುಗ್ರೀವ, ಈ ಸುವೇಲಪರ್ವತದಲ್ಲೇ ಪಾಳೆಯವನ್ನು ಬಿಡೋಣ!

ಸುಗ್ರೀವ—ನೀಲ, ಸ್ವಾಮಿಯ ಆಜ್ಞೆಯನ್ನು ನೆರವೇರಿಸೋಣ.

(ಎಲ್ಲರೂ ನಿಷ್ಕ್ರಮಿಸುವರು)

ಹತ್ತೊಂಬತ್ತನೇ ದೃಶ್ಯ

(ರಾಕ್ಷಸಕಾಂಚುಕೀಯನ ಪ್ರವೇಶ)

ಕಾಂಚುಕೀಯ—ಅಯ್ಯೋ! ಇಡೀ ರಾಕ್ಷಸಕುಲದ ಅಭ್ಯುದಯವೇ ಹಾಳಾಯಿತು; ಎಲ್ಲ ಸಾಧನಸಾಮಗ್ರಿಗಳೂ ನಾಶವಾದವು; ವೀರಪುರುಷರೆಲ್ಲ ಹತರಾದರು; ಸ್ವತಃ ರಾವಣನಿಗೂ ತಾನು ಬದುಕುವೆನೋ ಇಲ್ಲವೋ ಎಂಬ ಸಂಶಯವಡಸಿದೆ; ಆದರೂ ಅವನಿಗಿನ್ನೂ ತಿಳುವಳಿಕೆ ಬಂದಿಲ್ಲವಲ್ಲ! ದಾಟಲಸಾಧ್ಯವಾದ ಸಮುದ್ರವನ್ನೂ ದಾಟಿ ಬಂದಿರುವ ಶ್ರೀರಾಮಚಂದ್ರನ ಅಸೀಮ ಪರಾಕ್ರಮವನ್ನು ನೋಡಿಯೂ ಆ ಮಹನೀಯನ ಸತಿಯನ್ನು ಆತನಿಗೇ ಅರ್ಪಿಸಿ, ಅವನೊಡನೆ ರಾವಣನು ಶಾಂತಿಮಾಡಿಕೊಳ್ಳಲಿಲ್ಲಾ! ಪ್ರಹಸ್ತ ಮುಂತಾದ ವೀರರೂ, ಕುಂಭಕರ್ಣಪ್ರಭೃತಿಗಳೂ ಇಂದು ರಾಮನಿಂದ ರಣರಂಗದಲ್ಲಿ ಹತರಾದರು; ಇಂದ್ರಜಿತುವೂ ಸತ್ತುಹೋದ. ಲಂಕೇಶ್ವರನು ಕಾಮಪರವಶನಾಗಿ ನಯನೀತಿಯನ್ನು ತೊರೆದು, ಮಂತ್ರಿಗಳ ಮಾತನ್ನೂ ತಿರಸ್ಕರಿಸಿ, ರಘುಕುಲಶ್ರೇಷ್ಠನಾದ ರಾಮನಿಗೆ ಅವನ ಹೆಂಡತಿಯಾದ ಜಾನಕಿಯನ್ನು ಒಪ್ಪಿಸಿಕೊಡದೆ, ತನ್ನನ್ನು ತಾನೇ ಮಹಾವೀರನೆಂದು ತಿಳಿದು, ಯುದ್ಧಕ್ಕಾಗಿ ಸೆಣಸುತ್ತಿದ್ದಾನೆ! ಯಾರಲ್ಲಿ? ವಿದ್ಯುಜ್ಜಿಹ್ವ!

ವಿದ್ಯುಜ್ಜಿಹ್ವ—(ಪ್ರವೇಶಿಸಿ) ಸ್ವಾಮಿ, ಸುಖವೆ?

ಕಾಂಚುಕೀಯ—ಸುಖ ಹಾಳಾಯಿತು. ಹೋಗು, ಮಹಾರಾಜರು ಅಪ್ಪಣೆ ಮಾಡಿದ್ದಾರೆ; ರಾಮಲಕ್ಷ್ಮಣರ ಶಿರಃಪ್ರತಿಕೃತಿಗಳನ್ನೂ ತೆಗೆದುಕೊಂಡ ಬಾ.

ವಿದ್ಯುಜ್ಜಿಹ್ವ—ಆಗಲಿ (ಇಬ್ಬರೂ ನಿಷ್ಕ್ರಮಿಸುವರು)

(ರಾಕ್ಷಸೀಗಣಪರಿವೃತೆಯಾದ ಸೀತೆಯು ಪ್ರವೇಶಿಸುವಳು)

ಸೀತೆ—ಆರ್ಯಪುತ್ರನ ಆಗಮನವೃತ್ತಾಂತವನ್ನು ಕೇಳಿ ಆಹ್ಲಾದಗೊಂಡ

ನನ್ನ ಹೃದಯವನ್ನು ಯಾವುದೋ ದುಃಖವಾವರಿಸಿದಂತಿದೆ. ಅಪಶಕುನಗಳಾಗುತ್ತಿವೆ; ಹೀಗಿದ್ದರೂ ಮಹಾಭ್ಯುದಯವಾಗುವುದೆಂದೇ ನನಗೆ ಭರವಸೆ! ದೇವರು ಒಳ್ಳೆಯದನ್ನು ಮಾಡಲಿ!

(ರಾವಣನು ಪ್ರವೇಶಿಸುವನು)

ರಾವಣ—ಬೇಡ, ಲಂಕಾರಾಜ್ಯಲಕ್ಷ್ಮೀ ಹೋಗಬೇಡ, ನಿಲ್ಲು! ಅಯ್ಯೋ ನನ್ನ ಮನೆಯನ್ನು ಬಿಟ್ಟು ಹೊರಟೇಬಿಟ್ಟಳಲ್ಲ! ಕಮಲಾಲಂಕೃತಹಸ್ತಳಾದ ಆಕೆಯನ್ನು ನಾನು ಕುಬೇರನನ್ನು ಗೆದ್ದ ಯುದ್ಧರಂಗದಲ್ಲಿ ವಶಪಡಿಸಿಕೊಂಡಿದ್ದೆ. ಎಲೆ, ಲಂಕೇಶ್ವರೀ, ನಿಲ್ಲು, ಹೋಗಬೇಡ, ನಿಲ್ಲು! ಏನಂದೆ? ನನ್ನನ್ನು ಬಿಟ್ಟು ರಾಮನ ಬಳಿ ಹೋಗುವೆನೆಂದೆಯಾ? ಆಃ! ಹಾಳಾಗಿ ಹೋಗು. ಎಲೇ, ಅಂದು ನಿನ್ನನ್ನು ನಾನು ಕುಬೇರನ ಮನೆಯಿಂದ ಎಳೆತಂದುದೂ ಬಲಾತ್ಕಾರದಿಂದಲೇ; ರಾಮನನ್ನು ರಣರಂಗದಲ್ಲಿ ಕೊಂದು ಮತ್ತೆ ನಿನ್ನನ್ನು ಬಲಾತ್ಕಾರದಿಂದಲೇ ಎಳೆತರುತ್ತೇನೆ. ಹೋಗಲಿ, ಇನ್ನವಳಿಂದೇನು? ಈಗ ಸೀತೆಯನ್ನು ಪ್ರಲೋಭನೆಗೊಳಿಸುತ್ತೇನೆ. (ಮನ್ಮಥಾವಸ್ಥೆಯನ್ನು ನಿರೂಪಿಸಿ) ಸೀತೆಯ ಮುದ್ದುಮುಖವನ್ನೇ ನೋಡಿ ನೋಡಿ ನನ್ನ ಕಣ್ಣುಗಳು ನಿದ್ರೆಹೋಗುವುದನ್ನೇ ಮರೆತುಬಿಟ್ಟುವು! ಅವಳ ಆಲಿಂಗನಸುಖವನ್ನು ಬಯಸಿ ಬಯಸಿ ನನ್ನೊಡಲು ಬಡವಾಗಿ ಬಿಳುಪೇರಿತು. ರಮಣೀಯವಸ್ತುವನ್ನು ನೋಡಿದಾಗ ಮನಸ್ಸಿನೊಳಗೇಕೆ ಈ ರಣರಣಕ? ಅಯ್ಯೋ, ಲೋಕತ್ರಯವನ್ನೂ ಗೆದ್ದ ಈ ರಾವಣನು ಪುಷ್ಪಬಾಣನಿಂದ ಸೋತನಲ್ಲಾ! (ಸೀತೆಯ ಬಳಿಸಾರಿ) ಸೀತೆ, ಅರವಿಂದದಳಾಯತ ಸುಂದರನೇತ್ರೇ, ನೀನು ನನ್ನ ಹೃದಯೇಶ್ವರಿಯಾಗಿ, ಮತ್ತೆಯೂ ಮಾನವನೊಬ್ಬನನ್ನೇಕೆ ನೆನೆಯುತ್ತಿರುವೆ? ಬಿಡು, ನಿನ್ನ ಚಿತ್ತಕಾಂತನಾದ ರಾಮನು ಲಕ್ಷ್ಮಣಸಹಿತನಾಗಿ ರಣರಂಗದಲ್ಲಿ ನನ್ನ ಶಸ್ತ್ರಗಳಿಂದ ಹತನಾಗಿ ಕೆಳಗುರುಳುವುದನ್ನು ನೀನೀದಿನ ನೋಡುತ್ತೀಯೆ.

ಸೀತೆ—ಹ! ರಾವಣ! ಮುಂದುಗೆಟ್ಟ ಮಾತನಾಡುವ ನೀನದೆಷ್ಟು ಮೂಢನೋ!

ರಾಕ್ಷಸ—(ಪ್ರವೇಶಿಸಿ) ಮಹಾರಾಜನಿಗೆ ಜಯವಾಗಲಿ! ಇದೋ ಆ ಮಾನವ ರಾಜಪುತ್ರರ ತಲೆಗಳು. ನಿನ್ನ ಪ್ರಿಯಪುತ್ರನು ಯುದ್ಧದಲ್ಲಿ ಅವರನ್ನು ಕೊಂದು ಈ ತಲೆಗಳನ್ನು ತಂದಿದ್ದಾನೆ.

ರಾವಣ—ಸೀತೆ! ನೋಡಿದೆಯಾ ಆ ಮನುಷ್ಯರ ಶಿರಸ್ಸುಗಳನ್ನು?

ಸೀತೆ—ಹಾ! ಆರ್ಯಪುತ್ರ (ಎಂದು ಮೂರ್ಛೆ ಬೀಳುವಳು)

ರಾವಣ—ಸೀತೆ, ಸತ್ತುಹೋದ ಆ ಮಾನವರ ಹಂಬಲವನ್ನು ಬಿಡು. ನನ್ನ ಕೈಹಿಡಿದು, ಮಹದೈಶ್ವರ್ಯಕ್ಕೆ ಒಡತಿಯಾಗು.

ಸೀತೆ—(ಚೇತರಿಕೊಂಡು) ಹಾ! ಆರ್ಯಪುತ್ರ, ಕೊಯ್ದು ಪರಿಮಲನವಮಲ-ಸನ್ನಿಭಶ್ರೀರಾಮನ ಶಿರಸ್ಸನ್ನು ನೋಡಿಯೂ ನನ್ನೆದೆಯು ಒಡೆಯದಿರುವುದು. ನಾನೆಂತಹ ಮಂದಭಾಗ್ಯಳು! ಹಾ! ಆರ್ಯಪುತ್ರ, ಈ ದುಃಖಸಾಗರದಲ್ಲಿ ನನ್ನನ್ನದ್ದಿ ನೀನೆಲ್ಲಿ ಹೋದೆ? ಅಯ್ಯೋ! ನನಗಿನ್ನೂ ಸಾವು ಬಾರದೆ? ಅಪ್ಪ, ಯಾವ ಖಡ್ಗದಿಂದ ಆರ್ಯಪುತ್ರನು ಈ ಗತಿಯಾದನೋ, ಅದೇ ಖಡ್ಗದಿಂದ ನನ್ನನ್ನೂ ಕೊಂದುಬಿಡು.

ರಾವಣ—ಇಂದ್ರಜಿತುವು ನರಾಧಮನಾದ ಆ ರಾಮನನ್ನೂ ಅವನ ಸಹೋದರನಾದ ಲಕ್ಷ್ಮಣನನ್ನೂ ಯುದ್ಧದಲ್ಲಿ ಕೊಂದನೆಂದಮೇಲೆ ನಿನ್ನನ್ನು ಇನ್ನು ಬಿಡಿಸಿಕೊಂಡು ಹೋಗುವವರಾರಿದ್ದಾರೆ?

(ತೆರೆಯ ಮನೆಯಲ್ಲಿ)

ರಾಮನು, ರಾಮನು.

ಸೀತೆ—ನಾನು ಕಂಡುದು ಕೇಳಿದುದೆಲ್ಲ ರಾಕ್ಷಸರ ಮಾಯೆ! ರಾಮನು ಚಿರಾಯುವಾಗಲಿ.

ರಾಕ್ಷಸ—(ಪ್ರವೇಶಿಸಿ) ರಾಮನು, ನಿನ್ನನ್ನೂ ಕಡೆಗಣಿಸಿ, ನಿನ್ನ ಮಗನನ್ನು ಯುದ್ಧದಲ್ಲಿ ಕೊಂದುಬಿಟ್ಟನು.

ರಾವಣ—ಹಾ, ವತ್ಸ, ಇಂದ್ರಾದಿವೀರವೃಂದವನ್ನು ಬಗ್ಗು ಬಡಿದ ಬಾಲವೀರ, ನನ್ನನ್ನು ಬಿಟ್ಟೆಂದು ನೀನೆಲ್ಲಿ ಹೋದೆ? (ಮೂರ್ಛೆ ಬೀಳುವನು)

ರಾಕ್ಷಸ—ಅಯ್ಯೋ, ಅನ್ಯಾಯ! ತ್ರಿಲೋಕವಿಜಯಿಯಾದ ಲಂಕೇಶ್ವರನಿಗೂ ಈ ಗತಿಯಾಯಿತೇ ಹಾಳು ವಿಧಿಯಿಂದ? ಮಹಾರಾಜ ಸಂತೈಸಿಕೋ.

ರಾವಣ—(ಚೇತರಿಕೊಂಡು) ಅನರ್ಥಪರಂಪರೆಗೆ ಕಾರಣಭೂತೆಯಾದ ಸೀತೆಯಿಂದಾಗಲಿ, ಚಪಲೆಯಾದ ರಾಜ್ಯಲಕ್ಷ್ಮಿಯಿಂದಾಗಲಿ ನನಗಿನ್ನೇನಾಗಬೇಕು!? ಅಯ್ಯೋ ಹಾಳು ವಿಧಿಯೇ! ಪ್ರಿಯಪುತ್ರನಾದ ಇಂದ್ರಜಿತುವನ್ನಗಲಿಯೂ,

ನಾನಿನ್ನೂ ಬದುಕಿರುವೆನಲ್ಲಾ, ನಾನದೆಂತಹ ಕಠೋರ ಹೃದಯದವನು? (ಕೆಳಗುರುಳುವನು)

ರಾಕ್ಷಸ—ಓಹೋ! ರಾಕ್ಷಸವೀರರೆ! ಮಹಾರಾಜನೀಯವಸ್ಥೆಗೆ ಸಂದಿರುವಲ್ಲಿ—ರಕ್ಷಣೆಗಿರುವ ನೀವೆಲ್ಲ ಎಚ್ಚರಿಕೆಯಿಂದಿರಿ.

(ತೆರೆಯ ಮರೆಯಲ್ಲಿ)

ಪ್ರಹಸ್ತ, ನಿಕುಂಭ, ಕುಂಭಕರ್ಣ, ಇಂದ್ರಜಿತು ಮುಂತಾದ ಮಹಾವೀರರು ಯುದ್ಧರಂಗದಲ್ಲಿ ಹತರಾದುದನ್ನು ಕಂಡು, ಭಯಚಕಿತರಾಗಿ, ಹತಾಶರಾಗಿ ಹಿಮ್ಮೆಟ್ಟುತ್ತಿರುವ ರಾಕ್ಷಸವೀರರೇ—ದೇವತೆಗಳೊಡನಾದ ಹಲವಾರು ಯುದ್ಧಗಳಲ್ಲಿ ಗೆದ್ದು ಬಂದ ನಿಮಗೆ ಇದು ತರವಲ್ಲ. ವಿಶ್ವವಿಜೇತನೂ ವಿಂಶದ್ಬಾಹು ಬಲಶಾಲಿಯೂ ಆದ ಲಂಕೇಶ್ವರನಿನ್ನೂ ನಿಮಗೆ ಒಡೆಯನಾಗಿರುವಲ್ಲಿ ರಾಮನಿಗೆ ಹೆದರಿ ಓಡಲಾಗದು ನೀವು!

ರಾವಣ—(ಜಗ್ಗನೆದ್ದು ಕೋಪಗೊಂಡು) ಎಲ್ಲವನು? ಎಲ್ಲಿ? (ಖಡ್ಗವನ್ನೆತ್ತಿ) ಸೀತೆ, ಈ ನನ್ನ ನಿಶಿತಖಡ್ಗಕಾಳಸರ್ಪವು ರಾಮನ ಪ್ರಾಣವಾಯುಗಳನ್ನು ಹೀರುವುದನ್ನು ನೀನೇ ನೋಡುವೆ.

(ಪರಿವಾರಸಮೇತನಾಗಿ ರಾವಣನು ನಿಷ್ಕ್ರಮಿಸುವನು)

ಸೀತೆ—ದೇವರೆ; ನನ್ನ ಕುಲಕ್ಕೆ ತಕ್ಕ ಆಚರಣೆಯಿಂದ ನಾನು ಆರ್ಯಪುತ್ರನನ್ನು ಅನುಸರಿಸುತ್ತಿರುವೆನಾದರೆ ಆರ್ಯಪುತ್ರನಿಗೆ ವಿಜಯವಾಗಲಿ. (ನಿಷ್ಕ್ರಮಿಸುವಳು)

ಇಪ್ಪತ್ತನೇ ದೃಶ್ಯ

(ಮೂವರು ವಿದ್ಯಾಧರರು ಪ್ರವೇಶಿಸುವರು)

ಮೊದಲನೆಯವನು—ಚಿತ್ರರಥ, ರಾಮರಾವಣಸಂಗ್ರಾಮವನ್ನು ನೋಡಲು, ಇದೋ, ಇಲ್ಲಿ ದೇವತೆಗಳೂ, ದೇವರ್ಷಿಗಳೂ, ಸಿದ್ಧರೂ ವಿದ್ಯಾಧರರೂ ಆಕಾಶದ ತುಂಬ ಒತ್ತಾಗಿ ನಿಂತಿರುವರು. ಆದ್ದರಿಂದ ನಾವು ಈ ಜಂಗುಳಿಯಿಂದ ದೂರವಾಗಿ ಹೋಗಿ, ಏಕಾಂತವಾಗಿ ನಿಂತು ಕಣ್ಣಾರೆ ನೋಡೋಣ ಬನ್ನಿ.

ಇಬ್ಬರೂ—ಹೌದು, ನಡೆಯಿರಿ. (ಎಂದು ಮುಂದೆ ಬರುವರು)

ಮೊದಲನೆಯವನು—ಅಬ್ಬ! ಈ ರಣಭೂಮಿಯು ಭಯಂಕರವಾದರೂ ಅದೆಷ್ಟು ದರ್ಶನೀಯವಾಗಿದೆ!?

ಎರಡನೆಯವನು—ಇದು ಅಪಾರಪಾರಾವಾರದಂತೆ ಅದ್ಭುತವಾಗಿದೆ.

ಮೂರನೆಯವನು—ಓಹೋ! ರಾಕ್ಷಸರು ವಾನರರ ಮೇಲೆ ಬಾಣಗಳ ಮಳೆ ಗರೆಯುತ್ತಿದ್ದಾರೆ.

ಮೊದಲನೆಯವನು—ವಾನರರು ರಾಕ್ಷಸರ ಮೇಲೆ ಬೆಟ್ಟಗುಡ್ಡಗಳನ್ನೇ ಎತ್ತಿ ಹಾಕುತ್ತಿದ್ದಾರೆ.

ಎರಡನೆಯವನು—ಮುಷ್ಟಿಯಿಂದ ತಿವಿದು ಮೊಳಕಾಲುಗಳಿಂದ ಗುದ್ದು ತ್ತಿದ್ದಾರೆ.

ಮೂರನೆಯವನು—ಈಗ ಅತಿ ಭಯಂಕರ ಅದ್ಭುತ ತುಮುಲ ಯುದ್ಧ ಪ್ರಾರಂಭವಾಯಿತು.

ಮೊದಲನೆಯವನು—ಅದೋ, ರಾವಣನನ್ನು ನೋಡಿ! ಚಿನ್ನದ ಕಾವಿನ ಶಕ್ತ್ಯಾಯುಧವನ್ನು ಮೇಲೆತ್ತಿ, ಕೋರೆ ಹಲ್ಲುಗಳನ್ನು ಕಿರಿದು, ರಥವನ್ನು ನಿಟ್ಟೋಟದಲ್ಲಿ ಓಡಿಸಿಕೊಂಡು, ಉದಯಪರ್ವತಶಿಖರಸ್ಥ ಪೂರ್ಣಚಂದ್ರ ಬಿಂಬದ ಮೇಲೆರಗಿ ಬರುವ ಗ್ರಹದಂತೆ ರಾಮನ ಕಡೆಗೇ ನುಗ್ಗಿ ಬರುತ್ತಿದ್ದಾನೆ.

ಎರಡನೆಯವನು—ಇತ್ತ ರಾಮನನ್ನು ನೋಡಿ! ಅವನು ನೆಲದ ಮೇಲೆ ನಿಂತು ಎಡಗೈಯಲ್ಲಿ ಬಿಲ್ಲನ್ನು ಹಿಡಿದು, ಬಲಗೈಯಲ್ಲಿ ವೀರನಾರಾಚವನ್ನು ಲೀಲಾಜಾಲ ವಾಗಿ ತಿರುವುತ್ತ, ರಥವೇರಿ ಬರುವ ರಿಪುವನ್ನು-ಕ್ರೌಂಚಗಿರಿಯನ್ನು ಕಾರ್ತಿಕೇಯ ನಂತೆ—ನಟ್ಟ ದೃಷ್ಟಿಯಿಂದ ನೋಡುತ್ತಿದ್ದಾನೆ.

ಮೂರನೆಯವನು—ಹಹಹ! ರಾವಣನೆಸೆದ ಕಾಲಾಂತಕೋಪಮ ಶಕ್ತ್ಯಾಯುಧವನ್ನು ಧನುರ್ಧಾರಿಯಾದ ರಾಮನು ನಸುಗುತ್ತಲೇ ಬಾಣವನ್ನು ಬಿಟ್ಟು ಎರಡು ತುಂಡು ಮಾಡಿಬಿಟ್ಟನು.

ಮೊದಲನೆಯವನು—ಅದೋ, ತನ್ನ ಶಕ್ತಿ ಮುರಿದು ನೆಲಕ್ಕುರುಳಿದುದನ್ನು ಕಂಡು, ರಾವಣನು ಕಣ್ಣನ್ನು ಕೆರಳಿಸಿ, ರಾಮನ ಮೇಲೆ ಶರವರ್ಷವನ್ನಭಿವರ್ಷಿಸಿದನು.

ಎರಡನೆಯವನು—ಆಹಾ! ರಾಮನ ಶೋಭೆಯನ್ನು ನೋಡಿ! ರಾವಣನೆಂಬ ಕಾರ್ಮೋಡದಿಂದ ಧಾರೆ ಧಾರೆಯಾಗಿ ಕರೆಯುವ ಶರವರ್ಷವು, ವೃಷಭನ ಮೇಲೆ ಬಿದ್ದ ವಾರಿಧಾರೆಯಂತೆ, ರಾಮನ ಮೈಗೆ ನಾಟದೆ ಜಾರಿ ಕೆಳಗೆ ಬೀಳುತ್ತಿದೆ.

ಮೂರನೆಯವನು—ಕನಕರಚಿತಮಹಾಧನುವನ್ನು ಮೇಲೆತ್ತಿ ಬಾಣವಾದ ಮೇಲೆ ಬಾಣವನ್ನು ಚಿಮ್ಮಿ, ರಥವೇರಿ ಮುನ್ನುಗ್ಗಿ ಬರುತ್ತಿರುವ ರಾವಣನಿಗೆದುರಾಗಿ ರಾಮನು, ಸಲಗನಿಗೆದುರಾದ ಸಿಂಹದಂತೆ, ಗಂಡು ಮೆಟ್ಟನ್ನು ಮೆಟ್ಟಿ ನಡೆದುಬರುತ್ತಿದ್ದಾನೆ.

ಎಲ್ಲರೂ—ಅರೇ! ಅದೇನು? ರಾಮನಿರುವ ಕಡೆ ಇದ್ದಕ್ಕಿದ್ದಂತೆ ಯಾವುದೋ ದಿವ್ಯೋಜ್ವಲ ಪ್ರಭೆಯೊಂದು ಇಳಿದಂತಾಗಿ ಅಲ್ಲೆಲ್ಲ ಬೆಳ್ಳಂ ಬೆಳಕಾಯಿತು!

ಮೊದಲನೆಯವನು—ಆಹ! ಯುದ್ಧಸಾಮಾನ್ಯಜನಿತಶಂಕೆಯಿಂದ ದೇವೇಂದ್ರನು ಮಾತಲಿಯೊಡನೆ ರಥವನ್ನು ಕಳಿಸಿದ್ದಾನೆ.

ಎರಡನೆಯವನು—ಅದೋ, ಬಳಿಬಂದ ಮಾತಲಿಯ ಮಾತಿನ ಪ್ರಕಾರ ಶ್ರೀರಾಮನು ದೇವರಥಾರೂಢನಾದನು.

ಮೂರನೆಯವನು—ಇದೋ, ದೇವಾಧಿಪ-ದರ್ಪದ್ಯೋತಕವೂ, ದಾನವಾಧಿಪ ವಿನಾಶಕಾರಕವೂ ಆದ ರಥದಲ್ಲಿ ರಾವಣವಿನಾಶಕ ಶ್ರೀರಾಮನು ತ್ರಿಪುರ-ಸಂಹಾರ ಮಾಡಲು ಹೊರಟ ಶ್ರೀರುದ್ರನಂತೆ ಕಂಗೊಳಿಸುತ್ತಿದ್ದಾನೆ.

ಮೊದಲನೆಯವನು—ಓಹೋ! ಯುದ್ಧವು ದೊಡ್ಡದೇ ಆಯ್ತು.

ಎರಡನೆಯವನು—ಬಿಟ್ಟ ಬಾಣವನ್ನು ತಟ್ಟನೆ ಮುರಿಯುವ ರಾಮ ರಾವಣರ ಯುದ್ಧವನ್ನು ವಾನರರೂ, ದಾನವರೂ ನೋಡಿ, ಬಿಲ್ಲುಂಬೆರಗಾಗಿ ಬಾಣಬಿಡುವುದನ್ನೂ ಮರೆತು ನಿಂತಿದ್ದಾರೆ.

ಮೂರನೆಯವನು—(ರಾವಣನ ಕಡೆ ನೋಡಿ) ವೇಗವಾಗಿ ಹೋಗುವ ಇಂದ್ರ-

ರಥಾಶ್ವಗಳನ್ನು ಶರಾಘಾತದಿಂದ ಘಾಸಿಗೊಳಿಸಿ ಮಹದ್ಬಾಣ ವೃಷ್ಟಿಯನ್ನು ಸೃಜಿಸಿ ಕೂಗುವ, ಗಹಗಹಿಸಿ ನಗುವ—ಪುರುಷೋತ್ತಮನನ್ನೂ ಹೆದರಿಸಿ ಬೀಗುವ—ರಾವಣನನ್ನು ನೋಡಿ!

ಮೊದಲನೆಯವನು—ಇತ್ತ ರಾಮಭದ್ರನನ್ನು ನೋಡಿ: ವಾಮನನಾಗಿ ಕುಗ್ಗಿ ಭೂ-ವ್ಯೋಮ-ಪಾತಾಳವ್ಯಾಪಿಯಾಗಿ ಹಿಗ್ಗಿದ ಶ್ರೀರಾಮನು ಹೇಗೋ ಸ್ವಲ್ಪ ತನ್ನನ್ನು ತಾನೇ ಸಂತೈಸಿಕೊಂಡಿದ್ದು, ಆಮೇಲೆ ಮಾತಲಿಯ ಮಾತಿನಿಂದ ಮಲೆತು ನಿಂತು, ತೀಕ್ಷ್ಣವಾದ ಬಾಣಗಳನ್ನು ತೀಕ್ಷ್ಣದೃಷ್ಟಿಯಿಂದ ನೋಡಿ, ಮಧ್ಯಾಹ್ನದ ಸೂರ್ಯನಂತೆ ಕಂಗನೆ ಕನಲಿ, ಅಗೋ ಬ್ರಹ್ಮಾಸ್ತ್ರವನ್ನು ದನುಸ್ಸಿಗೆ ಅನುಸಂಧಾನಮಾಡಿ ಪ್ರಯೋಗಿಸಿಯೇ ಬಿಟ್ಟನು.

ಎರಡನೆಯವನು—ಆ ದಿವ್ಯಾಸ್ತ್ರವು ಬೆಂಕಿಯ ಬಾಯ ಧಾರೆಯಿಂದ ರಾಕ್ಷಸೇಶ್ವರನನ್ನು ಕಡಿದು ಬಿಸುಟು, ಮರಳಿ ರಾಮನ ಬಳಿ ಬರುತ್ತಿದೆ.

ಎಲ್ಲರೂ—ಅಬ್ಬ! ರಾವಣನು ಬಿದ್ದನೇ!

ಮೊದಲನೆಯವನು—ಇದೋ ನೋಡಿ! ರಾವಣನು ಹತನಾದನೆಂದು ಪುಷ್ಪವೃಷ್ಟಿಯಾಗುತ್ತಿದೆ. ಅದೋ, ಕೇಳಿ, ದೇವತೆಗಳ ದುಂದುಭಿಗಳು ಮೊಳಗುತ್ತಿವೆ.

ಎರಡನೆಯವನು—ಆಗಲಿ, ದೇವಕಾರ್ಯವು ಸಿದ್ಧಿಸಿತು.

ಮೂರನೆಯವನು—ಬನ್ನಿ ಹೋಗೋಣ. ರಾಮನನ್ನು ಅಭಿನಂದಿಸಿ ವಂದಿಸೋಣ.

ಎಲ್ಲರೂ—ನಿಜ, ನಿಜ. ಇದು ನಮ್ಮ ಮೊದಲ ಕೆಲಸ ಬನ್ನಿ.

(ಎಲ್ಲರೂ ನಿಷ್ಕ್ರಮಿಸುವರು)

(ರಾಮನು ಪ್ರವೇಶಿಸುತ್ತಾನೆ)

ರಾಮ—ದುಷ್ಟರಾವಣನನ್ನು ಕೊಂದುದಾಯಿತು; ಸದ್ಬುದ್ಧಿಯ ವಿಭೀಷಣನಿಗೆ ಪಟ್ಟಾಭಿಷೇಕಮಾಡಿ ಪ್ರತಿಜ್ಞಾರ್ಣವವನ್ನು ದೋರ್ಬಲದಿಂದ ದಾಟಿದುದಾಯಿತು; ಇನ್ನು ಬಂಧುಸಹಿತನಾಗಿ ಹೋಗಿ ಸೀತೆಯನ್ನು ಸಮಾಧಾನಪಡಿಸುತ್ತೇನೆ, ಅಥವಾ....

(ವಿಭೀಷಣನು ಪ್ರವೇಶಿಸುತ್ತಾನೆ)

ವಿಭೀಷಣ—ದೇವರಿಗೆ ಜಯವಾಗಲಿ. ಸ್ವಾಮಿ, ಇದೋ ತಮ್ಮ ಬಾಹುಬಲ

ದಿಂದ ಸುರಕ್ಷಿತಳಾದ ನಿಮ್ಮ ಧರ್ಮಪತ್ನಿಯು ದೈತ್ಯನ ಮನೆಯಿಂದ ಬಿಡುಗಡೆ ಹೊಂದಿ, ಮಹಾಲಕ್ಷ್ಮಿಯಂತೆ ನಿಮ್ಮ ದರ್ಶನಾಕಾಂಕ್ಷಿಯಾಗಿ ಬಂದಿದಾಳೆ.

ರಾಮ—ವಿಭೀಷಣ, ಆಕೆ ಅಲ್ಲೇ ಹಾಗೇ ನಿಂತಿರಲಿ. ರಜನಿಚರಾವಮರ್ಶ ಜಾತಕಲ್ಮಷೆಯಾದ ಆಕೆ ಇಕ್ಷ್ವಾಕುವಂಶಕ್ಕೆ ಕಲಂಕಪ್ರಾಯಳು. ನನ್ನ ತಂದೆ ಯವರಾಣೆಗೂ ಆಕೆ ನನ್ನನ್ನು ನೋಡುವುದು ಬೇಡವಪ್ಪ.

ವಿಭೀಷಣ—ದೇವ. ಪ್ರಸನ್ನನಾಗಬೇಕು.

ರಾಮ—ಅಯ್ಯ, ಇನ್ನು ನೀನು ನನ್ನನ್ನು ಪೀಡಿಸಬಾರದು.

(ಲಕ್ಷ್ಮಣನ ಪ್ರವೇಶ)

ಲಕ್ಷ್ಮಣ—ಅಣ್ಣ, ಅತ್ತಿಗೆಯವರು ನಿಮ್ಮ ಅಭಿಪ್ರಾಯವನ್ನು ತಿಳಿದು, ಅಗ್ನಿಪ್ರವೇಶಕ್ಕಾಗಿ ನಿಮ್ಮ ಅಪ್ಪಣೆಯನ್ನು ನಿರೀಕ್ಷಿಸುತ್ತಿದ್ದಾರೆ.

ರಾಮ—ಲಕ್ಷ್ಮಣ, ಆ ಪತಿವ್ರತೆಯ ಇಷ್ಟದಂತಾಗಲಿ.

ಲಕ್ಷ್ಮಣ—(ಮುಂದೆ ನಡೆದು) ಅಯ್ಯೋ! ಕಷ್ಟ. ಅತ್ತಿಗೆಯವರ ಶುದ್ಧ ಚಾರಿತ್ರವನ್ನು ತಿಳಿದು, ಅಣ್ಣನ ಆಜ್ಞೆಯನ್ನು ಕೇಳಿ, ನನ್ನ ಬುದ್ಧಿಯು ಒಂದು ಸಲ ಧರ್ಮದತ್ತಲೂ ಮತ್ತೊಂದು ಸಲ ಸ್ನೇಹದತ್ತಲೂ ತೂಗಾಡುತ್ತಿದೆ. (ನಿಷ್ಕ್ರಮಿಸಿ, ಪ್ರವೇಶಿಸಿ) ಅಣ್ಣ, ಆಶ್ಚರ್ಯ, ಅತ್ಯಾಶ್ಚರ್ಯ! ಇದೋ, ಅರಳಿದ ಕೆಂದಾವರೆಯ ಹಾರದಂತಿರುವ ಅತ್ತಿಗೆಯವರು, ಜೀವನದ ಮೇಲಣ ಆಶೆಯನ್ನೇ ತೊರೆದು, ನಿಮ್ಮ ಶ್ರಮವನ್ನೆಲ್ಲ ನಿಷ್ಫಲಗೊಳಿಸಿ, ಪದ್ಮವನವನ್ನು ಹೊಗುವ ಹಂಸೆ ಯಂತೆ, ಅಗ್ನಿಯನ್ನು ಪ್ರವೇಶಿಸಿದರು.

ರಾಮ—ಆಶ್ಚರ್ಯ, ಅತ್ಯಾಶ್ಚರ್ಯ!

(ಹನುಮಂತನ ಪ್ರವೇಶ)

ಹನುಮಂತ—ಪಾವನೆಯಾದ ಸೀತಾದೇವಿಯು ಪಾವಕನನ್ನು ಪ್ರವೇಶಿಸಿ—ಬೆಂಕಿಗೆ ಬಿದ್ದ ಭಂಗಾರದಂತೆ—ನಿರ್ವಿಕಾರೆಯಾಗಿ, ನವಕಾಂತಿ ಸಮನ್ವಿತೆಯಾಗಿ ಹೊರಬಂದಳು.

ರಾಮ—(ವಿಸ್ಮಯದಿಂದ) ಏನು, ಏನು?

ಲಕ್ಷ್ಮಣ—ಆಹ! ಆಶ್ಚರ್ಯ!

(ಸುಗ್ರೀವನ ಪ್ರವೇಶ)

ಸುಗ್ರೀವ—ಅಗ್ನಿಜ್ವಾಲೆಯಿಂದ ಆಕಾರಗೊಂಡ ಪೂಜ್ಯನೊಬ್ಬನು ಜೀವಂತಳಾದ ಸೀತೆಯನ್ನು ಜ್ವಲಂತಾಗ್ನಿಯಿಂದ ಕೈಹಿಡಿದು ಕರೆತರುತ್ತಿದ್ದಾನೆ.

ಲಕ್ಷ್ಮಣ—(ನಿಟ್ಟಿಸಿ ನೋಡಿ) ಆಹಾ! ಆತನು ಅಗ್ನಿಭಗವಂತನಲ್ಲವೇ! ಅತ್ತಿಗೆಯವರನ್ನು ಮುಂದುಮಾಡಿಕೊಂಡಿತ್ತಲೇ ಬಿಜಯಮಾಡುತ್ತಿದ್ದಾನೆ.

ರಾಮ—ಹೌದು, ಹೌದು! ಆತನು ಅಗ್ನಿಭಗವಂತನೇ! ನಾವೂ ಇದಿರೆದ್ದು ಸತ್ಕರಿಸೋಣ. (ಎಲ್ಲರೂ ಹಾಗೆಯೇ ಮಾಡುವರು)

(ಅಗ್ನಿಯು ಸೀತೆಯೊಡನೆ ಪ್ರವೇಶಿಸುವನು)

ಅಗ್ನಿ—ಈತನು ನಾರಾಯಣಭಗವಂತನಲ್ಲವೆ! ನಮಸ್ಕಾರ ದೇವ.

ರಾಮ—ಭಗವನ್, ನಮಸ್ಕಾರ.

ಅಗ್ನಿ—ದೇವಾಧಿದೇವನಾದ ನೀನು ನನಗೆ ನಮಸ್ಕರಿಸುವುದು ಉಚಿತವಲ್ಲ. ಪುರುಷೋತ್ತಮ, ಇದೋ ಸರ್ವಲೋಕವಂದ್ಯಳಾದ ಶುದ್ಧಳಾದ ಜಾನಕಿಯನ್ನು ಸ್ವೀಕರಿಸು. ಇವಳಾರೆಂದು ನೀನು ತಿಳಿಯದುಂಟೆ? ಈಕೆ ಸಾಕ್ಷಾತ್ ಲಕ್ಷ್ಮೀದೇವಿ; ಮನುಷ್ಯರೂಪಿಯಾಗಿ ಬಂದ ನಿನ್ನನ್ನೀಕೆಯು ಅನುಸರಿಸಿ ಬಂದಿದ್ದಾಳೆ.

ರಾಮ—ಅನುಗ್ರಹೀತನಾದೆ; ಅಯ್ಯ, ಅಗ್ನಿದೇವ, ವೈದೇಹಿಯು ಶುದ್ಧಚಾರಿತ್ರಳೆಂದು ನನಗೆ ಗೊತ್ತಿದ್ದರೂ ಲೋಕ ನಂಬಲೆಂದು ನಾನು ಹೀಗೆ ಮಾಡಿದೆ.

ಅಗ್ನಿ—ಭದ್ರಮುಖ, ಇದೋ ದೇವ ದೇವರ್ಷಿ ಸಿದ್ಧವಿದ್ಯಾಧರ ಗಂಧಾರ್ವಾಪ್ಸರೋಗಣಗಳು ನಿನ್ನನ್ನು ಅಭಿವಂದಿಸುತ್ತಿರುವರು. (ಅದೃಶ್ಯನಾಗುವನು)

ರಾಮ—ಅನುಗೃಹೀತನಾದೆ. (ನಿಷ್ಕ್ರಮಿಸುವನು)

ಸಂಪೂರಣ ದೃಶ್ಯ

(ತಾಪಸನ ಪ್ರವೇಶ)

ತಾಪಸ—ನಂದಿಲಕ, ನಂದಿಲಕ.

(ನಂದಿಲಕನ ಪ್ರವೇಶ)

ನಂದಿಲಕ—ಅಯ್ಯ, ತಾಪಸವರ್ಯ, ಇದೋ ಬಂದೆ.

ತಾಪಸ—ನಂದಿಲಕ, ಶರಚ್ಚಂದ್ರಮನೋಹರ ರಾಮಚಂದ್ರನು ರಾವಣನನ್ನು ಯಮಲೋಕಕ್ಕಟ್ಟಿ, ವಿಭೀಷಣನಿಗೆ ಪಟ್ಟಕಟ್ಟಿ, ಸೀತಾದೇವಿಯೊಡಗೂಡಿ, ಋಕ್ಷರಾಕ್ಷಸವಾನರಮುಖ್ಯರಿಂದ ಪರಿವೃತನಾಗಿ ಲಂಕೆಯಿಂದ ಹಿಂತಿರುಗಿ ಬಂದಿದ್ದಾನೆ. ಆದ್ದರಿಂದ ನಮ್ಮ ಆಶ್ರಮದಲ್ಲಿ ಆತನನ್ನು ಸತ್ಕರಿಸಲು ಎಲ್ಲವನ್ನೂ ಸಜ್ಜುಗೊಳಿಸಬೇಕೆಂದು ಕುಲಪತಿಗಳು ಆಜ್ಞಾಪಿಸಿದ್ದಾರೆ.

ನಂದಿಲಕ—ಆರ್ಯ, ಎಲ್ಲ ಸಿದ್ಧವಾಗಿದೆ. ಆದರೆ....

ತಾಪಸ—ಆದರೇನು ಹೇಳು!

ನಂದಿಲಕ—ಇಲ್ಲಿ ವಿಭೀಷಣನ ಸಂಬಂಧಿಗಳೆಲ್ಲ ರಾಕ್ಷಸರೇ. ಅವರ ಊಟವೇನೆಂಬುದನ್ನು ಕುಲಪತಿಗಳು ಬಲ್ಲರೇನು?

ತಾಪಸ—ಏಕೆ?

ನಂದಿಲಕ—ಅವರು ತಿನ್ನುವುದು ಮನುಷ್ಯರ ಮಾಂಸವನ್ನಲ್ಲವೆ? ಅಬ್ಬ!

ತಾಪಸ—ಸಾಕು, ಸಾಕು, ಭಯವೇಕೆ? ರಾಕ್ಷಸರೆಲ್ಲ ವಿಭೀಷಣನಿಗೆ ವಿಧೇಯರು.

ನಂದಿಲಕ—ರಾಕ್ಷಸಸಜ್ಜನನಿಗೆ ನಮಸ್ಕಾರ. (ನಿಷ್ಕ್ರಮಿಸುವನು)

ತಾಪಸ—(ನೋಡಿ) ಆಹ! ಪೂಜ್ಯ ರಾಘವನು ವಿಮಾನದಿಂದಿಳಿದು ಬಂದೇಬಿಟ್ಟನು. ಪ್ರಸನ್ನಮುನಿಗಳನೇಕರು ಆತನನ್ನು ಸತ್ಕರಿಸಿ 'ಪುರುಷೋತ್ತಮನಿಗೆ ಜಯವಾಗಲಿ; ನಿನ್ನ ಶತ್ರುಗಳೆಲ್ಲ ಸೋತು ಭೂಮಂಡಲವು ನಿನ್ನ ಏಕಚ್ಛತ್ರಾಧಿಪತ್ಯಕ್ಕೊಳಗಾಗಲಿ!' ಎಂದು ಸ್ತುತಿಸುತ್ತಿದ್ದಾರೆ.

(ರಾಮನು ಪ್ರವೇಶಿಸುವನು)

ರಾಮ—ಹದಿನಾಲ್ಕು ವರ್ಷ ವನವಾಸ ಮಾಡಿ, ತಾಯಿತಂದೆಗಳ

ಮಾತನ್ನು ಪರಿಪಾಲಿಸಿದೆ. ಸೀತೆಯೆಲ್ಲಿ? ಋಷಿಪತ್ನಿಯರನ್ನು ವಂದಿಸಿ ಬರುವೆನೆಂದು ಒಳಗೆ ಹೋದವಳು ಬರುವುದೆಷ್ಟು ಹೊತ್ತು ಮಾಡಿದಳು? ಅದೋ, ವೈದೇಹಿ ಬರುತ್ತಿದ್ದಾಳೆ. ಆಕೆಯ ಜೊತೆಯಲ್ಲಿ ಅವರವರ ವಯಸ್ಸಿಗನುಸಾರ ಮೈಥಿಲಿಯನ್ನು ಸಖಿ, ಸೀತೆ, ಜಾನಕಿ, ಸೊಸೆ ಎಂದು ಕರೆದು, ಅದೆಷ್ಟು ಅಕ್ಕರೆಯಿಂದ ಮಾತಾಡಿಸುತ್ತಿದ್ದಾರೆ!

(ಸೀತೆಯು ತಾಪಸಿಯೊಬ್ಬಳೊಡನೆ ಪ್ರವೇಶಿಸುವಳು)

ತಾಪಸಿ—ಗೆಳತಿ, ನಿನ್ನ ಯಜಮಾನರಿಲ್ಲೇ ಇದ್ದಾರೆ; ಹೋಗು, ಜೊತೆಯಾಗು. ನೀನು ಒಬ್ಬಂಟಿಗಳಾಗಿರುವುದನ್ನು ನಾನು ನೋಡಲಾರೆ.

ಸೀತೆ—ಹ! ನನಗೀಗಲೂ ನೆನೆದರೆ ನಂಬಲಾಗುವುದೇ ಇಲ್ಲ! ಆರ್ಯಪುತ್ರ....

ರಾಮ—ಮೈಥಿಲಿ, ನಾವು ಮೊದಲು ವಾಸಮಾಡಿದ ಜನಸ್ಥಾನ ಇದು. ಇಲ್ಲಿನ ಮರಗಿಡಗಳು ನಮಗೆ ಮಕ್ಕಳಂತೆ ಮುದ್ದಾಗಿದ್ದುದು ನೆನಪಾಯಿತೆ?

ಸೀತೆ—ನೆನಪಾಯಿತ್ಕು, ನೆನಪಾಯಿತು! ಅಂದು ತಲೆತಗ್ಗಿಸಿ ನೋಡಬೇಕಾಗಿದ್ದುವನ್ನು ಇಂದು ತಲೆಯೆತ್ತಿ ನೋಡಬೇಕಾಗಿದೆ.

ರಾಮ—ಕಾಲವು ಕೀಳಾದುದನ್ನೂ ಮೇಲುಮಾಡುವುದಲ್ಲವೆ! ಮೈಥಿಲಿ, ಇದೇ ಎಳೆಲೆಬಾಳೆಯುಡಿಯಲ್ಲಿ ಶುಭ್ರವಸ್ತ್ರಧಾರಿಯಾದ ಭರತನನ್ನು ಕಂಡು, ಎರಳೆಯ ಹಿಂಡು ಬೆದರಿ ಚದುರಿಹೋದುದು ನಿನಗೆ ನೆನಪಿದೆಯೆ?

ಸೀತೆ—ಆರ್ಯಪುತ್ರ, ಚೆನ್ನಾಗಿ ನೆನಪಿದೆ.

ರಾಮ—ಇದೋ ನಮ್ಮ ತಪಸ್ಸಿಗೆ ಸಾಕ್ಷಿಸ್ವರೂಪಿಯಾದ ಗೋದಾವರೀತೀರ. ಇಲ್ಲೇ ಅಲ್ಲವೆ ನಾವು ಕುಳಿತು ತಂದೆಯ ಶ್ರಾದ್ಧವನ್ನು ಕುರಿತು ಚಿಂತಿಸುತ್ತಿದ್ದಾಗ 'ಕಾಂಚನಪಾರ್ಶ್ವ' ಎಂಬ ಜಿಂಕೆ ಕಣ್ಣಿಗೆ ಬಿದ್ದುದು!

ಸೀತೆ—ಹ! ಆರ್ಯಪುತ್ರ, ಬೇಡಿ, ಆ ಮಾತಾಡಬೇಡಿ. (ಹೆದರಿ ನಡುಗುವಳು)

ರಾಮ—ಭಯವೇಕೆ? ಆ ಕಾಲ ಕಳೆದುಹೋಯಿತು. (ಸುತ್ತಲೂ ನೋಡಿ) ಎಲ್ಲಿಯದೀ ಇಪ್ಪೆಯ ಹೂವಿನ ಹುಡಿಯಂತಹ ಬಿಳಿಯ ಧೂಳು? ದಿಕ್ಕುದಿಕ್ಕಿಗೂ ಹಬ್ಬಿದೆ! ಶಂಖಧ್ವನಿಯಿಂದಲೂ, ಪಟಹಸ್ವನಧೀರನಾದದಿಂದಲೂ ಈ ವನವು ಪಟ್ಟಣವಾದಂತಿದೆ.

ಲಕ್ಷ್ಮಣ—(ಪ್ರವೇಶಿಸಿ) ಅಣ್ಣಾ, ಭ್ರಾತೃವತ್ಸಲನಾದ ಭರತನು ಮಹಾಸೈನ್ಯ ಸಮೇತನಾಗಿ, ತಾಯಂದಿರೊಡಗೂಡಿ, ನಿನ್ನ ದರ್ಶನಾಕಾಂಕ್ಷಿಯಾಗಿ ಬರುತ್ತಿದ್ದಾನೆ.

ರಾಮ—ತಮ್ಮ, ಭರತನು ಬಂದನೆ?

ಲಕ್ಷ್ಮಣ—ನಿಜವಾಗಿಯೂ.

ರಾಮ—ಮೈಥಿಲಿ, ಅತ್ತೆಯರೊಡಗೂಡಿ ಬರುತ್ತಿರುವ ಭರತನನ್ನು ಕಣ್ಣರಳಿಸಿ ಮನದಣಿಯುವಂತೆ ನೋಡು.

ಸೀತೆ—ಆರ್ಯಪುತ್ರ, ಬಯಸಿದ ಕಾಲಕ್ಕೆ ಸರಿಯಾಗಿ ಭರತನು ಬಂದ.

(ತಾಯಂದಿರೊಡಗೂಡಿ ಭರತನ ಪ್ರವೇಶ)

ಭರತ—ಮೋಡಗಳಿಂದ ಪಾರಾದ ಶರಚ್ಚಂದ್ರನಂತೆ, ಮಿತಿಮೀರಿದ ಕಷ್ಟನಷ್ಟಗಳಿಂದ ಪಾರಾಗಿ, ಸೀತಾಸಹಾಯನಾಗಿ ಬಂದ ನಮ್ಮಣ್ಣನಾದ ಶ್ರೀರಾಮಚಂದ್ರನನ್ನು ನೋಡಲು ಸ್ವಜನರೊಡಗೂಡಿ ಬಂದಿದ್ದೇನೆ.

ರಾಮ—ತಾಯಂದಿರೆ, ನಮಸ್ಕಾರ.

ಸರ್ವರೂ—ಮಗು, ಚಿರಂಜೀವಿಯಾಗು. ಪ್ರತಿಜ್ಞೆಯನ್ನು ಕೊನೆಮುಟ್ಟ ನಡೆಸಿ, ಸೊಸೆಯೊಡನೆ ಕ್ಷೇಮವಾಗಿ ಹಿಂತಿರುಗಿ ಬಂದಿರುವ ನಿನ್ನನ್ನು ದೇವರ ಕೃಪೆಯಿಂದ ನೋಡಿ ಕೃತಾರ್ಥರಾದೆವು.

ರಾಮ—ಅನುಗೃಹೀತನಾದೆ.

ಭರತ—ಅಣ್ಣ, ನಮಸ್ಕಾರ.

ರಾಮ—ತಮ್ಮಾ, ಭರತ, ಬಾ. ಇಕ್ಷ್ವಾಕುಕುಮಾರ, ನಿನಗೆ ಮಂಗಳವಾಗಲಿ; ಆಯುಷ್ಮಂತನಾಗು. ಕದದಂತೆ ವಿಸ್ತಾರವಾದ ನಿನ್ನೆದೆಯನ್ನು ಚಾಚಿ, ನಿಡಿದಾದ ತೋಳುಗಳಿಂದ ನನ್ನನ್ನು ಬಿಗಿಯಾಗಿ ತಬ್ಬು, ಬಾ! ಹುಣ್ಣಿಮೆಯ ಚಂದ್ರಮಂಡಲವನ್ನು ಹೋಲುವ ನಿನ್ನ ಮುಖವನ್ನು ಮೇಲೆತ್ತಿ ವ್ಯಸನದಗ್ಧವಾದೀ ನನ್ನ ಶರೀರವನ್ನು ಆಹ್ಲಾದಗೊಳಿಸು, ಬಾ.

ಭರತ—ಅನುಗೃಹೀತನಾದೆ, ಆರ್ಯ ನಮಸ್ಕಾರ.

ಲಕ್ಷ್ಮಣ—ತಮ್ಮ, ಬಾ. ದೀರ್ಘಾಯುವಾಗು. ಗಾಢಾಲಿಂಗನವನ್ನು ಮಾಡು. (ಎಂದು ಆಲಂಗಿಸುವರು)

ಭರತ—ಅನುಗೃಹೀತನಾದೆ. ಅಣ್ಣ, ರಾಜ್ಯಭಾರವನ್ನು ವಹಿಸಿಕೊಳ್ಳಿ.

ರಾಮ—ತಮ್ಮ, ಏನಂದೆ?

ಕೈಕೆ—ಮಗು, ಯಾವತ್ತಿನಿಂದಲೂ ನಮಗಿದ್ದ ಅಭಿಲಾಷೆ ಇದೇ ಅಲ್ಲವೆ!

ಶತ್ರುಘ್ನ—(ಪ್ರವೇಶಿಸಿ) ನಾನಾವಿಧ ದುಃಖಪರಂಪರೆಯಿಂದ ನೊಂದರೂ, ಗುಣತೇಜಸ್ಸೊಂದಿಷ್ಟೂ ಕುಂದದ ರಾವಣಾಂತಕ ರಾಮನನ್ನು ನೋಡಲು ನನ್ನ ಮನಸ್ಸು ಹಾತೊರೆಯುತ್ತಿದೆ. (ಬಳಿಸಾರಿ) ನಾನು ಶತ್ರುಘ್ನ; ನಮಸ್ಕಾರ.

ರಾಮ—ಶತ್ರುಘ್ನ, ಬಾ, ಒಳ್ಳೆಯದು; ಆಯುಷ್ಮಂತನಾಗು.

ಶತ್ರುಘ್ನ—ಅನುಗೃಹೀತನಾದೆ. ಅಣ್ಣ, ಇದೋ ವಸಿಷ್ಠ ವಾಮದೇವರು ಪ್ರಜೆಗಳೊಡಗೂಡಿ ನಿನಗಭಿಷೇಕ ಮಾಡಬೇಕೆಂದು ಬಂದು ಕಾದಿದ್ದಾರೆ. ನಾನಾ ಪುಣ್ಯನದಿಗಳಿಂದ, ಸ್ವತಃ ಋಷಿಗಳೇ ತಮ್ಮ ಶ್ರೀಹಸ್ತಗಳಿಂದ, ತಂದ ತೀರ್ಥೋದಕದಿಂದ ನಿನಗೆ ಪ್ರಥಮಾಭಿಷೇಕ ಮಾಡಿ, ನೀರಿನಿಂದ ನೆಂದ ಅರವಿಂದದಂತಿರುವ ನಿನ್ನ ಮುಖವನ್ನು ನೋಡಲು ಅವರು ಬಹಳ ಕಾತುರರಾಗಿದ್ದಾರೆ.

ಕೈಕೆ—ನಡೆ ಮಗನೆ, ನಡೆ. ಅಭಿಷೇಕಕ್ಕೆ ಒಪ್ಪಿಗೆ ಕೊಡು.

ರಾಮ—ತಾಯ ಅಪ್ಪಣೆಯಂತಾಗಲಿ (ನಿಷ್ಕ್ರಮಿಸುವನು)

(ತೆರೆಯ ಮರೆಯಲ್ಲಿ)

ಮಹಾರಾಜನಿಗೆ ವಿಜಯವಾಗಲಿ! ರಾವಣಾಂತಕನಿಗೆ ಜಯವಾಗಲಿ!

ಕೈಕೆ—ಓಹೋ! ಪುರೋಹಿತರೂ, ಕಂಚುಕಿಗಳೂ ನನ್ನ ಪುತ್ರ ರಾಮನಿಗೆ ಜಯಘೋಷವನ್ನು ಮಾಡಿ ಹರಸುತ್ತಿದ್ದಾರೆ.

ಸುಮಿತ್ರೆ—ಪ್ರಜೆಗಳೂ ಪರಿಜನರೂ ನನ್ನ ಮಗ ರಾಮನಿಗೆ ಜಯವನ್ನು ಕೋರುತ್ತಿದ್ದಾರೆ.

(ತೆರೆಯ ಮರೆಯಲ್ಲಿ)

ಹೋ! ಹೋ! ಜನಸ್ಥಾನದಲ್ಲಿ ವಾಸಿಸುವ ತಪಸ್ವಿಗಳೇ ಕೇಳಿ, ತಾವೆಲ್ಲ ಕಿವಿಗೊಟ್ಟು ಕೇಳಿ. ಸೂರ್ಯನು ಗಾಢಾಂಧಕಾರವನ್ನು ತೇಜಸ್ಸಿನಿಂದ ತವಿಸುವಂತೆ, ಅನುಪಮಶತ್ರುವನ್ನು ರಾಮನು ತನ್ನ ಪ್ರತಾಪದಿಂದ ತವಿಸಿ ಸಕಲಸನ್ಮಂ

ಗಳಕ್ಕೂ ಜನ್ಮಭೂಮಿಯಾದ ಸೀತಾದೇವಿಯೊಡಗೂಡಿ ಸರ್ವಜನಾಭಿರಾಮ ನಾಗಿ ಭೂಮಂಡಲವನ್ನಿನ್ನು ಪರಿಪಾಲಿಸುವನು.

ಕೈಕೆ—ಆಹ! ನನ್ನ ಪುತ್ರನ ವಿಜಯಘೋಷವು ವರ್ಧಿಸುತ್ತಿದೆ.

(ಅಭಿಷಿಕ್ತನಾದ ಶ್ರೀರಾಮನು ಪರಿವಾರಸಮೇತನಾಗಿ ಪ್ರವೇಶಿಸುವನು)

ರಾಮ—(ಆಕಾಶದ ಕಡೆ ನೋಡಿ) ಓ ಸ್ವರ್ಗಸ್ಥನಾದ ನನ್ನ ಪೂಜ್ಯ ತಂದೆ, ಸಂತುಷ್ಟನಾಗು! ದೈನ್ಯವನ್ನು ಬಿಡು. ನಿನ್ನ ಅಭಿಲಾಷೆಯಂತೆ ನಾನಿಂದು ಮಹಾರಾಜನಾಗಿ ರಾಜ್ಯಭಾರವನ್ನೆಲ್ಲ ವಹಿಸಿಕೊಂಡಿದೇನೆ; ಧರ್ಮದಿಂದ ಲೋಕರಕ್ಷಣೆಯನ್ನು ನಿರ್ವಹಿಸುತ್ತೇನೆ.

ಭರತ—ತೀರ್ಥೋದಕದಿಂದ ಅಭಿಷಿಕ್ತನಾಗಿ, ಕಿರೀಟವನ್ನು ಧರಿಸಿ, ಅರಳಿದ ಶ್ವೇತಚ್ಛತ್ರದಡಿಯಲ್ಲಿ, ರಾಮನು ರಾಜನೆನಿಸಿಕೊಂಡು ರಾರಾಜಿಸುತ್ತಿರುವನು. ಸಕಲ ವೈಭವೋಪೇತನಾಗಿ, ಲೋಕವಂದ್ಯನಾಗಿರುವ ಶ್ರೀರಾಮನನ್ನು ಹುಣ್ಣಿಮೆಯ ಚಂದ್ರನಂತೆ ಅದೆಷ್ಟು ನೋಡಿದರೂ ನನ್ನ ಕಣ್ಣೇ ದಣಿಯದು.

ಶತ್ರುಘ್ನ—ನಮ್ಮಣ್ಣನಿಗೆ ಅಭಿಷೇಕವಾದುದರಿಂದ ನಮ್ಮ ಕುಲಕ್ಕೆ ಬಂದಿದ್ದ ಕಳಂಕ ಮಾಯವಾಯಿತು. ಚಂದ್ರನು ಉದಯಿಸಿದಾಗ ಜಗತ್ತು ಪ್ರಕಾಶಕ್ಕೆ ಬರುವಂತೆ ನಮ್ಮ ವಂಶವು ಮತ್ತೆ ಪ್ರಕಾಶಮಾನವಾಗುತ್ತದೆ.

ಕಾಂಚುಕೀಯ—(ಪ್ರವೇಶಿಸಿ) ಜಯವಾಗಲಿ, ಮಹಾರಾಜನಿಗೆ. ಮಹನೀಯನಾದ ವಿಭೀಷಣನು ವಿಜ್ಞಾಪಿಸುತ್ತಾನೆ: ಸುಗ್ರೀವ, ನೀಲ, ಮೈಂದ, ಜಾಂಬವ, ಹನುಮಂತ ಮುಂತಾದವರು ದೈವಕೃಪೆಯಿಂದ ತಮಗೆ ಅಭಿವೃದ್ಧಿಯಾಗಲೆಂದು ಹಾರೈಸುತ್ತಿದ್ದಾರೆ—ಎಂದು.

ರಾಮ—ನನ್ನೆಲ್ಲ ಅಭಿವೃದ್ಧಿಗೂ ಆ ನನ್ನ ಗೆಳೆಯರ ಕೃಪೆಯೇ ಕಾರಣವೆಂದು ಅವರಿಗೆ ನಾನು ಅರಿಕೆ ಮಾಡಿಕೊಂಡೆನೆಂದು ತಿಳಿಸು ಹೋಗು.

ಕಾಂಚುಕೀಯ—ಮಹಾರಾಜನ ಅಪ್ಪಣೆ.

ಕೈಕೆ—ನಾನೇ ಧನ್ಯಳು. ಈ ಅಭಿಷೇಕದ ಅಭ್ಯುದಯವನ್ನು ಮತ್ತೆ ಅಯೋಧ್ಯೆಯಲ್ಲಿ ನೋಡಲಿಚ್ಛಿಸುತ್ತೇನೆ.

ರಾಮ—ತಾಯಿ, ನಿನ್ನಿಷ್ಟಂದತಾಗಲಿ. ಪುಷ್ಪಕ ವಿಮಾನದಲ್ಲಿ ನಾನೀಗಲೇ ಬಂಧುಗಳನ್ನೂ, ಗೆಳೆಯರನ್ನೂ ಒಡಗೂಡಿಕೊಂಡು ಅಯೋಧ್ಯಾ ನಗರಕ್ಕೆ ಹೋಗುತ್ತೇನೆ.

ಲಕ್ಷ್ಮಣ—ಚುಕ್ಕಿಯೊಡನುದಯಿಸಿದ ಚಂದ್ರಮನನ್ನು ನೋಡುವಂತೆ ಸೀತಾಸಹಿತನಾದ ನಿನ್ನನ್ನು ಜನ ನೋಡಲಿ.

(ತೆರೆಯು ಮರೆಯಲ್ಲಿ)

ಸೀತಾಸಹಿತನಾದ ಶ್ರೀರಾಮಚಂದ್ರನಂತೆ ನಮ್ಮ ರಾಜನು ರಾಜ್ಯಲಕ್ಷ್ಮಿಯೊಡಗೂಡಿ ಭೂಮಿಯನ್ನು ಪರಿಪಾಲಿಸಲಿ.

ಡಾ|| ಎಲ್. ಬಸವರಾಜು ಅವರ ಇತರ ಕೃತಿಗಳು

ಭಾರತ ರೂಪಕ
ಭಾಸನ ಆರು ನಾಟಕಗಳ ಸರಳ ಗದ್ಯಾನುವಾದ

ನಾಟಕಾಮೃತ ಬಿಂದುಗಳು
ಉತ್ತಮ ಸಂಸ್ಕೃತ ನಾಟಕಗಳಿಂದ ಆಯ್ದ ಅಂಕಗಳ ಕನ್ನಡ ಅನುವಾದ

ಅಲ್ಲಮ್ಮನ ವಚನ ಚಂದ್ರಿಕೆ
ಪ್ರಭುದೇವರ ೧೨೯೪ ವಚನಗಳು ಮತ್ತು ೨೬ ಹಾಡುಗಳು-ಪೀಠಿಕೆ, ಟಿಪ್ಪಣಿಗಳೊಡನೆ

ಶಿವದಾಸಗೀತಾಂಜಲಿ
ಶಿವ ಶರಣರ ಗೀತೆಗಳ ಬೃಹತ್ ಸಂಪುಟ

ಬಸವೇಶ್ವರ ವಚನ ಸಂಗ್ರಹ
ಜೀವನದರ್ಶನ ಹಾಗೂ ವಚನ ವಿಮರ್ಶೆಗಳನ್ನೊಳಗೊಂಡು ಷಟ್‌ಸ್ಥಲಕ್ಕನುಗಣವಾಗಿ ವಿಂಗಡಿಸಿದ ಪೀಠಿಕೆಯೊಂದಿಗೆ ಬಸವಣ್ಣನವರ ೫೦೯ ವಚನಗಳ ಸಂಗ್ರಹ

ಬಸವ ವಚನಾಮೃತ

ಅಕ್ಕನ ವಚನಗಳು

ಡಿ. ವಿ. ಕೆ. ಮೂರ್ತಿ :: ಪ್ರಕಾಶಕರು :: ಮೈಸೂರು-೪